ಅಲೆಮಾರಿ ಬುಡಕಟ್ಟುಗಳ ಮೌಖಿಕ ಸಾಹಿತ್ಯ

(ಚಿತ್ರದುರ್ಗ ಜಿಲ್ಲೆಯ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ತೌಲನಿಕ ಅಧ್ಯಯನ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ (ಕನ್ನಡ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಪಾಪಯ್ಯ ಬಿ

ಮಾರ್ಗದರ್ಶಕರು
ಪ್ರೊ ಚಲುವರಾಜು
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಅಲೆಮಾರಿ ಬುಡಕಟ್ಟುಗಳ ಮೌಖಿಕ ಸಾಹಿತ್ಯ

(ಚಿತ್ರದುರ್ಗ ಜಿಲ್ಲೆಯ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ತೌಲನಿಕ ಅಧ್ಯಯನ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ(ಕನ್ನಡ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಪಾಪಯ್ಯ ಬಿ

ಮಾರ್ಗದರ್ಶಕರು

ಪ್ರೊ ಚಲುವರಾಜು

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೨೦

ಸಂಶೋಧಕರ ಪ್ರಮಾಣ ಪತ್ರ

"ಅಲೆಮಾರಿ ಬುಡಕಟ್ಟುಗಳ ಮೌಖಿಕ ಸಾಹಿತ್ಯ" (ಚಿತ್ರದುರ್ಗ ಜಿಲ್ಲೆಯ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ತೌಲನಿಕ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಪ್ರೊ ಚಲುವರಾಜು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಕನ್ನಡ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

Papaiah. B.

ದಿನಾಂಕ: 05.09.2020

ಸ್ಥಳ : ವಿದ್ಯಾರಣ್ಯ

ಪಾಪಯ್ಯ ಬಿ
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಪಾಪಯ್ಯ ಬಿ ಇವರು **"ಅಲೆಮಾರಿ ಬುಡಕಟ್ಟುಗಳ ಮೌಖಿಕ ಸಾಹಿತ್ಯ" (ಚಿತ್ರದುರ್ಗ ಜಿಲ್ಲೆಯ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ತೌಲನಿಕ ಅಧ್ಯಯನ)** ಎಂಬ ಶೀರ್ಷಿಕೆ ಮಹಾಪ್ರಬಂಧವನ್ನು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಕನ್ನಡ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 05.09.2020
ಸ್ಥಳ : ವಿದ್ಯಾರಣ್ಯ

ಪ್ರೊ ಚಲುವರಾಜು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

Kannada University, Hampi
Akshara Central Library
Anti-Plagiarism Cell
Certificate of Plagiarism Check Report

Alemari Budakattugala Moukhika Sahitya
(Chitraduga Jilleya Alemari Budakattugala Moukhika Sahityada Toulanika Adhyayana)

Oral Literature of Nomadic Tribes
(A Comparative Study of Oral Literature of Nomadic Communities of Chitradurga)

By

Papaiah B

Reg.No. 1138/24.09.2012

Research Guide

Prof Chaluvaraju

Department of Tribal Studies

Kannada University, Hampi

Urkund Analysis Result

Analyzed document : B Papayya-PhD-DTS.docx (D77885956)
Submitted : 8/18/2020 7:11:00 AM
Submitted by : Shankaragouda S G
Submitter email : shankargoudas.mailbox@gmail.com
Similarity : 2%
Analysis address : shankargoudas.mailbox.kanuni@analysis.urkund.com

Seal and authorized sign

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವಿಧಾನ

೧.೧. ಪ್ರವೇಶ

೧.೨. ಅಧ್ಯಯನದ ಉದ್ದೇಶಗಳು

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಮಹತ್ವ

೧.೫. ಅಧ್ಯಯನದ ವಿಧಾನ

೧.೬. ಅಧ್ಯಯನದ ವಿನ್ಯಾಸ

೧.೭. ಇದುವರೆಗೆ ನಡೆದ ಅಧ್ಯಯನ

ಅಧ್ಯಾಯ ಒಂದು
ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವಿಧಾನ

ಪ್ರವೇಶ

ಬಹುಸಂಸ್ಕೃತಿಗಳನ್ನೊಳಗೊಂಡ ಭಾರತದಲ್ಲಿ ಜನಪದ ಗಾಯನವನ್ನೇ ವೃತ್ತಿಯಾಗಿಸಿಕೊಂಡ ಸಮುದಾಯಗಳು ನೂರಾರು ಇವೆ. ಈ ಸಮುದಾಯಗಳು ಬಹುತೇಕ ಅಲೆಮಾರಿತನವನ್ನೇ ಮೈಗೂಡಿಸಿಕೊಂಡು ನಿರಂತರವಾಗಿ ಊರಿಂದೂರಿಗೆ ಅಲೆದಾಡುತ್ತಿರುವರು. ಪೂರ್ವದಲ್ಲಿ ಸುಸ್ಥಿತಿಯಲ್ಲಿದ್ದ ಈ ಸಮುದಾಯಗಳು ಯಾವುದೋ ಕಾಲಘಟ್ಟದಲ್ಲಿ ನೆಲೆ ಕಳೆದುಕೊಂಡು ಅಲೆಮಾರಿ ಬದುಕಿಗೆ ತಮ್ಮನ್ನು ಒಡ್ಡಿಕೊಂಡಿವೆ. ಬಡತನವನ್ನೇ ಉಂಡುಟ್ಟು ಜೀವಿಸುವ ಈ ಸಮುದಾಯಗಳ ಸಾಂಸ್ಕೃತಿಕ ಲೋಕ ಮಾತ್ರ ಸಂಪದ್ಭರಿತವಾದುದಾಗಿದೆ. ಈ ಸಮುದಾಯಗಳು ಮೈಗೂಡಿಸಿಕೊಂಡಿರುವ ಜನಪದ ಲೋಕವನ್ನು ಆಧುನೀಕರಣ, ಜಾಗತೀಕರಣಗಳ ಪ್ರಭಾವವೂ ಏನೂ ಮಾಡಲು ಸಾಧ್ಯವಾಗಿಲ್ಲವೆಂಬುದು ಆಶ್ಚರ್ಯದ ವಿಚಾರವಾಗಿದೆ. ಜಾಗತೀಕರಣವು ಭಾರತೀಯ ಪರಂಪರೆಯ ಮೇಲೆ ಸವಾರಿ ಮಾಡಿದಾಗಲೂ ಸಹ ಸಂಸ್ಕೃತಿಯ ಆಳವಾದ ಬೇರುಗಳಿರುವ ಅಲೆಮಾರಿ ವೃತ್ತಿಗಾಯಕರ ಜನಪದ ಸಂಸ್ಕೃತಿಯನ್ನು ಅಲ್ಲಾಡಿಸುವುದು ಅಷ್ಟು ಸುಲಭವಾಗಿಲ್ಲ. ಮನುಷ್ಯನ ಸುಖ ದುಃಖಗಳನ್ನು ದೈನಂದಿನ ಕಷ್ಟ ಕಾರ್ಪಣ್ಯಗಳನ್ನು ನಿಸರ್ಗದ ಸಂಬಂಧಗಳಂತಹ ಸಂಸ್ಕೃತಿಯ ನಿಜ ಧ್ವನಿಗಳನ್ನು ತನ್ನ ಅಭಿವ್ಯಕ್ತಿಯ ಮೂಲಕ ತುಂಬಿಕೊಡುವ ಅಲೆಮಾರಿಗಳ ಬದುಕು ಮತ್ತು ಕಲೆಗಳು ಸಂಸ್ಕೃತಿಯ ಅಧ್ಯಯನಕ್ಕೆ ಮಹತ್ವದ ಆಕರಗಳಾಗಿವೆ.

ಯಾವುದೇ ಸಮುದಾಯ ತನ್ನದೇ ಆದ ಸಂಸ್ಕೃತಿಯ ಅಸ್ತಿತ್ವವನ್ನು ಕಂಡುಕೊಂಡು ಪರಂಪರಗತವಾಗಿ ಬಂದಿರುತ್ತದೆ. ಇದನ್ನು ನಾಗರಿಕತೆಯ ವಿವಿಧ ಪ್ರಭಾವಗಳ ನಡುವೆಯೇ ಅವುಗಳ ಜೊತೆಗೆ ಸಂಘರ್ಷಿಸಿಕೊಂಡು ಬಂದಿರುವುದಕ್ಕೆ ನಮ್ಮಲ್ಲಿ ಇಂದಿಗೂ ಕಂಡುಬರುವ ಆದಿಮ ಬುಡಕಟ್ಟು ಸಮುದಾಯಗಳ ಜೀವನ ಸಂಸ್ಕೃತಿ. ಪ್ರಸ್ತುತ ಅಧ್ಯಯನದ ಹಿನ್ನೆಲೆಯಲ್ಲಿ ತಿಳಿಯಬಹುದಾಗಿದೆ. ಮಾನವನ ಮೂಲ ಆರಂಭದ ಬದುಕಿನ ಸಂದರ್ಭದಲ್ಲಿಟ್ಟು ವಿಮರ್ಶೆಗೊಳಪಡಿಸಿದಾಗ ಅವನ ಸಾಂಸ್ಕೃತಿಕವಾದ ವಿಶಾಲ ಬದುಕಿನ ಸಾಧನಗಳೆಲ್ಲವೂ 'ಸಂಸ್ಕೃತಿ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ

ಗ್ರಹಿಸಬಹುದಾಗಿದೆ. ಮಾನವನ್ನು ತನ್ನ ಮೂಲ ಆದಿಮಾ ಬದುಕಿನಿಂದ ನಾಗರಿಕವಾಗಿ ವಿಕಾಸ ಹೊಂದುತ್ತಾ ಬದುಕಿನ ಅವಶ್ಯಕತೆಗಳನ್ನು ಕಂಡುಕೊಂಡು ಇವೆಲ್ಲವೂ ಮಾನವನ ಸೃಜನಾತ್ಮಕತೆಯ ಫಲದಿಂದಾಗಿ ರೂಪಿತವಾದಂತಹುಗಳಾಗಿವೆ. ಇದನ್ನೇ ನಾವು ಜೀವನ ಸಂಸ್ಕೃತೀಕರಣ ಎಂದು ಕರೆಯಬಹುದಾಗಿದೆ. ಭಾಷೆ ಕಲಿತದ್ದು, ಬೆಂಕಿ ಕಂಡುಹಿಡಿದುಕೊಂಡಿದ್ದು, ಆಹಾರಕ್ಕಾಗಿ ಬೇಟೆ, ಬೇಸಾಯ ಇತ್ಯಾದಿಗಳನ್ನು ನಾವು ಕಾಣಬಹುದು. ಇವೆಲ್ಲವುಗಳ ಜೊತೆಗೆ ಆಚರಣೆ, ನಂಬಿಕೆ, ನಿಷೇಧಗಳು ಹಾಡು, ಕುಣಿತ, ಇತ್ಯಾದಿಗಳನ್ನು ರೂಪಿಸಿಕೊಂಡಿದ್ದರ ಹಿಂದೆ ಮಾನವರ ಸಾಂಸ್ಕೃತಿಕ ಸಂಘರ್ಷಗಳು ನಡೆದಿವೆ.

ಈ ನೆಲೆಯಲ್ಲಿ ಮಾನವರ 'ಜಾನಪದ' ಮೂಲವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯಿದೆ. ಜಾನಪದ ಪರಂಪರೆಯನ್ನು ಮಾನವನ ಪ್ರಾಚೀನ ಉಗಮದೊಂದಿಗೆ ಹುಟ್ಟಿ, ಅವನು ಜೀವನದಲ್ಲಿ ಇಟ್ಟ ಹೆಜ್ಜೆ, ತೊಟ್ಟ ರೂಪಗಳಾಗಿ, ನುಡಿದ ಹಾಡಾಗಿ, ಅವರ ಜೀವನಾವರ್ತನದೊಳಗೆ ಕಂಡ ಅನುಭವಗಳೆಲ್ಲವು ವಿಭಾವದ ಸ್ಥಿತಿಯ ರೂಪಗಳನ್ನು ಪಡೆದು ಮೌಖಿಕ ಸಾಹಿತ್ಯ ಪರಂಪರೆ ಬೆಳೆದುಬಂದಿದೆ. ಈ ನೆಲೆಯಲ್ಲಿ 'ಜನಪದ ಸಾಹಿತ್ಯ ಸಂಸ್ಕೃತಿ'ಯ ಅರ್ಥವನ್ನು ಪರಿಕಲ್ಪಿಸಿಕೊಳ್ಳಬಹುದಾಗಿದೆ.

'lore' ಎಂಬ ಪದವನ್ನು ಸಂಸ್ಕೃತಿ ಎಂಬ ಅರ್ಥದಲ್ಲೇ ಬಳಸುವ ಸಂದರ್ಭಗಳನ್ನು ಗಮನಿಸಿದರೆ 'Folk culture' ಬೇರೆಯಲ್ಲ; 'Folklore' ಬೇರೆಯಲ್ಲ ಎನ್ನುವುದು ಸ್ಪಷ್ಟ. ನಾಗರಿಕ ಹಾಗೂ ಶಿಷ್ಟ ಸಂಸ್ಕೃತಿಗಳಿಂದ ದೂರ ಸರಿದ ಪರಂಪರಾನುಗತವಾದ ಬೆಳವಣಿಗೆಯನ್ನು ಪಡೆದ ಜನಸಾಮಾನ್ಯರ ವಿಶಿಷ್ಟ ಸಂಸ್ಕೃತಿಯೇ 'ಜಾನಪದ' ಅವರ ಜೀವನದ ಸಮಸ್ತ ವಿಷಯಗಳೂ ಇದರಲ್ಲಿ ಸಮಾವೇಶಗೊಳ್ಳುತ್ತವೆ. ಎಂತಲೇ ಆಧುನಿಕ ಜಾನಪದ ವಿದ್ವಾಂಸರು 'ಜಾನಪದ'ದ ವಿಶಾಲಗರ್ಭದಲ್ಲಿ ಜನಪದ ಜೀವನದ ಯಾವ ಒಂದು ಅಂಗವನ್ನೂ ಬಿಡದೆ ಅಭ್ಯಸಿಸುತ್ತಾರೆ. ಮಾನವಶಾಸ್ತ್ರದ ಪ್ರಾಗ್ಯೆತಿಹಾಸ, ಶಾರೀರಿಕ ಮಾನವಶಾಸ್ತ್ರ ವಿಭಾಗಗಳಲ್ಲಿ ಬಿಟ್ಟು, ಸಾಂಸ್ಕೃತಿಕ ಮಾನವಶಾಸ್ತ್ರವನ್ನು ಪರಿಗಣಿಸಿದಾಗ 'ಜಾನಪದ' ಮೊದಲಿಗೆ ಅದರ ಒಂದು ಅಂಗವಾಗಿಯೇ ಅಧ್ಯಯನಕ್ಕೆ ಒಳಗಾಗಿತ್ತು. ಸಮಗ್ರ ಸಂಸ್ಕೃತಿಯ ಒಂದು ಪ್ರಮುಖ ಅಂಗ ಜನಪದ ಸಂಸ್ಕೃತಿ. ಇದನ್ನು ಜಾನಪದ ವಿದ್ವಾಂಸರು ಪ್ರತ್ಯೇಕಿಸಿಕೊಂಡು ಸ್ವತಂತ್ರ ವಿಜ್ಞಾನವಾಗಿ ಬೆಳಸಿ, ಪ್ರತ್ಯೇಕ ಅಧ್ಯಯನ ವಿಷಯವಾಗಿ ರೂಪಿಸಿದರು."[೧] ಈ ಹಿನ್ನೆಲೆಯಲ್ಲಿ ಮಾನವ ಜಾನಪದ ಬದುಕಿನಲ್ಲಿ ರೂಢಿಸಿಕೊಂಡು ಬಂದ ಸಾಂಸ್ಕೃತಿಕ ಮೌಲ್ಯಗಳಲ್ಲಿ ಒಂದಾಗಿ ಬೆಸೆದುಕೊಂಡು ಬಂದಿದೆ. ಇದರಲ್ಲಿ ಜಾನಪದ ಎಂಬುದು ಸಮಷ್ಠಿ ಪ್ರಜ್ಞೆಯನ್ನು ವಿವೇಚಿಸಿದರೆ ಜನಪದ ಎಂಬುದನ್ನು ಅವರ ಮೌಖಿಕ ಸಾಹಿತ್ಯದ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ.

'Folklore ಕುರಿತು ಬಹುತೇಕ ವಿದ್ವಾಂಸರ ವಿವೇಚನೆಯಲ್ಲಿ Folk ಗಿಂತ loreನ್ನು ಕುರಿತ ವಿವೇಚನಗಳೇ ಅಧಿಕವಾಗಿವೆ' ಎಂಬ ಜೀ.ಶಂ.ಪ. ಅವರ ನಿಲುವು ಒಪ್ಪಿಕೊಳ್ಳಬಹುದಾಗಿದೆ. ಈ ದೃಷ್ಟಿಯಲ್ಲಿ 'Folk' ಎಂಬ ಶಬ್ದವು ಕೂಡ ಅತಿಮುಖ್ಯವಾದುದಾಗಿದ್ದು, Folk ಎನ್ನುವುದಕ್ಕೆ

ಆಕ್ಸ್‌ಫರ್ಡ್ ಅರ್ಥಕೋಶವನ್ನು ಅನುಸರಿಸಿ ಜೀ.ಶಂ.ಪರವರು ಕೊಡುವ ಅರ್ಥಗಳಲ್ಲಿ ಕೆಲವು ಬುಡಕಟ್ಟು ಸಮುದಾಯಗಳ ಹಿನ್ನೆಲೆಯಿಂದ ಜನಪದವನ್ನು ನೋಡಬಹುದು.

"ಒಂದೇ ಮೂಲಕ್ಕೆ ಸೇರಿದ ತಮ್ಮದೇ ಆದ ಪ್ರದೇಶ ಅಥವಾ ರಾಜ್ಯವನ್ನು ಪಡೆದ ಒಂದು ಜನಾಂಗಗಳ ಗುಂಪು, ಮೂಲ ನಿವಾಸಿಗಳ ಸ್ಥಿತಿಯಿಂದ ರಾಜಕೀಯ ಅಥವಾ ಸಾಮಾಜಿಕ ವ್ಯವಸ್ಥೆಯತ್ತ ಹೊರಳುತ್ತಿರುವ ಜನ, ಜನಾಂಗ, ಭಾಷೆ, ಧರ್ಮಗಳಲ್ಲಿ ಬದ್ಧರಾದ ಒಂದು ಪ್ರಜಾ ಸಮೂಹದ ಸಮಾಜದ ಕೆಳಗಿನ ಸ್ತರ ತನ್ನದೇ ಆದ ಒಂದು ಸಮೂಹದ ಗುಣವನ್ನು ಪಡೆದುಕೊಂಡು ತನ್ನದೇ ಆದ ಸಂಪ್ರದಾಯ, ಕಲೆ, ಕೈಗಾರಿಕೆ, ಐತಿಹ್ಯ, ನಂಬಿಕೆಗಳನ್ನು ತಲೆಮಾರಿನಿಂದ ತಲೆಮಾರಿಗೆ ಬದಲಾಗದಂತೆ ಉಳಿಸಿಕೊಂಡು ಬಂದ ಜನಸಮೂಹ"[೨] ಎಂಬ ನಿಲುವು ಸಮುದಾಯಗಳ ದೃಷ್ಟಿಯಲ್ಲಿ ನಾವು Folk (ಜನಪದ) ಶಬ್ದವನ್ನು ಗ್ರಹಿಸಿರುವುದು ಸೂಕ್ತವೆಂದು ತಿಳಿಯಬಹುದು.

ಹೀಗಾಗಿ ಜನಪದ ಎಂಬುದು ಏಕಮುಖವಾಗಿರದೆ ಸಮುದಾಯ, ಭಾಷೆ, ಧರ್ಮಗಳನ್ನು ಅವಲಂಬಿಸಿ ಸಂಪ್ರದಾಯ, ಕಲೆ, ಐತಿಹ್ಯ, ನಂಬಿಕೆಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹಾಡಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಜೊತೆಗೆ ಇದು ಪ್ರಾದೇಶಿಕತೆಯನ್ನು ಅವಲಂಬಿಸಿ ತಾವು ಹುಟ್ಟಿ ಬೆಳೆದುಬಂದ ಪರಿಸರದೊಂದಿಗೆ ಸಂವೇದಿಸಿಕೊಂಡು ಬಂದಿರುತ್ತದೆ. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಸಮುದಾಯಗಳ ಸ್ಮೃತಿಪಟಲಗಳಲ್ಲಿ ಉಳಿದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಉದಾಹರಣೆಯಾಗಿ ಬುಡಕಟ್ಟು ಜನಸಮುದಾಯಗಳಲ್ಲಿ ಇಂದಿಗೂ ಅತ್ಯಂತ ಶ್ರೀಮಂತವಾದ ಸಂಪದ್ಭರಿತ ಮೌಖಿಕ ಸಾಹಿತ್ಯವನ್ನು ಕಾಣಬಹುದಾಗಿದೆ.

"ಯಾವುದೇ ಒಂದು ಜನಾಂಗದ ಸಂಸ್ಕೃತಿಯ ಭಾಗವಾಗಿ ಸೃಷ್ಟಿಯಾಗಿರುವ ಮೌಖಿಕ ಸಾಹಿತ್ಯ ಅವರ ಪಾರಂಪರಿಕ ಬದುಕಿನಲ್ಲಿ ಸಂವೇದಿಸಿಕೊಂಡಿರುತ್ತದೆ. ಇದು ಒಂದು ಸಮುದಾಯದ ಆತ್ಮದೊಳಗೆ ಅನುರಣನಗೊಳ್ಳುವ ಕಾತರಗಳನ್ನು ಈ ಕಥನಗಳು ಸಾರ್ವತ್ರೀಕರಿಸುತ್ತಾ ಮಹಾಕಥನಗಳಾಗಿ ಸಾರ್ಥಕಗೊಳ್ಳುತ್ತವೆ. ಈ ಕಥನಗಳು ನಮ್ಮ ಜನಪದರಲ್ಲಿ ಯಾಕಾಗಿ ರೂಪುಗೊಂಡವು..? ಒಂದು ಸಂಸ್ಕೃತಿ ಸದ್ದಿಲ್ಲದೆ ಈ ರೀತಿಯ ಕಥನಗಳನ್ನು ಕಟ್ಟಿಕೊಳ್ಳುವಂತೆ ಮಾಡಿದ ಸಾಂಸ್ಕೃತಿಕ ಬಿಕ್ಕಟ್ಟುಗಳಾವವು..? ಆ ಬಿಕ್ಕಟ್ಟುಗಳು ಹೇಗೆ ರೂಪುಗೊಳ್ಳುತ್ತವೆ..? ಹೀಗೆ ಸಂಸ್ಕೃತಿಯೊಂದು ಈ ರೀತಿ ಕಥನಗಳೊಳಗೆ ತನ್ನನ್ನು ಮತ್ತೆ ಪುನರ್ ಪ್ರಕಟಿಸಿಕೊಳ್ಳಬೇಕೆಂದು ತವಕಿಸುವಂತೆ ಮಾಡುವ ಬಾಹ್ಯ ಒತ್ತಡಗಳಾವವು..?"[೩] ಎಂಬ ತಾತ್ವಿಕ ಪ್ರಶ್ನೆಗಳು ಸಮುದಾಯಗಳಲ್ಲಿ ಹುಟ್ಟಿಕೊಂಡು ಬಂದಿರುವ ತಮ್ಮ ಸಾಂಸ್ಕೃತಿ ಮೌಖಿಕ ಸಾಹಿತ್ಯ ಕಥನಗಳ ಹಿನ್ನೆಲೆಯನ್ನು ಅರ್ಥಗ್ರಹಿಸಿಕೊಳ್ಳುವಿಕೆಯ ಅಗತ್ಯತೆಯನ್ನು ತಿಳಿಸುತ್ತದೆ. ಇದಕ್ಕೆ ಪೂರಕವಾಗಿ ಮುಂದುವರೆದಂತೆ "ಇಲ್ಲಿನ ಸಾಂಸ್ಕೃತಿಕ ಬಿಕ್ಕಟ್ಟುಗಳ ಕುರಿತು ನಾವು ಕಂಡುಕೊಳ್ಳುವ ಸರಳ ವ್ಯಾಖ್ಯಾನಗಳು. ಆ ಬಿಕ್ಕಟ್ಟುಗಳ ದಟ್ಟಡವಿಯನ್ನು ನುಗ್ಗಿ ಹೊರ ಬರಲಾರವು ಬಹುರೂಪಿ ಬದುಕುಗಳ ಭಾರತದಲ್ಲಿ ಅಸಂಖ್ಯಾತ ಸಂಸ್ಕೃತಿಗಳಿವೆ. ವಿಭಿನ್ನ ಭಾಷೆಗಳಿವೆ. ಜೀವನಕ್ರಮಗಳು, ಸಾಹಿತ್ಯ ಮೀಮಾಂಸೆ, ಎಲ್ಲಕ್ಕೂ ಪ್ರತ್ಯೇಕ ಅಸ್ತಿತ್ವಗಳಿವೆ"[೪] ಎಂಬಂತಹ ಭಾರತೀಯ ಬುಡಕಟ್ಟು

ಸಮುದಾಯಗಳು ನಮ್ಮಲ್ಲಿವೆ. ಇವುಗಳು ಸೃಷ್ಟಿಸಿಕೊಂಡಿರುವ ಮೌಖಿಕ ಸಾಹಿತ್ಯ ಕಾಪಾಡಿಕೊಂಡು ಬಂದಿರುವ ಸಂಸ್ಕೃತಿ ಮೇಲಿನ ವಿವೇಚನೆಯನ್ನೇ ಧ್ವನಿಸುತ್ತವೆ. ಆದರೆ ಕೆಲವು ಅಭಿಜಾತ ಮಾದರಿಯ ಅಧ್ಯಯನಗಳು ನಿಜವಾದ ಸಾಂಸ್ಕೃತಿಕವಾದ ಸಂಸ್ಕೃತಿಯ ಸತ್ಯವನ್ನು ಹೊರಹಾಕಲಾರದಾಗಿವೆ. ಆದರೆ ತಮ್ಮ ಮೌಖಿಕ ಕಥನಗಳ ಮೂಲಕ ತಮ್ಮ ಬದುಕಿನ ಸಂವೇದನೆಯ ಹಿನ್ನೆಲೆಯನ್ನು ಕಟ್ಟಿಕೊಂಡು ಬಂದಿರುವ ಬುಡಕಟ್ಟು ಕಥನಗಳು ನಿಜವಾದ ಸತ್ಯವನ್ನೇ ನುಡಿಯುತ್ತವೆ. ಇನ್ನು ಬುಡಕಟ್ಟು ಸಮುದಾಯಗಳ ಕವಲುಗಳಾಗಿ ತಮ್ಮದೇ ಆದ ಸಾಂಸ್ಕೃತಿಕ ಅಸ್ತಿತ್ವವನ್ನು ಕಂಡುಕೊಂಡು ನಿರಂತರವಾಗಿ ಅಲೆಯುವ ಅಲೆಮಾರಿ ಜನ ಸಮುದಾಯಗಳು ಅಲೆಮಾರಿತನ ತಮ್ಮಗೆ ಶಾಪವೆನೋ ಎಂಬಂತೆ ನಾಗರಿಕತೆಯ ನಡುವೆಯೇ ತಮ್ಮದೇ ಆದ ಸಂಸ್ಕೃತಿಯ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಸಮುದಾಯಗಳು ಭಾರತದಲ್ಲಿ ಅಸಂಖ್ಯಾವಾಗಿ ದಿನನಿತ್ಯ ಸಂಚರಿಸುತ್ತವೆ. ಇವೆಲ್ಲವುಗಳ ನಡುವೆ ಬದುಕಿಗಾಗಿಯೇ ತಮ್ಮ ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ರೂಢಿಸಿಕೊಂಡಿರುವ ಅವೇಷ್ಟೋ ಸಮುದಾಯಗಳು ನಮ್ಮ ಶ್ರೇಣಿಕೃತ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ. ಇನ್ನು ಕರ್ನಾಟಕದ ಸಂದರ್ಭದಲ್ಲಿ ನೋಡುವುದಾದರೆ ಬುಡ್ಗಜಂಗಮ, ಚೆನ್ನದಾಸರು, ದಕ್ಕಲಿಗ, ಗೋಸಂಗಿ, ಹಂಡಿಜೋಗಿ, ಕೊರಮ, ಶಿಳ್ಳೇಕ್ಯಾತ, ಸಿಂಧೋಳ್ಳು, ಸುಡುಗಾಡುಸಿದ್ಧ, ಡುಂಗ್ರಿಗರಾಸಿಯ, ಹಕ್ಕಿಪಿಕ್ಕಿ, ಪಾರ್ಧಿ, ರಾಜಗೊಂಡ, ಬೈಲಪತ್ತಾರ, ದೊಂಬಿದಾಸ, ಘಿಸಾಡಿ, ಗೋಂಧಳಿ, ಕಂಜರಭಾಟ, ಸಿಕ್ಲಿಗರ, ಅಲೆಮಾರಿ ಕುರುಬ ಇತ್ಯಾದಿ ಸಮುದಾಯಗಳು ಇವೆ. ಇವರ ಮೌಖಿಕ ಸಾಹಿತ್ಯ ಪರಂಪರೆ ರಂಜನೀಯವಾದ ಹಿನ್ನೆಲೆಯಲ್ಲಿ ರೂಪಿತವಾಗದೆ ಬದುಕಿನ ಉತ್ಪನ್ನದ ಭಾಗವಾಗಿ ರೂಪುಗೊಂಡಿರುವಂತಹದು. ಆದರೆ ಕೆಲ ಅಲೆಮಾರಿ ಸಮುದಾಯಗಳು ಬೇರೆ ಬೇರೆ ಕುಲವೃತ್ತಿ ಹಾಗೂ ಪ್ರವೃತ್ತಿಗಳನ್ನು ಅಳವಡಿಸಿಕೊಂಡು ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಚಿತ್ರದುರ್ಗ ಪರಿಸರದಲ್ಲಿ ಕಂಡುಬರುವ ವೃತ್ತಿ ಕಲಾವಿದರಾದ ಗೊಂದಲಿಗ, ಬುಡ್ಗ ಜಂಗಮ, ಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಮೌಖಿಕ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಬಹುದಾಗಿದೆ.

ಈ ಹಿಂದೆ ಕನ್ನಡ ಜಾನಪದ ಸಂಶೋಧನೆಯೆಂದರೆ ಕೇವಲ ಪಠ್ಯದ ಸಂಗ್ರಹವೆಂದೇ ಭಾವಿಸಲಾಗಿತ್ತು. ಆದರೆ ಸಂಗ್ರಹದ ಆಚೆಗಿನ ಸೈದ್ಧಾಂತಿಕ ಅಥವಾ ವಿಮರ್ಶಾತ್ಮಕ ನೆಲೆಗಟ್ಟಿನ ಅಧ್ಯಯನವು ಕನ್ನಡದಲ್ಲಿ ತುಂಬಾ ಕಡಿಮೆ ಪ್ರಮಾಣದಲ್ಲಿ ನಡೆದಿದೆ ಎನಿಸುತ್ತದೆ. ಯಾವುದೇ ಒಂದು ಸಮುದಾಯದೊಳಗಿನ ಜನಪದ ಆಕರಗಳನ್ನು ಕುರಿತು ಅಧ್ಯಯನ ಮಾಡುವಾಗ ಕೇವಲ ಸಾಹಿತ್ಯವನ್ನು ಮಾತ್ರ ಪರಿಗಣಿಸದೆ ಆದರೊಂದಿಗೆ ಸಾಂದರ್ಭಿಕ ವಿವರಗಳನ್ನೂ ಪಠ್ಯದ ಭಾಗವೆಂದು ಗ್ರಹಿಸಬೇಕಾಗುತ್ತದೆ. ಏಕೆಂದರೆ ಪ್ರಪಂಚದ ಯಾವುದೇ ಒಂದು ಮೂಲೆಯಲ್ಲಿ ಆ ಭಾಷೆಯಲ್ಲಿ ನಡೆದ ಅಧ್ಯಯನ, ವ್ಯಾಖ್ಯಾನಗಳು ಇತರ ಪ್ರದೇಶದ ಜಾನಪದಕ್ಕೆ ಅನ್ವಯವಾಗುವುದು ಸ್ವಾಭಾವಿಕ. ಹಾಗೆಂದ ಮಾತ್ರಕ್ಕೆ ಇತರ ಪ್ರದೇಶ ಅಥವಾ ಇತರೆ ಭಾಷೆಗಳಲ್ಲಿ ನಡೆದ ಅಧ್ಯಯನಗಳೆಲ್ಲವೂ ಈ ಭಾಷೆಗೂ ಯಥಾವತ್ತಾಗಿ ಅನ್ವಯವಾಗುತ್ತವೆಯೆಂದು ಭಾವಿಸಬಾರದು. ಆದರೆ ಮನುಷ್ಯ ಸಹಜ ಸ್ವಭಾವಗಳಿಗೆ ಈ ತೆರನಾದ

ಅಧ್ಯಯನಗಳು ಸಹಕರಿಸುತ್ತವೆಯೆಂಬ ಅಂಶವೂ ಅಷ್ಟೇ ನಿಜ. "ಸಾರ್ವತ್ರಿಕವೂ ಸಾಂಘಿಕವೂ ಆದ ಜಾನಪದದಲ್ಲಿ ಭೌಗೋಳಿಕ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿ ಸಾಮಾಜಿಕ, ಮಾನಸಿಕ ಅಂಶಗಳ ಪರಿಧಿಯಲ್ಲಿ ಜಾನಪದವನ್ನು ಪರಿಭಾವಿಸುವುದು ಹೆಚ್ಚು ಸೂಕ್ತ. ಪ್ರದರ್ಶನ ಕೇವಲ ಪ್ರದರ್ಶನಕಾರನ ಮೇಲೆ ಮಾತ್ರ ಅವಲಂಬಿತವಾಗಿರುವುದಿಲ್ಲ. ಸಂದರ್ಭ ಮತ್ತು ಶ್ರೋತೃಗಳೂ ಕೂಡ ಬಹುಮಟ್ಟಿಗೆ ಅದಕ್ಕೆ ಮುಖ್ಯ ಕಾರಣರಾಗುತ್ತಾರೆ."[೫] ಎಂಬ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು.

ಪೀಟರ್‌ಕ್ಲಾಸ್ ಮತ್ತು ಕೋರಂ ಅವರ ಪ್ರಕಾರ ಯಾವುದೇ ಜಾನಪದ ಸಾಹಿತ್ಯದ ಹಾಡುಗಾರಿಕೆ ಮತ್ತು ಪ್ರದರ್ಶನಗಳು ಜನಪದೀಯರು ಮೈಗೂಡಿಸಿಕೊಂಡಿರುವ ಆಚರಣೆಗಳನ್ನು, ಅವುಗಳ ಕಾರ್ಯಗಳನ್ನು ಅರ್ಥೈಸಿಕೊಳ್ಳುವುದನ್ನು ಅದು ಬಯಸುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

ಆ ಎಲ್ಲಾ ದೃಷ್ಟಿಗಳಿಂದ ಅಲೆಮಾರಿ ವೃತ್ತಿಗಾಯಕರಲ್ಲಿ ಪ್ರಚಲಿತವಿರುವ ಮೌಖಿಕ ಕಾವ್ಯ ಸಂಪತ್ತನ್ನು ಅವಲೋಕಿಸುವುದರೊಂದಿಗೆ ಅವು ಎಂತಹ ಸಂದರ್ಭಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ, ಅವು ಪ್ರದರ್ಶನಗೊಳ್ಳಲು ಕಾರಣಗಳೇನಿರಬಹುದು ಮುಂತಾದವುಗಳನ್ನು ಅರಿಯಲು ಕಾವ್ಯ ಸಂದರ್ಭಗಳನ್ನು ಅರಿಯುವುದೂ ಅಷ್ಟೇ ಮುಖ್ಯವಾಗಿರುತ್ತದೆ. ಒಟ್ಟಾರೆಯಾಗಿ ಪಠ್ಯವೊಂದು ಕೇವಲ ಲಿಖಿತ ರೂಪದಲ್ಲಿ ಇರುವುದೊಂದೇ ಅಲ್ಲ, ಗೊತ್ತಾದ ಸಂದರ್ಭವೊಂದರಲ್ಲಿ ಮೌಖಿಕವಾಗಿ ನಿರ್ವಹಣೆಗೊಳ್ಳುವ ಜಾನಪದ ಸಂಗತಿಗಳನ್ನೆಲ್ಲಾ ಪಠ್ಯವೆಂದು ಪರಿಗಣಿಸಬೇಕಾಗುತ್ತದೆ. ಹೀಗಿದ್ದಾಗ ಕೇವಲ ದ್ವಿತೀಯ ಮಾಹಿತಿಯಾಗಿ ದೊರೆಯುವ ಲಿಖಿತ ಪಠ್ಯವೊಂದನ್ನೇ ನಂಬಿ ಅಧ್ಯಯನ ಮಾಡುವುದು ಸಾಧ್ಯವಾಗುವುದಿಲ್ಲ. ಅದಕ್ಕೆ ವ್ಯಾಪಕವಾದ ಕ್ಷೇತ್ರಕಾರ್ಯದ ಅಗತ್ಯತೆಯೂ ಮುಖ್ಯವಾಗುತ್ತದೆ. ಕ್ಷೇತ್ರಕಾರ್ಯವೆಂಬುದು ಸೂಕ್ಷ್ಮವಾದ ಮತ್ತು ಶ್ರಮವನ್ನು ಆಪೇಕ್ಷಿಸುವ ವಿಧಾನವಾಗಿದೆ. ಒಂದು ರಚನೆಗೆ ರೂಪು ಕೊಡುವವನು ಒಬ್ಬನಾದರೂ ಸಂಪ್ರದಾಯ ಮತ್ತು ಸಮುದಾಯಗಳಿಗೆ ಹೊರತಾಗಿ ಸ್ವತಂತ್ರವಾಗಿ ಅವನು ಏನನ್ನೂ ಸೃಷ್ಟಿಸಲಾರ. ಅದಕ್ಕಾಗಿಯೇ ಈ ಪ್ರದರ್ಶನವೆನ್ನುವುದು ಸಂಕೀರ್ಣ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಆ ನಿಟ್ಟಿನಲ್ಲಿ ಅಲೆಮಾರಿ ವೃತ್ತಿಗಾಯಕರು ಹಾಡುವ ಜನಪದ ಕಾವ್ಯಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಪಾಳೆಯಗಾರರ ಆಳ್ವಿಕೆಯಲ್ಲಿದ್ದ ಚಿತ್ರದುರ್ಗ ಜಿಲ್ಲೆಯು ಹಲವು ಬುಡಕಟ್ಟು ಹಾಗೂ ಅಲೆಮಾರಿ ಸಮುಯದಾಗಳಿಗೆ ನೆಲೆಯೊದಗಿಸಿದೆ. ಈ ಜಿಲ್ಲೆಯ ಭಾಷೆ, ಸಂಸ್ಕೃತಿ ಪ್ರತಿಯೊಂದರಲ್ಲಿಯೂ ತನ್ನದೇ ಆದ ವೈಶಿಷ್ಟತೆಯನ್ನೊಳಗೊಂಡಿದೆ. ಬುಡಕಟ್ಟು ಜಾನಪದ ಸಂಸ್ಕೃತಿಯ ದ್ಯೋತಕವಾಗಿರುವ ಗೌಸಂದ್ರ ಮಾರಮ್ಮ, ಎತ್ತಪ್ಪ, ಜುಂಜಪ್ಪನಂತಹ ಹತ್ತು ಹಲವು ದೈವಗಳು ಚಿತ್ರದುರ್ಗ ಜಿಲ್ಲೆ ಮತ್ತು ಅದರ ಆಸುಪಾಸಿನಲ್ಲಿ ಇನ್ನೂ ಜೀವಂತವಾಗಿವೆ. ಅಂತಹ ದೈವಗಳ ಹೊರತಾಗಿ ಅಲೆಮಾರಿ ವೃತ್ತಿಗಾಯಕರು ತಮ್ಮದೇ ಆದ ದೈವಗಳನ್ನೂ, ಸಂಸ್ಕೃತಿ, ಆಚರಣೆ, ನಂಬಿಕೆಗಳನ್ನೂ ಒಳಗೊಂಡಿವೆ. ಒಟ್ಟಾರೆಯಾಗಿ ಹೇಳುವುದಾದರೆ ಅಲೆಮಾರಿ ವೃತ್ತಿ ಗಾಯಕರ ವ್ಯಕ್ತಿತ್ವದ ಒಂದು ಮುಖವಾಗಿ ಜನಪದ ಕಾವ್ಯ ಪ್ರಕಾರಗಳು ಇಲ್ಲಿ ಉಳಿದುಕೊಂಡು ಬಂದಿವೆ. ಆಂಧ್ರ ಪ್ರದೇಶದ ಪ್ರಸಿದ್ಧ ಜನಪದ

ಕಾವ್ಯ ಪ್ರಕಾರವಾಗಿರುವ 'ಬುರ್ರಕಥ'ವು ಚಿತ್ರದುರ್ಗ ಜಿಲ್ಲೆಯಲ್ಲಿಯೂ ತುಂಬಾ ಪ್ರಚಲಿತವಿದೆ. ಹಾಗೆ ಗೋಂದಲಿಗರ ಬದುಕು ಹಾಗೂ ಅವರ ಪದಗಳು, ದೊಂಬಿದಾಸರು, ಅರ್ಜುನಜೋಗಿ ಮುಂತಾದ ಅಲೆಮಾರಿ ವೃತ್ತಿಗಾಯಕರ ಕಲೆಯು ಈ ಜಿಲ್ಲೆಯಲ್ಲಿ ಜೀವಂತವಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಯಾವುದೇ ಜನಪದ ಪ್ರಕಾರಗಳಿರಲಿ, ಅವು ಬಳಕೆಗೊಳ್ಳುತ್ತಿರುವ ಅಥವಾ ಉಸಿರಾಡುತ್ತಿರುವ ನೆಲದ ಸಂಸ್ಕೃತಿಯ ಪ್ರತಿಬಿಂಬಕಗಳು. ವೃತ್ತಿಗಾಯಕರ ಜಾನಪದ ಸಾಹಿತ್ಯ ಪ್ರಕಾರಗಳನ್ನು ಅಧ್ಯಯನ ಮಾಡುವುದರಿಂದ ಆಯಾ ಸಮುದಾಯಗಳ ವೈಶಿಷ್ಟ್ಯ, ಸಂಸ್ಕೃತಿ ಮುಂತಾದವುಗಳನ್ನು ಅರಿಯಲು ಪರೋಕ್ಷವಾಗಿ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತ ಜನಪದ ವೃತ್ತಿಗಾಯಕರು ಹಾಡುವ ಕಾವ್ಯಗಳನ್ನು ಇಲ್ಲಿ ವಿಶ್ಲೇಷಿಸಿ ನೋಡುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

೧.೧. ಅಧ್ಯಯನದ ಉದ್ದೇಶಗಳು

ಅಲೆಮಾರಿ ವೃತ್ತಿ ಗಾಯಕ ಸಮುದಾಯದ ಕಲಾವಿದರು ಆರ್ಥಿಕವಾಗಿ ದುರ್ಬಲರಿದ್ದು ಸಾಂಸ್ಕೃತಿಕವಾಗಿ ತುಂಬಾ ಸಂಪದ್ಭರಿತ ಕಲಾಸಂಪತ್ತನ್ನು ಹೊಂದಿರುವರು ಅಲೆಮಾರಿ ವೃತ್ತಿ ಗಾಯಕರು ಒಂದೇ ಸಮುದಾಯಕ್ಕೆ ಸೇರಿದವರಾಗಿರುವುದಿಲ್ಲ. ಅವರು ಪ್ರತ್ಯೇಕ ಸಮುದಾಯದವರಾಗಿದ್ದು, ಆ ಸಮುದಾಯಗಳ ಸಾಂಸ್ಕೃತಿಕ ಹಿನ್ನೆಲೆ, ಮಾತೃಭಾಷೆ, ಮೌಖಿಕ ಸಾಹಿತ್ಯ ಮತ್ತು ಪ್ರದರ್ಶನಗೊಳಿಸುವ ಕಲೆಗಳೂ ಭಿನ್ನ ಭಿನ್ನವಾಗಿರುತ್ತವೆ. ಇಂತಹ ಭಿನ್ನ ರೂಪ, ಸಂಸ್ಕೃತಿಗಳನ್ನು ಹೊಂದಿರುವ ಚಿತ್ರದುರ್ಗ ವ್ಯಾಪ್ತಿಯ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಅಲೆಮಾರಿ ಸಮುದಾಯಗಳ ಸಾಹಿತ್ಯಿಕ ಸ್ವರೂಪವನ್ನು ತೌಲನಿಕವಾಗಿ ಅಧ್ಯಯನಿಸುವ ತಾತ್ವಿಕ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

ಉದ್ದೇಶಗಳು

೧. ಚಿತ್ರದುರ್ಗ ಜಿಲ್ಲೆಯ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ವಿವಿಧ ಪ್ರಕಾರಗಳಾದ ಹಾಡು, ಕಥೆ, ಗಾದೆ, ಒಗಟು, ಒಡಪು, ಪುರಾಣ, ಕಾವ್ಯ, ನಂಬಿಕೆ-ನಿಷೇಧಗಳ ಸ್ವರೂಪ ಮತ್ತು ಅವುಗಳ ಚಹರಗೆಳನ್ನು ವಿವರಿಸುವುದು.

೨. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಅವರ ಸಾಮಾಜಿಕ ಸ್ವರೂಪ, ಆರ್ಥಿಕ, ಅಧೀನತೆ ಮತ್ತು ಲಿಂಗಸಂಬಂಧಿಯ ವಿವಿಧ ಆಯಾಮಗಳನ್ನು ವಿಶ್ಲೇಷಿಸುವುದು.

೩. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಪಾರಂಪರಿಕ ಮತ್ತು ಸಾಂಸ್ಕೃತಿಕ ಅನನ್ಯತೆಗಳನ್ನು ವಿವರಿಸುವುದು.

೪. ಅಲೆಮಾರಿ ಸಮುದಾಯಗಳ ಸಮಗ್ರ ಬದುಕಿನ ಭಾಗವಾಗಿ ರೂಪುಗೊಂಡ ಮೌಖಿಕ ಸಾಹಿತ್ಯವನ್ನು ತಾತ್ವಿಕ ವಿವೇಚನೆಗೆ ಒಳಪಡಿಸಿಕೊಳ್ಳುವುದು.

೧.೨. ಅಧ್ಯಯನದ ವ್ಯಾಪ್ತಿ

ಅಲೆಮಾರಿ ವೃತ್ತಿ ಗಾಯಕರು ಭಿನ್ನ ಭಿನ್ನ ಪರಿಸರದಲ್ಲಿ ಆಯಾ ಪರಿಸರಕ್ಕೆ ತಕ್ಕ ಭಾಷೆಯನ್ನು ಮೈಗೂಡಿಸಿಕೊಂಡು ದೇಶದಾದ್ಯಂತ ಇರುವರು. ಹಾಗೆಯೇ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಬೇರೆ ಬೇರೆ ವೃತ್ತಿಗಾಯಕ ಸಮುದಾಯಗಳು ಕಂಡುಬರುತ್ತವೆ. ಆದರೆ ಅಧ್ಯಯನದ ಕಾಲಮಿತಿಯನ್ನು ಗಮನದಲ್ಲಿರಿಸಿಕೊಂಡು ಕೇವಲ ಚಿತ್ರದುರ್ಗ ಪರಿಸರದಲ್ಲಿ ಕಂಡುಬರುವ ಅಲೆಮಾರಿ ವೃತ್ತಿಗಾಯಕರನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅದರಲ್ಲಿಯೂ ಮರಾಠಿ ಮನೆಮಾತಾಗಿರುವ ಅರ್ಜುನಜೋಗಿ, ಗೋಂದಲಿಗ, ಬುಡ್ಗಜಂಗಮ ಮತ್ತು ದೊಂಬಿದಾಸ ಸಮುದಾಯಗಳ ಮೌಖಿಕ ಸಾಹಿತ್ಯವನ್ನು ಮತ್ತು ಅವರ ಸಾಂಸ್ಕೃತಿಕ ಹಿನ್ನೆಲೆಯನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ.

೧.೩. ಅಧ್ಯಯನದ ಮಹತ್ವ

ಕರ್ನಾಟಕದಲ್ಲಿ ಅಲೆಮಾರಿ ಸಮುದಾಯಗಳ ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಚಿತ್ರದುರ್ಗ ಪರಿಸರದಲ್ಲಿ ನೆಲೆಸಿದ ಅಲೆಮಾರಿ ವೃತ್ತಿ ಗಾಯಕರ ಮೌಖಿಕ ಸಾಹಿತ್ಯದ ಕುರಿತು ಇಲ್ಲಿಯವರೆಗೂ ಯಾವುದೇ ಅಧ್ಯಯನಗಳು ನಡೆದಿರುವುದಿಲ್ಲ. ಅರ್ಜುನಜೋಗಿ, ಗೋಂದಲಿಗ, ಬುಡ್ಗಜಂಗಮ ಮತ್ತು ದೊಂಬಿದಾಸ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಸೃಷ್ಟಿ ಪುರಾಣ, ಕಥನ–ಕಾವ್ಯಗಳು, ಒಗಟುಗಳು, ಒಡಪುಗಳು, ಗಾದೆಗಳು, ನಂಬಿಕೆ–ನಿಷೇಧ ಇತ್ಯಾದಿಗಳಲ್ಲಿ ಅವರ ಬದುಕಿನ ಸಾಂಸ್ಕೃತಿಕ ಶ್ರೀಮಂತ ಪರಂಪರೆ ಇರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪರಿಸರದ ಅಲೆಮಾರಿ ವೃತ್ತಿ ಗಾಯಕರ ಮೌಖಿಕ ಸಾಹಿತ್ಯದ ಕುರಿತು ನಡೆದಿರುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವನ್ನು ನಡೆಸಲು ಚಾರಿತ್ರಿಕ, ಸಂದರ್ಶನ ಹಾಗೂ ಸಹಭಾಗಿತ್ವ ವಿಧಾನಗಳನ್ನು ಅನುಸರಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಅಲೆಮಾರಿ ವೃತ್ತಿಗಾಯಕ ಸಮುದಾಯಗಳ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟೆಯರಗಳು, ಪತ್ರಿಕೆಗಳು, ಬಿಡಿ ಲೇಖನಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಅಲೆಮಾರಿ ವೃತ್ತಿ ಗಾಯಕ ಸಮುದಾಯದ ಕುಟುಂಬಗಳು ನೆಲೆಸಿವೆ. ಅಲೆಮಾರಿ ವೃತ್ತಿ ಗಾಯಕ ಕಲಾವಿದರನ್ನು ನೇರವಾಗಿ ಸಂದರ್ಶಿಸಿ ಅವರು ಹಾಡುವ ಕಾವ್ಯಗಳು, ಹಾಡುವ ಕ್ರಮ, ಹಾಡುಗಾರಿಕೆಗೆ ಪೂರಕವಾಗಿ ಬಳಕೆಗೊಳ್ಳುವ ವಾದ್ಯಪರಿಕರಗಳ ಕುರಿತಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಅಲೆಮಾರಿ ಸಮುದಾಯಗಳಲ್ಲಿ ಇರಬಹುದಾದ ನಂಬಿಕೆ, ನಿಷೇಧಗಳು, ಕಥೆಗಳು, ಕಾವ್ಯ ಇತ್ಯಾದಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನದಲ್ಲಿ ವೃತ್ತಿ ಗಾಯಕರ ಹಿನ್ನೆಲೆಯನ್ನು ಅರಿಯುವ ಉದ್ದೇಶದಿಂದ ಪ್ರಶ್ನಾವಳಿಯನ್ನು ರಚಿಸಿಕೊಂಡು ಆ ಮೂಲಕ ಆಯಾ ಸಮುದಾಯಗಳ ಹಿನ್ನೆಲೆ, ಹುಟ್ಟಿಗೆ ಸಂಬಂಧಿಸಿದಂತೆ ಸಮುದಾಯದಲ್ಲಿರುವ ಮೌಖಿಕ ಸಾಹಿತ್ಯ ಇತ್ಯಾದಿಗಳನ್ನು ಅರಿಯಲು ಮಾಹಿತಿಯನ್ನು

ಸಂಗ್ರಹಿಲಾಗಿದೆ. ಈ ರೀತಿ ಕ್ರೋಢಿಕರಿಸಿದ ಮಾಹಿತಿಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೧.೫. ಅಧ್ಯಯನದ ವಿನ್ಯಾಸ

ಈ ಅಧ್ಯಯನವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದು ಪ್ರವೇಶವಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳ ಕುರಿತು ತಿಳಿಸಲಾಗಿದೆ.

ಅಧ್ಯಾಯ ಎರಡು ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಪರಂಪರೆ ಮತ್ತು ಅಲೆಮಾರಿ ಬುಡಕಟ್ಟು ಸಮುದಾಯಗಳು ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ, ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ, ಚಿತ್ರದುರ್ಗ ಜಿಲ್ಲೆಯ ಸಮುದಾಯಗಳ ಪರಂಪರೆ ಮತ್ತು ಅಲೆಮಾರಿ ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಕುರಿತ ಪರಿಚಯ ವಿವರಗಳನ್ನು ತಿಳಿಸಲಾಗಿದೆ.

ಅಧ್ಯಾಯ ಮೂರು ಅಲೆಮಾರಿ ಸಮುದಾಯಗಳಲ್ಲಿ ಮೌಖಿಕ ಸಾಹಿತ್ಯದ ಸ್ವರೂಪ ಎಂಬ ಶೀರ್ಷಿಕೆಯಾಗಿದ್ದು ಇದರಲ್ಲಿ ಲಾವಣಿ, ಕಾವ್ಯ, ಬುರ‍್ರಕಥಾ, ಕಥೆ, ಒಡಪು, ಒಗಟು, ಗಾದೆ, ನಂಬಿಕೆ–ನಿಷೇಧಗಳನ್ನು ಕುರಿತು ಮತ್ತು ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯ ಪರಂಪರೆ, ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಗಾಯನ ಮಾಡುವ ಸ್ವರೂಪ ವಿಧಾನಗಳನ್ನು ಕುರಿತು ಅವಲೋಕಿಸಲಾಗಿದೆ.

ಅಧ್ಯಾಯ ನಾಲ್ಕು ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ ಎಂಬ ಶೀರ್ಷಿಕೆಯನ್ನು ಹೊಂದಿದ್ದು ಇದರಲ್ಲಿ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಸೃಷ್ಟಿ ಪುರಾಣಗಳು ಹಾಗೂ ಅವರ ಮೌಖಿಕ ಕಾವ್ಯಗಳಲ್ಲಿ ಅಭಿವ್ಯಕ್ತಿವಾಗಿರುವ ಪುರಾಣ ಪ್ರಜ್ಞೆಯನ್ನು ಕುರಿತು ವಿಶ್ಲೇಸಿಸಲಾಗಿದೆ.

ಅಧ್ಯಾಯ ಐದು ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಚಾರಿತ್ರಿಕ ವಿವೇಚನೆ ಎಂಬ ಶೀರ್ಷಿಕೆಯನ್ನು ಹೊಂದಿದ್ದು ಈ ಹಿನ್ನೆಲೆಯಲ್ಲಿ ಗೊಂದಲಿಗ, ಬುಡ್ಗಜಂಗಮ ಮತ್ತು ದೊಂಬಿದಾಸ ಸಮುದಾಯಗಳ ಮೌಖಿಕ ಕಾವ್ಯಗಳಲ್ಲಿನ ಚಾರಿತ್ರಿಕ ವಿವೇಚನೆಯನ್ನು ಮಾಡಲಾಗಿದೆ.

ಅಧ್ಯಾಯ ಆರು ಅಲೆಮಾರಿ ಸಮುದಾಯಗಳು ಮೌಖಿಕ ಸಾಹಿತ್ಯದಲ್ಲಿ ಸಾಮಾಜಿಕ ಸಂಕಥನ ಎಂಬ ಶೀರ್ಷಿಕೆಯನ್ನು ಹೊಂದಿದ್ದು ಇದರಲ್ಲಿ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಬದುಕಿನ ಸ್ವರೂಪ ಮತ್ತು ಪ್ರದರ್ಶನಾತ್ಮಕ ಕಲೆಗಳಲ್ಲಿ ಬದುಕಿನ ಅನನ್ಯತೆಯ ನೆಲೆಗಳನ್ನು ವಿಶ್ಲೇಷಿಸುವುದರ ಜೊತೆಗೆ ಅವರ ಮೌಖಿಕ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಂವೇದನೆಯ ನೆಲೆಗಳನ್ನು ಕುರಿತು

ಚರ್ಚಿಸಲಾಗಿದೆ. ಅಲ್ಲದೇ ಅವರ ಮೌಖಿಕ ಸಾಹಿತ್ಯದ ಭಾಷೆ, ವಾದ್ಯಗಳು ಮತ್ತು ಅವರ ಸಮಕಾಲೀನ ಬದುಕಿನ ಬಿಕ್ಕಟ್ಟುಗಳು ಕುರಿತು ಅವಲೋಕಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಸಮಾರೋಪಕ್ಕಾಗಿ ಮೀಸಲಿರಿಸಲಾಗಿದೆ. ಮೊದಲ ಅಧ್ಯಾಯದಿಂದ ಆರು ಅಧ್ಯಾಯಗಳಲ್ಲಿ ವಿವರಿಸಿದ ವಿಷಯದ ಸಂಕ್ಷಿಪ್ತ ನೋಟವನ್ನು ಇದರಲ್ಲಿ ಕೊಡಲಾಗಿದೆ. ಒಟ್ಟಾರೆ ಅಧ್ಯಯನದಿಂದ ದೊರೆತ ಅಧ್ಯಯನದ ಫಲಿತಗಳನ್ನು ನೀಡಲಾಗಿದೆ ಹಾಗೂ ಅಧ್ಯಯನಕ್ಕೆ ಪೂರಕವಾಗಿ ಕೆಲವು ಸಲಹೆ ಮತ್ತು ಸೂಚನೆಗಳನ್ನು ತಿಳಿಸಲಾಗಿದೆ.

ಅಧ್ಯಾಯದ ಕೊನೆಯಲ್ಲಿ ಅನುಬಂಧಗಳಿದ್ದು ಅನುಬಂಧ ಒಂದರಲ್ಲಿ ಮಾಹಿತಿದಾರರ ಹೆಸರು, ವಿವರಗಳನ್ನು ನೀಡಲಾಗಿದೆ. ಅನುಬಂಧ ಎರಡರಲ್ಲಿ ಪರಾಮರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ. ಅನುಬಂಧ ಮೂರರಲ್ಲಿ ಛಾಯಾಚಿತ್ರಗಳನ್ನು ಕೊಡಲಾಗಿದೆ.

ಮುಖ್ಯವಾಗಿ ಈ ಅಧ್ಯಯನದಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೊಳ್ಳಪಟ್ಟಿರುವ ಅಲೆಮಾರಿ ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳನ್ನು ಕೇಂದ್ರೀಕರಿಸಿಕೊಂಡು ಅವರ ಸಾಮಾಜಿಕ ಹಿನ್ನೆಲೆ, ಮೌಖಿಕ ಸಾಹಿತ್ಯದ ಸ್ವರೂಪ, ಗಾಯನದ ಸ್ವರೂಪ, ವಿಧಾನಗಳು, ಅವರ ಮೌಖಿಕ ಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿರುವ ಪುರಾಣ ಪ್ರಜ್ಞೆ, ಚಾರಿತ್ರಿಕ ವಿವೇಚನೆ ಬದುಕಿನ ಸಂಕಥನದ ಸ್ವರೂಪ, ಮಹಿಳಾ ಸಂವೇದನ ನೆಲೆಗಳು ಹಾಗೂ ಅವರ ಮೌಖಿಕ ಸಾಹಿತ್ಯದ ಭಾಷೆ, ಪ್ರದರ್ಶನಾತ್ಮಕ ಕಲೆಗಳು, ವಾದ್ಯಗಳ ಬಳಕೆಯ ಹಿನ್ನೆಲೆಯಲ್ಲಿ ಸಮುದಾಯಗಳ ಗುರುತಿಸಿಕೊಳ್ಳುವಿಕೆ ಹಾಗೂ ಸಮಕಾಲೀನ ಸಂದರ್ಭದಲ್ಲಿ ಅವರ ಜೀವನದ ಸ್ಥಿತಿಗತಿಗಳನ್ನು ಕುರಿತು ಅಧ್ಯಯಕ್ಕೊಳಪಡಿಸಿಕೊಳ್ಳುವುದರ ಜೊತೆಗೆ ಒಟ್ಟಾರೆ ಅವರ ಮೌಖಿಕ ಸಾಹಿತ್ಯವನ್ನು ಕೇಂದ್ರೀಕರಿಸಿಕೊಂಡು ಇದರಲ್ಲಿ ಸಾಂಸ್ಕೃತಿಕವಾದ ವಿವೇಚನೆಯನ್ನು ತೌಲನಿಕವಾಗಿ ಅಧ್ಯಯನಕ್ಕೊಳಪಡಿಸಿಕೊಂಡು ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಈಗಾಗಲೇ ಹಲವಾರು ಸಂಗ್ರಹಕಾರರಿಂದ ಸಂಗ್ರಹಗೊಂಡ ಜನಪದ ಕಾವ್ಯ ಪಠ್ಯಗಳನ್ನು ಗಮನಿಸಲಾಗಿದೆ. ಆ ಕಾವ್ಯಗಳು ಪುನರಭಿವ್ಯಕ್ತಿಗೊಳ್ಳುವ ಸಂದರ್ಭ ಸನ್ನಿವೇಶಗಳನ್ನು ಸ್ವತಃ ಕ್ಷೇತ್ರ ಕಾರ್ಯದ ಮೂಲಕ ಅರಿಯುವುದರೊಂದಿಗೆ ಅವಶ್ಯಕವಾದ ಮಾಹಿತಿಗಳನ್ನು ಪಡೆಯಲಾಗಿದೆ. ಜೊತೆಗೆ ಕಲಾವಿದರ ಮತ್ತು ಇತರ ವ್ಯಕ್ತಿಗಳ ಸಂದರ್ಶನವನ್ನು ಮಾಡುವ ಮೂಲಕವೂ ಸಾಹಿತ್ಯ ಮತ್ತು ಮಾಹಿತಿ ಪಡೆಯಲಾಗಿದೆ. ಹಾಗೂ ಇತರ ಹಲವು ಮೂಲಗಳಿಂದಲೂ ಈ ಪ್ರಬಂಧ ರಚನೆಗೆ ಅವಶ್ಯಕವಾದ ಮಾಹಿತಿಯನ್ನು ಪಡೆಯಲಾಗಿದೆ.

೧.೬. ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಭಾರತದ ಹಲವಾರು ರಾಜ್ಯಗಳಲ್ಲಿ ಅಲೆಮಾರಿ ಸಮುದಾಯಗಳು ವ್ಯಾಪಿಸಿಕೊಂಡಿವೆ ಅವುಗಳಲ್ಲಿ ಗೊಂದಲಿಗ, ಬುಡ್ಗಜಂಗಮ, ಜೋಗಿ ಮತ್ತು ದೊಂಬಿದಾಸ ಸಮುದಾಯಗಳು ಕರ್ನಾಟಕದಲ್ಲಿ

ವಿಶಿಷ್ಟವಾಗಿ ಕಂಡುಬರುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸೇರಿದಂತೆ ಶಿವಮೊಗ್ಗ, ದಕ್ಷಿಣ ಕನ್ನಡ, ಮೈಸೂರು, ಗದಗ, ಬೆಳಗಾವಿ, ಧಾರವಾಡ, ಬಳ್ಳಾರಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲದೆ ಇತರ ಜಿಲ್ಲೆಗಳಲ್ಲಿ ಈ ಸಮುದಾಯಗಳು ಕಂಡು ಬರುತ್ತವೆ. ಈ ಸಮುದಾಯಗಳು ತಮ್ಮದೇ ಆದ ಪ್ರಾಚೀನ ಸಾಂಸ್ಕೃತಿಕ ಪರಂಪರೆಯನ್ನು ಒಳಗೊಂಡ ಧಾರ್ಮಿಕ ಮತ್ತು ಲೌಕಿಕ ವೃತ್ತಿ ಗಾಯಕ ಅಲೆಮಾರಿ ಸಮುದಾಯಗಳಾಗಿದ್ದು, ಪ್ರಸುತ್ತ ಅಧ್ಯಯನದ ಹಿನ್ನೆಲೆಯಲ್ಲಿ ಇದುವರೆಗೂ ಈ ಸಮುದಾಯಗಳಿಗೆ ಸಂಬಂಧಪಟ್ಟಂತೆ ನಡೆದಿರುವ ಅಧ್ಯಯನದ ಪ್ರಮುಖ ಆಕಾರಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸುಲಾಗಿದೆ.

ಎಡ್ಗರ್ ಥರಸ್ಟನ್ ಮತ್ತು ಕೆ.ರಂಗಾಚಾರ್‌ಅವರ, castes and tribes in southern india, vol–೨–೧೯೦೯, ಏಶಿಯನ್ ಎಜ್ಯುಕೇಶನ್ ಸರ್ವಿಸ್, ನ್ಯೂಡೆಲ್ಲಿ ಈ ಕೃತಿಯಲ್ಲಿ ಗೊಂದಲಿಗರ ಮೂಲ ಪರಂಪರೆ ಆರಾಧನೆ, ವೃತ್ತಿ ಗೊಂದಳದ ವಿವರ, ಆಚರಣೆಗಳನ್ನು ತಿಳಿಯಬಹುದಾಗಿದೆ ಹಾಗೂ ಹಗಲುವೇಷಗಾರ ತೆಲಗು ಭಿಕ್ಷುಕ ಜನವರ್ಗ ಯಾವಾಗ ಭಿಕ್ಷೆ ಬೇಡಬೇಕು ಆಗ ಏನು ವೇಷ ಧಾರಬೇಕೆಂದು ಚರ್ಚೆಸುತ್ತಾರೆ. ತಿರುಪತಿಯಲ್ಲಿ ನಡೆಯುವ ಗಂಗಮ್ಮ ದೇವತೆ ವಾರ್ಷಿಕ ಉತ್ಸವದಲ್ಲಿ ಮುಂಜಾನೆಯಿಂದ ಸಾಯಂಕಾಲದವರೆಗೆ ವಿವಿಧ ಪದ್ಧತಿಯಲ್ಲಿ ವೇಷಗಳನ್ನು ದರಿಸಿ ತೋರಿಸುತ್ತಿದ್ದರು. ಅದರಲ್ಲಿ ಭೈರಾಗಿ ಮತ್ತು ಸರ್ಪ ವೇಷದಾರಿಗಳು ಮುಖ್ಯ ಎಂದು ತಿಳಿಸುತ್ತಾರೆ. ಈ ಲೇಖನ ಸಮುದಾಯದ ಪ್ರಾಚೀನತೆಯನ್ನು ಅರಿಯುವ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ ಮತ್ತು ಥರ್‌ಸ್ಟನ್‌ರವರು ತಮ್ಮ ಪ್ರಬಂಧದಲ್ಲಿ ದೊಂಬಿದಾಸರ ಕುರಿತಾದ ತೆಲುಗು, ಬಣಜಿಗ, ಹೊಲಯ, ತಿಗಳ ಮತ್ತು ಒಕ್ಕಲಿಗ ಸಮುದಾಯದವರು ವೈಷ್ಣವ ದೀಕ್ಷೆ ಸ್ವೀಕರಿಸಿ ದಾಸರಿಗಳಾಗಿದ್ದಾರೆಂದು ಹೇಳಲಾಗಿದೆ. ಮತ್ತೊಂದು ಕಡೆ ಬಲಿಜ, ಪಲ್ಲಿ, ಜಾನಪ್ಪ, ವಲ್ಲುವ, ಗಂಗೆದ್ದುಲ ಮತ್ತು ಗೊಲ್ಲ ದಾಸರಿ ಎಂದು ಎಂದು ಥರ್‌ಸ್ಟನ್ ವೈಷ್ಣವ ಭಿಕ್ಷುಕರಾಗಿದ್ದವರು ಎಂದು ಉಲ್ಲೇಖಿಸುತ್ತಾರೆ.

ಎಲ್ ಅನಂತ ಕೃಷ್ಣ ಅಯ್ಯರ್ ರವರು, ದಿ ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್, ೧೯೭೫, ಕೃತಿಯಲ್ಲಿ ಕರ್ನಾಟಕದಲ್ಲಿ ನೆಲೆಸಿರುವ ಅನೇಕ ಬುಡಕಟ್ಟು ಸಮುದಾಯಗಳ ಮಾಹಿತಿಯನ್ನು ತಿಳಿಸುವ ಐದು ಸಂಪುಟಗಳನ್ನು “ದಿ ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್” ಎಂಬ ಹೆಸರಿನ ಮೂಲಕ ಹೊರತರಲಾಯಿತು. ಈ ಕೃತಿಯ ಮೂರನೇ ಸಂಪುಟದಲ್ಲಿ ಜೋಗಿ ಬುಡಕಟ್ಟು ಸಮುದಾಯವನ್ನು ಕುರಿತು ವಿವರಿಸಲಾಗಿದೆ. ಅವರ ಕುಲ ಕಸುಬುಗಳು ಮತ್ತು ಉಪ ಪಂಗಡಗಳು ಅವರ ನೆಲೆಗಳನ್ನು ಕುರಿತು ವಿವರಿಸಿರುವರಲ್ಲದೆ. ತೆಲುಗು ಮತ್ತು ಕನ್ನಡ ಭಾಷೆಯನ್ನು ಮಾತನಾಡುತ್ತ ಕನ್ನಡದಲ್ಲಿ ಹಾಡುಗಳನ್ನು ಹೇಳುತ್ತ ಭಿಕ್ಷೆಯನ್ನು ಬೇಡಿ ಜೀವನ ಸಾಗಿಸುತ್ತಾರೆಂದು ತಿಳಿಸಿದ್ದಾರೆ. ದೊಂಬಿದಾಸರ ಕುರಿತು ಭಿಕ್ಷೆ ಬೇಡುವ ವೈಷ್ಣವ ಜಾತಿಯೇ ದಾಸರಿಯಾಗಿದೆ ಎಂದು ಯಾವುದೇ ನಿರ್ದಿಷ್ಟ ಜಾತಿಯೆಂದು ಸೂಚಿಸುರುವುದಿಲ್ಲ.

ಜಿ.ಶಂ.ಪ, ದಕ್ಷಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ೧೯೭೭, ಎಂಬ ಕೃತಿಯಲ್ಲಿ ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಸಂಪ್ರದಾಯಗಳು ಎಲ್ಲಮ್ಮನ ಚೌಡಿಕೆ ಸಂಪ್ರದಾಯ, ಕಾಡು ಗೊಲ್ಲರ ಜುಂಜಪ್ಪನ ಸಂಪ್ರದಾಯ, ಮೈಲಾರಲಿಂಗನ ಗೊರವರ ಸಂಪ್ರದಾಯ ಮತ್ತು ಜನಪದ ಲೌಖಿಕ ಕಾವ್ಯ ಸಂಪ್ರದಾಯಗಳನ್ನು ತಿಳಿಸುವ ಬಹುಮುಖ್ಯ ಪಿಎಚ್.ಡಿ ಮಹಾಪ್ರಬಂಧವಾಗಿದೆ. ಈ ಕೃತಿಯಲ್ಲಿ ಜನಪದ ಲೌಖಿಕ ಕಾವ್ಯ ಸಂಪ್ರದಾಯಗಳು ಲೌಖಿಕ ಗಾಯಕ ಪರಂಪರೆಯಲ್ಲಿ ಗುರುತಿಸಿಕೊಂಡಿರುವ ದೊಂಬಿದಾಸ ಸಮುದಾಯದವರನ್ನು ಜನಪದ ಕಲಾವಿದರು ಹೆಣ್ಣು ವೇಷದವರು ಎಂದು ಕರೆಯಲ್ಪಡುವ ಇವರು ಬಯಲಾಟಗಳಿಗೆ ಹೆಸರಾಗಿ ಅನೇಕ ಜನಪದ ಬಯಲಾಟಗಳನ್ನು ಆಡುವುದರ ಮೂಲಕ ಸಮಾಜದಲ್ಲಿ ಗುರುತಿಸಿಕೊಂಡಂತೆ ಎಂಬುದನ್ನು ತಿಳಿಸುತ್ತಾರೆ. ಅಲ್ಲದೆ ದೊಂಬಿದಾಸ ಶಬ್ದದ ಪದ ನಿಷ್ಪತ್ತಿಯನ್ನು ಅವರ ನಾಟಕ ಪ್ರದರ್ಶನದ ಪಾತ್ರ, ವಸ್ತು, ವಾದ್ಯಗಳ ಬಳಕೆ ಮತ್ತು ಲಾವಣಿಗಳು ಇತ್ಯಾದಿಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿಕೊಡುತ್ತಾರೆ. ಇನ್ನು ಇವರ "ದೊಂಬಿದಾಸರ ಲಾವಣಿಗಳು" ಎಂಬ ಕೃತಿಯು ದೊಂಬಿದಾಸರಿಂದ ಸಂಗ್ರಹಿಸಿದ ಮೌಖಿಕ ಸಾಹಿತ್ಯದ ಪಾಂಡಿತ್ಯಕ್ಕೆ ಹೆಸರಾಗಿರುವ ಬಹುಮುಖ್ಯ ಕೃತಿಯಾಗಿದೆ. ಈ ಮೂಲಕ ಅವರ ಇತರೆ ಬಿಡಿ ಲೇಖನಗಳು ವಿಮರ್ಶಾತ್ಮಕ ಬರವಣಿಗೆಗಳಲ್ಲಿ ದೊಂಬಿದಾಸ ಸಮುದಾಯವನ್ನು ತಾತ್ವಿಕವಾಗಿ ಪರಿಚಯಿಸಿದ ಹೆಗ್ಗಳಿಕೆ ಜಿ.ಶಂ. ಪರಮಶಿವಯ್ಯನವರಿಗೆ ಸಲ್ಲುತ್ತದೆ.

ಕ್ಯಾತನಹಳ್ಳಿ ರಾಮಣ್ಣನವರ, ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ೧೯೮೨ರಲ್ಲಿ ಈ ಕೃತಿ ಪ್ರಕಟಗೊಂಡಿದೆ ಕೃತಿಯಲ್ಲಿ ಗೊಂದಲಿಗ ಸಮುದಾಯದ ಅಧ್ಯಯನದ ಹಿನ್ನೆಲೆಯಲ್ಲಿ ತಾತ್ವಿಕ ನೆಲೆಯನ್ನು ನಿರೂಪಿಸುತ್ತವೆ. ಗೊಂದಲಿಗರ ಕಲೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಜೀವನವನ್ನು ಕುರಿತು ಅನಾವರಣ ಮಾಡುವ ಕೃತಿಗಳಾಗಿವೆ. ಗೊಂದಲಿಗರ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡದಲ್ಲಿ ನಡೆದ ಆರಂಭದ ಅಧ್ಯಯನಕಾರರಾಗಿ ಕ್ಯಾತನಹಳ್ಳಿ ರಾಮಣ್ಣನವರು ಪ್ರಮುಖವಾಗಿ ಕಂಡುಬರುತ್ತಾರೆ. ಈ ಕೃತಿಯು ಈ ಸಂಶೋಧನೆಗೆ ಮಾರ್ಗಸೂಚಿಯಾಗಿದೆ ಎಂದು ಹೇಳಬಹುದು.

ಹೊಸಮನಿ ಆರ್. ಸಿ. ರವರು, ಕರ್ನಾಟಕದಲ್ಲಿ ವೇಷಗಾರರು ಒಂದು ಸಾಂಸ್ಕೃತಿಕ ಅಧ್ಯಯನ, ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೧೯೯೩ರಲ್ಲಿ ಸಲ್ಲಿಸಿರುತ್ತಾರೆ. ಕರ್ನಾಟಕದಲ್ಲಿ ವೇಷಗಾರರನ್ನು ಕುರಿತು ನಡೆಸಿದ ಅಧ್ಯಯನಗಳಲ್ಲಿ ಬಹಳ ಮಹತ್ವದಾಗಿದೆ ಮತ್ತು ಬುಡ್ಗಜಂಗಮ ಸಮುದಾಯವನ್ನು ಕುರಿತು ದೀರ್ಘವಾಗಿ ಅಧ್ಯಯನ ನಡೆಸಿದ ಮೊದಲನೆಯ ಕೃತಿಯಾಗಿದೆ. ಕರ್ನಾಟಕ ರಾಜ್ಯದಲ್ಲಿರುವ ವೇಷಗಾರರನ್ನು ಸಂದರ್ಶಿಸುವ ಮೂಲಕ ಮಾಹಿತಿ ಸಂಗ್ರಹಿಸಿ ಸಿದ್ಧಪಡಿಸಿದ ಮಹಾ ಪ್ರಬಂಧವಾಗಿದೆ. ಇದರಲ್ಲಿ ಬುಡ್ಗಜಂಗಮ ಸಮುದಾಯದ ಮೂಲ, ಜೀವನ, ವಿಧಿ-ವಿಧಾನಗಳು, ಅವರ ಕಲೆಗಳನ್ನು ತಿಳಿಸುವಂತಹದಾಗಿದೆ.

ಯಳನಾಡು ಅಂಜನಪ್ಪ ರವರು, ಹಗಲುವೇಷದವರ ಸಂಸ್ಕೃತಿ ಕೃತಿಯನ್ನು ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೩ರಲ್ಲಿ "ಉಪಸಂಸ್ಕೃತಿ" ಅಧ್ಯಯನ ಮಾಲೆಯಲ್ಲಿ ಬಂದ ಪ್ರಮುಖ ಅಧ್ಯಯನ ಕೃತಿಯಾಗಿದೆ. ಈ ಕೃತಿಯಲ್ಲಿ ಹಗಲುವೇಷದವರ ಮೂಲ, ಜೀವನ ವಿಧಾನ, ನಂಬಿಕೆ, ನಿಷೇಧಗಳು, ಆಚರಣೆಗಳು, ಸಾಹಿತ್ಯ, ಸಂಸ್ಕೃತಿ ಇತ್ಯಾದಿ ವಿಚಾರಗಳನ್ನು ತಿಳಿಸುವಂತಹ ಕೃತಿಯಾಗಿದೆ.

ಡಾ. ಕೆ.ಎಂ. ಮೈತ್ರಿ (ಸಂ) ಅವರ, ಬುಡಕಟ್ಟು ಮಹಾಕಾವ್ಯ ಮಾಲೆ: ಕುಮಾರರಾಮ ಕಾವ್ಯ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ, ೧೯೯೭. ಈ ಕೃತಿಯಲ್ಲಿ ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯವನ್ನು ಬಳ್ಳಾರಿ ಜಿಲ್ಲೆಯ ಬುಡ್ಗ ಜಂಗಮ ಸಮುದಾಯಕ್ಕೆ ಸೇರಿದ ದರೋಜಿ ಈರಮ್ಮ ಮತ್ತು ಸಂಗಡಿಗರು ಹಾಡಿರುವ ಅಭೂತಪೂರ್ವ ಮಹಾಕಾವ್ಯಗಳಾಗಿವೆ. ಬುಡ್ಡಜಂಗಮ ಸಮುದಾಯದ ಮೌಖಿಕ ಸಾಹಿತ್ಯ ಅಧ್ಯಯನ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಈರಮ್ಮ ಹಾಡಿದ ಈ ಮಹಾಕಾವ್ಯಗಳನ್ನು ಅಧ್ಯಯನಕ್ಕೆ ಬಳಸಿಕೊಳಲಾಗಿದ್ದು ಕುಮಾರರಾಮನ ಮಹಾಕಾವ್ಯವನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದರ ವಿವರ ಈ ಕೆಳಗಿನಂತಿದೆ.

ಕುಮಾರರಾಮ ಐತಿಹಾಸಿಕ ವ್ಯಕ್ತಿಯಾದರೂ ಆ ವೀರನನ್ನು ನಮ್ಮ ಜನಪದರು ವಿಭಿನ್ನ ನೆಲೆಯಲ್ಲಿ ಗುರ್ತಿಸಿದ್ದಾರೆ. ಬಹುಶಃ ವಿಜಯನಗರದ ಇತಿಹಾಸದಲ್ಲಿ ಕುಮಾರ ರಾಮನಷ್ಟು ಜನಮನದಲ್ಲಿ ಉಳಿದ ವ್ಯಕ್ತಿ ಯಾರೂ ಇಲ್ಲ ಎನ್ನಬಹುದು. ಕುಮಾರರಾಮ ಮಹಾಕಾವ್ಯವನ್ನು ಬಳ್ಳಾರಿಯ ಬುಡ್ಗಜಂಗಮರು ಅಥವಾ ಹಗಲುವೇಷಗಾರರು ತಮ್ಮ ಬುರ್ರಕಥಾ ಮಾದರಿಯಲ್ಲಿ ಹಾಡಿರುವ ಈ ಕಾವ್ಯ ಅತ್ಯಂತ ವಿಶಿಷ್ಟವಾದುದು.

ಜಟ್ಟಿಂಗೇಶ್ವರಸ್ವಾಮಿಯು ನೀಡಿದ ಬಾಳೆಹಣ್ಣಿನ ವರಪ್ರಸಾದಕ್ಕೆ ಇಬ್ಬರು ವೀರರು ಜನ್ಮಿಸುತ್ತಾರೆ. ಹಣ್ಣು ತಿಂದ ರಾಣಿಯ ಹೊಟ್ಟೆಯಲ್ಲಿ ಕುಮಾರರಾಮ ಹುಟ್ಟಿದರೆ, ಬಾಳೆಹಣ್ಣಿನ ಸಿಪ್ಪೆಯನ್ನು ತಿಂದ ದಾಸಿಯ ಹೊಟ್ಟೆಯಲ್ಲಿ ಓಲಿಕೆರಾಮ ಹುಟ್ಟುತ್ತಾನೆ. ಆರಂಭದಲ್ಲಿಯೇ ಅಪವಾದಕ್ಕೆ ಗುರಿಯಾದ ದಾಸಿ ಅದನ್ನು ಸಮರ್ಥಿಸಿಕೊಳ್ಳುತ್ತಾಳೆ. ಆದರೆ ಅವಳ ಮಗ ಹೋಲಿಕೆರಾಮ ಕುಮಾರರಾಮನಷ್ಟೇ ವೀರನಾದರೂ ದಾಸಿಯ ಮಗನಾದ ಕಾರಣಕ್ಕೆ ಹಲವು ರೀತಿಯ ಶೋಷಣೆಗೆ ಒಳಗಾಗುತ್ತಾನೆ.

ಕುಮಾರರಾಮ ದೇವರ ವರಪ್ರಸಾದದಿಂದ ಹುಟ್ಟಿದವನಾದರೂ ಎಲ್ಲ ಕಾವ್ಯಗಳಲ್ಲಿರುವಂತೆ ಇಲ್ಲಿಯೂ ಸಹ ಅಪ್ರತಿಮ ವೀರನಾಗಿ ಚಿತ್ರಿತನಾಗಿದ್ದಾನೆ. ಅಪ್ರತಿಮ ವೀರನಂತೆ ಓಲಿಕೆ ರಾಮನು ಹೋಲುವಂತಿದ್ದರೂ ತನ್ನಲ್ಲಿದ್ದ ಕಾಮಾಪೇಕ್ಷೆಯ ಫಲದಿಂದ ಕಳ್ಳತನ ಮಾಡಿ ಪಾತರಗಿತ್ತಿಯನ್ನು ಸಮಾಧಾನ ಪಡಿಸುತ್ತಾನೆ. ಹೆಣ್ಣಿನಲ್ಲಿರುವ ರೂಪ ಲಾವಣ್ಯ ಯಾವ ರೀತಿ ಗಂಡಸನ್ನು ಚಂಚಲ ಸ್ವಭಾವಕ್ಕೆ ತರುತ್ತದೆ ಎಂಬುದನ್ನು ಓಲಿಕೆರಾಮನ ಪಾತ್ರದ ಮೂಲಕ ಚಿತ್ರಿತವಾಗಿದೆ. ಅವನ ಈ ವರ್ತನೆಯಿಂದ ಕೈ ಕಾಲುಗಳಿಗೆ ಬೇಡಿಯನ್ನು ಹಾಕ್ಕಿಸಿಕೊಳ್ಳುವ ಮೂಲಕ ಸೆರೆವಾಸ ಅನುಭವಿಸಬೇಕಾಗುತ್ತದೆ. ಕೈಕಾಲುಗಳಿಗೆ ಹಾಕಿದ ಸರಪಳಿ ಹಾಗೂ ಸೆರೆಮನೆಯಿಂದ ತಪ್ಪಿಸಿಕೊಳ್ಳುವುದು ಅವನ ಸಾಮರ್ಥ್ಯಕ್ಕೆ ಮೀರಿದುದಲ್ಲ. ಆದರೂ ತನ್ನ ತಂದೆಯಾದ ಕಂಪಿಲರಾಜನಿಗೆ

ತಲೆಬಾಗಲೇಬೇಕೆಂಬ ಕಾರಣದಿಂದ ಹಾಗೂ ರಾಜಾಜ್ಞೆಯನ್ನು ಮೀರಬಾರದೆಂಬ ಕಾರಣಕೋಸ್ಕರ ಸೆರೆವಾಸ ಅನುಭವಿಸಬೇಕಾಗುತ್ತದೆ. ಇವನಲ್ಲಿನ ತ್ಯಾಗದ ಗುಣವನ್ನು ಮೆಚ್ಚಲೇಬೇಕಾಗುತ್ತದೆ. ರಾಜಾಜ್ಞೆಯಿಂದ ತನ್ನ ಅಣ್ಣನಾದ ಕುಮಾರರಾಮನ ತಲೆಯನ್ನು ಕತ್ತರಿಸಿ ತರುವ ಪ್ರಯತ್ನದಲ್ಲಿ ವಿಫಲರಾದ ಕಟುಗರಿಗೆ ರಾಜಾಜ್ಞೆಯನ್ನು ಮೀರಬಾರದೆಂದೂ ಹಾಗೂ ತನ್ನ ಅಣ್ಣನ ಜೀವ ಉಳಿಸುವುದಕ್ಕೋಸ್ಕರವಾಗಿಯೂ ತನ್ನ ತಲೆಯನ್ನು ಕತ್ತರಿಸಿಕೊಳ್ಳುವ ಹೃದಯ ವಿದ್ರಾವಕ ಘಟನೆಯನ್ನು ಆತನಲ್ಲಿ ಕಾಣಬಹುದು.

ಕುಮಾರರಾಮನು ಅಪ್ರತಿಮ ವೀರ ಎನ್ನುವುದಕ್ಕೆ ಅವನು ಓರಂಗಲ್ಲಿನ ಅಧಿಪತಿ ಗಣಪತಿಯ ಮಗ ಗಣರಾಮನನ್ನು ಸಂಹರಿಸಿ, ಗಣಪತಿರಾಜನನ್ನು ಸೋಲಿಸಿದ್ದು ದೆಹಲಿಯ ನವಾಬನಿಗೆ ಕಪ್ಪ ಕಾಣಿಕೆಗಳನ್ನು ಕಳಿಸುತ್ತಿರುವುದನ್ನು ಕುಮಾರರಾಮನು ನಿಲ್ಲಿಸಿ ಕಂಪ್ಲಿರಾಜ್ಯಕ್ಕೆ ದೆಹಲಿಯಿಂದ ಕಪ್ಪ ಕಾಣಿಕೆ ಕೊಡುವಂತೆ ಇಲ್ಲವಾದರೆ ಯುದ್ಧಕ್ಕೆ ಬರುವಂತೆ ಆಹ್ವಾನಿಸುತ್ತಾನೆ. ಯುದ್ಧಕ್ಕೆ ಬಂದ ದೆಹಲಿಯ ನವಾಬನನ್ನು ಸೋಲಿಸಿ ಕಳುಹಿಸುತ್ತಾನೆ. ಮುಂದೆ ಪರಾಕ್ರಮಿಯಾದ ಕುಮಾರರಾಮ ಮದುವೆಯಾಗಬೇಕಿದ್ದಂತಹ ಚೆಲುವೆ ರತ್ನಾಜಿಯನ್ನು ಕುಮಾರರಾಮನ ತಂದೆ ವಿವಾಹವಾಗುವುದು ನಂತರ ಮಗನಾಗಬೇಕಿದ್ದ ಕುಮಾರರಾಮನನ್ನು ಬಯಸುವುದು ಮತ್ತು ಚೆಂಡಾಟ ಆಡುವಾಗ ಕುಮಾರರಾಮನ ಮೇಲೆ ಅತ್ಯಾಚಾರ ಪ್ರಯತ್ನದ ಅರೋಪ ಮಾಡುವುದು ತಂದೆ ಕಂಪಿಲ ರಾಜ ಮಗನಾದ ಕುಮಾರರಾಮನ ತಲೆದಂಡಕ್ಕೆ ಆದೇಶಿಸುವುದು. ಇದನ್ನು ಓಲಿಕೆರಾಮ ತಡೆಹಿಡಿಯುವುದನ್ನು ಕಾಣಬಹುದಾಗಿದೆ. ಇತ್ತ ಕಡೆ ಕುಮಾರರಾಮನು ಅಂತ್ಯಗೊಂಡ ವಿಷಯವನ್ನು ತಿಳಿದ ದಿಲ್ಲಿಯ ನವಾಬ ಮತ್ತೊಮ್ಮೆ ಆನೆಗುಂದಿಗೆ ಯುದ್ಧಕ್ಕೆ ಬರುತ್ತಾನೆ. ಆಗ ನೆಲ ಮಾಳಿಗೆಯಲ್ಲಿದ್ಧ ಕುಮಾರರಾಮ ತನ್ನ ತಂದೆ-ತಾಯಿಯನ್ನು ಕಾಪಾಡುತ್ತಾನೆ. ಆಗ ಸತ್ಯ ತಿಳಿದು ರತ್ನಾಜಿಯಾದ ತನ್ನ ಹೆಂಡತಿಯ ತಲೆಯನ್ನು ಕತ್ತರಿಸುತ್ತಾನೆ. ಆಗ ರತ್ನಾಜಿ ಮರುಜನ್ಮ ಪಡೆದು ದೆಹಲಿಯ ನವಾಬನ ಮಗಳಾಗಿ 'ಹುಸೇನಿ' ಎಂಬ ಹೆಸರಿನಿಂದ ತನ್ನ ತಂದೆಯೊಂದಿಗೆ ಆನೆಗುಂದಿಗೆ ಬಂದಾಗಲೂ ಕುಮಾರರಾಮನು ರತ್ನಾಜಿಯನ್ನು ತಿರಸ್ಕರಿಸಿದ್ದು ಅವಳೊಬ್ಬ ಭಗ್ನ ಪ್ರೇಮಿಯಾಗಿ ಮರುಜನ್ಮದಲ್ಲೂ ಕುಮಾರರಾಮನ ಅಂತ್ಯಕ್ಕೆ ಕಾರಣವಾಗುವುದರೊಂದಿಗೆ ಇಡೀ ಸಾಮ್ರಾಜ್ಯ ಅಸ್ತಂಗತವಾಗುವ ಚಿತ್ರಣ ಕುಮಾರರಾಮನ ಮಹಾಕಾವ್ಯದಲ್ಲಿ ಕಾಣಬಹುದಾಗಿದೆ. ಅಲ್ಲದೆ ಕುಮಾರರಾಮನ ಕಾವ್ಯ ಆಡಳಿತದಲ್ಲಿಯೂ ಒಬ್ಬ ಉತ್ತಮ ಆಡಳಿತಗಾರನಾಗಿ ಕಲೆ ಕಟ್ಟೆಗಳನ್ನು ಕಟ್ಟಿ ರೈತರಿಗೆ ಅಶ್ರಿತನಾದದ್ದು ಅವನ ಆಡಳಿತದ ವೈಖರಿಯನ್ನು ತಿಳಿಸುತ್ತದೆ. ರಾಜಕೀಯವಾಗಿ ಕುಮಾರರಾಮ ಪ್ರಖ್ಯಾತಿಯನ್ನು ಪಡೆಯದ್ದಿದರೂ ಶುದ್ಧಚಾರಿತ್ರ ಧರ್ಮಪ್ರಚಾರ ಇತ್ಯಾದಿ ಸಾಂಸ್ಕೃತಿಕ ಒಳನೋಟಗಳ ಹಿನ್ನೆಲೆಯಿಂದ ಕುಮಾರರಾಮ ಜನ-ಮನಕ್ಕೆ ಹತ್ತಿರವಾಗಿರುವುದನ್ನು ಕಾಣಬಹುದಾಗಿದೆ. ಮಹಾಕಾವ್ಯಗಳ ಅಧ್ಯಯನಗಳ ಹಿನ್ನೆಲೆಯಲ್ಲಿ ಈ ಕೃತಿಯು ಅಧ್ಯಯನಕ್ಕೆ ಮುಖ್ಯ ಆಕರ ಕೃತಿಯಾಗಿದೆ.

ವೆಂಕಟಗೌಡ ಅವರು, ಬಳ್ಳಾರಿ ಮತ್ತು ಆಂಧ್ರ ಗಡಿ ಭಾಗದ ಹಗಲುವೇಷಗಾರರು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾಪ್ರಬಂಧ, ೨೦೦೨. ಈ ಮಹಾಪ್ರಬಂಧದಲ್ಲಿ ಬುಡ್ಗಜಂಗಮರ, ಭೌಗೋಳಿಕ ಹಿನ್ನೆಲೆ, ಬುಡ್ಗಜಂಗಮ ಪದ ನಿಷ್ಪತ್ತಿ, ಸಮುದಾಯದ

ಸಾಮಾಜಿಕ ಸ್ಥಿತಿಗತಿ ನ್ಯಾಯ ತೀರ್ಮಾನ ವ್ಯವಸ್ಥೆ ಸಾಂಸ್ಕೃತಿಕ ಆಚರಣೆಗಳು, ವೃತ್ತಿ ಮತ್ತು ಕುಲಕಸುಬುಗಳ ಬಗೆ ಸವಿಸ್ತಾರವಾಗಿ ತಿಳಿಸುವ ಮಹತ್ವ ಪೂರ್ಣ ಅಧ್ಯಯನವಾಗಿದೆ. ಈ ನೆಲೆಯಲ್ಲಿ ಬಳ್ಳಾರಿ ಮತ್ತು ಆಂಧ್ರದ ಗಡಿ ಭಾಗವಾಗಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುವ ಬುಡ್ಗಜಂಗಮ ಸಮುದಾಯವನ್ನು ಅಧ್ಯಯನ ಮಾಡಲು ಈ ಮಹಾ ಪ್ರಬಂಧವು ಸಹಕಾರಿಯಾಗಿದೆ.

ಡಾ. ಅರವಿಂದ ಮಾಲಗತ್ತಿ (ಸಂ) ಅವರ, ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಯ. ಮೈಸೂರು. ೨೦೦೬, ಈ ಕೃತಿಯಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಬುಡಬುಡಕೆ, (ಗೋಂಧಳಿ), ಬಹುರೂಪಿ(ಬಡ, ಜಂಗಮ), ಜೋಗಿ ಮತ್ತು ಇತ್ಯಾದಿ ಅಲೆಮಾರಿ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂಥ ವಿಚಾರಗಳು ತಿಳಿದು ಬರುತ್ತವೆ. ಜೋಗಿ ಸಮುದಾಯ ಇವರ ಜೀವನ ಕ್ರಮ, ಆಹಾರ, ಕಲೆ ಭೀಕ್ಷೆ, ವೇಷಭೂಷಣಗಳು, ಕಿನ್ನರಿಯನ್ನು ತಯಾರಿಸಲು ಬಳಸುವ ಪರಿಕರಗಳು ಇವರ ಆರಾಧ್ಯ ದೈವ. ದಕ್ಷಿಣ ಕರ್ನಾಟಕದ ನೆಲೆಗಳು ಇತ್ಯಾದಿ ವಿಚಾರಗಳು ತಿಳಿಯುತ್ತದ್ದೆ, ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟ ಮತ್ತೊಂದು ಸಮುದಾಯವಾದ ಬುಡ್ಗಜಂಗಮರು ಈ ಸಮುದಾಯವನ್ನು ಗುರುತಿಸುವ ರೀತಿ/ವಿಧಾನ ಈ ಸಮುದಾಯದ ಮೂಲ ಆರಾಧನೆ ವಿವಿಧ ರೀತಿಯ ಕಲ್ಲುಗಳನ್ನು ಕುಟ್ಟಿ ಬಣ್ಣ ತಯಾರಿಸಿಕೊಂಡು ವೇಷಧರಿಸಿ ಹಗಲು ವೇಷ ಧರಿಸುವುದು, ಮೋಹಿನಿ, ಭಸ್ಮಾಸುರ, ಅರ್ಧನಾರೀಶ್ವರ, ಭೀಮಾಂಜನೇಯ, ವಾಲಿ–ಸುಗ್ರೀವ, ವಿಶ್ವಾಮಿತ್ರ ತಪೋಭಂಗ, ಬಸವಣ್ಣ, ಕಬೀರ, ಹರಿಶ್ಚಂದ್ರ, ಕನಕದಾಸ, ಕಿರಾತಾರ್ಜುನ, ನಳ, ಸರ್ವಜ್ಞ, ಜಂಗಮ, ಪೊಲೀಸರು, ಲಂಬಾಣಿಗರು, ಕಳ್ಳರು, ಸನ್ಯಾಸಿ ಇತ್ಯಾದಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಪಾತ್ರಗಳನ್ನು ಅಭಿನಯಿಸಿ ಜನರನ್ನು ರಂಜಿಸಿ, ವಿಡಂಬಿಸಿ ಸಮಯಕ್ಕೆ ತಕ್ಕಂತೆ ಔಚಿತ್ಯ ಪೂರ್ಣವಾಗಿ ಸಾಹಿತ್ಯ ಸಂಭಾಷಣೆ ಬಳಸಿ ಅಭಿನಯಿಸುವ ಇವರ ಕಲೆಯ ಪ್ರಜ್ಞೆ ಇಂದಿನ ಸಂಚಾರಿ ರಂಗಭೂಮಿಯನ್ನು ನೆನಪಿಸುತ್ತದೆ. ಜೊತೆಗೆ ಕಾಲದಿಂದ ಕಾಲಕ್ಕೆ ಹಾಡಿನ ದಾಟಿಯನ್ನು ಬದಲಾಯಿಸುತ್ತಾ ಏಕತಾರಿ ಶೃತಿಯಲ್ಲಿ ತಾಳ, ದಮ್ಮಡಿ, ಡೋಲು, ಹಾರ್ಮೋನಿಯಂ, ತಬಲಾ ವಾದ್ಯಗಳನ್ನು ಬಳಸಿ ಕಲೆ ಪ್ರದರ್ಶಿಸುತ್ತಾರೆಂಬುದನ್ನು ತಿಳಿಯಬಹುದಾಗಿದೆ. ಹಾಗೆಯೇ ಬುಡಬುಡಕೆ (ಗೋಂಧಳಿ) ಸಮುದಾಯವು ಈ ಅಧ್ಯಯನದ ಗೋಂಧಳಿ ಸಮುದಾಯದ ಉಪ ಜಾತಿಯಾಗಿದ್ದು, ಚಿತ್ರದುರ್ಗ ಜಿಲ್ಲೆಯಲ್ಲಿ ಇವರು ಕಂಡು ಬಂದಿರುವುದರಿಂದ ಈ ಅಧ್ಯಯನಕ್ಕೆ ಸಹಕಾರಿಯಾಗಿದೆ. ಬುಡಬುಡಕೆ ಸಮುದಾಯವನ್ನು ಗೊಂಬೆರಾಯರು, ಶಿಳ್ಳೇಕ್ಯಾತರು, ಚೂಡುಗನವರು, ಮುಚ್ಚಳದವರು, ಐನೋರು, ನಾಯಕರು, ಅಮ್ಮನೂರು, ಅಡಕರು, ಲಾಕೇರರು, ಶಿಂಧೆಯರು, ವಾಡೇಕರು, ಮಂದಾರು, ಗೋಟೇರು, ಗಾಂಡಿಗಾಡಿಗ, ಶಿಂಧೆ ಬೈರು ನರಸಣ್ಣ, ಡೌರಿಗಳು, ಪಿಂಗಳೆಯವರು ಇತ್ಯಾದಿಗಳಿಂದ ಇವರನ್ನು ಕರೆಯುತ್ತಾರೆಂಬುದನ್ನು ತಿಳಿಯಬಹುದು. ಇವರ ಭಿಕ್ಷುಕ ವೃತ್ತಿಯಿಂದ ಜೀವಿಸುತ್ತಾರೆ ಎಂಬುದರ ಜೊತೆಗೆ ಇತ್ಯಾದಿ ವಿಚಾರಗಳನ್ನು ಈ ಕೃತಿಯಿಂದ ತಿಳಿಯಬಹುದಾಗಿದೆ. ಇದೇ ಕೃತಿಯಲ್ಲಿ ದೊಂಬಿದಾಸರ ಬಗ್ಗೆ ವಿವರಣೆ ದೊರೆಯುತ್ತದೆ. ಕರ್ನಾಟಕದ ಜಾನಪದ ಕಲಾವಿದರಲ್ಲಿಯೇ ವಿಶಿಷ್ಟವಾದ ವರ್ಗ ದೊಂಬಿದಾಸ ವರ್ಗ ಇವರನ್ನು ದುಂಬೇದಾಸರು, ಮಾಂಗದಾಸ,

ದೊಂಬಿದಾಸರೆಂದು ಕರೆಸಿಕೊಳ್ಳುವ ಇವರು ತಮ್ಮದೇ ಆದಂತಹ ಆರಾಧ್ಯ ದೈವಗಳನ್ನು ಒಳಗೊಂಡ ಇವರ ಮೂಲ ಆಂಧ್ರದವರೆಂದು ಇವರ ಭಾಷೆ, ಸಂಸ್ಕೃತಿ ತಿಳಿಯಬಹುದು. ಮೂಲ ವೃತ್ತಿ ಕಲಾವಿದರಾದ ಇವರು ಲಾವಣಿಗಳು ಪ್ರಮುಖವಾಗಿವೆ. ಇವುಗಳಲ್ಲಿ ಮುಖ್ಯವಾಗಿ ಶಿವನ ಕಥೆಗಳು, ಶ್ರೀಗೌರಿಯ ಮದುವೆ, ಗಂಗೆ-ಗೌರಿ ಜಗಳ, ಗಂಗೆ-ಗೌರಿ ವಾದ, ಗಂಗೆ-ಗೌರಿ ಸವಾಲು, ಕೃಷ್ಣನಿಗೆ ಸಂಬಂಧಿಸಿದಂತೆ ಶ್ರೀಕೃಷ್ಣ ಕೊರವಂಜಿ, ಶ್ರೀಕೃಷ್ಣ ಪಾರಿಜಾತ, ದೇವಗನ್ನೇರು ತಾನಾಕೆ ನಡೆದಾರು ಹಾಗೆಯೇ ರಮ್ಯ ಲಾವಣಿಗಳಿಗೆ ಸಂಬಂಧಿಸಿದಂತೆ ಪ್ರೇಮ, ಸತ್ಯ ಬೋಜ, ಬಾಲನಾಗಮ್ಮ, ವಾಸ್ತವಿಕ ಲಾವಣಿಗಳಲ್ಲಿ ತಟವಾಣಿ ಹೆಣ್ಣು, ಅತ್ತೆ-ಸೊಸೆ, ಮಾರೇಗೌಡ, ಘಾತುಕ ಅಣ್ಣಯ್ಯ, ಐತಿಹಾಸಿಕ ಲಾವಣಿಗಳಲ್ಲಿ ಮಾಗಡಿ ಕೆಂಪೇಗೌಡ ಪ್ರಮುಖ ಲಾವಣಿಗಳಾಗಿವೆ. ಇವು ವೃತ್ತಿಗಾಯಕ ಸಂಪ್ರದಾಯಕ್ಕೆ ಸೇರ್ಪಟ್ಟರೆ, ಉಳಿದಂತೆ ಇವರು ತಾವೇ ಗಂಡು-ಹೆಣ್ಣು ವೇಷಗಳನ್ನು ಧರಿಸಿ ಹಳ್ಳಿಹಳ್ಳಿಗಳನ್ನು ಸುತ್ತಿ ಹರಿಶ್ಚಂದ್ರ, ಭಕ್ತಪ್ರಹ್ಲಾದ, ಕೃಷ್ಣಪಾರಿಜಾತ, ಮಾರ್ಕಂಡೇಯ, ನಳಚರಿತ್ರೆ, ಪ್ರೇಮಸತ್ಯಬೋಜ, ಗಂಗೆ-ಗೌರಿ ಜಗಳ ಇತ್ಯಾದಿ ಪೌರಾಣಿಕ ಯಕ್ಷಗಾನ ಬಯಲಾಟ ನಾಟಕಗಳನ್ನು ಅಭಿನಯಿಸುವರೆಂದು ತಿಳಿದು ಬರುತ್ತದೆ.

ಶ್ರೀಮತಿ ಸಾರಿಕಾ ದೇವಿ ಎಲ್. ಕಾಳಗಿ ಅವರು, ಬುರ್ರಕಥಾ ಈರಮ್ಮ: ಒಂದು ಅಧ್ಯಯನ, ಎಂಬ ಮಹಾಪ್ರಬಂಧವನ್ನು, ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೬ರಲ್ಲಿ ಸಲ್ಲಿಸುರುತ್ತಾರೆ. ಇದರಲ್ಲಿ ಬುಡ್ಗಜಂಗಮರ ಪರಂಪರೆ, ಕುಲ ಬೆಡಗುಗಳು, ಕಲೆಗಳ ವಿಧಗಳಾದ ಏಕವ್ಯಕ್ತಿ, ಸಾಮೂಹಿಕ ಕಲೆ ಪ್ರಸ್ತುತಿಪಡಿಸುವ ವಿಧಾನಗಳನ್ನು ಈರಮ್ಮಳ ಜೀವನ ವೃತ್ತಾಂತವನ್ನು ಮತ್ತು ಈರಮ್ಮ ಸುದೀರ್ಘವಾಗಿ ಹಾಡುವ ಕುಮಾರ ರಾಮನ ಕಾವ್ಯ, ಕೃಷ್ಣ ಗೊಲ್ಲರ ಕಾವ್ಯ, ಸ್ಯಾಸಿ ಚೆನ್ನಮ್ಮನ ಕಾವ್ಯ, ಎಲ್ಲಮ್ಮನ ಕಾವ್ಯ, ಜೈಸಿಂಗ ರಾಜನ ಕಾವ್ಯ, ಬಾಲ ನಾಗಮ್ಮನ ಕಾವ್ಯ, ಬಲಿಚಕ್ರವರ್ತಿ ಕಾವ್ಯ, ಆದೋನಿ ಲಕ್ಷ್ಮಮ್ಮನ ಕಾವ್ಯ, ಮಾರವಾಡಿ ಸೇರಿ ಕಾವ್ಯ, ಬೊಬ್ಬಿಲಿ ನಾಗರೆಡ್ಡಿ ಕಾವ್ಯ ಮತ್ತು ಗಂಗೆ-ಗೌರಿ ಕಥನಗಳ ಪರಿಚಯವಿದೆ. ಬುರ್ರಕಥಾ ಈರಮ್ಮ ಹಾಡುವ ಕಥನ ಕಾವ್ಯಗಳ ವಸ್ತು, ವಿಶ್ಲೇಷಣೆ, ಭಾಷೆ ಮತ್ತು ಶೈಲಿಗಳ ಪರಿಚಯ ಈ ಮಹಾಪ್ರಬಂಧದಲ್ಲಿ ಮಾಡಿಕೊಡಲಾಗಿದೆ.

ಡಾ. ಅಂಬಳಿಕೆ ಹಿರಿಯಣ್ಣ (ಸಂ), ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ, ಕಥನ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು, ೨೦೦೬, ಗಂಗೆ-ಗೌರಿ ಕಥೆ ಲಾವಣಿ. ಇದೊಂದು ಪೌರಾಣಿಕ ಕಥನ ಗೀತೆಯಾಗಿದ್ದು ಇದರಲ್ಲಿ ಗಂಗೆ-ಗೌರಿಯರ ವಾದ-ಪ್ರತಿವಾದಗಳ ಮೂದಲಿಕೆಗಳ ಜೊತೆಗೆ ಗಂಗೆಯ ಹಿರಿಮೆಯನ್ನು ಸ್ಥಾಪಿಸುವುದು ನೀರಿಗಾಗಿ ಪರಿತಪಿಸುವ ಗೌರಿಯ ಈ ಕಥನ ಗೀತೆ ಕನ್ನಡ ಜಾನಪದ ಲಾವಣಿಗಳಲ್ಲಿಯೇ ಅತ್ಯಂತ ಅಪೂರ್ವವಾದುದು. ದೊಂಬಿದಾಸರ ಕಥನ ಕೌಶಲಕ್ಕೆ ಇದಕ್ಕಿಂತ ಒಳ್ಳೆಯ ನಿದರ್ಶನ ಬೇಕಿಲ್ಲ. ನೀರನ್ನು ಪಡೆಯುವವರೆಗೆ ಪತಿಯನ್ನು ನೀಡುವುದಾಗಿ ಹೇಳಿದ ಉತ್ತರ. ಗಂಗೆ ಪ್ರತಿಯಾಗಿ ಸಿಡಿದು ಪ್ರವಾಹದಲ್ಲಿ ಅವಳನ್ನು ಕೊಚ್ಚಿಸುವ ವೈಖರಿ, ಶಿವನ ಮಧ್ಯಸ್ಥಿಕೆ ಇವೆಲ್ಲವೂ ರಮ್ಯವಾಗಿ ಮೂಡಿ ಬಂದಿವೆ. ಲೋಕ ಮಾತೆಯರಾದ

ಗಂಗೆ–ಗೌರಿಯರನ್ನು 'ಸವತಿ ಮತ್ಸರ' ಬಿಡಲಿಲ್ಲವೆಂಬ ವಿನೋದವನ್ನು ಹೃದಯಂಗಮವಾಗಿ ಈ ಲಾವಣಿಯಲ್ಲಿ ತಿಳಿಯಬಹುದು. ಕಣ್ಣಿಗೆ ಕಟ್ಟುವಂತಹ ಚಿತ್ರಗಳ ಮೂಲಕ ಅದರ ಕಲಾ ಸೌಂದರ್ಯವನ್ನು ಇಮ್ಮಡಿಗೊಳಿಸಿದ್ದಾರೆ. ಲೋಕಕ್ಕೆ ಹತ್ತಿರವಾದವಳು ಗಂಗೆ. ಅವಳ ಸರ್ವಶಕ್ತಳು ಎಂಬ ದೃಷ್ಟಿಯನ್ನು ಒಟ್ಟಾರೆ ಈ ಲಾವಣಿಯಿಂದ ತಿಳಿಯಬಹುದಾಗಿದೆ.

ಅಧ್ಯಯನಕ್ಕೆ ಒಳಪಡುವಂತಹ ಜೋಗಿ ಸಮುದಾಯದ "ಜೋಗಿ ಹಾಡು" ಎನ್ನುವಂತಹ ಪೌರಾಣಿಕ ಕಥನ ಗೀತೆಯ ಭಾಗಗಳನ್ನು ಇದೇ ಕೃತಿಯಲ್ಲಿ ಕಾಣಬಹುದಾಗಿದೆ. ಅರ್ಜುನ ಜೋಗಿ ಹಾಡು, ಮೌಖಿಕ ಮತ್ತು ಶಿಷ್ಟ ಸಾಹಿತ್ಯದ ಎರಡು ಕಾವ್ಯ ಪರಂಪರೆಗಳಲ್ಲಿ ಪ್ರಖ್ಯಾತಿಯನ್ನು ಹೊಂದಿದಂತಹ ಕಥನ ಗೀತೆಯಾಗಿದೆ. ಪ್ರಸ್ತುತ ಈ ಜೋಗಿ ಹಾಡು ಐದು ಅಂಕಗಳಲ್ಲಿ ಬೆಳೆದಿದೆ. ಇದನ್ನು "ಜೋಗಿ ಕಾಂಡ" ಎಂದು ಕರೆಯಲಾಗಿದೆ. ಕಥೆಯ ಉದ್ದಕ್ಕೂ ಜೋಗಿ ಹಾಡಿನ ರೂಪದಲ್ಲಿ ಸಾಗುವುದು ಎಲ್ಲಿಯೂ ಗದ್ಯ ನಿರೂಪಣೆ ಬರುವುದಿಲ್ಲ. ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಕುಂತಿದೇವಿ ಅನುಭವಿಸಿದ ಅನುಭವಗಳ ವೃತ್ತಾಂತಗಳನ್ನು ಈ ಕಥನ ಗೀತೆ ಚಿತ್ರಿಸುತ್ತಾ ಹೋಗುತ್ತದೆ. ತನ್ನ ಮಕ್ಕಳಿಗೆ ಉಣಿಸಿ ತಾನು ಉಪವಾಸ ಮಲಗುತ್ತಿದ್ದ ಕುಂತಿಯು ಇಲ್ಲಿ ಗಮನಾರ್ಹಳಾಗುತ್ತಾಳೆ. ಮೊದಲನೆಯ ಅಂಕ ವನವಾಸದ ಚಿತ್ರಣದೊಂದಿಗೆ ಮುಕ್ತಾಯವಾಗುತ್ತದೆ. ಎರಡನೇ ಅಂಕ ದ್ರೌಪದಿಯ ಸ್ವಯಂವರದ ಐದು ಜನ ಪಾಂಡವರು ಅವಳನ್ನು ಹಂಚಿಕೊಂಡ ಬಗೆಯನ್ನು ವರ್ಣಿಸಿ ಅರ್ಜುನನ ಬಳಿಗೆ ಅವಳು ಬಂದ ಸಂದರ್ಭವನ್ನು ಎತ್ತಿಕೊಳ್ಳಲಾಗುತ್ತದೆ. ಮುಂದಿನ ಭಾಗದಲ್ಲಿ ಹೊಸ ತಿರುವನ್ನು ಪಡೆದುಕೊಂಡು ಸಾಗುತ್ತದೆ. ಅರ್ಜುನನಿಗೆ ಕುಸುಮ ಮಾಲೆಯರ ನೆನಪು ಬರುವುದು ದ್ರೌಪದಿಯೊಡನೆ ಅವನು ಪಗಡೆಯಾಟದಲ್ಲಿ ಸೋತು ಜೋಗಿಯಾಗಿ ಹೋಗುವುದು ಮುಂತಾದವು ಈ ಅಂಕದಲ್ಲಿ ತಿಳಿಯಬಹುದಾಗಿದೆ. ಮೂರನೆಯ ಅಂಕದಲ್ಲಿ ಈಶ್ವರನು ಕಿರಾತಕ ವೇಷದಲ್ಲಿ ಬಂದು ಅರ್ಜುನನನ್ನು ಹರಸುವ ಸಂದರ್ಭ ಬರುತ್ತದೆ. ಚಿತ್ರ ಕುಸುಮ ಮಾಲೆಯರನ್ನು ಮದುವೆಯಾಗಿ ಅವರನ್ನು ಮಣಿಪುರದಲ್ಲಿ ಬಿಟ್ಟು ಹೋಗುತ್ತಾನೆ. ನಾಲ್ಕನೆಯ ಅಂಕದಲ್ಲಿ ಜೋಗಿಯ ವೇಷದಲ್ಲೇ ಅರ್ಜುನ ಹಸ್ತಿನಾವತಿಯನ್ನು ಪ್ರವೇಶಿಸಿ ಎಲ್ಲರನ್ನು ಮೋಹಪಾಶದಲ್ಲಿ ಬಂದಿಸುತ್ತಾನೆ. ಇದನ್ನು ಕಂಡ ನಾರಿಮಣಿಯರು, ಮೋಹಗೊಳ್ಳುವ ಸನ್ನಿವೇಶಗಳು ಬರುತ್ತವೆ. ಐದನೇ ಅಂಕ ಈ ಕಥನ ಗೀತೆಯ ಪ್ರಮುಖವಾದ ತಿರುಳು ಅರ್ಜುನನು ಮಡದಿ ದ್ರೌಪದಿಯ ಮನೆಗೆ ಬರುವುದು ಅವಳನ್ನು ಮರುಳುಗೊಳಿಸಿ ತನ್ನ ನಿಜರೂಪವನ್ನು ಪ್ರದರ್ಶಿಸುವುದು ಹಾಗೂ ಅಂತಿಮ ಘಟ್ಟದಲ್ಲಿ ಅವನು ಪುಣ್ಯ ಕ್ಷೇತ್ರಗಳಿಗೆ ಹೋಗಿ ಬಂದು ಜೋಗಿ ವೇಷವನ್ನು ತೊರೆಯುವ ಸಂದರ್ಭಕ್ಕೆ ಕಥೆ ಮುಕ್ತಾಯವನ್ನು ಪಡೆದುಕೊಳ್ಳುತ್ತದೆ.

ಇದೇ ಕೃತಿಯಲ್ಲಿ "ಚೆನ್ನಿಗ ಜೋಗಯ್ಯ" ಕಥನ ಗೀತೆಯ ಮೂಲವಸ್ತು ಜೋಗಿ ಹಾಡಿನದ್ದನ್ನೇ ಅನ್ವಯಿಸುವುದಾದರೂ ಭಿನ್ನ ರೀತಿಯಲ್ಲಿ ಸಾಗುವ ಕಥನ ಗೀತೆಯಾಗಿದೆ. ಇದರಲ್ಲಿ ಅರ್ಜುನ ಪುಣ್ಯ ಕ್ಷೇತ್ರಗಳಿಗೆ ಹೋಗಿ ಬಂದ ಅರ್ಜುನ ಹನ್ನೆರಡು ವರ್ಷ ಯಾತ್ರೆ ಮುಗಿಸಿಕೊಂಡು ಜೋಗಿ ವೇಷದಲ್ಲಿ ಹಸ್ತಿನಾವತಿಗೆ ಒಂದಿರುಗುತ್ತಾನೆ. ಸುಂದರವಾದ ಜೋಗಿ ಆ ನಗರದ ಅನೇಕ

ಯುವತಿಯರಿಂದ ಮೋಹಿತನಾಗಿ ಭಿಕ್ಷೆಗೆ ಬಂದ ಅವನನ್ನು ನೇರವಾಗಿ ತಮ್ಮ ಕೈ ಹಿಡಿಯುವಂತೆ ಕಾಡಿಸುತ್ತಾರೆ. ಆ ಮೋಹದ ಬಲೆಯಿಂದ ಪಾರಾದ ಜೋಗಿ ನೇರವಾಗಿ ಕುಂತಿಯ ಅರಮನೆಯ ಮುಂದೆ ಕಿನ್ನರಿಯನ್ನು ನುಡಿಸಿ ಹಾಡುತ್ತಾನೆ. ಹೊರಗೆ ಬಂದ ಕುಂತಿ ಆ ತೇಜಸ್ವಿ ಜೋಗಿಯನ್ನು ಕಂಡು ತನ್ನ ಮಗ ಅರ್ಜುನನನ್ನು ಹೋಲಿಕೆಯೇ ಇದು ಎಂದು ತಿಳಿದು ಅತೀವವಾದ ಆನಂದದಲ್ಲಿ ಮುಳುಗಿ ಅವನನ್ನು ನಾನಾ ಬಗೆಯಲ್ಲಿ ಪ್ರಶ್ನಿಸುತ್ತಾಳೆ. ಜೋಗಿ ತನ್ನ ಬಗೆಗೆ ಕಲ್ಪಿತ ಕಥೆಗಳನ್ನು ಹೇಳಿ ಕುಂತಿಯನ್ನು ಪರೀಕ್ಷಿಸುವುದು. ಆಗ ಜೋಗಿ ವೇಷದಲ್ಲಿದ್ದ ಅರ್ಜುನನು ಕುಂತಿಗೆ ತನ್ನ ಮನೆಯಲ್ಲಿ ಊಟ ನೀಡಬೇಕೆಂದು ಕೇಳುತ್ತಾನೆ. ಬೆಂದ ಕೂಳನ್ನು ಜೋಗಿಗೆ ಹಾಕಲು ಇಚ್ಚಿಸದ ಕುಂತಿಗೆ ವಿಧಿಯಿಲ್ಲದೇ ತನ್ನ ನಾಲ್ಕು ಮಕ್ಕಳ ಜೊತೆಯಲ್ಲಿ ಈ ಜೋಗಿಯನ್ನು ಕೂರಿಸಿ ಊಟಕ್ಕೆ ಇಡುವಾಗ ದ್ರೌಪದಿಯ ಜೊತೆಯಲ್ಲಿ ಪಗಡೆಯಾಡುತ್ತಿದ್ದ ಅರ್ಜುನನನ್ನು ಕರೆತರುವಂತೆ ಹೇಳಿ ಕಳುಹಿಸುತ್ತಾನೆ. ಅದಕ್ಕೆ ದ್ರೌಪದಿಯು ಅರ್ಜುನನು ಪಗಡೆಯಾಟದಲ್ಲಿ ಸೋತು ಜೋಗಿಯ ವೇಷದಲ್ಲಿ ಹನ್ನೆರಡು ವರ್ಷ ವನವಾಸ ಹೋದ ಎಂದು ಹೇಳಿ ಕಳುಹಿಸುತ್ತಾಳೆ. ಅಷ್ಟರಲ್ಲಿ ಶ್ರೀಕೃಷ್ಣ ಅಲ್ಲಿಗೆ ಬಂದು ಈ ಮಾಯಾ ಜೋಗಿ ಯಾರೆಂಬುದನ್ನು ಬಯಲು ಮಾಡುವ ಸ್ವಾರಸ್ಯ ಪ್ರಸಂಗದಿಂದ ಈ ಕಥನ ಗೀತೆ ಮುಕ್ತಾಯವಾಗುತ್ತದೆ. ಈ ಮೇಲ್ಕಂಡ ಕಥನ ಗೀತೆಗಳ ಓದು ಈ ಅಧ್ಯಯನಕ್ಕೆ ಉತ್ತಮ ಆಕರವಾಗಿದೆ.

ಕೃಷ್ಣಮೂರ್ತಿ ಹನೂರು (ಸಂ), ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲಿಕೆ. ಪದ್ಯ ಸಾಹಿತ್ಯ, ಐತಿಹಾಸಿಕ ಕಥನ ಗೀತೆಗಳು, ಭಾಗ-೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬, ಈ ಕೃತಿಯಲ್ಲಿ ಮಾಗಡಿ ಕೆಂಪೇಗೌಡನ ಕಾವ್ಯ(ಕಥನ ಗೀತೆ)ವನ್ನು ದೊಂಬಿದಾಸರು ಹಾಡುತ್ತಾರೆ. ಹಿಂದೆ ಇವರು ಯಲಹಂಕ ನಾಡಿನಲ್ಲಿ ನೆಲೆಸಿ ತಮ್ಮ ವೃತ್ತಿಯನ್ನು ಬಳಸಿಕೊಂಡು ಕ್ರಮೇಣ ಪೂರ್ವದಿಂದ ದಕ್ಷಿಣಕ್ಕೆ, ಪಶ್ಚಿಮಕ್ಕೆ, ಉತ್ತರಕ್ಕೆ ಕ್ರಮಿಸಿರಬಹುದೆಂದು ತಿಳಿಯಬಹುದು. ಯಲಹಂಕ ರಾಜ್ಯ ಪ್ರವರ್ಧಮಾನದಲ್ಲಿದ್ದ ಕರ್ನಾಟಕವನ್ನು ಪ್ರವೇಶಿಸಿ ಮಾಗಡಿಯ ನಂತರ ಇವರು ಬೇರೆ ಬೇರೆ ಪ್ರದೇಶಗಳಿಗೆ ವ್ಯಾಪಿಸಿರಬಹುದು. ಇವರ ಮೂಲ ಮಾತೃಭಾಷೆ ತೆಲುಗು, ಆದರು ಕನ್ನಡದಲ್ಲಿ ಲಾವಣಿ ಕಟ್ಟಿ ಹಾಡುವುದು ಇವರ ಕಲೆಗಾರಿಕೆ ಮೆಚ್ಚುವಂತಹದು. ಮಾಗಡಿ ಕೆಂಪೇಗೌಡ ದೊಂಬಿದಾಸರ ಏಕಮಾತ್ರ ಐತಿಹಾಸಿಕ ಲಾವಣಿಯಾಗಿದೆ. ಈ ಲಾವಣಿಯು ಕೆಂಪೇಗೌಡರ ಜೀವನದ ಏಳು-ಬೀಳುಗಳ ವೃತ್ತಾಂತವನ್ನು ಇಲ್ಲಿ ಕಾಣಬಹುದಾಗಿದೆ. ಈ ಲಾವಣಿಯು ಅಧ್ಯಯನಕ್ಕೆ ಮುಖ್ಯ ಸಾಹಿತ್ಯಿಕ ಆಕರವಾಗಿದೆ.

ಡಾ. ವೀರಣ್ಣ ದಂಡೆ, ಡಾ. ಶ್ರೀಪಾದ ಶೆಟ್ಟಿ. (ಸಂ), ಸುವರ್ಣ ಜಾನಪದ ಲೇಖನಗಳು, ೨೦೦೭. ಈ ಕೃತಿಯಲ್ಲಿನ ನಾಲ್ಕನೆ ಭಾಗವಾದ ವೃತ್ತಿಗಾಯಕರ ಹಾಡುಗಳು ಎಂಬ ಭಾಗ ಬಹುತೇಕ ಅಲೆಮಾರಿ ಬುಡಕಟ್ಟು ಪರಂಪರೆಯ ಮೌಖಿಕ ಸಾಹಿತ್ಯದ ಹಿನ್ನೆಲೆಯಲ್ಲಿನ ಸಾಹಿತ್ಯದ ವಿವೇಚನೆಯನ್ನು ಒಳಗೊಂಡಿರುವಂತಹ ಲೇಖನಗಳಾಗಿವೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಡಾ. ಕ್ಯಾತನಹಳ್ಳಿ ರಾಮಣ್ಣ ರವರ ಭೂತೇರರ ಪದಗಳು. ಡಾ.ಹಿ.ಚಿ. ಬೋರಲಿಂಗಯ್ಯರವರ

ಕಿನ್ನರಿ ಜೋಗಿಯರು ಡಾ. ನಿಂಗಣ್ಣ ಸಣ್ಣಕ್ಕಿಯವರ ಗೊಂದಲಿಗರು ಮತ್ತು ಡಾ.ರಂಗಾರೆಡ್ಡಿ ಕೋಡಿರಾಂಪುರರವರ- ಬುರ್ರಕಥಾ ಎಂಬ ಲೇಖನಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ.

ಕಿನ್ನರಿ ಜೋಗಿಯರು: ಡಾ.ಹಿ.ಚಿ. ಬೋರಲಿಂಗಯ್ಯ ಅವರ ಈ ಲೇಖನವು ಕರ್ನಾಟಕದಲ್ಲಿನ ಜೋಗಿ ಸಮುದಾಯ ವೃತ್ತಿ ಗಾಯಕ ಪರಂಪರೆಯಲ್ಲಿಯೇ ಅತ್ಯಂತ ಪ್ರಾಚೀನವಾದ ಮುಖ್ಯ ಅಲೆಮಾರಿ ಸಮುದಾಯವೆಂದು ಗುರುತಿಸುತ್ತಾರೆ. ಇವರು ತಮ್ಮ ಮೂಲ ವೃತ್ತಿಯನ್ನು ಕಿನ್ನರಿ ಬಾರಿಸುತ್ತಾ ಹಾಡುಗಳನ್ನು ಹಾಡುತ್ತಾ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಪುನರ್ ವ್ಯಾಖ್ಯಾನಿಸುತ್ತಾರೆ. ತಲೆಗೆ ಬಣ್ಣದ ಮುಂಡಾಸು, ಮುಂಡಾಸಿಗೆ ಅಂಟಿಕೊಂಡತೆ ಗಾಜಿನ ಗುಳಾಪು, ತೆಲೆತುಂಬ ಬಣ್ಣ ಬಣ್ಣದ ತುರಾಯಿ ಕೋಟಿನ ಮೇಲೆ ಕಸೂತಿಯ ಚಿತ್ತಾರದ ಅಡ್ಡಶಲ್ಯ, ಕಿವಿಗೆ ಕರ್ಣ ಕುಂಡಲ ಮತ್ತು ಕಾಪಾಲಿ ಕೈಯಲ್ಲಿ ಕಿನ್ನರಿ, ಕಾಲಿಗೆ ಗೆಜ್ಜೆ, ಹೆಗಲಿಗೆ ಜೋಳಿಗೆ, ತೀಡಿದ ಹುಬ್ಬು, ಪೊದೆ ಮೀಸೆಯ ಅಂಚಿನಲ್ಲಿ ನಗು ನಗುವ ಇಂಥ ರಂಗಿನ ವೇಷದ ಕಿನ್ನರಿ ಜೋಗಿಗಳ ಬಗ್ಗೆ ಉತ್ತಮವಾದ ಮಾಹಿತಿಯನ್ನು ಪಡೆಯಬಹುದಾಗಿದೆ. ಅಲ್ಲದೆ ಜನ ಸಮುದಾಯದ ಪರಂಪರೆಯು ಕಿನ್ನರಿ ಜೋಗಿಗಳನ್ನು ನಡೆಸಿಕೊಂಡ ರೀತಿ ಇವರ ಪ್ರಾಚೀನತೆಯನ್ನು ಪಾರಂಪರಗತವಾಗಿಯೇ ಮಹಾಭಾರತದ ಖಾಂಡಗಳನ್ನು ಹಾಡುತ್ತಾ ಅಲೆಮಾರಿತನದಿಂದ ಕಲಾ ಸೇವಕರಾಗಿ ಜೀವಿಸುತ್ತಿರುವ ಕಿನ್ನರಿ ಜೋಗಿಗಳು ತಮ್ಮ ಕುಲಗುರು ಮತ್ತು ಸಾಂಸ್ಕೃತಿಕ ನಾಯಕ ಅರ್ಜುನ ಎಂದು ಮಹಾಭಾರತದಲ್ಲಿ ಬರುವ ಅರ್ಜುನನ ಬದುಕಿನ ವೃತ್ತಾಂತವನ್ನು ತಮ್ಮ ಸಾಹಿತ್ಯದ ಮೂಲಕ ಹಾಡುತ್ತಾರೆ.

ಕಿನ್ನರಿ ಜೋಗಿಗಳು ಮಹಾಭಾರತದ ಅರ್ಜುನನ ಜೀವನ ವೃತ್ತಾಂತವನ್ನು ಐದು ಪರ್ವ ಕಥೆಗಳನ್ನಾಗಿ ಮಾಡಿಕೊಂಡು ತಮ್ಮ ಕುಲಗುರು 'ಅರ್ಜುನ' ಎಂದು ಹೇಳಿದರೂ ಇವರ ವಾಸ್ತವವಾಗಿ ನಾಥಪಂಥದ ಭೈರವನ ಆರಾಧಕರಾಗಿ, ಶೈವ ಮತಾವಲಂಬಿಗಳಾಗಿ ಕಿವಿಗೆ ಕಪಾಲಿ, ಕರ್ಣ ಕುಂಡಲವಿಟ್ಟು ಭೈರವನ ಸನ್ನಿಧಿಯಲ್ಲಿ ಜೋಗಿ ದೀಕ್ಷೆ ಪಡೆದು, ಕುತ್ತಿಗೆಗೆ ಸಿಂಗನಾಥವನ್ನು ಕಟ್ಟಿಸಿಕೊಂಡು ಜೋಗಿಯಾಗಿ ತಮ್ಮ ವೃತ್ತಿ ಪರಂಪರೆಯನ್ನು ಮುಂದುವರೆಸುತ್ತಾರೆ.

ಹನ್ನೆರಡನೇ ಶತಮಾನದಷ್ಟು ಪ್ರಾಚೀನತೆಗಿಂತಲೂ ಹಿಂದೆಯೂ ಈ ಜನಪರಂಪರೆ ಇದ್ದು ಹನ್ನೆರಡನೇ ಶತಮಾನದಲ್ಲಿ 'ಕಿನ್ನರಿ ಬೊಮ್ಮಯ್ಯ' ಎಂಬ ವ್ಯಕ್ತಿಯ ಉಲ್ಲೇಖದ ಬಗ್ಗೆ ಈ ಲೇಖನದಿಂದ ತಿಳಿಯಬಹುದಾಗಿದೆ. ಅಲ್ಲದೆ ಸಾಹಿತ್ಯಕ ಆಧಾರಗಳು ಇವರ ಪರಂಪರೆಯ ಬಗ್ಗೆ ತಿಳಿಸುತ್ತವೆ. ಕಿನ್ನರಿ ಜೋಗಿಗಳ ವಲಸೆ ಮತ್ತು ಪ್ರಸರಣದ ಬಗೆಯ ತಿಳಿಸುವ ಲೇಖಕರು, ಇವರ ಭಾಷೆಯ ಹಿನ್ನೆಲೆಯಿಂದ ಮರಾಠಿ, ಕನ್ನಡ, ತೆಲುಗು ಮತ್ತು ಹಿಂದಿ ಭಾಷೆಯನ್ನು ಮಾತನಾಡುತ್ತಾರೆಂದು ತಿಳಿಯಬಹುದು. ಜೋಗಿ ಸಮುದಾಯದಲ್ಲಿ ಕುಲ-ಬಳಿ ಉಪಜಾತಿಗಳಿದ್ದು ಕಿನ್ನರಿ ಜೋಗಿ, ಡಬ್ಬ ಜೋಗಿ, ಬಳೆಗಾರ ಜೋಗಿ, ಕುಣಬಿ ಜೋಗಿ, ಹಂಡಿ ಜೋಗಿ, ಅರ್ಜುನ ಜೋಗಿ ಇತ್ಯಾದಿ ಅವರವರ ವೃತ್ತಿಯನ್ನು ಆಧರಿಸಿ ಈ ಉಪಜಾತಿಗಳಿದ್ದರೂ ಇವರೆಲ್ಲರ ಕುಲದೈವ ಕಾಲಭೈರವ. ಇವರೆಲ್ಲರ ಮುಖ್ಯಮಠ ಕದ್ರಿಮಠ ಇವರೆಲ್ಲರು ನಾಥ ಪಂಥಕ್ಕೆ ಸೇರಿದವರು ಎಂಬುದು ಬಹಳ

ಮುಖ್ಯವಾದದ್ದು. ಇವರ ಮುಖ್ಯ ಮಠಗಳಾದ ಕದ್ರಿ ಮತ್ತು ಆದಿಚುಂಚನಗಿರಿ ಇವರ ಮೂಲ ಮಠಗಳಾಗಿದ್ದರೂ ಚಂದ್ರಗುತ್ತಿ(ಸೊರಬ), ಮೊಳಕಾಲ್ಮೂರು ನುಂಕೆಮಲೆ ಬೆಟ್ಟ, ತುರುಬೆ ಗುಡ್ಡ(ಧಾರವಾಡ ಜಿಲ್ಲೆ) ಮುಂತಾದ ಕಡೆಗಳಲ್ಲಿ ಇವರ ಉಪ ಮಠಗಳು ಮತ್ತು ದೈವ ಕೇಂದ್ರಗಳಿವೆ.

ಜೋಗಿ ದೀಕ್ಷೆ: ಜೋಗಿ ಸಮುದಾಯದ ಎಲ್ಲಾ ಮಠಗಳಿಗೂ ನಂಬಿಕೆಯಂತೆ ಕಾಲಭೈರವನ ಹೆಸರಿನಲ್ಲಿ ಧೀಕ್ಷೆ ಕೈಕೊಂಡು ಜೋಗಿಯನ್ನಾಗಿ ಪರಿವರ್ತಿಸುವುದು ಇವರ ಕಡ್ಡಾಯ ಸಂಪ್ರದಾಯವಾಗಿದೆ. ಧೀಕ್ಷೆಯನ್ನು ಪಡೆದ ನಂತರವೆ ಅವನ ವೃತ್ತಿ ಬದುಕು ಆರಂಭವಾಗುತ್ತದೆ. ಮತ್ತು ಮದುವೆಗೆ ಮುಂಚೆಯೇ ಮಠಗಳಿಂದ ಧೀಕ್ಷೆ ಪಡೆದು ಕೊಳ್ಳುತ್ತಾರೆ.

ಸಾಹಿತ್ಯ: ಕಿನ್ನರಿ ಜೋಗಿಗಳ ಮೌಖಿಕ ಸಾಹಿತ್ಯ ಕೇವಲ ಅರ್ಜುನಜೋಗಿ ಹಾಡಿಗೆ ಮಾತ್ರ ಸೀಮಿತವಾಗಿಲ್ಲ ಮಹಾಭಾರತದ ವಿವಿಧ ಪರ್ವಗಳನ್ನು ಅನೇಕ ರಾತ್ರಿಗಳವರೆಗೆ ಹಾಡಬಲ್ಲ ಇವರು ಶಿವ, ಪಾರ್ವತಿ, ಗಂಗೆ-ಗೌರಿ, ಭೈರವ, ಮಾಳವ್ವ, ಭೈರವ ಕಾಳಿ ಮುಂತಾದ ಕಥನ ಗೀತೆಗಳನ್ನೂ ಹಾಡುತ್ತಾರೆ. ಅಲ್ಲದೆ ಹತ್ತಾರು ಲೌಕಿಕ ಕಾವ್ಯಗಳನ್ನು ಹಾಡುತ್ತಾರೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ರಾಜಹಂಸ, ಪರಮಹಂಸ, ಶಿವಶಂಕಿನ ಕುಮಾರ, ಆಶಾವತಿ, ಶಾಮಸೇನ, ಚಿತ್ರಶೇಖರ, ಸೋಮಶೇಖರ, ಬಸವಕುಮಾರ, ಲೋಹಿತಕುಮಾರ, ಸತಿಶೀಲಾವತಿ, ವೀರಸೇನ, ಕೋಗಿಲೆ, ಗೋಪಮ್ಮನಕತೆ ಇತ್ಯಾದಿ ಮೌಖಿಕ ಕಥನಗಳನ್ನು ಹಾಡುತ್ತಾರೆ ಎಂಬುದನ್ನು ಈ ಲೇಖನದಲ್ಲಿ ಉಲೇಖಿತವಾಗಿರುವುದು. ಅದೇ ರೀತಿ ಕಿನ್ನರಿಜೋಗಿಗಳು ಬಳಸುವ ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ಚಿಟಗಿ, ಗಗ್ಗರ, ಕಿರುಗೆಜ್ಜೆ ಇತರೆ ವಾದ್ಯಗಳನ್ನು ಬಳಸುತ್ತಾರೆ. ಇವರ ಕಲೆ ಪ್ರದರ್ಶನದ ಮಾದರಿಯು ನೋಡುಗರನ್ನು ಸೇಳೆಯುತ್ತದೆ. ಅಲ್ಲದೆ ಇವರ ಸಾಹಿತ್ಯದಲ್ಲಿ ವ್ಯವಸ್ಥೆಯ ವಿಡಂಬನೆ, ಸಾಮಾಜಿಕ ಸಂಗತಿಗಳ ವಿಮರ್ಶೆ, ದಬ್ಬಾಳಿಕೆಯನ್ನು ವ್ಯಂಗ್ಯ ಮಾಡುತ್ತಾರೆ ಎಂಬುದು ಪ್ರಮುಖ ಅಂಶವಾಗಿದೆ. ಇಡೀ ಕೃತಿ ಜೋಗಿ ಸಮುದಾಯದ ಮೌಖಿಕ ಪರಂಪರೆಯನ್ನು ಈ ಅಧ್ಯಯನಕ್ಕೆ ಸಹಕಾರಿಯಾಗಿದೆ.

ಭೂತೇರ ಪದಗಳು: ಡಾ. ಕ್ಯಾತನಹಳ್ಳಿ ರಾಮಣ್ಣ ಅವರ ಈ ಲೇಖನದಲ್ಲಿ ಗೋಂಧಳಿ ಎಂಬ ಮರಾಠಿ ಪದ ಹಿನ್ನೆಲೆಯಲ್ಲಿ ಅರ್ಥವನ್ನು ತಿಳಿಯಬಹುದಾಗಿದೆ. ಮತ್ತೊಂದು ನೆಲೆಯಲ್ಲಿ ಗೊಂದಲಿಗರು ಎಂಬ ನಿಲುವುಗಳನ್ನು ಪ್ರತಿಪಾದನೆ ಮಾಡುತ್ತಾ ಭೂತೇರ ಪದಗಳ ಹಿನ್ನೆಲೆಯಲ್ಲಿ ಗೋಂಧಳಿ ಅಥವಾ ಗೊಂದಲಿಗ ಎಂಬ ಸಮುದಾಯಗಳ ಭಿನ್ನತೆಯ ಅರ್ಥವನ್ನು ಗ್ರಹಿಸುವ ಚಿಂತನೆಯನ್ನು ಮತ್ತು ಭೂತೇರು, ಗೊಂದಲಿಗರು, ಜೋಗೇರು, ಜೋಳಿಗೇರು, ಚೌಡಿಕೆಯವರು ಎಂಬ ವೃತ್ತಿ ಗಾಯಕ ಪರಂಪರೆಯ ಹಿನ್ನೆಲೆಯಿಂದ ಇವರ ಸಾಂಸ್ಕೃತಿಕ ಸಂಬಂಧಗಳ ಸೂಕ್ಷ್ಮತೆಗಳನ್ನು ತಿಳಿಸುತ್ತಾ, ವಿದ್ವಾಂಸರ ಹೇಳಿಕೆಗಳನ್ನು ಪರಿಶೀಲಿಸುತ್ತಾ ಸಂಬಂಧಗಳ ಸೂಕ್ಷ್ಮತೆಯ ಅಂಶಗಳ ಮೂಲಕ ಮೂಲವನ್ನು ಹುಡುಕಲು ಯತ್ನಿಸಿರುವುದು ಒಪ್ಪಬೇಕಾದಂತಹ ತೌಲನಿಕ ನಿಲುವುಗಳಾಗಿವೆ. ಪ್ರಾದೇಶಿಕತೆಯಿಂದ ಭಿನ್ನ ಭಿನ್ನವಾದ ಹೆಸರುಗಳಿಂದ ಕರೆಯುವಂತಹ ಈ ಸಮುದಾಯ ನಮ್ಮ ಭಾಗದಲ್ಲಿ ಬುಡಬುಡಕಿಯವರು ಕಂಡುಬರುವುದರಿಂದ ಈ ಲೇಖನದ ಮೂಲಕ ಈ ಸಮುದಾಯಗಳಲ್ಲಿ ಒಳ

ಅಥವ ಉಪ ಸಮುದಾಯಗಳನ್ನು ಅವುಗಳ ನಡುವಿನ ಸಾಮ್ಯತೆಗಳನ್ನು ಮತ್ತು ಸಾಮಿಪ್ಯತೆಗಳನ್ನು ತಿಳಿಯಬಹುದಾಗಿದೆ. ನಾಥಪರಂಪರೆಯ ಮೂಲ ಈ ಸಮುದಾಯಕ್ಕಿದೆ ಎಂಬುದಾಗಿ ಇವರು ಮೂಲ ಮಹಾರಾಷ್ಟ್ರವೆಂದು, ಆಂಧ್ರ ಪ್ರದೇಶವೆಂದು ತಿಳಿಸುತ್ತಾ ಸಾಹಿತ್ಯದಲ್ಲಿನ ಸಾಮ್ಯತೆಗಳನ್ನು ತಿಳಿಸಲು ಪ್ರಯತ್ನಿಸುತ್ತಾರೆ. ಈ ಹಿನ್ನೆಲೆಯಲ್ಲಿ ಗೋಂಧಳಿ ಸಮುದಾಯ ಪ್ರಸ್ತುತ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬರುವುದರಿಂದ ಈ ಲೇಖನವು ಸಾಹಿತ್ಯ, ಸಂಸ್ಕೃತಿಗಳ, ಹಿನ್ನೆಲೆಯಲ್ಲಿ ಈ ಲೇಖನ ಸಹಕಾರಿಯಾಗಿದೆ.

ಗೊಂದಲಿಗರು: ಡಾ. ನಿಂಗಣ್ಣ ಸಣ್ಣಕ್ಕಿ ಅವರ, ಗೊಂದಲಿಗರ ಪೂರ್ವ ಇತಿಹಾಸ ಮತ್ತು ಗೊಂದಲಿಗರು ಎಂದು ಕರೆಸಿಕೊಳ್ಳಲು ಅವರು ಹಾಕುವ 'ಗೊಂದಲ' ಕಲೆಯು ಕಾರಣವಿರಬಹುದು. ಸಾಹಿತ್ಯಕವಾಗಿ ಕನ್ನಡದ ಪ್ರಾಚೀನ ಕವಿಗಳಾದ ಪಂಪ, ರುದ್ರಭಟ್ಟ, ಅಲ್ಲಮಪ್ರಭು, ಹರಿಹರ ಇತರರ ಕೃತಿಗಳಲ್ಲಿ ಗೊಂದಲಿಗ ಸಮುದಾಯದ ಪರಂಪರೆಯನ್ನು ತಿಳಿಸಿಕೊಡುತ್ತಾರೆ. ಇವರ 'ರೇಣುಕಾ ಮಹಾತ್ಮೆ'ದಲ್ಲಿ ಮೂವತ್ತೆರಡು ಶ್ಲೋಕಗಳು ಈ ಗೊಂದಲಿ ನೃತ್ಯವು ಕರ್ನಾಟಕದಲ್ಲಿ ಹುಟ್ಟಿದ್ದು ಎಂಬುದನ್ನು ತಿಳಿಯಬಹುದಾಗಿದೆ. ಗೊಂದಲಿಗರು ನೃತ್ಯದ ಸಂದರ್ಭದಲ್ಲಿ ದೀವಟಿಗೆ, ಕವಡೆಯ ಸರ, ಮಾತೃವಾದ್ಯ, ತಾಳ, ವಂಶವಾದ್ಯ, ಮೃದಂಗ, ವೀಣೆ, ಚಂಡಕ, ತ್ರಿವಳಿ, ಮುರಜ ಮತ್ತು ಇತ್ಯಾದಿ ವಾದ್ಯಗಳನ್ನು ಬಳಸುತ್ತಾರೆ ಎಂಬುದನ್ನು ತಿಳಿಸುತ್ತದೆ. ಇವರು ವಾಸಿಸುವ ಕರ್ನಾಟಕದ ನೆಲೆಗಳು ಇವರ ಶೈವ ಸಂಪ್ರದಾಯದ ಹಾಡುಗಾರರು, ಕಥೆಗಾರರು, ಬುಡಬುಡಕೆಯವರು, ಭೂತ, ಭಾವ, ಸಿಂಗದ, ಹಸ್ತ ಸಾಮುದ್ರಿಕ, ಗಿಳಿಶಾಸ್ತ್ರಿ ಮುಂತಾದ ವೃತ್ತಿ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಬಂದಿರುವರು. ಹೆಂಗಸರು ಗಂಡಸರ ಜೊತೆಗೆ ಸಂಚರಿಸಿ 'ಕೌದಿ' ಹೊಲಿಯುತ್ತಾರೆ. ಇತ್ತೀಚ್ಚಿಗೆ ಈ ಸಮುದಾಯದ ವೃತ್ತಿ ಪಲ್ಲಟದಿಂದಾಗಿ ತಾಮ್ರ, ಹಿತ್ತಾಳೆ ಪಾತ್ರೆಗಳ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಮೂಲದಲ್ಲಿ ಈ ಸಮುದಾಯದ ಇಂದಿನ ಉಪ ಪಂಗಡಗಳಾದ ಬುಡಬುಡಕಿಯವರು, ಭಾಟರು, ಸಿಂಗದರು, ಭೂತೇರು ಒಂದೇ ಆಗಿದ್ದರೆ ಕಾಲ ಕ್ರಮೇಣ ಇವರ ಉಪವೃತ್ತಿಗಳು ಉಪಪಂಗಡಗಳಾಗಲು ಕಾರಣವಾಗಿದೆ. ಇವರ ಸಾಹಿತ್ಯ, ಸಂಸ್ಕೃತಿ, ಆಚರಣೆ, ಉಡುಗೆ, ತೊಡುಗೆ ಇತ್ಯಾದಿ ವಿಷಯಗಳನ್ನು ತಿಳಿಯಲು ಈ ಲೇಖನವು ಈ ಅಧ್ಯಯನಕ್ಕೆ ಪೂರಕವಾಗಿದೆ.

ಬುರ್ರಕಥಾ: ಡಾ. ರಂಗಾರೆಡ್ಡಿ ಕೋಡಿರಾಂಪುರ ಅವರ ಲೇಖನದಲ್ಲಿ, ಬುರ್ರಕಥಾ ಸಾಹಿತ್ಯ ಪ್ರಕಾರವನ್ನು ವೃತ್ತಿ ಪರಂಪರೆಯನ್ನಾಗಿ ಮಾಡಿಕೊಂಡು ಜೀವನ ಸಾಗಿಸುವಂತಹ ಅಲೆಮಾರಿ ಸಮುದಾಯವಾದ ಬುಡ್ಗಜಂಗಮ ಸಮುದಾಯ ಈ ಅಧ್ಯಯನ ವ್ಯಾಪ್ತಿಯಲ್ಲಿ ಬರುವುದರಿಂದ ಇವರ ಮೌಖಿಕ ಸಾಹಿತ್ಯದ ಮುಖ್ಯ ಪ್ರಕಾರವಾದ ಬುರ್ರಕಥಾ ಆಂಧ್ರ ಪ್ರದೇಶದ ಮೂಲದಿಂದ ಕರ್ನಾಟಕಕ್ಕೆ ಬಂದಿದೆ. ಬುಡ್ಗಜಂಗಮರ ಕಲೆಯು ಹಗಲುವೇಷ ದರಿಸಿ ಬುರ್ರಕಥಗಳನ್ನು ಹಾಡುತ್ತಾ ಅಭಿನಯದ ಮೂಲಕ ಅಭಿನಯಿಸುತ್ತಾ ಜನವರ್ಗಕ್ಕೆ ಕಲಾಸೇವೆಯನ್ನು ಮಾಡುವಂತಹ ಅಲೆಮಾರಿ ಸಮುದಾಯ ಆಂಧ್ರ ಪ್ರದೇಶದ ಮೂಲಕವಾಗಿ ಕರ್ನಾಟಕಕ್ಕೆ ಬಂದಿರುವಂತವರು. ಕರ್ನಾಟಕದ ಕರಪಾಲ ಮೇಳವನ್ನು

ಹೋಲುವಂತಹ ಬುರ್ರಕಥಾ ಕಲೆಯ ಪ್ರಾಚೀನತೆಯನ್ನು ಮಾನವನ ಉಗಮದೊಂದಿಗೆ ಅಭೇದ ಸಂಬಂಧ ಕಲ್ಪಿಸಲಾಗಿದೆ. ಕರ್ನಾಟಕದಲ್ಲಿರುವ ಶೈವ ಜಂಗಮರ ಕಥೆಗೂ ಮತ್ತು ಬುಡ್ಗಜಂಗಮರ ಬುರ್ರಕಥಾ ಪ್ರಕಾರಕ್ಕೆ ಸಂಬಂಧವಿದೆ ಎಂದು ತಿಳಿಸಿದ್ದಾರೆ. ಕರ್ನಾಟಕದ ಯಕ್ಷಗಾನ ಕಲೆಗೂ ಆಂಧ್ರ ಪ್ರದೇಶದ ಬುರ್ರಕಥಾ ಕಲೆಗೂ ಸಾಮ್ಯತೆಗಳಿದ್ದು ಯಕ್ಷಗಾನ ಕಲೆಯ ಮೂಲದಿಂದ ಬುರ್ರಕಥಾ ಪರಂಪರೆ ಬೆಳೆದು ಬಂದಿದೆ ಎಂಬ ಸಂಬಂಧದ ವಿವೇಚನಯನ್ನು ಆಂಧ್ರ ಪ್ರದೇಶದ ಮೂಲದ ಬುಡ್ಗಜಂಗಮರ ಅಥವಾ ಹಗಲುವೇಷ ಸಮುದಾಯದ ಬಗ್ಗೆ ನಡೆದಿರುವಂತಹ ಅಧ್ಯಯನಕಾರರ ಅಭಿಪ್ರಾಯಗಳನ್ನಾದರಿಸಿ ಬುರ್ರಕಥಾ ಪರಂಪರೆಯನ್ನು ತಿಳಿಸಲು ಪ್ರಯತ್ನಿಸುತ್ತಾರೆ. ಬುರ್ರಕಥೆಯಲ್ಲಿ ಪ್ರಧಾನ ಕತೆಗಾರ ತಂಬೂರಿ ವಾದ್ಯವನ್ನು ಹಿಡಿದು ಹಾಡುವುದರಿಂದ ತಂಬೂರಿ ಕಥೆ ಎಂದು ಕರೆಯುತ್ತಾರೆ. ತೆಲುಗಿನಲ್ಲಿ ಬುರ್ರ ಎಂದರೆ ಕನ್ನಡದಲ್ಲಿ 'ತಂಬೂರಿ' ಎಂದು ಈ ಕಲೆಯಲ್ಲಿ ಬಳಸುವ ವಾದ್ಯಗಳು, ವೇಷಭೂಷಣಗಳು ಕರ್ನಾಟಕದ ಕರಪಾಲಮೇಳದ ಕಲೆಯು ಗಮನಕ್ಕೆ ಬರುತ್ತದೆ. ಈ ಕರಪಾಲಮೇಳ ಯಕ್ಷಗಾನದ ಮೂಲದಿಂದ ಬಂದಿರುವಂತಹದು ಎಂಬುದು ಗಮನಾರ್ಹವಾದ ವಿಷಯವಾಗಿದೆ. ಈ ಕೆಲೆಯಲ್ಲಿನ ಸ್ತ್ರಿ-ಪುರುಷ ಪಾತ್ರಗಳು ಪ್ರೇಕ್ಷಕರ ಗಮನ ಸೆಳೆಯುತ್ತವೆ. ಬುರ್ರಕಥಾ ಸಂಪ್ರದಾಯಿಕ ವೃತ್ತಿಯವರು ಸಾಮಾನ್ಯವಾಗಿ ಹಾಡುವ ಕಾವ್ಯಗಳೆಂದರೆ ಮುಗ್ಗರು, ಮರಾಟಿಲು, ಕಾಂಭೋಜ ರಾಜಕಥೆ, ಪೆದ್ದ ಬೊಬ್ಬಿಲಿ, ಕಾಮಮ್ಮ ಕಥೆ, ಭಲ್ಲಾಳ ರಾಜನ ಕಥೆ, ಶ್ರೀಯಾಳ ಕಥೆ, ಬಾಲನಾಗಮ್ಮ ಕಥೆ ಇದರ ಜೊತೆಗೆ ದ್ರೋಣ ಪರ್ವಮು, ವಿರಾಟ ಪರ್ವಮು, ರಾಮಾಯಣ ಪ್ರಸಂಗಗಳನ್ನು ತಮ್ಮ ಕಲೆಯಲ್ಲಿ ಅಭಿನಯಿಸುತ್ತಾರೆಂಬುದನ್ನು ಈ ಲೇಖನದ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಡಾ. ಸಿ.ಎನ್ ರಾಮಚಂದ್ರನ್ ಅವರ, ಹೊಸ ಮಡಿಯ ಮೇಲೆ ಚದುರಂಗ: ವಿಶ್ವದ ೨೫ ಪ್ರಮುಖ ಮೌಖಿಕ ಮಹಾಕಾವ್ಯಗಳ ಅಧ್ಯಯನ, ಸಪ್ನಬುಕ್ ಹೌಸ್, ಬೆಂಗಳೂರು, ೨೦೦೭. ಈ ಕೃತಿಯ ಒಂದನೇ ಅಧ್ಯಾಯದಲ್ಲಿ ಪ್ರಸ್ತಾವನೆ ಭಾಗದಲ್ಲಿ ಸಾಹಿತ್ಯ, ಸಂಸ್ಕೃತಿ, ಪರಂಪರೆ ಇತ್ಯಾದಿ ಜಾನಪದೀಯ ಅಧ್ಯಯನ ಮಹತ್ವವನ್ನು ತಿಳಿಸುತ್ತಾ ಭಾರತೀಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಈ ಅಧ್ಯಯನದ ವಿವೇಚನೆ ಯಾವ ರೀತಿ ಬೆಳೆದು ಬಂದಿದೆ ಎಂದು ತಿಳಿಸುತ್ತಾ, ಭಾರತೀಯ ಅದರಲ್ಲೂ ಮುಖ್ಯವಾಗಿ ಕನ್ನಡದ ಮಹಾಕಾವ್ಯಗಳಾದ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಕೃಷ್ಣಗೊಲ್ಲರ ಕಾವ್ಯ, ಕುಮಾರರಾಮ ಮತ್ತು ಹಾಲುಮತ ಜಾನಪದ ಮಹಾಕಾವ್ಯ, ಸಿರಿ ಪಾಡ್ದನ ಇತ್ಯಾದಿ ಭಾರತೀಯ ಬುಡಕಟ್ಟು ಮಹಾಕಾವ್ಯಗಳ ಅಧ್ಯಯನಗಳು ನಡೆದುಬಂದಿರುವ ಮಹತ್ವವನ್ನು ಕುರಿತು ತಿಳಿಸುತ್ತಾರೆ. ಅನಂತರದಲ್ಲಿ ಪಾಶ್ಚಾತ್ಯರಲ್ಲಿ ಮಹಾಕಾವ್ಯಗಳ ವಿವೇಚನೆ ಬೆಳೆದು ಬಂದ ವಿವರವನ್ನು ನೋಡುತ್ತಾ ಮಹಾಕಾವ್ಯಗಳ ಅಧ್ಯಯನಕ್ಕೆ ಪೀಠಿಕೆಯನ್ನು ನೀಡುತ್ತಾರೆ. ಗ್ರಾಮೀಣ ಸಮುದಾಯಗಳು ಮತ್ತು ಅರಣ್ಯವಾಸಿ ಬುಡಕಟ್ಟು ಜನಾಂಗಗಳ ಕಲೆ-ವಾಙ್ಮಯ ಸಂಸ್ಕೃತಿಗಳ ಬಗ್ಗೆ ಗಂಭೀರ ಚಿಂತನೆ ಭಾರತೀಯ ಸಂದರ್ಭದಲ್ಲಿ ಪ್ರಾರಂಭವಾದ ಬಗ್ಗೆ ಮತ್ತು ಕನ್ನಡದಲ್ಲಿ ಜಾನಪದ ಅಧ್ಯಯನಕ್ಕೆ ಶಿಸ್ತುಬದ್ಧ ಆಯಾಮ ದೊರಕಿರುವುದರ ವಿವರವನ್ನು ನೀಡುತ್ತಾರೆ. ಇದಕ್ಕೆ ತಾತ್ವಿಕತೆಯನ್ನು ನೀಡಿದ

ಶ್ರೀಕಂಠೇಶ ಗೌಡ, ಎನ್. ಹೊನ್ನಪ್ಪ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಗಟ್ಟ ಕೃಷ್ಣಮೂರ್ತಿ, ಕರೀಮ್ ಖಾನ್, ಡಾ. ಬಿ.ಎಸ್. ಗದ್ದಗೀಮಠ, ಡಾ. ಎಲ್.ಆರ್ ಹೆಗಡೆ, ಡಾ. ಜಿ.ಶಂ. ಪರಮಶಿವಯ್ಯ ಇತರರು ಜಾನಪದ ಅಧ್ಯಯನಕ್ಕೆ ನಾಂದಿ ಹಾಡಿದರು. ಇವರಲ್ಲಿ ಜೀ.ಶಂ.ಪ. ಮೊಟ್ಟ ಮೊದಲ ಬಾರಿಗೆ ಕರ್ನಾಟಕದಲ್ಲಿ ವೃತ್ತಿ ಗಾಯಕರನ್ನು ಗುರುತಿಸಿ ಅವರ ಮೂಲಕ ಮಲೆಮಾದೇಶ್ವರ, ಮಂಟೇಸ್ವಾಮಿ ಇತ್ಯಾದಿ ಅಪೂರ್ವ ಕನ್ನಡದ ಮಹಾಕಾವ್ಯಗಳನ್ನು ಸಂಗ್ರಹಿಸಿದ್ದು ನಂತರದಲ್ಲಿ ಮಂಗಳೂರು ವಿಶ್ವವಿದ್ಯಾಲಯ, ಡಾ. ಬಿ.ಎ ವಿವೇಕ ರೈ, ಡಾ. ಚಿನ್ನಪ್ಪಗೌಡ ಇತರರೊಡನೆ ಸೇರಿ ತುಳುವಿನ 'ಸಿರಿ ಪಾಡ್ದನ'ವನ್ನು ಸಂಪಾದಿಸಿ ಇಂಗ್ಲೀಷಿಗೆ ಅನುವಾದಿಸಿದರು. ನಂತರದಲ್ಲಿ ಕನ್ನಡ ವಿಶ್ವವಿದ್ಯಾಲಯವು ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪ ಮಹಾಕಾವ್ಯಗಳನ್ನು ೧೯೯೭ರಲ್ಲಿ ಪ್ರಕಟಿಸಿದವು. ಅನಂತರ ಕುಮಾರರಾಮ ಕೃಷ್ಣಗೊಲ್ಲರ ಕಾವ್ಯ, ಮೈಲಾರಲಿಂಗನ ಕಾವ್ಯ, ಗೊಂಡರ ರಾಮಾಯಣ, ಮಾಳಿಂಗರಾಯನ ಕಾವ್ಯಗಳನ್ನು ಪ್ರಕಟಿಸಿ ಅಧ್ಯಯನ ನಡೆಸಿದರ ವಿವರ ಈ ಕೃತಿಯಲ್ಲಿ ದೊರೆಯುತ್ತದೆ.

ಮೌಖಿಕ ಮಹಾಕಾವ್ಯಗಳ ಉಗಮ, ವಿಕಾಸ, ಹಿನ್ನೆಲೆ ಅರ್ಥಗಳನ್ನು ನೀಡುತ್ತಾರೆ. ಭಾರತೀಯ ಅಭಿಜಾತ ಮತ್ತು ಮೌಖಿಕ ಪರಂಪರೆ ಇವುಗಳ ಸಂಬಂಧದ ಸ್ವರೂಪ ಸಂಕೀರ್ಣತೆಯನ್ನು ಪಾಶ್ಚಾತ್ಯ ಭಾರತೀಯ ಮತ್ತು ಕನ್ನಡದ ಮಹಾಕಾವ್ಯಗಳ ಸ್ವರೂಪ ಚಿತ್ರಣಗಳೊಂದಿಗೆ ಅರ್ಥವನ್ನು ಇಂಗ್ಲೀಷಿನಲ್ಲಿ Oral Epic or Folk Epic ಕನ್ನಡದಲ್ಲಿ 'ಜನಪದ ಮಹಾಕಾವ್ಯ' ಎಂಬ ಪ್ರಭೇದದ ಬಗ್ಗೆ ಇರುವ ವ್ಯಾಖ್ಯಾನಗಳ ಚರ್ಚೆಯೊಂದಿಗೆ ಹೇಗೆ ಅವುಗಳೆಲ್ಲವೂ ಅಪೂರ್ಣವಾಗಿದೆ ಎನ್ನುವುದನ್ನು ನಿರ್ದಿಷ್ಟ ನಿದರ್ಶನಗಳ ಮೂಲಕ ವಿವರಿಸಿದ್ದಾರೆ. ಸಾಂಸ್ಕೃತಿಕ ಸನ್ನಿವೇಶಗಳ ಉತ್ಪನ್ನ ಮತ್ತು ಪ್ರದರ್ಶನವಾಗಿರುವ ಜನಪದ ಮಹಾಕಾವ್ಯಗಳು ಪ್ರತಿಯೊಂದು ಭಿನ್ನ ಆಕೃತಿಯನ್ನು ಮತ್ತು ನಿಯೋಗವನ್ನು ಉಳ್ಳವು ಒಂದೇ ಜನಪದ ಮಹಾಕಾವ್ಯವು ಬೇರೆ ಬೇರೆ ಸನ್ನಿವೇಶಗಳಲ್ಲಿ ತಾಳುವ ರೂಪಗಳು ಬಹುಬಗೆಯವು. ಮೌಖಿಕ ಪರಂಪರೆಯ ರಾಮಾಯಣ ಮಹಾಭಾರತಗಳನ್ನು ಕುರಿತ ವಿಸ್ತಾರವಾದ ಅಧ್ಯಯನ ಇನ್ನೊಂದು ಮುಖ್ಯವಾದ ವಿಷಯವಾಗಿದೆ. ಭಾರತೀಯ ಬುಡಕಟ್ಟು ಸಮುದಾಯಗಳ ವಿವಿಧ ಭಾರತೀಯ ಭಾಷೆಗಳ ರಾಮಾಯಣ-ಮಹಾಭಾರತಗಳ ತೌಲನಿಕ ಅಧ್ಯಯನ ಮತ್ತು ಈ ಮಹಾಕಾವ್ಯಗಳು ತಿಳಿಸುವ ಲೋಕದೃಷ್ಟಿಯ ವಿಶಿಷ್ಟ ಅಂಶಗಳು ಇಲ್ಲಿ ತುಂಬಾ ಸೂಕ್ಷ್ಮವಾಗಿ ಅವಲೋಕನಕ್ಕೆ ಒಳಗಾಗಿವೆ. ಜೋತೆಗೆ ಇಂತಹ ರಾಮಾಯಣ-ಮಹಾಭಾರತಗಳನ್ನು 'ಪರ್ಯಾಯ/ ಪ್ರತಿರೋಧಾತ್ಮಕ' ಎಂದು ಗುರುತಿಸಬಹುದೇ ಎಂಬ ಚರ್ಚೆ ಮುಖ್ಯವಾಗಿ ಮೌಖಿಕ ಮಹಾಕಾವ್ಯ ವಿಮರ್ಶೆಗೆ ಹೊಸ ದೃಷ್ಟಿಕೋನಗಳನ್ನು ಬೆಳೆಸುತ್ತದೆ.

ಸಾಹಿತ್ಯದ ಸಾಂಸ್ಕೃತಿಕ ವಿಮರ್ಶೆಯಲ್ಲಿ ಶಿಷ್ಟ ಜಾನಪದ, ಲಿಖಿತ-ಮೌಖಿಕ ಮತ್ತು ರಾಷ್ಟ್ರೀಯ ಪ್ರಾದೇಶಿಕ ಎನ್ನುವ ಪರಿಕಲ್ಪನೆಗಳನ್ನು ದ್ವಂದ್ವಮಾನ ರೀತಿಯಲ್ಲಿ ವರ್ಗೀಕರಿಸಿ ನೋಡುವ ಸರಳ ವಿಧಾನವನ್ನು ಇಲ್ಲಿ ಪ್ರಶ್ನಿಸಲಾಗಿದೆ. ಇಂತಹ ಪಠ್ಯ ಮತ್ತು ಪ್ರದರ್ಶನಗಳ ಸೂಕ್ಷ್ಮ ಅಧ್ಯಯನಗಳ

ಹೊರತಾಗಿ ಸಾಮಾನ್ಯೀಕೃತ ಬೀಸು ಹೇಳಿಕೆಗಳು ಸಮರ್ಪಕವಲ್ಲ ಎನ್ನುವ ದಿಟ್ಟ ನಿಲುವು ಇಲ್ಲಿ ಪ್ರಕಟವಾಗಿದೆ. ಭಾರತೀಯಪ್ರಜ್ಞೆ ಮತ್ತು ಭಾರತೀಯ ಸಂಸ್ಕೃತಿ ಎನ್ನುವ ತಿಳುವಳಿಕೆಗೆ ಹೊಸ ನಿರ್ವಚನವನ್ನು ಈ ಅಧ್ಯಯನದ ಮೂಲಕ ಕೊಟ್ಟಿರುವುದು ಹೊಸ ಚಿಂತನೆ. ಮೌಖಿಕ ಮಹಾಕಾವ್ಯಗಳನ್ನು ಕುರಿತು ಕನ್ನಡದ ಆರು ಮಹಾಕಾವ್ಯಗಳನ್ನು ಮಧ್ಯೆ ಏಷ್ಯಾ, ಪ್ರಾಚ್ಯ ಹಾಗೂ ಯೂರೋಪಿನ ಏಳು ಮೌಖಿಕ ಮಹಾಕಾವ್ಯಗಳನ್ನು ಕೂಲಂಕಷವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಕನ್ನಡದಲ್ಲಷ್ಟೇ ಅಲ್ಲ, ಭಾರತೀಯ ಸಂದರ್ಭದಲ್ಲಿಯೂ ಸುಮಾರು ಇಪ್ಪತ್ತೈದರಷ್ಟು ಮೌಖಿಕ ಮಹಾಕಾವ್ಯಗಳನ್ನು ಕುರಿತು ಚರ್ಚೆ ಮೊಟ್ಟಮೊದಲ ಬಾರಿಗೆ ಇಲ್ಲಿ ದೊರೆಯುತ್ತದೆ. ವೀರಯುಗ, ರಾಷ್ಟ್ರೀಯತೆಯ ಆಯಾಮ ಮುಂತಾದ ಪರಿಕಲ್ಪನೆಗಳನ್ನು ಸಂಪೂರ್ಣ ಬದಲಿಸುವ ಹೊಸ ಅಧ್ಯಯನ ಮಾದರಿಗಳನ್ನು ಭಾರತೀಯ ಮೌಖಿಕ ಮಹಾಕಾವ್ಯಗಳ ಮೂಲಕ ರೂಪಿಸಲಾಗಿದೆ. ಕನ್ನಡದ ಮಲೆಮಾದೇಶ್ವರ, ಮಂಟೇಸ್ವಾಮಿ, ಹಾಲುಮತ ಮಹಾಕಾವ್ಯ, ಜುಂಜಪ್ಪ, ಕುಮಾರರಾಮ, ಕೃಷ್ಣಗೊಲ್ಲರ ಕಾವ್ಯ ಇನ್ನು ಮುಂತಾದ ಕಾವ್ಯಗಳು ತೆಲುಗು, ತಮಿಳು, ತುಳು, ರಾಜಸ್ಥಾನಿ ಅಲ್ಲದೇ ವಿದೇಶಿಯ ಮಹಾಕಾವ್ಯಗಳ ತೌಲನಿಕ ವಿಮರ್ಶೆ ಈ ಕೃತಿಯಲ್ಲಿದೆ. ಜನಪದ ಮಹಾಕಾವ್ಯಗಳನ್ನು ವಿಶ್ವಾಸಾತ್ಮಕ ನೆಲೆಯಲ್ಲಿ ಭಾರತೀಯ ನೆಲೆಯಲ್ಲಿ ಮತ್ತು ಸ್ಥಳೀಯ ನೆಲೆಯಲ್ಲಿ ನೋಡಿದ ಕ್ರಮಗಳಿಂದಾಗಿ ಹೊಸ ಅನುಭವಗಳು ಇಲ್ಲಿ ದೊರೆಯುತ್ತವೆ. ಬದಲಾದ ನಿಯೋಗಗಳಿಂದಾಗಿ ಹೊಸ ಸಾಹಿತ್ಯ ನಿರ್ಮಾಣವಾಗುವುದು, ಹೊಸ ರಾಗ ಹುಟ್ಟಿಕೊಳ್ಳುವುದು, ಗಂಡು–ಹೆಣ್ಣಿನ ಸಂಬಂಧಗಳು ಪಲ್ಲಟಗೊಳ್ಳುವುದು, ಜನಾಂಗಿಕ ಅಸ್ಮಿತೆಯನ್ನು ಕಟ್ಟಿಕೊಳ್ಳುವುದು ಹೀಗೆ ಆಧುನಿಕತೆಯ ಜಗತ್ತಿನಲ್ಲಿ ಆಧುನಿಕ ರೂಪಕಗಳು ಇಂತಹ ಮೌಖಿಕ ಮಹಾಕಾವ್ಯಗಳಿಂದ ನಿರಂತರವಾಗಿ ಹುಟ್ಟಿಕೊಳ್ಳುತ್ತವೆ ಎಂಬುದನ್ನು ಈ ಕೃತಿಯಿಂದ ತಿಳಿಯುವುದು.

ಒಟ್ಟಾರೆಯಾಗಿ ಡಾ. ಸಿ.ಎನ್ ರಾಮಚಂದ್ರನ್‌ರವರ 'ಹೊಸ ಮಡಿಯ ಮೇಲೆ ಚದುರಂಗ: ವಿಶ್ವದ ಪ್ರಮುಖ ಇಪ್ಪತ್ತೈದು ಮೌಖಿಕ ಮಹಾಕಾವ್ಯಗಳ ಅಧ್ಯಯನ ಈ ಅಧ್ಯಯನದ ಪ್ರಮುಖ ವಸ್ತುವಾದ ಅಲೆಮಾರಿ ಬುಡಕಟ್ಟುಗಳ ಮೌಖಿಕ ಸಾಹಿತ್ಯದ ತೌಲನಿಕ ಅಧ್ಯಯನವಾಗಿರುವುದರಿಂದ ಮೌಖಿಕ ಸಾಹಿತ್ಯದ ಅಧ್ಯಯನಕ್ಕೆ ಈ ಕೃತಿ ಹೊಸ ನೋಟಗಳನ್ನು ಬೆಳೆಸುತ್ತದೆ.

ಶಿವಾನಂದ ಲ ಪಾಚಂಗಿ, ಗೋಂಧಳಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮. ಈ ಕೃತಿಯಲ್ಲಿ ಗೋಂಧಳಿಯರ ಮೂಲ ಪ್ರಸಾರ, ಸ್ಥಳಾವರಣ, ಬ್ರಹ್ಮಾಂಡದ ಪರಿಕಲ್ಪನೆ, ಬಂಧುತ್ವ, ವಿವಾಹ, ಆರಾಧನೆ, ನಂಬಿಕೆ, ಒಳಾಡಳಿತ ವ್ಯವಸ್ಥೆ, ಸಾಹಿತ್ಯ ಭಾಷೆ, ವೃತ್ತಿಸಂಬಂಧಿ, ಒಳ ಪಂಗಡಗಳು, ಪ್ರದರ್ಶನಾತ್ಮಕ ಕಲೆಗಳು, ಸಮಸ್ಯೆ, ಸಂಘಟನೆ, ಆರ್ಥಿಕ ಜೀವನ, ಪರಿಹಾರ ಗೋಂದಳಿಯರ ವಾಸದ ನೆಲೆಗಳು ಮುಂತಾದ ವಿಷಯಗಳನ್ನು ಈ ಕೃತಿಯಿಂದ ತಿಳಿಯಬಹುದು. ಸಾಹಿತ್ಯದ ಹಿನ್ನೆಲೆಯಲ್ಲಿ ಇಲ್ಲದೆ ಇರುವುದಿಲ್ಲವಾದರೂ ಸಾಮಾಜಿಕ ಹಿನ್ನೆಲೆಯಲಿ ಈ ಸಂಶೋಧನೆಯ ದೃಷ್ಟಿಯಿಂದ ಬಹು ಮುಖ್ಯವಾದ ಆಕರವಾಗಿದೆ.

ಕುಪ್ಪೆ ನಾಗರಾಜರವರ, ದೊಂಬಿದಾಸ, ಎಂಬ ಕೃತಿಯು ೨೦೦೮ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಅಲೆಮಾರಿ ಅಧ್ಯಯನ ಮಾಲೆಯಲ್ಲಿ ತಂದ ಕೃತಿಗಳಲ್ಲಿ ಪ್ರಮುಖವಾಗಿದೆ, ಈ ಕೃತಿಯಲ್ಲಿ ಲೇಖಕರು ದಾಸರಿಗಳನ್ನು ಕುರಿತು ತಿಳಿಸುತ್ತಾರೆ, ಗುಂಪುಗಳಲ್ಲಿ ನರ್ತನ ಮಾಡುವುದರಿಂದ ಇವರನ್ನು ದೊಂಬಿದಾಸರೆಂದು ಕರೆಯಲಾಗಿದೆ. ಕಳ್ಳ ಅಥವಾ ದೊಂಗ ಎಂಬ ಪದವು ಯಾವುದೇ ಅಪರಾಧ ಪ್ರವೃತ್ತಿಯನ್ನು ಅರ್ಥೈಸುವುದಿಲ್ಲ ಎಂದು ತಿಳಿಸುತ್ತಾರೆ. ದೊಂಬಿದಾಸರು ಎಂದು ಕರೆಯುವುದು ವಾಡಿಕೆಯಾಗಿದೆ. ಊರೂರು ಸುತ್ತಿ ನಾಟಕಗಳನ್ನು ಪ್ರದರ್ಶಿಸಿ ಜೀವನ ಸಾಗಿಸಿಕೊಳ್ಳುವರು ಜೊತೆಗೆ ತತ್ವ ಪದಗಳನ್ನು ಹೇಳುವರು. ಅಲ್ಲದೆ ಇತರೆ ವ್ಯಾಪಾರ ವೃತ್ತಿಗಳನ್ನು ಮಾಡಿಕೊಂಡು ತಮ್ಮದೇ ಆದಂತಹ ಸಾಂಸ್ಕೃತಿಕ ಒಳನೋಟವನ್ನು ಸಮುದಾಯದ ಹಿನ್ನೆಲೆಯಲ್ಲಿ ಕಟ್ಟಿಕೊಂಡು ಬದುಕನ್ನು ಸಾಗಿಸುವ ಬಗೆಯನ್ನು ಈ ಕೃತಿ ತಿಳಿಸುತ್ತದೆ.

ಬಾಲಗುರುಮೂರ್ತಿ ಮತ್ತು ರಾ. ಪ್ರತಾಪ್ ಬಹುರೂಪಿ ಅವರು ಸೇರಿ ಕನ್ನಡ ಪುಸ್ತಕ ಪ್ರಾಧೀಕಾರಕ್ಕೆ ಅಲೆಮಾರಿ ಅಧ್ಯಯನ ಯೋಜನೆ ಮಾಲೆಯಲ್ಲಿ ೨೦೦೮ರಲ್ಲಿ ರಚಿತವಾದ "ಬುಡ್ಗಜಂಗಮರು" ಕೃತಿಯು ಬುಡ್ಗಜಂಗಮ ಸಮುದಾಯದ ಪರಿಚಯದ ಹಿನ್ನೆಲೆಯಲ್ಲಿ ಮಹತ್ವವಾದ ಕೃತಿಯಾಗಿದೆ. ಸಮುದಾಯದ ಹಿನ್ನೆಲೆ ಪದನಿಷ್ಪತ್ತಿ, ಆಚರಣೆಗಳು, ನಂಬಿಕೆ, ನಿಷೇದಗಳು, ಸಾಹಿತ್ಯ, ಸಂಸ್ಕೃತಿ ಇತ್ಯಾದಿ ಸಮುದಾಯದ ಒಟ್ಟಾರೆ ಸಾಂಸ್ಕೃತಿಕ ಬದುಕನ್ನು ಅನಾವರಣ ಮಾಡುವ ಬಹುಮುಖ್ಯ ಕೃತಿಯಾಗಿದೆ.

ಎಂ.ಎಸ್.ಹೆಳವರ್, ಹೆಳವರು ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೯. ಈ ಕೃತಿಯು ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯಗಳ ಸ್ಥಿತಿಗತಿ, ಮೂಲ ಮತ್ತು ಪ್ರಸಾರದೊಂದಿಗೆ ಪ್ರಾರಂಭವಾದ ವಿಷಯ, ಭಾರತದಲ್ಲಿ ಅಲೆಮಾರಿ ಬುಡಕಟ್ಟುಗಳ ಸಂಖ್ಯೆ ಇತ್ಯಾದಿ ವಿಚಾರಗಳನ್ನು ತಿಳಿಯಬಹುದಾಗಿದೆ. "ಹೆಳವರು" ಈ ಕೃತಿಯ ಮೊದಲ ಅಧ್ಯಾಯ ಪ್ರವೇಶದ ಭಾಗದಲ್ಲಿ ಹೆಳವ ಎಂಬ ಪದ ನಿಷ್ಪತ್ತಿ ರಂಭಾ ಜೋಶಿ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರ ಅಭಿಪ್ರಾಯದ ಹಿನ್ನೆಲೆಯಲ್ಲಿ ತಿಳಿದುಕೊಳ್ಳಬಹುದು. ಹಾಗೆಯೇ ಹೆಳವ ಸಮುದಾಯದ ಬಗ್ಗೆ ಈ ಹಿಂದೆ ಮತ್ತು ಈವರೆಗೆ ನಡೆದಿರುವ ಅಧ್ಯಯನಗಳ ವಿವರ ದೊರೆಯುತ್ತವೆ. ಹೆಳವರ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಇವರ ಮೂಲ ಏನು? ಎಂಬುದನ್ನು ತಿಳಿಯಬಹುದಾಗಿದೆ. ಇವರ ಮೂಲ ಮತ್ತು ಪ್ರಸಾರದ ಭಾಗದಲ್ಲಿ ಆಂಧ್ರ ಪ್ರದೇಶದ ಮೂಲವೆಂದು ಇವರ ವೃತ್ತಿಯೇ ಇವರನ್ನು ಜಾತಿಯಾಗಿ ಕಾಲಾನಂತರದಲ್ಲಿ ಜಾತಿಯಾಗಿ ಮಾರ್ಪಟ್ಟ ವಿಚಾರಗಳನ್ನು ಮತ್ತು ಇವರಲ್ಲಿ ಎತ್ತಿನ ಹೆಳವರು, ಗಂಟೆ ಹೆಳವರು, ಚಾಪೆ ಹೆಳವರು, ಹಂದಿ ಹೆಳವರು, ಅಡವಿ ಹೆಳವರು ಮುಂತಾದ ಒಳ ಪಂಗಡಗಳಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಇರುವ ಹೆಳವರ ಜನಸಂಖ್ಯೆಯ ಅಂಕಿ-ಅಂಶಗಳನ್ನು ತಿಳಿಯಲು ಈ ಕೃತಿ ಸಹಾಯಕವಾಗಿದೆ. ಹೆಳವರ ಸ್ಥಳಾವರಣ ಮತ್ತು ಬ್ರಹ್ಮಾಂಡ ಪರಿಕಲ್ಪನೆ, ಬಂಧುತ್ವ, ವಿವಾಹ, ೧೫೦ ಬೆಡಗುಗಳು ಇವರ ಒಳ ಸಂಬಂಧಗಳು ಆಯ್ಕೆ ಪ್ರಕ್ರಿಯೆ, ವಿವಾಹ ಪ್ರಕಾರಗಳು,

ವೈವಾಹಿಕ ಸ್ಥಾನಮಾನ, ಆರಾಧನೆ, ಆಚರಣೆ, ನಂಬಿಕೆ, ಜನನ, ಮರಣ, ಋತುಮತಿ, ಸೀಮಂತ ಕಾರ್ಯ, ಧರ್ಮ ಮತ್ತು ದೈವಗಳು, ಪೂಜಾ ವಿಧಿ–ವಿಧಾನಗಳು, ದೇವದಾಸಿ ಪದ್ಧತಿ, ಒಳಾಡಳಿತ, ಕುಲ ಪಂಚಾಯಿತಿ, ತೀರ್ಮಾನಗಳು, ಆಧುನಿಕ ಜೀವನ, ಕಸುಬು, ಸಾಹಿತ್ಯ ಮತ್ತು ಭಾಷೆ, ಉಡಗೆ ತೊಡುಗೆ ಈ ಸಮಸ್ಯೆ, ಸಂಘಟನೆ, ಪರಿಹಾರ, ಪ್ರದರ್ಶಕ ಕಲೆಗಳು, ಕರ್ನಾಟಕದಲ್ಲಿ ಹೆಳವ ಸಮುದಾಯದ ನೆಲೆಗಳನ್ನು ಜನಸಂಖ್ಯೆ ಇತ್ಯಾದಿ ವಿಷಯಗಳನ್ನು ಈ ಕೃತಿಯಿಂದ ತಿಳಿಯಬಹುದಾಗಿದೆ.

ರಹಮತ್ ತರೀಕೆರ ಅವರ, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯, ನಾಥ ಪರಂಪರೆಯು ಬುಡಕಟ್ಟು ಮೂಲದಿಂದಲೆ ಹುಟ್ಟು ಬೆಳೆದು ಬಂದಿರುವುದು ಎಂಬ ಪರಿಕಲ್ಪನೆ ಈ ಕೃತಿಯಿಂದ ತಿಳಿಯುತ್ತದೆ. ಈ ಕೃತಿಯ ಪ್ರಾರಂಭದಲ್ಲಿ ನಾಥಪರಂಪರೆಯ ವಿಶಾಲಾರ್ಥವನ್ನು ಹೇಳುತ್ತಾ ಭಾರತದ ಇತರೆ ನಾಥಪಂಥದ ನೆಲೆಗಳನ್ನು ಮಾತ್ರ ತಿಳಿಸದ ಪಾಕಿಸ್ಥಾನ, ನೇಪಾಳಗಳಲ್ಲಿ ನಾಥಪಂಥದ ಮೂಲವನ್ನು ತಿಳಿಸುತ್ತಾರೆ. ಕಾಪಾಲಿಕ, ಶಾಕ್ತ, ಬೌದ್ಧ, ಸೂಫಿ ಮತ್ತು ವಚನಕಾರರ ಸಂದರ್ಭ ತತ್ವ ಮತ್ತು ಇತರ ಪಂಥಗಳ ಜೋತೆಗಿನ ಸಂಬಂಧವನ್ನು ತಿಳಿಯಬಹುದು. ಮುಂದುವರಿದಂತೆ ಕದ್ರಿ, ಆದಿಚುಂಚನಗಿರಿ, ನುಂಕೆಮಲೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲೂಕಿನ ವಿಟ್ಲ, ಹಂಡಿ ಬಡಗನಾಥ ಮಠ ಇತರೆ ಕರ್ನಾಟಕದ ನಾಥ ಕೇಂದ್ರಗಳನ್ನು ತಿಳಿಸುತ್ತಾ ಈ ನಾಥ ಪರಂಪರೆ ಮೂಲದಿಂದ ಸಿದ್ಧ ಪರಂಪರೆ ಬೆಳೆದು ಬಂದಿರುವುದನ್ನು ತಿಳಿಸುತ್ತಾರೆ. ಈ ಅಧ್ಯಯನದ ಅಲೆಮಾರಿ ಜೋಗಿ ಸಮುದಾಯ ಮೂಲ ತಿಳಿಸುವಂತಹದ್ದಾಗಿದು. ನುಂಕಮಲೆ ಸಿದ್ದೇಶ್ವರ, ವದ್ದೀಕೆರೆ (ಸಿದ್ದಪ್ಪ), ಚಿತ್ರದುರ್ಗ ಬೆಟ್ಟದಲ್ಲಿರುವ ಸಂಪಿಗೆ ಸಿದ್ದೇಶ್ವರ, ಉಪನಾಯಕನಹಳ್ಳಿ ಸಿದ್ದೇಶ್ವರ ಇತರೆ ನಾಥ ಪರಂಪರೆಯ ಆರಾದ್ಯದೈವಗಳೆಂದು ಜೋಗಿ ಸಮುದಾಯದ ಮೂಲದಲ್ಲಿ ಈ ದೇವಾಲಯಗಳು ಅಧೀನದಲ್ಲಿದ್ದವು. ಆದರೆ ಈ ಜಿಲ್ಲೆಯ ಪ್ರಭಾವಿ ಬುಡಕಟ್ಟು ಸಮುದಾಯ ಕಾಡುಗೋಲ್ಲ ಬುಡಕಟ್ಟು ಸಮುದಾಯಕ್ಕೆ ವದ್ದಿಕೆರೆ ಸಿದ್ದಪ್ಪನ ದೇವಾಲಯ ವಶವಾಗಿದೆ. ನುಂಕೆಮಲೆ ಸಿದ್ದಪ್ಪನ ದೇವಾಲಯ ಮ್ಯಾಸಬ್ಯಾಡರ ಅದಿನದಲ್ಲಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತಾ. ನಾಥ ಪರಂಪರೆಗೂ ಮತ್ತು ಚಿತ್ರದುರ್ಗ ಜಿಲ್ಲೆಯ ಇತರೆ ಬುಡಕಟ್ಟು ಸಮುದಾಯಗಳೊಂದಿಗೆ ಸಂಬಂಧವನ್ನು ತಿಳಿಸುತ್ತಾರೆ. ನಾಥ ಪಂಥದ ಕಲಾ ರೂಪಗಳು ಮತ್ತು ಸಮುದಾಯಗಳು ಸಾಹಿತ್ಯದಲ್ಲಿ ನಾಥ ಪಂಥದ ನಿಲುವುಗಳು ಮತ್ತು ಆಸ್ಮಿತೆಯ ಹುಡುಕಾಟದಲ್ಲಿ ಜೋಗಿ ಸಮುದಾಯ ಇತ್ಯಾದಿ ವಿಚಾರಗಳನ್ನು ಈ ಕೃತಿಯಲ್ಲಿ ತಿಳಿದು ಬರುವುದರಿಂದ ಅಧ್ಯಯನಕ್ಕೆ ಪ್ರಮುಖವಾದ ಆಕರವಾಗಬಹುದಾದ ಕೃತಿಯಾಗಿದೆ.

ಡಾ. ಎ ಎಸ್ ಪ್ರಭಾಕರ ಅವರ, ಹೆಳವರು, ಅಲೆಮಾರಿ, ಅರೆ–ಅಲೆಮಾರಿ ಸಮುದಾಯಗಳ ಅಧ್ಯಯನ, ಪ್ರಸರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೧೦. ಈ ಕೃತಿಯ ಪ್ರಾರಂಭದ ಅಧ್ಯಯನದಲ್ಲಿ ಅಲಕ್ಷಿತ ಸಮಾಜದ ಅಧ್ಯಯನಗಳನ್ನು ಚರಿತ್ರೆಯೊಳಗೆ ನಡೆಯದೆ ನಿರ್ಲಕ್ಷಿಸಿದ ಬಗ್ಗೆ ತಿಳಿಸುತ್ತಾರೆ. ಆಳುವ ವರ್ಗ, ಶ್ರಮ ಸಂಸ್ಕೃತಿಯನ್ನು ಬಲಿ ಪಡೆಯುತ್ತಾ ಒಂದು ಅಸಹಾಯಕ

ಬದುಕನ್ನು ನಿರ್ಮಾಣ ಮಾಡಿರುವುದು ಮತ್ತು ಒಂದು ದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐಕ್ಯತೆಗಳು ಸಾಧಿತವಾಗುವುದು ಶ್ರಮಿಕರಿಂದಲೇ ಆದರೆ ಇಂತಹ ಶ್ರಮಿಕ ವರ್ಗವನ್ನೇ ಚರಿತ್ರೆ ಕಡೆಗಣಿಸಿರುವುದು ವಿಷಾದ ಎಂಬ ವಿಷಯವು ತಿಳಿಯುತ್ತದೆ. ಹೆಳವರೆಂದರೆ ಯಾರು? ಎಂಬ ಪ್ರಶ್ನೆಗೆ ಈ ಕೃತಿಯಲ್ಲಿ ತಾರ್ಕಿಕವಾದ ವಿವರಗಳು ಅಥವಾ ಉತ್ತರಗಳು ದೊರೆಯುತ್ತವೆ. ವಿದ್ವಾಂಸರ ಅಭಿಪ್ರಾಯಗಳು ಹೆಳವ ಸಮುದಾಯ ಕುರಿತು ಇರುವ ಹದಿನಾಲ್ಕು ಪುರಾಣಗಳ ಆಧಾರಗಳನ್ನು ಮತ್ತು ಎರಡು ಮೌಖಿಕ ಕಥೆಗಳನ್ನು ತಿಳಿಸಿ ಅಭಿಜಾತ ಪರಂಪರೆಯಲ್ಲಿ ಸಮುದಾಯವನ್ನು ಗುರುತಿಸಿದ ಮೌಖಿಕ ಪರಂಪರೆಯ ಒಳಗೆ ಸಮುದಾಯವನ್ನು ಗುರುತಿಸುವುದು ಉತ್ತಮ ಆಧಾರವಾದ ಕೃತಿಯಾಗಿದೆ. ಈ ಕೃತಿಯಲ್ಲಿ ಮುಂದುವರೆದಂತೆ ಹೆಳವ ಸಮುದಾಯದ ಸಾಮಾಜಿಕ ಸ್ಥಾನ-ಮಾನ ಅಥವಾ ಸ್ಥಿತಿಗತಿಗಳನ್ನು ತಿಳಿಸುತ್ತಾ ಈ ಭಾಗದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಇಟ್ಟುಕೊಂಡು ಸಾಮಾಜಿಕ ಸಂರಚನೆಯನ್ನು ತಿಳಿಯಬಹುದಾಗಿದೆ. ಇವರ ಉಪಪಂಗಡಗಳನ್ನು ಇದುವರೆಗೆ ನಡೆದ ಅಧ್ಯಯನದ ಹಿನ್ನೆಲೆಯ ಒಳಗಡೆ ತಿಳಿಸಲು ಪ್ರಯತ್ನಿಸುತ್ತಾರೆ ಮತ್ತು ಹೆಳವ ಸಮುದಾಯದ ಬಳಿಗಳು ಅಥವಾ ಬೆಡಗುಗಳನ್ನು ತಿಳಿಯಬಹುದಾಗಿದೆ. ಹಾಗೆಯೇ ವರ್ತಮಾನದಲ್ಲಿ ಹೆಳವರ ಸಾಮಾಜಿಕ ಸ್ಥಾನಮಾನಗಳು, ಆರ್ಥಿಕ ಸ್ಥಿತಿಗತಿ, ಬಿಕ್ಕಟ್ಟುಗಳು, ಸಾಕ್ಷರತೆ ಹೆಳವರ ವಾಸದ ನೆಲೆಗಳು ಇತ್ಯಾದಿ ವಿಷಯಗಳನ್ನು ಈ ಕೃತಿಯಿಂದ ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಹಕಾರಿಯಾದ ಕೃತಿಯಾಗಿದೆ.

ಡಾ. ಗಂಗಾಧರ ದೈವಜ್ಞ, ಗೊಂದಲಿಗರು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧, ಈ ಕೃತಿಯಲ್ಲಿ ಗೊಂದಲಿಗರ ಹಿನ್ನೆಲೆ ಮತ್ತು ಇವರು ಮಹಾರಾಷ್ಟ್ರ ಮೂಲದವರಾದರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚಾಗಿ ಕೆಲವು ಜಿಲ್ಲೆಗಳಲ್ಲಿ ಕಡಿಮೆಯಾಗಿ ನೆಲೆಸಿರುವುದಲ್ಲದೆ. ಇವರಲ್ಲಿ ಹಲವಾರು ಉಪ ಪಂಗಡಗಳಿಂದ ಅಥವಾ ಪರಿಭಾಷೆಗಳಿಂದ ಅಥವಾ ವೃತ್ತಿಗಳಿಗೆ ಅನುಗುಣವಾಗಿ ಗೊಂದಲಿ ವೃತ್ತಿ ಗಾಯಕರು ಕಥೆಗಾರರು ಮತ್ತು ಬೀದಿ ಹಾಡುಗಾರರು ಭೊತೇಯರು (ಎಣ್ಣೆಜೋಗಿಗಳು), ಸಿಂಗದವರು, ಬುಡಬುಡಕೆಯವರು, ವಾಸುದೇವರು, ಜೋತಿಷಿಗಳು (ಹಸ್ತಮುದ್ರಿಕೆ ಮತ್ತು ಗಿಳಿಶಾಸ್ತ್ರ) ಎಂದು ಕರೆಯಲಾಗುತ್ತದೆ ಎಂದು ಮತ್ತು ಇವರಲ್ಲಿರುವ ಬುಡಕಟ್ಟು ಲಕ್ಷಣಗಳನ್ನು ಆಚರಣೆ, ವೇಷಭೂಷಣ, ಉಡುಗೆ-ತೊಡುಗೆ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು, ಆಚರಣೆ, ವೇಷಭೂಷಣ, ಉಡುಗೆ-ತೊಡುಗೆ ಮತ್ತು ಅಲೆಮಾರಿ ಸಮುದಾಯದ ಸಾಮಾಜಿಕ ಹಾಗೂ ಅವರ ಮೌಖಿಕ ಚರಿತ್ರೆಯನ್ನು ತಿಳಿಸುವುದ್ದರಿಂದ ಈ ಅಧ್ಯಯನಕ್ಕೆ ಪ್ರಮುಖ ಆಕರವಾಗಿದೆ.

ಡಾ. ಪಿ ಕೆ ರಾಜಶೇಖರ ಅವರ, ಕರ್ನಾಟಕದ ಜನಪದ ವೃತ್ತಿಗಾಯಕರು. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮಾನಸ ಗಂಗೋತ್ರಿ, ಮೈಸೂರು, ೨೦೧೧, ಈ ಕೃತಿಯಲ್ಲಿ ಐವತ್ತೈದಕ್ಕೂ ಹೆಚ್ಚು ವೃತ್ತಿ ಗಾಯಕ ಸಮುದಾಯಗಳನ್ನು ಬೆಳಕಿಗೆ ತಂದಿದ್ದಾರೆ. ಬಹುತೇಕ ವೃತ್ತಿ ಗಾಯಕ ಪರಂಪರೆಯ ಕಲಾವಿದರು ಹಾಡುವುದನ್ನು ತಮ್ಮ ಜೀವನಕ್ಕಾಗಿ ಎಂದು ಪರಂಪರೆ

ರೂಪಿಸಿದ ನಿಯಮಗಳಿಗೆ ಅನುಗುಣವಾಗಿ ಇಂದಿಗೂ ಬೇರೆಯವರ ಶ್ರೇಯವನ್ನು ಬಯಸಿ, ಕೊಂಡಂಡಿ ಜೀವನವನ್ನು ಸಾಗಿಸುತ್ತಿರುವುದನ್ನು ಕಾಣಬಹುದಾಗಿದೆ. ಇವರಲ್ಲಿ ಧಾರ್ಮಿಕ ವೃತ್ತಿ ಗಾಯಕರು ಮತ್ತು ಲೌಕಿಕ ವೃತ್ತಿಗಾಯಕರೆಂದು ವಿಭಾಗಿಸಲಾಗಿದೆ. ಧಾರ್ಮಿಕ ವೃತ್ತಿ ಗಾಯಕರಲ್ಲಿ ಈ ಅಧ್ಯಯನಕೊಳ್ಳಪಟ್ಟ ಸಮುದಾಯಗಳಿಂದ ಜೋಗಿ ಸಂಬಂಧಿಕ ಪರಂಪರೆಯ ಸಂವಾದಿ ಸಮುದಯಗಳಾದ ಕಿನ್ನರಿ ಜೋಗಿಗಳು, ಚುಂಚನಗಿ ಜೋಗಿಗಳು, ಎಣ್ಣೆ ಜೋಗಿಗಳು ಮತ್ತು ಗೊಂದಲಿಗರು ಭೊತೇರರು, ಸಮುದಾಯಗಳ ಬಗ್ಗೆ ವಿವರಗಳಿವೆ ಹಾಗೆಯೇ ಲೌಕಿಕ ವೃತ್ತಿಗಾಯಕರಲ್ಲಿ ದೊಂಬಿದಾಸರು. ಇವರ ಮೂಲವನ್ನೆ ಹೊಂದಿರುವ ತೆಲುಗು ಜಂಗಮರು, ತೆಲುಗು ಬಣ ಜಿಗರು ಮತ್ತು ಬುರ್ರ ಕಥಾಗಾಯಕ ಸಮುದಾಯಗಳ ಬಗ್ಗೆ ವಿವರಗಳನ್ನು ತಿಳಿಯ ಬಹುದಾಗಿದ್ದು ಮೌಖಿಕ ಪರಂಪರೆ ಬದುಕಿನ ಸಂಸ್ಕೃತಿಯನ್ನು ತಿಳಿಸುವುದರಿಂದ ಈ ಕೃತಿಯು ಅಧ್ಯಯನಕ್ಕೆ ಪ್ರಮುಖವಾದ ಆಕಾರವಾಗಬಲ್ಲದಾಗಿದೆ.

ನಾಗರತ್ನ ಹೆಚ್.ಎಸ್.(ಸಂ), ಡಾ. ಚಲುವರಾಜು, (ಲೇಖಕರು), ಕನ್ನಡ ಜನಪದ ಮಹಾಕಾವ್ಯಗಳ ಪರ್ಯಾಯ ವಿವೇಚನೆ, ಗಣಪತಿ ಲೇಹೌಟ್, ಶಿವಮೊಗ್ಗ, ೨೦೧೧. ಕನ್ನಡ ಜನಪದ ಮಹಾಕಾವ್ಯಗಳ ಪರ್ಯಾಯ ವಿವೇಚನೆ ಎಂಬ ಸಂಶೋಧನಾ ಮಹಾಪ್ರಬಂಧ ಕೃತಿಯಾಗಿದೆ. ಈ ಕೃತಿಯಲ್ಲಿ ಅಧ್ಯಯನದ ದೃಷ್ಟಿಯಿಂದ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಗಳನ್ನು ಕುರಿತು ತಿಳಿಸಲಾಗಿದೆ. ಈ ಕೃತಿಯು ಭಾರತೀಯ ಮಹಾಕಾವ್ಯಗಳು ಎಂಬ ಶಿರ್ಷಿಕೆಯಡಿಯಲ್ಲಿ ಮಹಾಕಾವ್ಯಗಳ ಸ್ವರೂಪವನ್ನು ಶಿಷ್ಟ ಮತ್ತು ಜನಪದ ಮಹಾಕಾವ್ಯಗಳ ಕುರಿತು ಚರ್ಚಿಸಲಾಗಿದೆ. ಜನಪದ ಮಹಾಕಾವ್ಯಗಳ ನಾಯಕರುಗಳು ಎಂಬ ವಿಷಯದಡಿಯಲ್ಲಿ ಪ್ರಮುಖವಾಗಿ ಮಲೆ ಮಾದೇಶ್ವರನ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ. ಅನಾಥನಾದ ಮಾದೇಶ್ವರನು ಅನೇಕ ಮಠಗಳನ್ನು ಅಲೆದು ಅಲ್ಲಿನ ಅನ್ಯಾಯಗಳನ್ನು ಕಂಡು ಸಿಡಿದೆದ್ದು ಮಾದಿಗನೆಂಬ ಜಾತಿ ನಿಂದನೆಯ ಕಾರಣದಿಂದ ತಾನು ಒಂದು ನೆಲೆಯನ್ನು ಕಂಡುಕೊಳ್ಳಬೇಕೆಂಬ ಆಸೆಯಿಂದ ಎಪ್ಪತ್ತೇಳು ಮಲೆಯ ನಿಗೂಢ ಅರಣ್ಯದಲ್ಲಿ ನೆಲೆಯನ್ನು ರೂಪಿಸಿಕೊಂಡ ಮಾದೇಶ್ವರ ಅಲ್ಲಿಂದ ತನ್ನ ಒಕ್ಕಲುಗಳನ್ನು ಪಡೆದುಕೊಳ್ಳುವ ಪ್ರಯತ್ನದ ಸಫಲತೆಯನ್ನು ಕಾಣುತ್ತಾನೆ ಮತ್ತು ತನ್ನ ಒಕ್ಕಲುಗಳನ್ನು ಹೆಚ್ಚಿಸಿಕೊಂಡು ಒಬ್ಬ ಪವಾಡ ಪುರುಷನಾದ ಬಗೆಯನ್ನು ಈ ಅಧ್ಯಾಯದಲ್ಲಿ ತಿಳಿಯಬಹುದಾಗಿದೆ.

ಮಂಟೇಸ್ವಾಮಿ ಹನ್ನೆರಡನೆಯ ಶತಮಾನದ ಶಿವಶರಣರ ಕಾಯಕತತ್ವ, ಜಾತ್ಯಾತೀತ, ಸಮಾಜ, ಆರ್ಥಿಕ, ಧಾರ್ಮಿಕ ಕ್ರಾಂತಿ, ಸಮಾನತೆಯಂತಹ ಅಶಯಗಳಿಗೆ ಹೊಸ ಬೆಳಕನ್ನು ಚೆಲ್ಲಿದ ಬಗೆಯನ್ನು ಮಂಟೆಸ್ವಾಮಿ ಕಾವ್ಯ ಚಿತ್ರಿಸುತ್ತದೆ. ಮಲೆಮಾದೇಶ್ವರ ಒಕ್ಕಲುಗಳನ್ನು ಪಡೆಯುವಲ್ಲಿ ಯಶಸ್ವಿಯಾದರೆ, ಮಂಟೇಸ್ವಾಮಿ ಶಿಶು ಮಗನಾದ ಸಿದ್ದಪ್ಪಾಜಿಯನ್ನು ಸಂಪಾದಿಸುವಲ್ಲಿ ಸಫಲತೆ ಕಾಣುತ್ತಾನೆ. ಅದೇ ರೀತಿ ಈ ಕೃತಿಯಲ್ಲಿ ಕಾಡುಗೊಲ್ಲರ 'ಜುಂಜಪ್ಪ'ನ ಪಾತ್ರವು ಈ ಕಾಡುಗೊಲ್ಲ ಸಮುದಾಯದಲ್ಲಿ ಯಾವ ರೀತಿ ಸಾಂಸ್ಕೃತಿಕ ನಾಯಕನಾಗಿ ಚಿತ್ರಿತನಾಗಿದ್ದಾನೆ ಎಂಬುದನ್ನು ತಿಳಿಯಬಹುದಾಗಿದೆ.

ಇದೇ ಅಧ್ಯಾಯದಲ್ಲಿ ಮುಂದುವರೆದು ಮೈಲಾರಲಿಂಗನ ಪಾತ್ರವು ಮೈಲಾರಲಿಂಗನ ಕಾವ್ಯದಲ್ಲಿ ಚಿತ್ರಿತವಾದ ಒಬ್ಬ ಸಾಂಸ್ಕೃತಿಕ ನಾಯಕನಾಗಿ ಬಿಂಬಿತವಾದ ಬಗೆಯನ್ನು ತಿಳಿಬಹುದಾಗಿದೆ. ಮಾಳಿಂಗರಾಯನು ದನಗಾಹಿಯಾಗಿದ್ದು, ತನ್ನ ತಂದೆಯಾದ ಸೋಮರಾಯನನ್ನು ಸಾಯಿಸಿದ ಏಳುನೂರು ಬೇಡರತಲೆಗಳನ್ನು ಕತ್ತರಿಸಿ ರುದ್ರಗಟ್ಟಿ ಕಟ್ಟಿ ಚಕ್ರಗಟ್ಟಿಯ ಮೇಲೆ ನಿಂತು ಭವಿಷ್ಯ ಹೇಳಿದ ಬಗೆಯನ್ನು ಒಳಗೊಂಡ ಕತೆಯೇ ಮಾಳಿಂಗರಾಯನ ಕಾವ್ಯದ ತಾತ್ವಿಕ ನಿಲುವಾಗಿದೆ.

ಮ್ಯಾಸಬೇಡರ ಕಥನಗಳ ನಾಯಕರುಗಳಾದ ಗಾದ್ರಿಪಾಲನಾಯಕ, ಜಗಳೂರಜ್ಜ ಮತ್ತು ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯರ ಪಾತ್ರಗಳನ್ನು ಕುರಿತು ಚರ್ಚಿಸಲಾಗಿದೆ. ಗಾದ್ರಿಪಾಲನಾಯಕನು ಒಬ್ಬ ದನಗಾಹಿಯಾಗಿದ್ದು ದನಗಳ ರಕ್ಷಣೆಗೋಸ್ಕರ ಹುಲಿಗಳೊಂದಿಗೆ ಮಾಡಿಕೊಂಡಿದ್ದ ಸಂಧಾನ ವಿಫಲವಾಗಿ ಗಾದ್ರಿಪಾಲನಾಯಕನಿಗೂ ಹುಲಿಗಳಿಗೂ ನಡೆದ ಯುದ್ಧದ ಪ್ರಕೃತಿಯ ವೈಚಿತ್ರ್ಯದ ವರ್ಣನೆಯೇ ಗಾದ್ರಿಪಾಲನಾಯಕನ ಪಾತ್ರದ ಸಾರಾಂಶವಾಗಿದೆ.

ಐತಿಹಾಸಿಕ ವ್ಯಕ್ತಿಯಾಗಿ ಚಿತ್ರಿತವಾಗಿರುವ ಕುಮಾರರಾಮನ ಸದ್ಗುಣ, ಚಾರಿತ್ರ್ಯಗಳಿಗೆ ಹೆಸರುವಾಸಿಯಾಗಿದವನು ಇಂದಿಗೂ ಜನಮನದಲ್ಲಿ ಪೂಜನೀಯನಾಗಿರುವ ಕುಮಾರರಾಮನು ಜನಪದ ಮಹಾಕಾವ್ಯದಲ್ಲಿ ಚಿತ್ರಿತವಾಗಿರುವುದರ ಬಗ್ಗೆ ತಿಳಿಯಬಹುದಾಗಿದೆ. ಹಾಗೆಯೇ ಇದೇ ಸಂಪುಟದ ಎರಡನೇಯ ಮಹಾಕಾವ್ಯ ಕೃಷ್ಣಗೊಲ್ಲರ ಸಾಂಸ್ಕೃತಿಕ ನಾಯಕನಾದ ಶರಬಂಧ ರಾಜನ ಪಾತ್ರವನ್ನು ಮೂರು ತಲೆಮಾರಿನ ಈ ಕಾವ್ಯದಲ್ಲಿ ಕೃಷ್ಣ ಗೊಲ್ಲರ ಮಾಹಾನಾಯಕನೆಂದೇ ಚಿತ್ರಿಸಲಾಗಿದೆ. ಮುಂದುವರೆದು ಈ ಕೃತಿಯಲ್ಲಿ ಮಹಾಕಾವ್ಯಗಳ ನಾಯಕಿಯರು ಎಂಬ ಶಿರ್ಷಿಕೆಯಲ್ಲಿ ಸಂಕಮ್ಮ, ಬೇವಿನಕಟ್ಟೆ ಕಾಳಮ್ಮ, ಇಕ್ಕೇರಿಯ ದೇವಮ್ಮ, ಮರಿದೇಶ್ವರನ ತಾಯಿ ಉತ್ರಾಜಮ್ಮ, ಸಿರಿಯ ಪಾತ್ರಗಳ ಸಾಂಸ್ಕೃತಿಕ ಸಂಘರ್ಷಗಳನ್ನು ಕಾಣಬಹುದಾಗಿದೆ.

ಸಿದ್ಲಿಂಗಪ್ಪ ಎಸ್ ಹುರಕಡ್ಲಿ ಅವರ, ಗೊಂದಲಿಗರು ಮತ್ತು ಆಧುನಿಕ ಮುಖಾಮುಖಿ, ಎಂಬ ಈ ಪಿಎಚ್.ಡಿ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೨ರಲ್ಲಿ ಸಲ್ಲಿಸಲಾಗಿದೆ, ಇದರಲ್ಲಿ ಗೊಂದಲಿಗರ ಹಿನ್ನಲೆ, ಸಾಮಾಜಿಕ ಜೀವನ, ವರ್ತಮಾನ ಹಾಗೂ ವಾರ್ಷಿಕಾವರ್ತನ ಆಚರಣೆಗಳು, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿ, ಆಧುನಿಕತೆ ಮತ್ತು ಗೊಂದಲಿಗರ ಸಮುದಾಯದ ಸಂಘಟನೆ ಹಾಗೂ ಸಮಸ್ಯೆಗಳನ್ನು ಕುರಿತು ಸವಿವರವಾಗಿ ವಿಶ್ಲೇಷಿಸಲಾಗಿದೆ. ಗೊಂದಲಿಗರ ಕಥನ ಸಾಹಿತ್ಯದ ಪರಂಪರೆ, ಸಾಂಸ್ಕೃತಿಕ ಅಸ್ತಿತ್ವದ ಹಿನ್ನೆಲೆಯಲ್ಲಿ ಸಮುದಾಯದ ಗೊಂದಲಿಗರ ಜೀವನ, ಗೊಂದಲದ ವಿಧಾನಗಳು, ಶೈಲಿ, ಕುಟುಂಬ, ನಂಬಿಕೆಗಳು, ಕಲೆಯ ಪ್ರದರ್ಶನ ವಿಧಾನಗಳು ಇತ್ಯಾದಿ ವಿಚಾರಗಳನ್ನು ಈ ಕೃತಿ ಸಾಂಸ್ಕೃತಿ ನೆಲೆಗಟ್ಟಿನಲ್ಲಿ ಸಮುದಾಯದ ಕಲಾ ಪರಂಪರೆಯ ಜೀವನವನ್ನು ದಾಖಲಿಸುತ್ತದೆ.

ಬಾಲಗುರುಮೂರ್ತಿ ಅವರ, ಅಲೆಮಾರಿ ಬುಡಕಟ್ಟುಗಳ ಆತ್ಮಕಥನಗಳು, ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ೨೦೧೩ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಮಹಾಪ್ರಬಂಧದಲ್ಲಿ

ಅಲೆಮಾರಿ ಬುಡಕಟ್ಟುಗಳ ಆತ್ಮಕಥೆಗಳಲ್ಲಿ ಬಹುರೂಪಿ ಬದುಕನ್ನು ಸಮುದಾಯಗಳು ಸೃಷ್ಟಿಸಿಕೊಂಡತಂಹ ಮೌಖಿಕ ಸಾಹಿತ್ಯ ಪ್ರಕಾರಗಳಾದ ಸೃಷ್ಟಿ-ಪುರಾಣಗಳು, ಕಥನ-ಕಾವ್ಯಗಳು, ಕಥೆಗಳು, ಮಹಾಕಾವ್ಯಗಳು ಆತ್ಮಕಥನಗಳ ಸ್ವರೂಪದಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳಾದ ಡೊಂಬರು, ಹೆಳವರು, ಹಕ್ಕಿಪಿಕ್ಕಿಯರು, ಸಿಳ್ಳೆಕಾತರು, ಸುಡ್ಡಗಾಡು ಸಿದ್ಧರು, ಗೋಂದಲಿಗ, ಬುಡ್ಗಜಂಗಮರು ಇತರೆ ಸಮುದಾಯಗಳಲ್ಲಿರುವ ಮೌಖಿಕ ಸಾಹಿತ್ಯವು ಅವರ ಬದುಕಿನೊಂದಿಗೆ ಅನುಸಂದನಿಸಿದ ಸ್ವರೂಪವನ್ನು ವಿಶ್ಲೇಷಣೆಗೊಳಪಡಿಸಿಕೊಳ್ಳಲಾಗಿದೆ.

ಅಲೆಮಾರಿ ಬುಡಕಟ್ಟು ಆತ್ಮಕಥನಗಳು ಅವರ ಜೀವನ ಸಂವೇಧನೆಯೊಂದಿಗೆ ಆದೇ ಸಮುದಾಯದಲ್ಲಿ ಹುಟ್ಟಿ ಶಿಕ್ಷಿತರಾಗಿ ತಮ್ಮ ಬದುಕಿನ ಹಿನ್ನೋಟವೆಂಬತೆ ಮಾರ್ಕ್ಸ್, ಅಂಬೇಡ್ಕರ್, ಫುಲೆ, ಪೆರಿಯಾರ್ ಮೊದಲಾದ ಹೋರಾಟಗಾರ ಪ್ರಭಾವದಿಂದ ಅಲೆಮಾರಿ ಆತ್ಮಕಥನಗಳು ಬಹುತೇಕವಾಗಿ ರಚಿತವಾಗಿವೆ. ಮರಾಠಿಯ ಮಲ್ಲಾರಿ ಸಾಬ್ ಮೊರೆ, ಬಾಳಕೃಷ್ಣ ರೇಣುಕೆ, ಲಕ್ಷ್ಮಣ್ ಮಾನೆ, ಲಕ್ಷ್ಮಣ ಗಾಯಕವಾಡ ಇವರು ಅಲೆಮಾರಿ ಸಮುದಾಯಗಳ ದಲಿತ ಪ್ರಜ್ಞೆಯಿರುವ ಆತ್ಮಕಥನಗಳನ್ನು ರಚಿಸಿದ್ದಾರೆ. ಗಭಾಳ, ಉಚಲ್ಯ, ಅಲೆಮಾರಿಯ ಅಂತರಂಗ, ಬಯಲ ಬೆನ್ನೇರಿ, ಅಕ್ಕರಮಾಶಿ, ಗೊಂದಲಿಗ್ಯಾ, ಅಕ್ರಮ ಸಂತಾನ, ಬುಡ್ಗನಾದ ಆತ್ಮಕತೆಗಳನ್ನು ಅಲೆಮಾರಿ ಸಮುದಾಯಗಳ ಬದುಕಿನೊಂದಿಗೆ ವಿಶ್ಲೇಷಣೆಗೊಳಪಡಿಸಿಕೊಳ್ಳಲಾಗಿದೆ.

ಅಲೆಮಾರಿ ಸಮುದಾಯಗಳ ಮೌಖಿಕ ಧಾರೆ ಮತ್ತು ಲಿಖಿತ ಧಾರೆಗಳ ಸಾಹಿತ್ಯವು ಸಾಮಾಜಿಕ ಅಭಿವ್ಯಕ್ತಿಗಳಲ್ಲಿ ವ್ಯಕ್ತವಾಗಿರುವ ಸಮುದಾಯಿಕ ಅಶೆಯಗಳನ್ನು ಮತ್ತು ಅವುಗಳ ವೈರುಧ್ಯಗಳನ್ನು ಅನಾವರಣಗೋಳಿಸಲಾಗಿದೆ. ವ್ಯಕ್ತಿ ಕೇಂದ್ರಿತ ಅಭಿವ್ಯಕ್ತಿಯ ಸಮುದಾಯಿಕ ಆಶಯಗಳನ್ನು ನಿರೂಪಿಸಿದ ಸಮುದಾಯಗಳ ಸಾಂಸ್ಕೃತಿಕ ಪಾತ್ರಗಳನ್ನು ವಿಶ್ಲೇಷಿಸುತ್ತಾ ಅವರ ಸಾಂಸ್ಕೃತಿಕ ಸಂಘರ್ಷಗಳನ್ನು ತಿಳಿಸುತ್ತಾರೆ. ಈ ವಿವೇಚನೆ ವ್ಯಕ್ಯವಾಗಿರುವುದು ಬಹುತೇಕ ಮೌಖಿಕ ನೆಲೆಯಲ್ಲಿ. ಇನ್ನೂ ವೈರುಧ್ಯಗಳ ಅನಾವರಣದಲ್ಲಿ ಶಿಷ್ಟವಾಗಿ ರಚಿತವಾಗಿರುವ ಕೇಲವು ಆತ್ಮಕಥಗಳು ಸಾಮಾಜಿಕ ಅಭಿವ್ಯಕ್ತಿ ನೆಲೆಯಲ್ಲಿ ಅಲೆಮಾರಿ ಬುಡಕಟ್ಟು ಕಥನಗಳ ಸೃಷ್ಟಿಯ ಹಿಂದಿನ ತುಡಿತದ ನೆಲೆಗಳನ್ನು ಈ ಮಹಾ ಪ್ರಬಂಧದಲ್ಲಿ ತಾತ್ವಿಕವಾಗಿ ಅಧ್ಯಯನಕ್ಕೆ ಒಳಪಡಿಸಿಕೋಳ್ಳಲಾಗಿದೆ. ಅದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಈ ಮಹಾ ಪ್ರಂಬಧದವು ಉತ್ತಮ ಅಕಾರವಾಗಿದೆ.

ಮೇಘರಾಜ ಜಿ ಅವರ, ಹಂಡಿಜೋಗಿಗಳ ಸಂಸ್ಕೃತಿ ಮತ್ತು ಭಾಷೆ, (ಬಳ್ಳಾರಿ, ದಾವಣಗೆರೆ ಮತ್ತು ಚಿತ್ರದುರ್ಗ ಪ್ರದೇಶದಲ್ಲಿ ನೆಲೆಸಿರುವ ಪ್ರಧಾನವಾಗಿ ಹಂಡಿಜೋಗಿ ಸಮುದಾಯದ ನೆಲೆಗಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ೨೦೧೭ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಮಹಾಪ್ರಬಂಧದಲ್ಲಿ ಹಂಡಿಜೋಗಿ ಸಮುದಾಯದ ಮೂಲ ಪೌರಾಣಿಕ, ಜನಪದ ಹಿನ್ನೆಲೆಗಳಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ. ಬದುಕು, ಭಾಷೆ, ವೃತ್ತಿ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಜೀವನ, ಆಚರಣೆಗಳು ಇತ್ಯಾದಿಗಳನ್ನು ತಿಳಿಸುವ ಪ್ರಮುಖ ಕೃತಿಯಾಗಿದೆ.

ದಾಸರ ಪ್ರತಿಭಾ ಅವರ, ಚೆನ್ನದಾಸರ ಸಾಹಿತ್ಯ: ಅಲೆಮಾರಿ ಸಂಕಥನ, ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ೨೦೧೮ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಮಹಾಪ್ರಬಂಧದಲ್ಲಿ ಚೆನ್ನದಾಸ ಸಮುದಾಯದ ಮೌಖಿಕ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸಿಲಾಗಿದೆ. ಮೌಖಿಕ ಸಾಹಿತ್ಯದ ಪ್ರಕಾರಗಳಾದ ತತ್ವಪದಗಳು, ಲಾವಣಿಗಳು, ಗಾದೆಗಳು, ಕಥನ ಕಾವ್ಯಗಳು ಮತ್ತು ಬಯಲಾಟಗಳನ್ನು ತಿಳಿಸುವುದರ ಜೋತೆಗೆ ಅವುಗಳನ್ನು ತಾತ್ವಿಕವಾಗಿ ವಿಶ್ಲೇಷೆಣೆಗೊಳಪಡಿಸಿಕೊಳ್ಳವುದರ ಮೂಲಕ ಸಮುದಾಯವು ಸಾಹಿತ್ಯ ಮತ್ತು ಕಲೆಗಳೊಂದಿಗೆ ಜೀವನ ನಿರ್ವಹಿಸುವ ಸಂಬಧಾಂತರಗಳನ್ನು ತಿಳಿಸಿಕೊಡಲಾಗಿದೆ. ಅಲ್ಲದೆ ಅವರ ಭಾಷೆ, ಜೀವನ ವಿಧಾನ, ಆಹಾರ ಪದ್ಧತಿ, ವೇಷಭೂಷಣಗಳು, ಸಮುದಾಯದ ಒಳಡಾಳಿತ ವ್ಯವಸ್ಥೆ, ಕುಲಬಳಿಗಳು, ಸಮುದಾಯದಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನಗಳು, ಅಚಾರಣೆಗಳು ಇತ್ಯಾದಿ ವಿಚಾರಗಳನ್ನು ಮಹಾ ಪ್ರಂಬಧದಲ್ಲಿ ತಿಳಿಸಿಕೊಂಡವುದರ ಜೊತೆಗೆ ಆಧುನೀಕ ಸಂದರ್ಭದಲ್ಲಿ ಅವರ ವೃತ್ತಿಗಳು ತಲ್ಲಣಕ್ಕೊಳಪಟ್ಟಿದೆಂಬುದನ್ನು ತಿಳಿಸಿಕೊಡಲಾಗಿದೆ. ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನಕ್ಕೊಳಪಟ್ಟಿರುವ ಚೆನ್ನದಾಸ ಸಮುದಾಯದ ಜೋತೆಗೆ ದೊಂಬಿದಾಸರ ಸಮುದಾಯ ಬಾಂಧ್ಯವನ್ನು ಹೊಂದಿರಿವುದರಿಂದ ಈ ಅಧ್ಯಯನವು ಪೂರಕವಾಗಿದೆ.

ಒಟ್ಟಾರೆ ಈ ಮೇಲಿನ ಕೃತಿಗಳಲ್ಲಿ ಜನಪದ ಮಹಾಕಾವ್ಯಗಳು ಕೇವಲ ಸಾಹಿತ್ಯ ಕಥನಗಳೆಂದು ಭಾವಿಸದೇ ಅವುಗಳ ಪರ್ಯಾಯವನ್ನು ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕತೆಯ ಹಿನ್ನೆಲೆಯಲ್ಲಿ ಈ ಸಂಶೋಧನಾ ಪ್ರಬಂಧದ ಮೂಲಕ ತಿಳಿಯಬಹುದಾಗಿದೆ ಹಾಗೂ ಮೌಖಿಕ ಸಾಹಿತ್ಯದ ಅಧ್ಯಯನವೇ ಪ್ರಸುತ್ತ ಸಂಶೋಧನೆಯ ವಿಷಯವಾಗಿರುವುದರಿಂದ ಈ ಕೃತಿಗಳು ಅಧ್ಯಯನಕ್ಕೆ ಸಹಕಾರಿಯಾಗಿದೆ.

ಕೊನೆ ಟಿಪ್ಪಣಿ

೧. ಜೀ.ಶಂ. ಪರಮಶಿವಯ್ಯ, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ೧೯೭೯, ಪು. ೩೭.

೨. ಅದೇ, ಪು.೩೪.

೩. ಪ್ರಭಾಕರ ಎ.ಎಸ್., ಮ್ಯಾಸಬೇಡರ ಕಥನಗಳು, ೧೯೯೯, ಪು.೨.

೪. ಅದೇ, ಪು.೩.

೫. ಅಂಬಳಿಕೆ ಹಿರಿಯಣ್ಣ, ಪೌರಾಣಿಕ ಕಥನಗೀತೆಗಳು, ೧೯೮೯, ಪು.೯೫.

ಅಧ್ಯಾಯ : ಎರಡು

ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಪರಂಪರೆ ಮತ್ತು ಅಲೆಮಾರಿ ಬುಡಕಟ್ಟು ಸಮುದಾಯಗಳು

೨.೧. ಭೌಗೋಳಿಕ ಹಿನ್ನೆಲೆ

೨.೨. ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೩. ಅಲೆಮಾರಿ ಸಮುದಾಯಗಳು ಮತ್ತು ಚಿತ್ರದುರ್ಗ

೨.೩.೧. ಗೊಂದಲಿಗರು

೨.೩.೨. ಬುಡ್ಗ ಜಂಗಮ

೨.೩.೩. ಕಿನ್ನರಿ ಜೋಗಿ

೨.೩.೪. ದೊಂಬಿದಾಸರು

ಅಧ್ಯಾಯ ಎರಡು

ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಪರಂಪರೆ ಮತ್ತು ಅಲೆಮಾರಿ ಬುಡಕಟ್ಟು ಸಮುದಾಯಗಳು

ಮಾನವನ ಸಾಂಸ್ಕೃತಿಕ ಬದುಕಿನ ರೂಪ ಅಭಿವ್ಯಕ್ತಿಗೊಳ್ಳುವುದು ದೈನಂದಿನ ಬದುಕಿನ ಹಳ್ಳಿ, ನಗರ, ಪಟ್ಟಣಗಳೆಂಬ ತಾರತಮ್ಯತೆ ಕಾಣದಿದ್ದರೂ ನಗರ ಪ್ರದೇಶಗಳಲ್ಲಿನ ಸಾಂಸ್ಕೃತಿಕ ಬದುಕಿನ ಕ್ರಮ ಭಿನ್ನವಾಗಿ ಕಾಣುತ್ತದೆ ಎಂಬ ಮಾತ್ರಕ್ಕೆ ಅಲ್ಲಿ ಸ್ವಲ್ಪ ವ್ಯತ್ಯಾಸಗಳೊಂದಿಗೆ ರೂಪುಗೊಂಡಿರುತ್ತದೆ. ಜಾನಪದ ಕೇವಲ ಹಳ್ಳಿಗಳಿಗೆ ಮಾತ್ರ ಸೀಮಿತ ಎಂಬ ಪರಿಕಲ್ಪನೆ ಕೂಡ ಸತ್ಯವಲ್ಲ. ಅದೊಂದು ಭಾವನಾತ್ಮಕ ದೃಷ್ಟಿಯ ತಪ್ಪು ಗ್ರಹಿಕೆ. ಬೆಳಗಾದ ಕೂಡಲೇ ಬಲ ಮಗ್ಗುಲಲ್ಲಿ ಏಳಬೇಕು, ಹೊರಗೆ ಹೋಗುವಾಗ ದಾರಿಗೆ ಅಡ್ಡ ಬೆಕ್ಕು ಬಂದರೆ, ವಿಧವೆಯರು ಎದುರಿಗೆ ಬರುವುದು, ಪ್ರಾಣಿಗಳು ಬರಬಾರದೆಂಬ ನಂಬಿಕೆ, ಮನೆಯಿಂದ ಹೊರಡುವಾಗ ಗ್ರಹಗತಿ, ರಾಹು, ಯಮಗಂಡ ಕಾಲ ಹೀಗೆಲ್ಲಾ ನೋಡುವ ಕಾಲಗಳ ಗುಣಿತ ಇತ್ಯಾದಿ ನಂಬಿಕೆಗಳ ಮನಸ್ಥಿತಿಗೆ ನಮ್ಮ ಪರಂಪರಗತ ನಂಬಿಕೆಯ ಮನಸ್ಥಿತಿಯೇ ಕಾರಣ. ಇಂತಹವುಗಳು ಮನುಷ್ಯನ ಸಹಜ ನೆಲೆಯಿಂದ ಬಂದಿರುವುದರಿಂದ ಇವು ಗ್ರಾಮ–ಕುಗ್ರಾಮ, ವಿದ್ಯೆ–ವಿದ್ಯಾವಂತಿಕೆಯಿಂದ ಭಿನ್ನವಾಗಿಲ್ಲದಿರುವುದನ್ನು ಕಾಣಬಹುದಾಗಿದೆ. ದೇವರ ಉತ್ಸವ, ಹಬ್ಬ, ಆಚರಣೆ, ಸೂತಕಾದಿತನದ ಸಂಬಂಧಿ ನಂಬಿಕೆ ನಡಾವಳಿಗಳು ಹಳ್ಳಿಗಿಂತ ನಗರಗಳಲ್ಲಿ ಭಿನ್ನ ಎಂದು ಯಾರು ಹೇಳುವಂತಿಲ್ಲ. ಆದುದರಿಂದ ಮಾನವನ ಸಾಂಸ್ಕೃತಿಕ ಜೀವನ ರೂಪ ಚಿರಸ್ಥಾಯಿಯಾದ ಜೀವಂತ ಕ್ರಿಯೆ. ಹಾಗಂತ ಇಡೀ ಮಾನವನ ಸಾಂಸ್ಕೃತಿಕ ಜೀವನ ಏಕಮುಖ ಎಂದು ಪರಿಭಾವಿಸುವಂತೆಯೂ ಇಲ್ಲ. ಇದು ನೆಲದ ಪ್ರಾದೇಶಿಕತೆಗೆ ಅನುಗುಣವಾಗಿ ರೂಪುಗೊಳ್ಳುವುದು ಬುಡಕಟ್ಟು ಸಾಂಸ್ಕೃತಿಕ ಬದುಕು ಬಹುತೇಕ ಈ ನೆಲೆಯನ್ನು ಪ್ರತಿಪಾದಿಸುತ್ತದೆ. ಮನುಷ್ಯನ ಸಾಂಸ್ಕೃತಿಕ ಜೀವನ ಪರಿಸರಕ್ಕೆ ತಕ್ಕ ಹಾಗೆ ರೂಪುಗೊಳ್ಳುವುದು. ಇದನ್ನೇ ನಾವು ನೆಲಮೂಲ ಸಂಸ್ಕೃತಿ, ಬುಡಕಟ್ಟು ಸಂಸ್ಕೃತಿ ಎಂದು ಕರೆಯುತ್ತೇವೆ. ಜನರ ಸಾಂಸ್ಕೃತಿಕ ಬದುಕಿನ ಪರಂಪರೆ ರೂಪುಗೊಳ್ಳುವುದು ಅಥವಾ ಸೃಷ್ಟಿಗೊಳ್ಳುವುದು ನೆಲ, ಜಲ, ಭಾಷೆ, ಕುಲ, ಧರ್ಮ, ದೈವ, ನಂಬಿಕೆ ಇತ್ಯಾದಿಗಳು ಸಮಷ್ಟಿಪ್ರಜ್ಞೆಯಲ್ಲಿ ಒಂದೇ ಎನಿಸಿದರೂ ಅವುಗಳ ಅಂತರ್ಯದಲ್ಲಿ ಭಿನ್ನ ರೂಪಗಳನ್ನು ಸೃಜಿಸಿಕೊಂಡು ಅಭಿವ್ಯಕ್ತಿಸುತ್ತವೆ. ಇದೇ ರೀತಿ ಬುಡಕಟ್ಟು ಜನರ ಸಾಂಸ್ಕೃತಿಕ

ಚರಿತ್ರೆ ಕಥನಗಳು ನೆಲದ ನುಡಿಯಾಗಿ ಬೇರೆ ಬೇರೆ ಮೌಖಿಕ ಕಥನಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಇದಕ್ಕೆ ಸಾಕ್ಷಿಭೂತವೆಂಬಂತೆ ಅವರ ಮೌಖಿಕ ಕಥನಗಳೆ ನಮಗೆ ನುಡಿಗನ್ನಡಿಯಾಗಿವೆ. ಈ ಹಿನ್ನೆಲೆಯಲ್ಲಿ ನಾವು ಬುಡಕಟ್ಟು ಸಮುದಾಯಗಳನ್ನು ಅಧ್ಯಾಯಿನಿಸುವುದಕ್ಕೆ ಅಥವಾ ಸಮುದಾಯಗಳ ಸಾಂಸ್ಕೃತಿಕ ಬದುಕನ್ನರಿಯಲು ಅವರ ಪ್ರಾದೇಶಿಕ ಸಾಂಸ್ಕೃತಿಕ ಗುಣವನ್ನು ತಿಳಿಯಬೇಕಾಗಿದೆ. ಪ್ರಸ್ತುತ ಅಧ್ಯಯನ ವ್ಯಾಪ್ತಿಯಿಂದ ಚಿತ್ರದುರ್ಗ ಜಿಲ್ಲೆಯನ್ನು ಈ ದೃಷ್ಟಿಯಲ್ಲಿ ಈ ಕೆಳಗಿನಂತೆ ಪರಿಚಯಿಸಬಹುದು.

೨.೧. ಭೌಗೋಳಿಕ ಹಿನ್ನೆಲೆ

ಚಿತ್ರದುರ್ಗ ಜಿಲ್ಲೆಯು ಅಪ್ಪಟ ಬಯಲುಸೀಮೆ ಆದರೂ ಇಲ್ಲಿನ ನೈಸರ್ಗಿಕ ಸಂಪತ್ತು ಸಮೃದ್ಧಿಯಾದ ಸ್ಥಳವಾಗಿದೆ. ಕರ್ನಾಟಕ ರಾಜ್ಯದ ಹೃದಯ ಸ್ಥಾನದಲ್ಲಿರುವ ಈ ಜಿಲ್ಲೆಯ ಶಿಲಾಯುಗದ ಕಾಲದಿಂದಲೂ ಜನ ವಾಸವಿದ್ದ ಅಪರೂಪದ ಭೂಪ್ರದೇಶವಾಗಿದೆ. ಹೀಗಾಗಿ ಸುಮಾರು ಸಾವಿರಾರು ವರ್ಷಗಳ ಹಿಂದೆಯೇ ನಾಗರಿಕತೆಯನ್ನು ತನ್ನೊಡಲಲ್ಲಿಯೇ ರೂಪಿಸಿಕೊಂಡ ನೆಲವಾಗಿದೆ. ಭೂ ವಿಜ್ಞಾನಿಗಳು ಜಗತ್ತಿನಲ್ಲಿಯೇ ಅತ್ಯಂತ ಪುರಾತನವೆನಿಸಿದ ಸ್ಥಳ ಕರ್ನಾಟಕ. ಇದರಲ್ಲಿ ಅತ್ಯಂತ ಪುರಾತನ ಭೂ ಭಾಗ ಚಿತ್ರದುರ್ಗ. ಸಮುದ್ರಮಟ್ಟದಿಂದ ಸುಮಾರು ಸಾವಿರಾರು ಅಡಿ ಎತ್ತರ ಪ್ರದೇಶದಲ್ಲಿದೆ ಎಂದು ಹೇಳುತ್ತಾರೆ. ಈ ಜಿಲ್ಲೆಯಲ್ಲಿ ಕಂಡುಬರುವ ಪದರು ಶಿಲೆಗಳು ಮತ್ತು ಅದರೊಳಗಿರುವ ಒರಟು ಕಣಶಿಲೆ, ಬಳಪಶಿಲೆ(ಸ್ಲೇಟುಶಿಲೆ), ಜೋಡುಶಿಲೆ, ಕ್ಲೋರೈಟ್ ಶಿಲೆಗಳು ಸೇರಿದಂತೆ ಒಟ್ಟಾರೆ ಚಿತ್ರದುರ್ಗ ಪ್ರದೇಶ ಭೌಗೋಳಿಕವಾಗಿ ಶಿಲಾಮಯ ಪ್ರದೇಶವೆಂದು ಭೌಗೋಳಿಕ ತಜ್ಞರು ವ್ಯಾಖ್ಯಾನಿಸಿದ್ದಾರೆ.

೨.೨. ಚಿತ್ರದುರ್ಗ ಜಿಲ್ಲೆಯ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ

"ಸುಮಾರು ಸಾವಿರಾರು ವರ್ಷಗಳಷ್ಟು ಇತಿಹಾಸವಿರುವ ಈ ಪ್ರದೇಶವನ್ನು ಹಿಡಿಂಬ ಪಟ್ಟಣ, ಚಂದ್ರವಳ್ಳಿ, ಸೂಳಗಲ್ಲು, ಬೆಮ್ಮತನೂರು, ಪೇರು ಮಾಳಪುರ, ಮಲ್ಲರಾಯನ ದುರ್ಗ, ಚಿಂತರ ಕಲ್ಲುದುರ್ಗ, ಫರಕೌಬಾದ್, ಚಿನ್ಮೂಲಾದ್ರಿ, ಚಿತ್ರಕಲ್ಲುದುರ್ಗ ಹೀಗೆ ಮೊದಲಾದ ಅನೇಕ ಹೆಸರುಗಳಿಂದ ಪ್ರಸಿದ್ಧಿಯಾಗಿತ್ತು. ಕಾಲಕಾಲಕ್ಕೆ ತಕ್ಕಂತೆ ಸುಮಾರು ೨೪ ಬಾರಿ ತನ್ನ ಹೆಸರು ಬದಲಾಯಿಸಿದೆ. ರಾವಣ ಸೀತೆಯನ್ನು ಕೊಂಡುಯ್ಯುವಾಗ ಜಟಾಯು ಪಕ್ಷಿಯೊಂದಿಗೆ ಹೋರಾಡಿದ ಸ್ಥಳವಾಗಿದೆ ಮತ್ತು ನಾಥ ಪರಂಪರೆಯ ನೆಲೆಯಾಗಿದೆ."[೧] ದಕ್ಷಿಣ ಭಾರತದಲ್ಲಿಯೇ ಅತ್ಯಂತ ವಿಶಿಷ್ಟ ಎನ್ನಬಹುದಾದ ಏಳು ಸುತ್ತಿನ ಕೋಟೆ ಮತ್ತು ಇತರ ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ಹೊಂದಿರುವ ಚಿತ್ರದುರ್ಗ ಪ್ರಾಚೀನ ಮತ್ತು ಅರ್ವಾಚೀನ ಸಂಸ್ಕೃತಿಯ ಸಂಗಮ ಸ್ಥಳ. ಇಲ್ಲಿಯ ಮಾನವ ಇತಿಹಾಸ ಶಿಲಾಯುಗದಿಂದ ಆರಂಭವಾಗುತ್ತದೆ. ಕ್ರಿ.ಪೂರ್ವದಲ್ಲಿ ಮೌರ್ಯ ಸಾಮ್ರಾಜ್ಯದ ಆಳ್ವಿಕೆಯೊಂದಿಗೆ ಆರಂಭವಾಗಿ ನಂತರ ಶಾತವಾಹನರು, ಕದಂಬರು, ಚಾಲುಕ್ಯರು ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಮುಂತಾದ ಅರಸು ಮನೆತನಗಳು ಇಲ್ಲಿ ಆಳ್ವಿಕೆ ನಡೆಸಿದ್ದಾರೆಂದು ಇತಿಹಾಸಕಾರರು ಇಲ್ಲಿನ ಸಾಂಸ್ಕೃತಿಕ ನೆಲೆಗಳ ಶೋಧಗಳಿಂದ ಗುರುತಿಸಿರುವುದನ್ನು ತಿಳಿಯಬಹುದಾಗಿದೆ.

ಚಿತ್ರದುರ್ಗದ ಚರಿತ್ರೆಯ ಅಸ್ಮಿತೆ ಎಂದ ಕೂಡಲೇ ನಮಗೆ ನೆನಪಿಗೆ ಬರುವುದು ಇಲ್ಲಿನ ಬೇಡ ಬುಡಕಟ್ಟಿಗೆ ಸೇರಿದ ಪಾಳೆಗಾರರ ಆಳ್ವಿಕೆಯಿಂದ ವಿಜಯನಗರ ಸಾಮ್ರಾಜ್ಯ ಆಳ್ವಿಕೆಯ ಪತನದ ನಂತರ ಸ್ವತಂತ್ರ ಪಾಳೆಪಟ್ಟುಗಳಾಗಿ ಆಳ್ವಿಕೆ ಆರಂಭಿಸಿ ಸುಮಾರು ೧೮ನೆಯ ಶತಮಾನದ ಮಧ್ಯಭಾಗದವರೆಗೂ ಆಳ್ವಿಕೆ ನಡೆಸಿರುವುದನ್ನು ಕಾಣುತ್ತೇವೆ. ನಂತರದ ಬೆಳವಣಿಗೆಗಳಲ್ಲಿ ಮೈಸೂರು ಸಂಸ್ಥಾನದ ಅಧೀನಕ್ಕೊಳಪಟ್ಟು ಸ್ವತಂತ್ರ್ಯ ನಂತರದವರೆಗೂ ಪ್ರಸ್ತುತ ದಾವಣಗೆರೆ ಜಿಲ್ಲೆ ವಿಭಜಿತ ವಾಗುವವರೆಗೂ ಚಿತ್ರದುರ್ಗ ಜಿಲ್ಲೆಯ ಚರಿತ್ರೆಯ ವ್ಯಾಪಿಸಿಕೊಂಡಿದೆ.

ಚಿತ್ರದುರ್ಗ ಜಿಲ್ಲೆಯಿಂದ ದಾವಣಗೆರೆ ಜಿಲ್ಲೆ ವಿಭಜನೆಯಾದ ನಂತರದಲ್ಲಿ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ಎಂಬ ಆರು ತಾಲೂಕುಗಳನ್ನು ಒಳಗೊಂಡ ಪ್ರದೇಶವಾಗಿದೆ. ಇದರಲ್ಲಿ ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ (ಪಶ್ಚಿಮ ಭಾಗ) ಅರೆ ಮಲೆನಾಡಾಗಿದ್ದು ಮಳೆ ಪಡೆಯುವ ಪ್ರದೇಶವಾಗಿವೆ. ಉಳಿದಂತೆ ಹಿರಿಯೂರು, ಸಾಧಾರಣಾ ಮಳೆಪಡೆಯುವ ತಾಲೂಕು ಆಗಿದ್ದು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುಗಳು ಮಳೆ ಪ್ರಮಾಣವನ್ನು ಅವಲೋಕಿಸಿದರೆ ಕಡಿಮೆ ಮಳೆ ಬೀಳುವ ಪ್ರದೇಶವಾಗಿವೆ. ಮುಂಗಾರು ಮಳೆ ಪ್ರಾರಂಭವಾಗುತ್ತದೆಯಾದರೂ ಮಳೆ ನೆರಳಿನ ಪ್ರದೇಶವಾದ ಇಲ್ಲಿ ಮೋಡಗಳು ಸೇರಿದ ಕೂಡಲೇ ಬಿರುಗಾಳಿ ಬೀಸಿ ಮೋಡಗಳು ಚದುರಿಸುತ್ತದೆ. ಆದರೂ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೂ ಮಂದ ಮಾರುತ ಬೀಸುವುದರಿಂದ ವಾಯುಗುಣ ಹಿತವಾಗಿರುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಹಿಂಗಾರು ಮಳೆ ಪ್ರಾರಂಭವಾಗಿ ನವೆಂಬರ್ ಕೊನೆಯ ವೇಳೆಗೆ ಸಂಪೂರ್ಣ ಮಳೆ ನಿಂತು ಹೋಗುತ್ತದೆ. ನಂತರದಲ್ಲಿ ಆಂಧ್ರ, ತಮಿಳುನಾಡುಗಳ ಕಡೆಯಿಂದ ಚಂಡಮಾರುತಗಳು ರಭಸದಿಂದ ಬೀಸುವುದರಿಂದ ಜಡಿಮಳೆ ಅಥವಾ ತುಂತುರು ಮಳೆ ಸುರಿಯುತ್ತದೆ. ಇದರಿಂದ ಮೈ ನಡಗಿಸುವಷ್ಟು ಚಳಿ ಇರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿರುವ ಕಾಲಗಳು ಎರಡು ಒಂದು ಬೆಸಿಗೆ ಕಾಲ ಮತ್ತೊಂದು ಕಡುಬೆಸಿಗೆ ಕಾಲ. ಇಲ್ಲಿನ ಪ್ರಕೃತಿ ಪ್ರಕೃತ ಸಂದರ್ಭದಲ್ಲಿ ಸುಮಾರು ವರ್ಷಗಳಿಂದ ಅನಾವೃಷ್ಟಿಯಿಂದಾಗಿ ಈ ಭಾಗದ ಜನ–ಜಾನುವಾರುಗಳು ಸೇರಿದಂತೆ ಸಂಕಷ್ಟದ ಪರಿಸ್ಥಿತಿಯ ಬವಣೆಯ ಬದುಕನ್ನು ಎದುರಿಸುತ್ತಿದ್ದಾರೆ.

ಹೊಳಲ್ಕೆರೆ, ಹೊಸದುರ್ಗ, ಚಿತ್ರದುರ್ಗ ತಾಲೂಕುಗಳಲ್ಲಿ ಮೆಕ್ಕೆಜೋಳ ಪ್ರಮುಖ ಮಳೆಯಾಶ್ರಿತ ಬೆಳೆಯಾದರೆ, ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕುಗಳು ನೆಲೆಗಡಲೆ ಪ್ರಮುಖ ಮಳೆಯಾಶ್ರಿತ ಬೆಳೆಯಾಗಿವೆ. ಇತರ ಬೆಳೆಗಳನ್ನು ಇಲ್ಲಿನ ಹವಾಗುಣಕ್ಕೆ ಅನುಗುಣವಾಗಿ ಬೆಳೆಯುತ್ತಾರೆ. ಅಲ್ಲದೆ ಬೋರ್‌ವೆಲ್‌ಗಳ ನೀರನ್ನು ಆಶ್ರಯಿಸಿಕೊಂಡು ರಾಗಿ, ಭತ್ತ, ಮಕ್ಕೆಜೋಳ, ಈರುಳ್ಳಿ, ಶೇಂಗಾ ಇತರೆ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಅಂತರ್‌ಜಲ ಮಟ್ಟ ಕುಸಿದು ಬೋರ್‌ವೆಲ್ ನೀರು ಪ್ರಸ್ತುತ ನಿಂತು ಹೋಗಿವೆ. ಇಲ್ಲಿನ ಕುರುಚಲು ಹುಲ್ಲಿನ ಬೆಟ್ಟಗುಡ್ಡಗಳು ಪಶುಪಾಲನೆಗೆ ಸೂಕ್ತವಾದ ಸ್ಥಳವಾಗಿವೆ. ಇಲ್ಲಿನ ನೈಸರ್ಗಿಕವಾದ ಅವಲಂಬಿತ ಬದುಕು ಇಲ್ಲಿ ಪ್ರಮುಖ ಬುಡಕಟ್ಟುಗಳಾದ ಮ್ಯಾಸಬೇಡ, ಕಾಡುಗೊಲ್ಲ ಇತರ ಸಮುದಾಯಗಳು ಕೃಷಿ ಬದುಕಿನ ವೃತ್ತಿ ಬದುಕಿಗೆ ಪೂರಕವಾಗಿ

ಪಶುಸಂಗೋಪನೆಯನ್ನು ಅವಲಂಬಿಸಿಕೊಂಡು ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ. ಜಿಲ್ಲೆಯಲ್ಲಿ ಮ್ಯಾಸಬೇಡ, ಕಾಡುಗೊಲ್ಲ ಪ್ರಮುಖ ಬುಡಕಟ್ಟು ಸಮುದಾಯಗಳು ಸೇರಿದಂತೆ ಕುರುಬ, ಲಿಂಗಾಯಿತ, ವಡ್ಡ, ಕುಂಚಿಟಗ, ಈಡಿಗ, ಬ್ರಾಹ್ಮಣ, ಲಂಬಾಣಿ, ಮಾದಿಗ, ಕುಂಬಾರ, ಕಂಬಾರ, ಜೈನ, ವೈಶ್ಯ, ಅಲ್ಪಸಂಖ್ಯಾತ ಸಮುದಾಯಗಳ ಜೊತೆಗೆ ಅಲೆಮಾರಿ ಬುಡಕಟ್ಟು ಸಮುದಾಯಗಳಾದ ಜೋಗಿ, ಬುಡ್ಗಜಂಗಮ, ಗೊಂದಲಿಗ, ದೊಂಬಿದಾಸ ಮತ್ತು ಇತರೆ ಸಮುದಾಯಗಳು ಈ ಜಿಲ್ಲೆಯಲ್ಲಿ ನೆಲೆಸಿವೆ. ಈ ಎಲ್ಲಾ ಸಮುದಾಯಗಳಲ್ಲಿ ಭಾಗಶಃ ತಳ ಸಮುದಾಯಗಳೆ ಹೆಚ್ಚಾಗಿದ್ದು, ಇವು ಇಲ್ಲಿನ ವಾತಾವರಣಕ್ಕೆ ಅನುಗುಣವಾಗಿ ಬದುಕನು ರೂಪಿಸಿಕೊಂಡಿವೆ. ಇಲ್ಲಿ ಬುಡಕಟ್ಟು ಸಮುದಾಯಗಳೆ ಹೆಚ್ಚು ನೆಲೆಸಿರುವುದರಿಂದ ಈ ಬಯಲುಸೀಮೆ ಬಡುಕಟ್ಟು ಸಮುದಾಯಗಳ ಕಣಜದಂತಿದೆ. ಇಲ್ಲಿನ ನೈಸರ್ಗಿಕ ವಾತಾವರಣಕ್ಕೆ ಅನುಗುಣವಾಗಿ ಪಶುಸಂಗೋಪನೆಯನ್ನು ಅವಲಂಬಿಸಿರುವ ಮ್ಯಾಸಬೇಡ, ಕಾಡುಗೊಲ್ಲ, ಜೋಗಿ ಇತರೆ ಸಮುದಾಯಗಳು ತಮ್ಮದೇ ಆದ ಹಟ್ಟಿ ಸಂಸ್ಕೃತಿಯನ್ನು ಪೋಷಿಸುತ್ತಾ ಊರನ್ನು ಸೇರದೆ ಊರಿನ ನಾಗರಿಕ ಸಂಸ್ಕೃತಿಯಿಂದ ದೂರ ಉಳಿದ ಪ್ರತ್ಯೇಕ ಜೀವನವನ್ನು ನಡೆಸುತ್ತಾರೆ. ಈ ಸಮುದಾಯಗಳು ಮೂಲದಲ್ಲಿ ಅಲೆಮಾರಿಗಳಾಗಿದ್ದು, ನಂತರದಲ್ಲಿ ಅರೆ ಅಲೆಮಾರಿಗಳಾದ ಬಗೆಯನ್ನು ನಾವು ಇಲ್ಲಿನ ಹವಾಗುಣ ಮತ್ತು ಅವರು ಸೃಷ್ಟಿಸಿಕೊಂಡಿರುವ ಮೌಖಿಕ ಕಥನಗಳಿಂದ ತಿಳಿಯಬಹುದು. ಇವರ ಜೊತೆಗೆ ಇತರೆ ಸಮುದಾಯಗಳು ಅಲೆಮಾರಿತನದ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ಚಿತ್ರದುರ್ಗ ಜಿಲ್ಲೆ ಎಂದರೆ ಅದು ಬುಡಕಟ್ಟು ಸಮುದಾಯಗಳು ನೆಲೆಸಿರುವ ಕಣಜದ ರೂಪ. ಪ್ರಾದೇಶಿಕತೆಯ ದೃಷ್ಟಿಯಿಂದ ಇಲ್ಲಿನ ಭೌಗೋಳಿಕ ಸಂರಚನೆಯ ವಾತಾವರಣ ಅಷ್ಟೇನೂ ಸೂಕ್ತವಲ್ಲದ ಹವಾಗುಣ ಹೊಂದಿದ್ದರು ಪಶುಪಾಲನೆಗೆ ಸೂಕ್ತವಾದ ಸ್ಥಳವಾಗಿದೆ. ಈ ಹಿನ್ನೆಲೆಯಿಂದ ಈ ಜಿಲ್ಲೆಯ ಮುಖ್ಯ ಬುಡಕಟ್ಟುಗಳಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮೌಖಿಕ ಕಥನ ಪರಂಪರೆ ಅವರ ವಾಸ್ತವಾದ ಬದುಕು ಮತ್ತು ಅವರ ವೃತ್ತಿ ಅಸ್ಮಿತೆಗಳಿಂದ ತಿಳಿಯಬಹುದು. ಈ ಎರಡು ಬುಡಕಟ್ಟು ಸಮುದಾಯಗಳು ಅರೆ ಅಲೆಮಾರಿ ಸಮುದಾಯಗಳಾಗಿದ್ದು ಈ ಸಮುದಾಯಗಳ ಜೊತೆಗೆ ಇತರೆ ಸಮುದಾಯಗಳು ಬಾಂಧವ್ಯದ ಸೂಚಕವೆಂಬಂತೆ ಅನೇಕ ಅಲೆಮಾರಿ ಸಮುದಾಯಗಳು ಜಿಲ್ಲೆಯಲ್ಲಿ ಸಾಂಸ್ಕೃತಿಕ ಸಂಬಂಧಗಳ ಕೊಂಡಿಯಾಗಿ ತಮ್ಮದೇ ಆದ ವೃತ್ತಿ ಬದುಕಿನ ಲಕ್ಷಣಗಳ ಮೂಲಕ ಜೀವಿಸುತ್ತಾ ನೆಲೆಸಿರುವುದನ್ನು ಹಾಗೂ ಅಲೆಮಾರಿತನ ರೂಢಿಸಿಕೊಂಡಿರುವುದು ಕಂಡುಬರುತ್ತದೆ. ಈ ಹಿಂದೆ ಜಿಲ್ಲೆಯ ಪರಿಸರ ದಟ್ಟ ಅರಣ್ಯ ಪ್ರದೇಶ ಹೊಂದಿತ್ತು ಎಂಬುದನ್ನು ನಾವು ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮೌಖಿಕ ಕಥನಗಳಲ್ಲಿ ಕಾಣಬಹುದು. ಇದರಿಂದ ಪಶುಪಾಲನೆ ಮುಖ್ಯ ವೃತ್ತಿ ಪರಂಪರೆಯಾಗಿ ಇಂದಿಗೂ ಬೆಳೆದುಬಂದಿರಬಹುದು. ಇವರಲ್ಲಿ ಮತ್ತು ಇತರ ಸಮುದಾಯಗಳಲ್ಲಿ ಕಾಣಬಹುದಾಗಿದೆ.

ಚಿತ್ರದುರ್ಗ, ಹೊಸದುರ್ಗ ಮತ್ತು ಹೊಳಲ್ಕೆರೆ ಪ್ರದೇಶಗಳು ಸ್ವಲ್ಪಮಟ್ಟಿಗೆ ಅರೆ ಅರಣ್ಯ ಪ್ರದೇಶದಿಂದ ಕೂಡಿವೆ. ಮೊಳಕಾಲ್ಮೂರು ಪಟ್ಟಣದ ಪಕ್ಕದಲ್ಲಿರುವ ನುಂಕೆಮಲೆ ಸಿದ್ಧೇಶ್ವರನ ಬೆಟ್ಟವಿದೆ. ಇಲ್ಲಿ ಗಿಡಮರಗಳಿಗಿಂತ ಹೆಚ್ಚಾಗಿ ಕಲ್ಲುಬಂಡೆಗಳಿಂದ ಕೂಡಿದರೂ ಪಶುಪಾಲನೆಗೆ ಸೂಕ್ತವಾದ ಸ್ಥಳವಾಗಿ

ಜಿಲ್ಲೆಯ ಪ್ರಾಚೀನ ಪರಂಪರೆಯ ಪ್ರತೀಕವಾಗಿ ಇಂದು ಸಾಂಸ್ಕೃತಿಕ ಕೇಂದ್ರವಾಗಿದೆ. ಚಿತ್ರದುರ್ಗ ಪಟ್ಟಣಕ್ಕೆ ಹೊಂದಿಕೊಂಡಿರುವ ಶಿಲಾವೃತ್ತ ಬೆಟ್ಟ ಗುಡ್ಡಗಳ ಸಾಲು ಹೊಳಲ್ಕೆರೆಯವರೆಗೂ ವಿಸ್ತರಿಸಿಕೊಂಡಿವೆ. ಇದು ಹೊಸದುರ್ಗದವರೆಗೂ ಮುಂದುವರೆದು ಚಿಕ್ಕಮಗಳೂರು ಮಣ್ಣಿನ ಬೆಟ್ಟಗಳ ಸಾಲುಗಳೊಂದಿಗೆ ಕೂಡುತ್ತದೆ. ಚಿತ್ರದುರ್ಗ ಜಿಲ್ಲೆಯ ಅರಣ್ಯ ಪ್ರದೇಶವನ್ನು ಗಾದ್ರಿಮಲೆ ಸರಹದ್ದು, ಗುಂಡೇರಿ ಕಾಡು, ಮಿಂಚೇರಿ ಕಾಡು ಎಂದು ಕರೆಯುತ್ತಾರೆ. ಗಾದ್ರಿಮಲೆ, ಮಿಂಚೇರಿ ಜೋಗಿಮಟ್ಟಿ ಅರಣ್ಯ ಪ್ರದೇಶಗಳು ಈ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯಗಳು ಬಂದು ನೆಲೆಸಲು ಮತ್ತು ಪಶುಪಾಲನೆಯ ಹಿನ್ನೆಲೆಯಲ್ಲಿ ಇವು ಸಹಾಯಕವಾಗಿವೆ. ಅಲ್ಲದೆ ಇಲ್ಲಿನ ಸಾಂಸ್ಕೃತಿಕ ಪರಿಸರದೊಂದಿಗೆ ಭೌಗೋಳಿಕ ಪರಿಸರವೂ ಸಮ್ಮಿಳಿತಗೊಂಡಿದೆ.

೨.೩. ಚಿತ್ರದುರ್ಗ ಜಿಲ್ಲೆ ಅಲೆಮಾರಿ ಸಮುದಾಯಗಳು

ಯಾವುದೇ ಪ್ರಾದೇಶಿಕತೆಯ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಬೇಕಾದರೆ ಆಯಾ ಪ್ರದೇಶದ ಜನಪದರ ಮೌಖಿಕ ಸಾಹಿತ್ಯ ಪರಂಪರೆಯನ್ನು ಅವಲಂಬಿಸಬೇಕಾಗುತ್ತದೆ. ಇದು ಗುಪ್ತಗಾಮಿಯಾಗಿ ಅವರ ಬದುಕಿನಲ್ಲಿ ಅನುಸಂಧಾನಿಸುತ್ತದೆ. ಒಂದು ಸಾಂಸ್ಕೃತಿಕ ಸೃಷ್ಟಿಯ ಮತ್ತು ಅದರ ದೃಷ್ಟಿಯ ಹಿಂದೆ ಅಲ್ಲಿನ ನೆಲ, ಜಲ, ಮಳೆ, ಬೆಳೆ, ಜಾತಿ, ಜನಾಂಗ, ಭಾಷೆ, ನಂಬಿಕೆ–ನಿಷೇಧ ಇತ್ಯಾದಿಗಳು ಬಹುಮುಖ್ಯವಾಗಿ ಪ್ರಭಾವಿಸಿರುತ್ತವೆ. ಇವುಗಳಲ್ಲಿ ಜಾತಿ, ಜನಾಂಗ ಮತ್ತು ಭಾಷೆ ಬದುಕಿನ ನೆಲೆಯಲ್ಲಿ ಬಹುಮುಖ್ಯವಾದವುಗಳು. ಈ ಮೊದಲೆ ತಿಳಿದುಕೊಂಡ ಹಾಗೆ ಚಿತ್ರದುರ್ಗ ಜಿಲ್ಲೆ ಬುಡಕಟ್ಟು ಸಮುದಾಯಗಳ ತವರು. ಪಶುಪಾಲನೆಯ ಹಿನ್ನೆಲೆಯಿಂದ ಬದುಕುವ ಇಲ್ಲಿನ ಸಮುದಾಯಗಳಲ್ಲಿ ಕೆಲವು ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳು ಜೀವನ ನಡೆಸುವುದನ್ನು ಕಾಣುತ್ತೇವೆ. ಇಲ್ಲಿನ ಸಾಂಸ್ಕೃತಿಕ ಸಂಬಂಧದ ಸಮುದಾಯಗಳ ಮೂಲ ನೆಲೆ ಬಹುತೇಕವಾಗಿ ಆಂಧ್ರ ಮೂಲದಿದಂದ ಬಂದಿರುವುದಾಗಿ ಮ್ಯಾಸಬೇಡ, ಮಾದಿಗ, ಬುಡ್ಗಜಂಗಮ, ದೊಂಬಿದಾಸ, ಕೊರಮ, ಕೊರಚ, ಬಲಿಜ, ವಡ್ಡ ಇತರೆ ಸಮುದಾಯಗಳು ತಿಳಿಸುತ್ತವೆ. ಉತ್ತರ ಭಾರತದಿಂದ ನಾವು ಇಲ್ಲಿಗೆ ವಲಸೆ ಬಂದವರೆಂದು ಕೆಲ ಸಮುದಾಯಗಳು ನಾವು ಮೂಲದಿಂದಲೇ ಇಲ್ಲೇ ನೆಲೆಸಿದವರೆಂದು ತಿಳಿಸುತ್ತಾರೆ. ಆದರೆ ಇವರಲ್ಲಿರುವ ಕೆಲವು ಸಾಂಸ್ಕೃತಿಕ ಸಂಬಂಧಗಳು ಇವರೆಲ್ಲಾ ಮೂಲದಲ್ಲಿ ಒಂದೇ ಇರಬಹುದೇ ಎಂಬಂತೆ ಭಾಸವಾಗುತ್ತದೆ.

ಮಾನವಶಾಸ್ತ್ರಜ್ಞರು ಪ್ರಾರಂಭದಲ್ಲಿ ಪಶುಪಾಲನೆ ವೃತ್ತಿ ಮಾಡುವಂತಹ ಜನ ಸಮುದಾಯಗಳನ್ನು ಅಲೆಮಾರಿ ಸಮುದಾಯಗಳೆಂದು ತಿಳಿಸಿದ್ದಾರೆ. ಎನ್ಸೈಕ್ಲೋಪಿಡಿಯಾ ಬ್ರಿಟಾನಿಕಾದ ಪ್ರಕಾರ ಅಲೆಮಾರಿತನವು ಮಾನವ ಜೀವನ ವಿಧಾನ, ಬೇಟೆ, ಆಹಾರ ಸಂಗ್ರಹಣೆ ಮತ್ತು ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಸದೇ ದಿಕ್ಕು ದೆಸೆಯಿಲ್ಲದೆ ಕಾಲನುಕ್ರಮಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎಂದು ಕರೆಯುತ್ತಾರೆ. ಪಶುಪಾಲನೆ ಮತ್ತು ಇತರೆ ಕುಲಕಸುಬುಗಳ ಹಿನ್ನೆಲೆಯಲ್ಲಿ ಕೆಲ ಸಮುದಾಯಗಳು ಕಾಲಾಂತರದಲ್ಲಿ ನೆಲೆಸಿದವು ಮತ್ತು ಅರೆ ಅಲೆಮಾರಿತನದ

ಜೀವನ ಸೂಚಿಸಿಕೊಂಡವು. ಇತರೆ ಕೆಲ ಸಮುದಾಯಗಳು ಕಸುಬುಗಳ ಹಿನ್ನೆಲೆಯಲ್ಲಿ ಜೀವನ ನಿರ್ವಹಣೆಗಾಗಿ ಅಲೆಮಾರಿತನವನ್ನು ಅನಿವಾರ್ಯವಾಗಿ ಮುಂದುವರೆಸಿಕೊಂಡು ಬಂದಿರುವುದಕ್ಕೆ ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಜೊತೆಗೆ ಇತರೆ ಸಮುದಾಯಗಳ ಜೀವನ ಕ್ರಮವು ರೂಪಿತಗೊಂಡಿದೆ ಮತ್ತು ಮೇಲಿನ ಅಲೆಮಾರಿತನದ ವ್ಯಾಖ್ಯಾಯನಕ್ಕೆ ಅರ್ಥ ಕಲ್ಪಿಸುವಂತಿದೆ.

ವನ್ಯಜೀವಿಗಳ ಬೇಟೆ, ಪಶುಪಾಲನೆ, ಪ್ರಾಣಗಳ ಪಳಗಿಸುವಿಕೆಯ ಜೊತೆಗೆ ಪ್ರದರ್ಶನ ಕಲೆಗಳು, ದೈವರಾಧನೆ, ಧಾರ್ಮಿಕ ಭಿಕ್ಷಾಟನೆ ಇತ್ಯಾದಿಗಳ ಅವಲಂಬಿಸಿ ಅಲೆಮಾರಿತನದಿಂದ ಜೀವನ ನಡೆಸುವ ಅಲೆಮಾರಿಗಳು ಶೂನ್ಯ ಬಂಡವಾಳದ ಮೂಲಕ ಬದುಕಿನ ಆರ್ಥಿಕತೆ ರೂಪಿಸಿಕೊಳ್ಳಲು ದಿನನಿತ್ಯ ಇಂದಿಗೂ ಅಲೆಯುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ದೊಂಬಿದಾಸರು, ಗೊಂದಲಿಗರು, ಅರ್ಜುನಜೋಗಿ ಮತ್ತು ಬುಡ್ಗಜಂಗಮ ಸಮುದಾಯಗಳ ಜೊತೆಗೆ ಇನ್ನೂ ಹಲವಾರು ಅಲೆಮಾರಿ ಸಮುದಾಯಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಇತರೆ ಸಮುದಾಯಗಳೊಂದಿಗೆ ಭಾವನಾತ್ಮಕ ಸಂಬಂಧಗಳೊಂದಿಗೆ ಜೀವಿಸುತ್ತಿರುವುದನ್ನು ಕಾಣಬಹುದು.

ಅರ್ಜುನಜೋಗಿ ಸಮುದಾಯದ ಸೃಷ್ಟಿ ಪುರಾಣದ ಹಿನ್ನೆಲೆಯನ್ನಾಧರಿಸಿ ಕಾಳಭೈರವನ ಆರಾಧಕರಾದ ಇವರು ನಾಥಪಂಥಕ್ಕೆ ಸೇರಿದವರಾಗಿದ್ದಾರೆ. "ಉತ್ತರದಿಂದ ದಕ್ಷಿಣಕ್ಕೆ ಬಂದವರಾಗಿದ್ದಾರೆ. ಇಂತಹ ಐತಿಹಾಸಿಕ ಮತ್ತು ಪೌರಾಣಿಕ ಕುರುಹುಗಳು ಕರ್ನಾಟಕದ ಅನೇಕ ನಾಥಪಂಥ ಕೇಂದ್ರಗಳಾದ ವಿಟ್ಲದ ಯೋಗೇಶ್ವರ ಮಠ(ಬಂಟವಾಳ) ಕದ್ರಿಯ ಜೋಗಿಮಠ(ಮಂಗಳೂರು) ಹಲವರಿಯ ಕೋಡಶಾಹಿ ಮಠ(ಕುಂದಾಪುರ) ಚಂದ್ರಗುತ್ತಿಯ ಚಂದ್ರಮುಖಿ ಯೋಗಿ ಮಠ(ಸೊರಬ) ಕುಂಬಾರ್ಡೆಯ ಹಂಡಿಬಡಗನಾಥಮಠ, ಡೊಂಗರಗಾಂವದ ಶ್ರೀಮಚೇಂದ್ರನಾಥ ದಾದಾಕಾ ಮಠ ಹಾಗೂ ಕಿರವಳಯ ಗೋರನಾಥ ಮಠ(ಖಾನಾಪುರ), ನುಂಕೆಮಲೆ ಮಠ (ಮೊಳಕಾಲ್ಮೂರು)."[೨] ಇವುಗಳಿಂದ ತಿಳಿಯಬಹುದು. ಇಂದಿಗೂ ಅರ್ಜುನಜೋಗಿ ಸಮುದಾಯಗಳ ಜೀವನ ದೃಷ್ಟಿ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ನುಂಕೆಮಲೆ ಸಿದ್ಧೇಶ್ವರನ ಮಠಕ್ಕೆ ಅರ್ಜುನಜೋಗಿಗಳ ದೀಕ್ಷೆ ಪಡೆಯುವ ಮತ್ತು ಅವರ ಆರಾಧನ ಕೇಂದ್ರವಾಗಿದೆ. ಅಲ್ಲದೆ ಚಿತ್ರದುರ್ಗದ ಐತಿಹಾಸಿಕ ಕೇಂದ್ರವಾದ ಕೋಟೆಯಲ್ಲಿ ಸಂಪಿಗೆ ಸಿದ್ದೇಶ್ವರನ ದೇವಸ್ಥಾನ ಹಿರಿಯೂರು ತಾಲೂಕಿನ ವದ್ದಿಕೇರೆ ಸಿದ್ದಪ್ಪ, ಹೊಳಲ್ಕೆರೆ ತಾಲೂಕಿನ ಹುಲಿಗೊಂದಿ, ಚಿತ್ರದುರ್ಗ ತಾಲೂಕಿನ ಕಪ್ಪಗೆರೆ, ಹೊಸದುರ್ಗ ತಾಲೂಕಿನ ಬಾಗೂರು ಇವರ ಆರಾಧನಾ ಕೇಂದ್ರಗಳಾಗಿವೆ ಮತ್ತು ಇತರೆ ಸಮುದಾಯಗಳು ಪೂಜಿಸುವುದು, ಮನೆದೇವರಾಗಿ ಸ್ವೀಕರಿಸಿರುವುದು ಜೋಗಿ ಸಮುದಾಯ ಇತರೆ ಸಮುದಾಯಗಳೊಂದಿಗೆ ಹೊಂದಿರುವ ಸಾಂಸ್ಕೃತಿಕ ಸಂಬಂಧಗಳನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಜೋಗಿ ಸಮುದಾಯ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಚರಿಸಿದ ಮತ್ತು ಬಂದು ನೆಲೆಸಿ ಅಲೆಮಾರಿ ಸಮುದಾಯವಾಗಿ ಇಂದಿಗೂ ಜೀವಿಸುತ್ತಿರುವುದನ್ನು ಕಾಣಬಹುದು. ಕೆಲ ಊರುಗಳಲ್ಲಿ ಈ ಸಮುದಾಯ ನೆಲೆ ನಿಂತಿರುವುದನ್ನು ಕಾಣಬಹುದಾಗಿದೆ.

ಗೊಂದಲಿಗರ ಮಾತೃಭಾಷೆ ಮರಾಠಿ ಮತ್ತು ಅರ್ಜುನಜೋಗಿ ಸಮುದಾಯದ ಮಾತೃಭಾಷೆಯೂ ಮರಾಠಿ ಆಗಿದೆ. ಮಾತೃ ಪರಂಪರೆಯ ಆರಾಧಕರಾದ ಗೊಂದಲಿಗರು ಮಹಾರಾಷ್ಟ್ರದ ತುಳಜಾಪುರದ ಅಂಬಾಭವಾನಿ ಕರ್ನಾಟಕದ ಸವದತ್ತಿ ಯಲ್ಲಮ್ಮ, ಮಹಾರಾಷ್ಟ್ರ ಗಡಿ ಭಾಗವಾದ ಬೆಳಗಾವಿ ಜಿಲ್ಲೆಯಲ್ಲಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಕವಿರಾಜಮಾರ್ಗ ಪೂರ್ವದಿಂದಲೂ ಸಾಂಸ್ಕೃತಿಕ ಸಂಬಂಧ ಹೊಂದಿರುವುದರ ಬಗೆ ಹಲವಾರು ಚಾರಿತ್ರಿಕ ಹಿನ್ನೋಟಗಳಿವೆ. ಕಲೆಯನ್ನು ನಂಬಿ ಜೀವಿಸುವ ಅಲೆಮಾರಿ ಸಮುದಾಯವೆನಿಸಿದ ಗೊಂದಲಿಗರು ಮಹಾರಾಷ್ಟ್ರದಲ್ಲಿ ಮತ್ತು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಸಿರಬಹುದ್ದುದಾಗಿದೆ. ಅಲ್ಲದೆ ಅಲೆಮಾರಿಗಳಾದ ಇವರು ಮಹಾರಾಷ್ಟ್ರ ಕರ್ನಾಟಕ ಆಂಧ್ರಪ್ರದೇಶ ಇತರೆ ರಾಜ್ಯಗಳಲ್ಲಿ ಸಂಚರಿಸುತ್ತಾ ಜೀವಿಸುತ್ತಿದ್ದಾರೆ. ಅಂಬಾಭವಾನಿ ಮತ್ತು ಯಲ್ಲಮ್ಮರ ಮಾತೃ ಆರಾಧನೆಯನ್ನು ಕರ್ನಾಟಕದಲ್ಲಿ ಆರಾಧಿಸುವ ಇತರೆ ಜನ ಸಮುದಾಯಗಳು ಇದಾವೆ. ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಪರಂಪರೆ ಇದೆ ಎಂಬುದಕ್ಕೆ ಈ ಸಮುದಾಯ ಜಿಲ್ಲೆಯಲ್ಲಿ ಕಂಡುಬರುವ ಇತರೆ ಸಮುದಾಯಗಳೊಂದಿಗೆ ಸಾಂಸ್ಕೃತಿಕ ಕೂಡುಕೊಳ್ಳುವಿಕೆಯ ಭಾಗವಾಗಿ ನೆಲೆಸಿರುವುದರ ಕುರುಹುವಾಗಿದೆ.

ದೊಂಬಿದಾಸರು "ಕರ್ನಾಟಕ ಗಡಿಭಾಗಗಳಾದ ತಮಿಳುನಾಡಿನ ಉತ್ತರ ಅರ್ಕಾಟ್, ತಾಂಜಾವುರು, ಮಧುರೈ ಮತ್ತು ಆಂಧ್ರ ಪ್ರದೇಶದ ಅನಂತಪುರ, ಹಿಂದೂಪುರ, ಪೆನಗೊಂಡ ಜಿಲ್ಲೆಗಳಲ್ಲಿ ಇವರ ನೆಲೆಗಳಿದ್ದವೆಂದು ಗುರುತಿಸಿದೆ. ಮೂಲತಃ ಆಂಧ್ರ ಪ್ರದೇಶದವರಾದ ಈ ವೃತ್ತಿಗಾಯಕರು ವಿಜಯನಗರ ಅರಸರ ಕಾಲದಲ್ಲಿ ದಕ್ಷಿಣ ಭಾರತದಾದ್ಯಂತ ಹರಡಿಕೊಂಡಂತೆ ಕಂಡುಬರುತ್ತದೆ. ಅಂದು ಅವರ ಹೆಸರು 'ದಂಡಿದಾಸರು' ಎಂಬುದಾಗಿತ್ತು ಎಂದು ತಿಳಿದುಬರುತ್ತದೆ."[೩] ಈ ವಿಚಾರದ ಹಿನ್ನೆಲೆಗೆ ಪೂರಕವಾಗಿ ಇನ್ನೊಂದು ಮೂಲದ ಪ್ರಕಾರ "ವಿಜಯನಗರ ಅರಸರ ಶ್ರೀಕೃಷ್ಣದೇವರಾಯನ ನಂಬಿಕಸ್ಥ ಗೂಡಾಚಾರರಾಗಿದ್ದರೆಂದು ರಾಜ್ಯಾಡಳಿತಕ್ಕೆ ಸಂಬಂಧಿಸಿದ ಗುಪ್ತ ಮಾಹಿತಿಗಳನ್ನು ಸಂಗ್ರಹಿಸಲು ಕಲಾವಿದರಾಗಿ ಊರೂರು ಅಲೆದು ಮಾಹಿತಿ ಸಂಗ್ರಹಿಸಿ ರಾಜ್ಯಾಡಳಿತಕ್ಕೆ ತಲುಪಿಸುತ್ತಿದ್ದರೆಂದೂ ನಂಬಲಾಗಿದೆ. ಹೀಗೆ ಸೈನಿಕರಿಗೆ ಮನರಂಜನೆ ಮತ್ತು ಗೂಢಾಚಾರ ಕೆಲಸ ಎರಡನ್ನು ಮಾಡುತ್ತಿದ್ದರು ಮತ್ತು ದಂಡಿನ ಜೊತೆ ಇರುತ್ತಿದ್ದ ದಂಡಿದಾಸರೇ ಈ ದೊಂಬಿದಾಸರಾಗಿರುವ ಸಾಧ್ಯತೆ ಇದೆ."[೪] ಈ ಮೇಲಿನ ವಿವರಗಳು ದೊಂಬಿದಾಸರ ಮೂಲಗಳನ್ನು ಖಚಿತಪಡಿಸಿರುವುದನ್ನು ಒಪ್ಪಿಕೊಳ್ಳಬಹುದಲ್ಲದೆ. ಚಿತ್ರದುರ್ಗ ಜಿಲ್ಲೆಯು ಆಂಧ್ರದ ಗಡಿಭಾಗದ ಜಿಲ್ಲೆಯಾಗಿರುವುದರಿಂದ ಆಂಧ್ರ ಪ್ರದೇಶದ ಜೊತೆಗೆ ಸಾಂಸ್ಕೃತಿಕ ಸಂಬಂಧ ಹೊಂದಿದ ಪ್ರದೇಶವಾಗಿದೆ. ಇಲ್ಲಿನ ಮ್ಯಾಸಬೇಡ, ಬೋವಿ, ಬುಡ್ಗಜಂಗಮ, ಮಾದಿಗ, ಶೆಟ್ಟರು ಇತರೆ ಸಮುದಾಯಗಳ ಮೂಲವು ಆಂಧ್ರ ಪ್ರದೇಶವಾಗಿದೆ. ಹೀಗಾಗಿ ದೊಂಬಿದಾಸ ಸಮುದಾಯವು ಈ ಸಮುದಾಯಗಳ ಜೊತೆ ಜೊತೆಯಲ್ಲಿಯೇ ಬಂದು ನೆಲೆಸಿರಬಹುದು ಮತ್ತು ವಿಜಯನಗರ ಸಾಮ್ರಾಜ್ಯದಲ್ಲಿ ಸೈನಿಕರಾಗಿ ಕೆಲಸ ಮಾಡಿದ ಮ್ಯಾಸಬೇಡ ಬುಡಕಟ್ಟು ಮತ್ತು ದೊಂಬಿದಾಸ ಅಲೆಮಾರಿ ಬುಡಕಟ್ಟು ಸಮುದಾಯದ

ಹಿನ್ನೆಲೆಯಲ್ಲಿ ಅಥವಾ ಅವರ ಜೊತೆಯಲ್ಲಿ ಇವರು ವಿಜಯಗನರ ಪತನದ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಸಿ ಜೀವಿಸುತ್ತಿರಬಹುದು. ದೊಂಬಿದಾಸ ಸಮುದಾಯ ಚಿತ್ರದುರ್ಗ ಜಿಲ್ಲೆಯಲ್ಲಿ ತಮ್ಮ ಕಲೆಯನ್ನು ಪ್ರಸ್ತುತ ಪ್ರದರ್ಶಿಸುತ್ತ ಇತರೆ ಸಮುದಾಯಗಳೊಂದಿಗೆ ಸಹಕಾರಂದ ಜೀವನ ನಡೆಸುತ್ತಿರುವುದನ್ನು ಕಾಣುತ್ತೇವೆ.

ಇನ್ನು ದೊಂಬಿದಾಸರಂತೆ ತೆಲುಗು ಮಾತೃಭಾಷೆಯನ್ನಾಡುವ ಆಂಧ್ರ ಮೂಲದ ಮತ್ತೊಂದು ಅಲೆಮಾರಿ ಸಮುದಾಯ ಬುಡ್ಗ ಜಂಗಮ ಸಮುದಾಯವನ್ನು ಪ್ರಾದೇಶಿಕತೆಗೆ ಅನುಗುಣವಾಗಿ ವಿವಿಧ ರೀತಿಯಲ್ಲಿ ಕರೆಯುತ್ತಾರೆ. "ಪೂರ್ವಕಾಲದಲ್ಲಿ ಆಂಧ್ರ ಪ್ರದೇಶದ ಶ್ರೀಶೈಲ ಅರಣ್ಯ ಭಾಗಗಳಲ್ಲಿ ಬೇಟೆಯನ್ನೇ ಪ್ರಧಾನವಾಗಿಟ್ಟುಕೊಂಡು ನೆಲೆಸಿರುವ ಬುಡ್ಗ ಜಂಗಮರು ಬೇಟೆಯಿಂದ ತಂದ ಮಾಂಸಹಾರದ ಸ್ವಲ್ಪ ಭಾಗವನ್ನು ಶಿವನಿಗೆ ಭಕ್ತಿಯಿಂದ ಸಮರ್ಪಿಸಿ ತಾವು ಊಟ ಮಾಡುವುದು ಸಂಪ್ರದಾಯ ಎಂದು 'ಶ್ರೀ ಕಾಳಹಸ್ತಿ ಮಹಾತ್ಮಮು' ಎಂಬ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಅದೇ ರೀತಿಯಾಗಿ ಡಾ. ಎನ್.ಆರ್. ವೆಂಕಟೇಶ ಅವರ ಅಭಿಪ್ರಾಯದಂತೆ ಆಹಾರ ಸಂಗ್ರಹಣೆಗಾಗಿ ಹಾಗೂ ಬೇಟೆಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬುಡ್ಗ ಜಂಗಮರು ವಲಸೆ ಹೋಗುವುದು ಸಹಜ ಎಂಬುದನ್ನು ಮನಗೊಂಡಿದ್ದಾರೆ. ಇವರು ಕಾಡಿನಿಂದ ಚದುರಿ ಮಹಾರಾಷ್ಟ್ರ ಕರ್ನಾಟಕ ಇನ್ನಿತರ ರಾಜ್ಯಗಳಿಗೆ ಗುಳೆಹೋಗಿರುವರು. ತಮ್ಮ ಸಂಚಾರಿ ಜೀವನದಲ್ಲಿ ವಿವಿಧ ವೃತ್ತಿಗಳನ್ನು ಕಂಡುಕೊಂಡಿರುವವರು"[೫] ಎಂದು ತಿಳಿದುಬರುತ್ತದೆ.

"ಕಾಡಿನಲ್ಲಿ ಸಣ್ಣಪುಟ್ಟ ಸಮುದಾಯಗಳ ಒಳ ಜಗಳ ಮತ್ತು ಆಂಗ್ಲ, ನಿಜಾಮ್ ಹಾಗೂ ಮುಸ್ಲಿಂರ ದಬ್ಬಾಳಿಕೆಗಳನ್ನು ಸಹಿಸದ ಇಡೀ ಸಮುದಾಯ ಅನೇಕ ತಿರುವುಗಳನ್ನು ಕಂಡಿತು. ಕಾಡಿನಿಂದ ನಾಡಿನತ್ತ ಮರಳುವ ಸಂದರ್ಭದಲ್ಲಿ ಹೊಟ್ಟೆಪಾಡಿಗಾಗಿ ಸಾಂಸ್ಕೃತಿಕ ವೇಷಗಳನ್ನು ಹಾಕಿ ಕಲೆ ಪ್ರದರ್ಶನ ನೀಡುತ್ತಾ ನಾಡಿನಲ್ಲಿ ಪ್ರವೇಶ ಪಡೆದರು. ಒಂದೊಂದು ತಂಡವಾಗಿ ಊರಿನಲ್ಲಿ ಪ್ರವೇಶ ಮಾಡಿದ ಇವರು ಆ ಕಾಲದ ಘಟನೆಗಳನ್ನು ಹಾಗೂ ಧಾರ್ಮಿಕ ಪ್ರಚಾರವನ್ನು ತಮ್ಮ ವೇಷಗಳ ಹಾಗೂ ಕಲಾ ಪ್ರಕಾರಗಳ ಮೂಲಕ ತೋರಿಸುತ್ತ ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಗೋವಾ ರಾಜ್ಯಗಳಿಗೆ ವಲಸೆಗೊಂಡು ಅಲ್ಲಿಯ ಪ್ರಾದೇಶಿಕ ಭಾಷೆಗಳಲ್ಲಿ ಕಲೆಗಳನ್ನು ಪ್ರದರ್ಶಿಸುತ್ತಾ ಜೀವನ ಸಾಗಿಸುತ್ತಿರುವರು."[೬] ಶ್ರೀಶೈಲದ ಅರಣ್ಯ ಭಾಗಗಳಲ್ಲಿ ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಈ ಸಮುದಾಯದ ಹಿನ್ನೆಲೆ ಮ್ಯಾಸಬೇಡರ ಮೂಲದ ದೃಷ್ಟಿಯನ್ನು ಇವರ ಮೂಲಸ್ಥಳ ಪ್ರತಿಪಾದಿಸುತ್ತದೆ. ವೇಷಗಳನ್ನು ಧರಿಸಿ ಜೀವನ ನಡೆಸುವ ಇವರ ಬದುಕು ದೊಂಬಿದಾಸರು ಮತ್ತು ಮಾದಿಗರ ಜೀವನ ವೃತ್ತಿ ಪರಂಪರೆಯ ಮೂಲವನ್ನು ಹೊಲುತ್ತದೆ. ಈ ಮೇಲೆ ಹೇಳಿದಂತೆ ಈ ಸಮುದಾಯವು ಆಂಧ್ರ ಪ್ರದೇಶದಲ್ಲಿ ಹೆಚ್ಚು ಕಂಡುಬರುತ್ತಾರೆ. ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಲ್ಲಿ ಆಂಧ್ರ ಪ್ರದೇಶದ ಗಡಿ ಭಾಗವಾಗಿರುವುದರಿಂದ ಈ ಜಿಲ್ಲೆಗಳಲ್ಲೂ ತಮ್ಮ ವೃತ್ತಿ ಬದುಕನ್ನು ಮಾಡುತ್ತಾ ಜೀವಿಸುತ್ತಿರುವುದನ್ನು ಕಾಣಬಹುದು.

ಒಟ್ಟಾರೆ ನಾಲ್ಕು ಸಮುದಾಯಗಳು ಅಲೆಮಾರಿ ಸಮುದಾಯಗಳಾಗಿದ್ದು, ಕಲೆಯೇ ಇವರ ಜೀವನ ನಿರ್ವಹಣೆಯ ಭಾಗವಾಗಿರುವುದರಿಂದ ಬೇರೆ ಬೇರೆ ಕಡೆಯಿಂದಲೂ ಚಿತ್ರದುರ್ಗ ಜಿಲ್ಲೆಗೆ ಬಂದು ಕಲೆ ಪ್ರದರ್ಶಿಸಿ ಜೀವಿಸುತ್ತಿದ್ದಾರೆ. ಅಲ್ಲದೆ ಇತರೆ ಜನ ಸಮುದಾಯಗಳ ಜೊತೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಈ ಭಾಗದ ಸಾಂಸ್ಕೃತಿಕ ಆಮರವಂತಿಕೆಗೆ ಕಾರಣರಾಗಿದ್ದಾರೆ ಎಂಬುದನ್ನು ಕಾಣಬಹುದು.

ಅಲೆಮಾರಿ ಸಮುದಾಯಗಳ ಪರಿಚಯ

ಪ್ರಸ್ತುತ ಅಧ್ಯಯನಕ್ಕೊಳಪಟ್ಟಿರುವ ಅಲೆಮಾರಿ ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ಅರ್ಜುನ ಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಚಾರಿತ್ರಿಕವಾದ ಹಿನ್ನೆಲೆಯೊಂದಿಗೆ ಈ ಕೆಳಗಿನಂತೆ ಪರಿಚಯಿಸಬಹುದಾಗಿದೆ.

೨.೩.೧. ಗೊಂದಲಿಗರು

ಜಾನಪದ ಕಾವ್ಯಪರಂಪರೆ ಇಡೀ ಸಮೂಹದೊಳಗೆ ಸಂಚಲಿಸಿದಂತೆ ಒಂದು ನಿರ್ದಿಷ್ಟ ಸಮುದಾಯಕ್ಕೆ ವಿಶಿಷ್ಟ ಮೆರಗನ್ನು ಕೊಡುತ್ತಾ ಅವರಲ್ಲಿಯೇ ಸೀಮಿತಗೊಳ್ಳುವುದೂ ಉಂಟು. ಸಾಮಾನ್ಯವಾಗಿ ಒಂದು ಸಮುದಾಯದ ಹಿನ್ನೆಲೆಯಲ್ಲಿ ಹುಟ್ಟುವ ಇಂಥ ಜನಪದ ಪರಂಪರೆಯ ಹಿಂದೆ ಸಾಮಾಜಿಕ, ಪ್ರಾದೇಶಿಕ, ಧಾರ್ಮಿಕ ಮೂಲದ ಸಂಬಂಧಗಳು ಇರುತ್ತವೆ. ಹೀಗೆ ಸಾಮಾಜಿಕ, ಪ್ರಾದೇಶಿಕ, ಧಾರ್ಮಿಕ ಕಾರಣಗಳಿಗಾಗಿ ಎಂಬಂತೆ ಗೊಂದಲಿಗ ಸಮುದಾಯದೊಳಗೆ ಗೊಂದಲಿಗರ ಕಾವ್ಯಪರಂಪರೆಯು ಅಡಗಿದೆ. ಇದರಂತೆ ಅವರ ಹಿನ್ನೆಲೆ ಹೀಗಿದೆ.

ಕರ್ನಾಟಕ, ಮಹಾರಾಷ್ಟ್ರದಾದ್ಯಂತ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಕಂಡು ಬರುವ ಗೊಂದಲಿಗರು ತಮ್ಮ ಹೊಟ್ಟೆಪಾಡಿಗಾಗಿ ಹಲವಾರು ವೃತ್ತಿಗಳನ್ನು ಕೈಗೊಂಡರೂ ಪ್ರವೃತ್ತಿಯಾಗಿ ಜನಪದ ಹಾಡುಗಾರಿಕೆಯಲ್ಲಿ (ಗೊಂದಲ) ತೊಡಗಿರುತ್ತಾರೆ. ಈ ಕಲೆಗಾರಿಕೆಯ ಹಿನ್ನೆಲೆಯಲ್ಲಿಯೇ ಸಮುದಾಯದ ಗುರುತಿಸುವಿಕೆ ಇದೆ. ಅದು ಈ ಕೆಳಗಿನಂತಿದೆ.

ಗೊಂದಲಿಗ ಪದ ನಿಷ್ಪತ್ತಿ: ಗೊಂದಲಿಗ ಪದದ ಕುರಿತು ನಿಂಗಣ್ಣ ಸಣ್ಣಕ್ಕಿ, ಜ್ಯೋತಿ ಹೊಸೂರು ತುಂಬಾ ವಿವರವಾಗಿ ಚರ್ಚಿಸಿರುವುದನ್ನು ಕಾಣಬಹುದು.

"ಗೊಂದಲ' ಶಬ್ದವು ಮೂಲತಃ ಕರ್ನಾಟಕದ್ದು, ಅದು ಮರಾಠಿ ಶಬ್ದವಲ್ಲ' ಎನ್ನುವುದೇ ಇವರ ಸಿದ್ಧಾಂತ. 'ಗೊಂದಲ' ಪದಕ್ಕೆ 'ಗಲಿಬಿಲಿ', 'ಗೋಜಲು', 'ಗದ್ದಲ' ಮುಂತಾದ ಅರ್ಥಗಳು ಇವೆ. ಗೊಂದಲ ಪದವು ಸಮೂಹ, ಸಮೂಹ ಕುಣಿತ ಎನ್ನುವ ಅರ್ಥದಲ್ಲಿ ೮-೧೧ನೇ ಶತಮಾನಗಳ ಕಾವ್ಯಗಳಲ್ಲಿ ಪ್ರಯೋಗ ಗೊಂಡಿರುವುದರ ಕುರಿತು ಜ್ಯೋತಿ ಹೊಸೂರುವರು ತಿಳಿಸುತ್ತಾರೆ. ಗೊಂದಲ ಎನ್ನುವುದು ದೈವೀ ಆರಾಧನೆಯ ಕ್ರಮಗಳಲ್ಲಿ ಒಂದಾಗಿದ್ದು, ಇಂದು ಅಂಥ ದೈವೀ ಆರಾಧನೆ ಕೈಗೊಳ್ಳುವ ನಿರ್ದಿಷ್ಟ ಸಮುದಾಯಕ್ಕೆ ಆ ಹೆಸರು ಉಳಿದುಕೊಂಡು ಬಂದಿದೆ. ಗೊಂದಲ ಧಾರ್ಮಿಕ

ವಿಧಿ ಆಚರಣೆಗಳನ್ನು ಅನುಸರಿಸುವ ಸಮುದಾಯಕ್ಕೆ ಗೊಂದಲಿಗರು ಎಂದು ಕರೆಯಲಾಗುತ್ತದೆ. ಅನಂತ ಕೃಷ್ಣ ಅಯ್ಯರ್ ಅವರು ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್ ಎನ್ನುವ ಕೃತಿಯಲ್ಲಿ ಗೊಂದಲಿಗರನ್ನು They are a class of eligious beggers ministrel recruited from various castes and are as children offered to godsion fulilments of Vours."[೭] ಎನ್ನುತ್ತಾರೆ. ಮೇಲಿನ ವಿವರಗಳಿಗೆ ಪೂರಕವಾದ ಚಾರಿತ್ರಿಕ ವಿವರಗಳು ಹೀಗಿದೆ.

"ಮಹಮದೀಯರ ದಾಳಿಯಿಂದ ಹಿಂದೂ ಧರ್ಮ ಅವನತಿಯ ಹಾದಿಯಲ್ಲಿದ್ದಾಗ, ಅಂಬಾಭವಾನಿಯ ಭಕ್ತರಾದ ಗೊಂದಲಿಗರು, ಮಹಾರಾಷ್ಟ್ರದ ಕೊಲಾಬ, ಸತಾರ, ಕಾನೇಶ ಹಾಗೂ ಕೊಲ್ಲಾಪುರ ಪ್ರದೇಶಗಳಲ್ಲಿ ಸಂಸ್ಕೃತಿಯ ಪ್ರಸಾರಕರಾಗಿ ತಲೆಯೆತ್ತಿ ಕೊಂಡರು. ಅಂಬಾಭವಾನಿ ಗೊಂದಲಿಗರ ಮೇಲೆ ಮೈದುಂಬಿ ಮರಾಠ ವೀರರಿಗೆ ಹೋರಾಟಗಳಲ್ಲಿ ಮಾರ್ಗದರ್ಶನ ಮಾಡುತ್ತಿದ್ದಳೆಂಬ ಕಥೆಗಳೂ ಪ್ರಚಲಿತದಲ್ಲಿವೆ"[೮] ಎಂದು ತಿಳಿದುಬರುತ್ತದೆ.

ಕನ್ನಡದ ಪಂಪ, ರುದ್ರಭಟ್ಟ, ವಿರೂಪಾಕ್ಷ ಪಂಡಿತ, ಲಕ್ಷ್ಮೀಶ ಮುಂತಾದ ಕವಿಗಳು ಗೊಂದಲ ಶಬ್ದವನ್ನು ಸಮೂಹ ಎನ್ನುವ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಹನ್ನೊಂದನೇ ಶತಮಾನದ ಅಭಿನವ ಪಂಪನು, ಈ ಶಬ್ದವನ್ನು ಒಂದು ಬಗೆಯ ಗೋಷ್ಠಿ ಎಂಬರ್ಥದಲ್ಲಿ ಉಪಯೋಗಿಸಿದ್ದಾನೆ.

'ದೇಸೀ ವಿಲಾಸಮಂ ಪಡೆಯೆ ಗೊಂದಳವೆಕ್ಕಣ ವಾಗಳಾನೃಪಾ

ವಾಸರೊಳಾಡಿದೆತ್ತೆಸೆಯೆ, ಪಾಣೆತಲಂ ಪಡೆವಂತೆ ಕುಂಕುಮ'

ಎಂದು ತನ್ನ ಕಾಲದ ಗೊಂದಳದ ದೇಶೀ ವಿಲಾಸವನ್ನು ವರ್ಣಿಸಿದ್ದಾನೆ.

ಮೈಸೂರು ಟ್ರೈಬ್ಸ್ ಅಂಡ್ ಕಾಸ್ಟ್ ಕೃತಿಯಲ್ಲಿ ರೇಣುಕೆ ಎಲ್ಲಮ್ಮನ ಗಂಡ ಜಮದಗ್ನಿ ಗೊಂದಲಿಗರ ಮೂಲ ಪುರುಷ ಎಂದು ತಿಳಿದುಬರುತ್ತದೆ.

ಡಾ. ನಿಂಗಣ್ಣ ಸಣ್ಣಕ್ಕಿಯವರು "ಗೊಂದಲಿಗ ಸಮುದಾಯವು ಕನ್ನಡದ ನೆಲದಲ್ಲಿ ಅತೀ ಪ್ರಾಚೀನ ಕಾಲದಿಂದಲೂ ನೆಲೆಸಿದ ಒಂದು ಬುಡಕಟ್ಟು ಜನಾಂಗ, ಇವರು ಮಾತೃ ಮೂಲದವರು"[೯] ಎಂದು ತಿಳಿಸುತ್ತಾರೆ.

ಡಾ. ಗದ್ದಗೀಮಠರವರು ೭–೮ನೇ ಶತಮಾನದಷ್ಟು ಹಿಂದೆಯೇ ಗೊಂದಲಿಗರು ಕನ್ನಡದ ನೆಲದಲ್ಲಿ ನೆಲೆಗೊಂಡಿದ್ದರು ಎಂದು ತಿಳಿಸುತ್ತಾರೆ. ಹಾಗೆ ಜ್ಯೋತಿ ಹೊಸೂರ ಅವರೂ ಕೂಡ ಗೊಂದಲಿಗರು ಕನ್ನಡದ ಮೂಲದವರೆಂದೇ ತಿಳಿಸುತ್ತಾ ಗದ್ದಗೀಮಠರ ಮಾತುಗಳನ್ನೇ 'ಗೊಂದಲ' ಪದದ ಹಿನ್ನೆಲೆಯಲ್ಲಿ ಪುಷ್ಟೀಕರಿಸುತ್ತಾರೆ.

ಒಟ್ಟಿನಲ್ಲಿ ಗೊಂದಲಿಗರು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನೊಳಗೊಂಡ 'ಮಾತೃಮೂಲ ಸಂಸ್ಕೃತಿಗೆ' ಒಳಗಾದವರು. ಇಂದು ಈ ಸಮುದಾಯವು ಇತರ ಸಮುದಾಯಗಳಂತೆ ಪುರುಷ ಪ್ರಧಾನ ವ್ಯವಸ್ಥೆಯನ್ನು ತನ್ನ ನಿತ್ಯ ಜೀವನಕ್ಕೆ ಅಳವಡಿಸಿಕೊಂಡರೂ ಮಾತೃ ಮೂಲದ ನೆನಪಿಗಾಗಿ

ಎಂಬಂತೆ ಇಂದಿಗೂ ಇವರು ಅಂಬಾ ಭವಾನಿ, ತುಳಜಾ ಭವಾನಿ ಮುಂತಾದ ಮಾತೃ ದೈವಗಳ ಆರಾಧಕರಾಗಿದ್ದಾರೆ.

ಕಾರ್ತ್ಯವೀರ್ಯಾರ್ಜುನನು ಕಾಮಧೇನುವನ್ನು ಬಂಧಿಸಿದಾಗ ಕಾಮಧೇನುವಿನ ಮೂತ್ರ ದಿಂದ ಹುಟ್ಟಿದ ದ್ರಾವಿಡರೇ ಗೊಂದಲಿಗರೆಂದೂ ಆ ದ್ರಾವಿಡರು ಕಾರ್ತ್ಯವೀರ್ಯಾರ್ಜುನನ ಸಂಹಾರ ಮಾಡಿ ಅವನ ದೇಹವನ್ನು ಚೌಡಿಕೆ ಮಾಡಿಕೊಂಡು ದೇವಿಯನ್ನು ಸ್ತುತಿಸುತ್ತಾರೆ ಎಂದು ಸ್ಥಳೀಯವಾದ ಕಥೆಯೊಂದು ತಿಳಿಸುತ್ತದೆ.

ಮೇಲಿನ ಕಥೆಯು ಸೌದತ್ತಿ ಎಲ್ಲಮ್ಮನಿಗೆ ತೀರಾ ಹತ್ತಿರವಾದ ಕಥೆಯಾಗಿದೆ. ಆದರೆ ಎಲ್ಲಮ್ಮನ ಜೋಗತಿಯರಿಗೂ ಮತ್ತು ಗೊಂದಲಿಗರಿಗೂ ಯಾವುದೇ ರೀತಿಯ ಸಂಬಂಧಗಳು ಇಲ್ಲವೆಂದೇ ಹೇಳಬಹುದು.

ಗೊಂದಲಿಗರು ಅಂಬಾಭವಾನಿ, ತುಳಜಾ ಭವಾನಿ, ಎಲ್ಲಮ್ಮ, ಲಕ್ಷ್ಮೀ, ಹುಲಿಗೆಮ್ಮ ಮುಂತಾದ ದೈವಗಳ ಆರಾಧಕರು. ಅವರು ನುಡಿಸುವ ವಾದ್ಯಗಳು ಜೋಗತಿಯರ ವಾದ್ಯಗಳನ್ನು ಹೋಲುವಂತಿದ್ದರೂ ಎರಡೂ ಭಿನ್ನವಾದ ಕಾವ್ಯ ಪರಂಪರೆಯನ್ನು ಒಳಗೊಂಡಂತವುಗಳು. ಜೋಗತಿಯರಲ್ಲಿ ಯಾವುದೇ ಜಾತಿಗೆ ಸೇರಿದವರು ಎಲ್ಲಮ್ಮ ಹುಲಿಗೆಮ್ಮರ ಜೋಗತಿಯರಾಗಬಹುದು. ಪುರುಷರಂತೆ ಮಹಿಳೆಯರೂ ಜೋಗತಿಯರಾಗಬಹುದು. ನಪುಂಸಕರೂ ಸಹ ಜೋಗತಿಯರಾಗ ಬಹುದು ಎಂಬುದನ್ನು ಚಿತ್ರದುರ್ಗ ಭಾಗದಲ್ಲಿ ಕಾಣುತ್ತೇವೆ. ಗೊಂದಲಿಗರಲ್ಲಿ ಮಾತೃ ದೈವಾರಾಧಕರಾದರೂ ಮಹಿಳೆಯರು ನೇರವಾಗಿ ಗೊಂದಲ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ. ಬೇರೆ ಮಹಿಳೆಯರಂತೆ ಪ್ರೇಕ್ಷಕರಾಗಿ ಮಾತ್ರ ಗೊಂದಲಿಗರ ಹೆಣ್ಣುಮಕ್ಕಳು ಭಾಗವಹಿಸಬಹುದು.

ವೃತ್ತಿಗಾಯಕ ಸಮುದಾಯವಾದ ಗೊಂದಲಿಗರ ಮೇಳದಲ್ಲಿ ಇಬ್ಬರು ಅಥವಾ ಮೂವರು ಭಾಗವಹಿಸುತ್ತಾರೆ. ಆದರೆ ಜೋಗತಿಯರ ಮೇಳದಲ್ಲಿ ಒಬ್ಬರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಗುಂಪನ್ನು ಹೊಂದಿರಬಹುದು.

ಗೊಂದಲಿಗರಲ್ಲಿ ಸ್ವಗೋತ್ರ ಮತ್ತು ಭಿನ್ನಗೋತ್ರಗಳೆಂಬ ಪ್ರಭೇದಗಳು ಕಂಡುಬರುತ್ತವೆ. ಸ್ವಗೋತ್ರದಲ್ಲಿ ಬ್ರಾಹ್ಮಣ, ದನಗಾರ, ಮರಾಠ, ಕಂಬಾರ, ಜೋಗಿ, ರೇಣುಕರಾಯ, ಮಾಲಿ, ಅಕರ್‌ಮಾಸ್ ಎಂಬ ಎಂಟು ಉಪಪಂಗಡಗಳಿವೆ. ಭಿನ್ನ ಗೋತ್ರದಲ್ಲಿ ಗಾಯಕವಾಡ, ಪವಾರ ಮುಂತಾದ ಹನೇರಡು ಬಗೆಯ ಉಪಪಂಗಡಗಳಿವೆ. ಇವುಗಳಲ್ಲದೇ ಬುಡಬುಡಕಿ, ವೃತ್ತಿಗಾಯಕ, ತಾರಕರಿ, ಎಣ್ಣೆ ಜೋಗಿ, ಸಿಂಗದವರು, ಭಾಟರು, ವಾಸುದೇವ, ಜ್ಯೋತಿಷಿ, ಗಿಳಿ ಶಕುನ, ಚಿತ್ತವೃತ್ತಿ, ಮುಂತಾದ ವೃತ್ತಿಯವರೂ ಇದ್ದ ಬಗ್ಗೆ ಮಾಹಿತಿ ದೊರೆಯುತ್ತದೆ."[೧೦]

ಈ ಮೊದಲೇ ತಿಳಿಸಿದಂತೆ ಗೊಂದಲಿಗರು ಅಲೆಮಾರಿಗಳಾಗಿ ತಿರುಗಿದರೂ, ಮೂಲ ಸ್ಥಾನವಾಗಿ ನಿರ್ದಿಷ್ಟ ಊರೊಂದನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ತಮಗೆ ಸಂಬಂಧಿಸಿದ ಆಸ್ತಿಪಾಸ್ತಿಗಳನ್ನು

ಆ ಊರಿನಲ್ಲಿ ಕ್ರೋಢಿಕರಿಸಿರುತ್ತಾರೆ. ಕರ್ನಾಟಕದಾದ್ಯಂತ ಗೊಂದಲಿಗರು ಕಂಡುಬಂದರೂ, ಅವರು ಹೆಚ್ಚಾಗಿ ನೆಲೆಯೂರಿರುವುದು ಉತ್ತರ ಕರ್ನಾಟಕದಲ್ಲಿಯೇ. ಮಹಾರಾಷ್ಟ್ರ ಗಡಿಯಾದ ಬೆಳಗಾವಿ, ಕೆರೂರ, ಬಾದಾಮಿ, ಗಜೇಂದ್ರಗಡ, ಕನಕಗಿರಿ, ಕೊಪ್ಪಳ, ಕಡಕೋಳ, ಮುರುಗೋಡು, ಬೈಲವಾಡ, ಗದಗ, ಮುಳಗುಂದ, ಲಕ್ಷ್ಮೇಶ್ವರಗಳಲ್ಲಿ ವಾಸವಾಗಿದ್ದಾರೆ. ಇವುಗಳಲ್ಲದೆ ಜಮಖಂಡಿ, ಬಿಜಾಪುರ, ರಾಮದುರ್ಗ, ಗೋಕಾಕ, ರಾಯಭಾಗ, ಸಂಕೇಶ್ವರ, ಹುಕ್ಕೇರಿ, ಹುಬ್ಬಳ್ಳಿ, ಶಿವಮೊಗ್ಗ, ಬೆಂಗಳೂರು, ಬೀದರ, ಚಿತ್ರದುರ್ಗ ಮುಂತಾದ ಕಡೆ ವಾಸವಾಗಿದ್ದರೆಂದು ನಿಂಗಣ್ಣ ಸಣ್ಣಕ್ಕಿಯವರು ತಿಳಿಸುತ್ತಾರೆ.

೨.೩.೨. ಬುಡ್ಗಜಂಗಮ

ಬುಡ್ಗಜಂಗಮ ಅಥವಾ ಹಗಲುವೇಷಗಾರರು ಎಂದು ಬೇರೆ ಬೇರೆ ಹೆಸರುಗಳನ್ನು ಪ್ರಾದೇಶಿಕವಾಗಿ ಕರೆಸಿಕೊಳ್ಳುವ ಅಲೆಮಾರಿ ಸಮುದಾಯದ ಇವರು ಆಂಧ್ರ–ಕರ್ನಾಟಕಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರನ್ನು ದೊಂಬಿದಾಸರು ಎಂದು ಕೆಲವರು ತಪ್ಪಾಗಿ ಗ್ರಹಿಸಿದ್ದಾರೆ. ದೊಂಬಿದಾಸರಿಗೂ ಮತ್ತು ಬುಡ್ಗಜಂಗಮ ಸಮುದಾಯಕ್ಕೂ ತುಂಬಾ ವ್ಯತ್ಯಾಸಗಳುಂಟು. ಕರ್ನಾಟಕದಾದ್ಯಂತ ನೆಲೆಸಿರುವ ಈ ಸಮುದಾಯದವರನ್ನು ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅತ್ಯಲ್ಪವೆಂದೇ ಹೇಳಬಹುದು. ಕರ್ನಾಟಕದಾದ್ಯಂತ ಸುಮಾರು ಒಂದು ಲಕ್ಷದಷ್ಟು ಜನಸಂಖ್ಯೆಯುಳ್ಳ ಈ ಸಮುದಾಯವು ಆಂಧ್ರ ಕರ್ನಾಟಕ ಮಧ್ಯದ ಅವಿನಾಭಾವ ಸಂಬಂಧದಂತೆ ಕಾಣುತ್ತಾರೆ. ಕರ್ನಾಟಕದ ಆಂಧ್ರಪ್ರದೇಶದ ಗಡಿ ಭಾಗವಾಗಿರುವ ಚಿತ್ರದುರ್ಗ ಜಿಲ್ಲೆಯ ತಾಲೂಕುಗಳಾದ ಹೊಸದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ಕಡೆಗಳಲ್ಲಿ ಇವರು ನೆಲೆಸಿದ್ದಾರೆ. ಅಲ್ಲದೇ ಕರ್ನಾಟಕದಾದ್ಯಂತ ಕಂಡುಬರುತ್ತಾರೆ. ಈ ಸಮುದಾಯದ ವೈಶಿಷ್ಟ್ಯವೆಂದರೆ ಇವರು ಕಲಾವಂತರು, ಕಲಾವಂತಿಕೆಯನ್ನೆ ಜೀವನಾಧಾರಕ್ಕೆ ಬಳಸಿಕೊಂಡು ಭಿಕ್ಷಾಟನೆ ಮಾಡುವ ಈ ಸಮುದಾಯದ ಪುರುಷರು ಪೌರಾಣಿಕ, ಸಾಮಾಜಿಕ, ಚಾರಿತ್ರಿಕ ವೇಷಗಳನ್ನು ಹಾಕಿ ಮನೆ ಮನೆಗೂ ಹೋಗಿ ಅಭಿನಯಿಸಿ ಭಿಕ್ಷೆ ಬೇಡುತ್ತಾರೆ. ಹಾಗೆ ಸ್ತ್ರೀ ಪುರುಷರು ತಂಬೂರಿ, ಗಗ್ಗರಿ, ಡುಮ್ಮಿಗಳನ್ನು ಹಿಡಿದು ಬುರ್ರಕಥೆಗಳನ್ನು ಮನೆ ಮನೆಯ ಮುಂದೆ ಹಾಡುತ್ತಾ ಭಿಕ್ಷಾಟನೆ ಮಾಡುತ್ತಾರೆ. ಹಗಲು ವೇಷಗಾರಿಕೆಯಲ್ಲಿ ಮಹಿಳೆಯರು ಸಾಮಾನ್ಯವಾಗಿ ಪಾಲ್ಗೊಳ್ಳುವುದಿಲ್ಲ. ಹಾಗೇ ಕೆಲ ಪುರುಷರು ವ್ಯವಸಾಯವನ್ನು ಮಾಡುತ್ತಾರೆ. ಬೇಟೆಯನ್ನಾಡಿ ಮಾಂಸಾಹಾರವನ್ನು ಸಂಪಾದಿಸುತ್ತಾರೆ.

ಆಂಧ್ರ ಪ್ರದೇಶದ ಮೂಲದವರಾದ ಈ ಬುಡ್ಗಜಂಗಮರ ಮಾತೃಭಾಷೆ ತೆಲುಗಿನ ಉಪಭಾಷೆ ಯಾಗಿದೆ. ಮಹಿಳೆಯರು ಹಾಡುವ ಬುರ್ರಕಥಾ ಪರಂಪರೆಯ ಹಾಡುಗಳು ಪ್ರಾರಂಭಕ್ಕೆ ತೆಲುಗು ಭಾಷೆಯವೇ ಆಗಿದ್ದು, ತರುವಾಯ ಅವುಗಳನ್ನು ಕನ್ನಡದಲ್ಲಿ ಹಾಡಲು ಪ್ರಾರಂಭಿಸಿರುವುದಾಗಿ ವಕ್ತೃಗಳು ತಿಳಿಸಿದರು. ಮಹಿಳೆಯರ ಹೊರತಾಗಿ ಪುರುಷರೂ ಸಹ ಬುರ್ರಕಥಾ ಹಾಡುಗಳನ್ನು ಹಾಡುವುದುಂಟು. ಚಿತ್ರದುರ್ಗ ಪ್ರಾಂತ್ಯದಲ್ಲಿ ಬಯಲಾಟಗಳಿಗಿರುವಷ್ಟೆ ಮಹತ್ವದ ಸ್ಥಾನ ಈ ಬುರ್ರಕಥಾ ಹಾಡುಗಾರಿಕೆಗೂ ಇದೆ. ಈ ಬುರ್ರಕಥೆಯನ್ನು ಕೇಳುವ ಶ್ರೋತೃಗಳು ಇಂದಿಗೂ ಚಿತ್ರದುರ್ಗ ಪ್ರದೇಶದಲ್ಲಿ

ಇರುವುದೊಂದು ಸಂತೋಷದ ವಿಚಾರವಾಗಿದೆ. ಮೂಲತಃ ಅಲೆಮಾರಿ ಸಮುದಾಯಕ್ಕೆ ಸೇರಿದ ಈ ಬುಡ್ಗಜಂಗಮ ಸಮುದಾಯದವರು ಇಂದು ಒಂದು ಕಡೆ ನೆಲೆನಿಂತು ವ್ಯವಸಾಯ, ಹಾಡುಗಾರಿಕೆ, ಭಿಕ್ಷಾಟನೆ ಮತ್ತು ಇತರ ಕೆಲಸಗಳಿಂದ ಜೀವನ ಸಾಗಿಸುತ್ತಿದ್ದಾರೆ. ವಿರಳವಾಗಿ ಅಲ್ಲಲ್ಲಿ ಅಲೆಮಾರಿತ್ವದ ತನ ಇವರಲ್ಲಿ ಇಂದಿಗೂ ಇದೆ. ವಿಶೇಷವಾಗಿ ಬುಡ್ಗಜಂಗಮ ಸಮುದಾಯದ ಕುರಿತು ಆಳವಾದ ಅಧ್ಯಯನದಲ್ಲಿ ತೊಡಗಿರುವ ಕನ್ನಡ ವಿಶ್ವ ವಿದ್ಯಾಲಯದ ಕೆ.ಎಂ. ಮೇತ್ರಿಯವರು ಮೂಲತಃ ಬುಡ್ಗಜಂಗಮರು ಕಲಾವಿದರಲ್ಲ. ಚರಿತ್ರೆಯ ಯಾವುದೋ ಒಂದು ಹಂತದಲ್ಲಿ ಇವರು ವೃತ್ತಿಗಾಯಕರಾಗಿ, ನಟರಾಗಿ ಪರಿವರ್ತಿತಗೊಂಡಿದ್ದಾರೆ ಎನ್ನುತ್ತಾರೆ. ವಿದ್ಯಾಭ್ಯಾಸವಿಲ್ಲದೆ ಇದ್ದರೂ ಉತ್ತಮ ನಟರಾಗಿರುವ ಬುಡ್ಗಜಂಗಮರ ಪುರುಷ ವರ್ಗವು ಹಾಡು, ನೃತ್ಯ, ಸಂಗೀತ ವಾದ್ಯಗಳ ಬಳಕೆಯಲ್ಲಿ ಪಳಗಿದ ಕೈ ಎನ್ನಲೇಬೇಕು. ಹಾಗೆ ವಂಶಪಾರಂಪರ್ಯವಾಗಿ ಬಂದ ಈ ಕಲೆಯು ಪರೋಕ್ಷವಾಗಿಯೊ ನೇರವಾಗಿಯೊ ಮಹಿಳೆಯರ ಮೇಲೆ ಪ್ರಭಾವ ಬೀರಿರುವುದುಂಟು. ಹೀಗಾಗಿ ಬುಡ್ಗಜಂಗಮ ಮಹಿಳೆಯರು ಹಾಡುಗಾರಿಕೆಯಲ್ಲಿ ಪುರುಷರನ್ನು ಮೀರಿಸುವಷ್ಟು ಪ್ರತಿಭಾವಂತರು.

ಕನ್ನಡ, ತೆಲುಗು ಎರಡೂ ಭಾಷೆಗಳಲ್ಲೂ ಮೌಖಿಕವಾಗಿ ಹಾಡಿ ಕಥೆಯನ್ನು ಮುಂದುವರೆಸಿಕೊಂಡು ಹೋಗಬಲ್ಲವರಾದ ಇವರು ಚಿತ್ರದುರ್ಗದ ಭಾಗದಲ್ಲಿ ದ್ವಿಭಾಷಾ ಬಾಂಧವ್ಯದ ಸಂಕೇತವಾಗಿಯೂ ಕಂಡುಬರುತ್ತಾರೆ. ತೆಲುಗಿನಲ್ಲಿ ಮೂವತ್ತಕ್ಕೂ ಹೆಚ್ಚು ಬುರ್ರಕಥಾ ಕಾವ್ಯಗಳನ್ನು ಹಾಡುವ ಕಲಾವಿದರಿದ್ದುದಾಗಿ ತಿಳಿಸುವ ಈ ಕಲಾವಿದರು ಕನ್ನಡದಲ್ಲಿ ಇಪ್ಪತ್ತಕ್ಕೂ ಹೆಚ್ಚು ಕಾವ್ಯಗಳನ್ನು ಹಾಡಿ ನಟಿಸಬಲ್ಲರು. ಬುರ್ರಕಥೆ ಎನ್ನುವುದು ಕಾವ್ಯ ಮತ್ತು ನಾಟಕಗಳ ಸಮ್ಮಿಶ್ರದಂತೆ ಕಂಡುಬರುತ್ತದೆ. ಹಾಡು ಮಧ್ಯ ಮಧ್ಯ ಸಂಭಾಷಣೆ, ಹಾಡು ಹೀಗೆ ನಿರಂತರವಾಗಿ ಸಾಗುವ ಈ ಕಾವ್ಯಗಳಿಗೆ ಬುಡ್ಗ ಎನ್ನುವ ತಂಬೂರಿಯನ್ನು ಗಗ್ಗರಿಯನ್ನು ಮತ್ತು ಬುರ್ರ ಎನ್ನುವ ಚರ್ಮವಾದ್ಯ ವನ್ನು ಉಪಯೋಗಿಸುತ್ತಾರೆ. ಇವು ಈ ಸಮುದಾಯಗಳ ಚಾರಿತ್ರಿಕ ಅಸ್ಮಿತೆಗಳಾಗಿ ಕಂಡುಬರುತ್ತವೆ. ಚಿತ್ರದುರ್ಗದ ಪ್ರಾಂತ್ಯವು ಆಂಧ್ರ ಪ್ರದೇಶಕ್ಕೆ ತೀರಾ ಗಡಿ ಭಾಗವಾಗಿ ರುವುದರಿಂದ ಬಹುಶಃ ಪೂರ್ವದಿಂದಲೇ ಈ ಭಾಗದಲ್ಲಿ ಇವರು ಬಂದು ನೆಲೆ ನಿಂತಿರಬೇಕೆಂದು ಕಾಣುತ್ತದೆ.

ಬುಡ್ಗ ಜಂಗಮ ಪದ ನಿಷ್ಪತ್ತಿ : ಬುಡ್ಗಜಂಗಮ ಎನ್ನುವುದು ಎರಡು ಪದಗಳ ಸಮ್ಮಿಶ್ರಣ. ಬುಡ್ಗ ಎನ್ನುವ ವಾದ್ಯವನ್ನು ನುಡಿಸುವುದರಿಂದ ಇವರಿಗೆ ಬುಡ್ಗಜಂಗಮ ಎನ್ನುವ ಹೆಸರು ಬಂದಿರಬೇಕು. ಜಂಗಾಲ ಎನ್ನುವ ಜಾತಿಗೆ ಇವರು ಸೇರಿದವರು. ತೆಲುಗಿನ ಜಂಗಾಲವೇ ಕನ್ನಡದಲ್ಲಿ ಜಂಗಮವಾಗಿ ಬದಲಾವಣೆಗೊಂಡಿದೆ ಎಂದು ಹಿ.ಚಿ. ಬೋರಲಿಂಗಯ್ಯನವರು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಜಂಗಮವಾಳ್ಳು, ಜಂಗಾಲು ಆಗಿರಬಹುದೇ ಹೊರತು ಜಂಗಾಲು>ಜಂಗಮಲು ಆಗಿರಲಿಕ್ಕಿಲ್ಲ. ಹಗಲು ವೇಷಗಾರಿಕೆಯನ್ನು ಈ ಸಮುದಾಯದ ಪುರುಷರು ವೃತ್ತಿ ಜೀವನವನ್ನಾಗಿ ಮಾಡಿಕೊಂಡಿರುವುದರಿಂದ ಇವರನ್ನು ಹಗಲುವೇಷಗಾರರೆಂದೂ ಎಂದು ತಿಳಿಯಬಹುದು. ಎಡ್ವರ್ಡ್ ಥರ್ಸ್ಟನ್‌ರವರು ಈ ಸಮುದಾಯದ ಕುರಿತು "A class of Telugu Beggars, who put disgusses (vesham) while begging"[೧೧] ಎಂದು ತಿಳಿಸುತ್ತಾರೆ.

ಪ್ರೊ. ಭೀಮರಾಜುರವರು ಈ ಸಮುದಾಯದ ಕುರಿತು ತಿಳಿಸುತ್ತಾ, ಬುಡುಗ ಎನ್ನುವ ವಾದ್ಯ ನುಡಿಸುವುದರಿಂದ 'ಬುಡುಗ ಜಂಗಾಲ' ಎನ್ನುವ ಹೆಸರು ಬಂದಿದೆ ಎಂದು ವಾದ್ಯದ ಹಿನ್ನೆಲೆಯಲ್ಲಿ ತಿಳಿಸುತ್ತಾರೆ".

"ಹೈದರಾಬಾದ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಆಂಧ್ರದ ಈಗಿನ ತೆಲಂಗಾಣ ಪ್ರದೇಶದ ಕಾಡಿನಲ್ಲಿ ವಾಸ ಮಾಡುವ ಮತ್ತು ಸದಾ ಸುತ್ತಾಡುವ ಜನರನ್ನು 'ಜಂಗಾಲು' ಎಂದು ಕರೆಯುವ ವಾಡಿಕೆ ಇದೆ."[೧೨] ಎಂದು ಕರೆದಿರುವುದು ಈಗಲೂ ಚಿತ್ರದುರ್ಗ ಭಾಗದಲ್ಲಿ ಇವನ್ನು ಜಂಗಾಲು, ಜಂಗಾಲರು ಎಂದು ಕರೆಯುವುದಕ್ಕೆ ಪೂರಕವಾಗಿದೆ. ಅಲ್ಲದೆ ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಗುರುತಿಸಿಕೊಳ್ಳುತ್ತಾರೆ.

ಗೊಂದಲಿಗರಂತೆ ಬುಡ್ಗಜಂಗಮರೂ ಸಹ ಮಾತೃಪ್ರಧಾನವಾದ, ಮಾತೃ ಮೂಲ ಸಂಸ್ಕೃತಿಗೆ ಒಳಗಾದವರು. ಮೇಲ್ನೋಟಕ್ಕೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಒಳಗೊಂಡಂತೆ ಕಂಡುಬಂದರೂ, ಬದುಕಿನ ಆಂತರ್ಯದಲ್ಲಿ ಇಳಿದು ನೋಡಿದಾಗ ಇಂದಿಗೂ 'ಮಾತೃ ಸಂಸ್ಕೃತಿಯ' ಬೇರುಗಳು ಬುಡ್ಗ ಜಂಗಮ ಸಮುದಾಯದಲ್ಲಿರುವುದು ಕಂಡುಬರುತ್ತದೆ. ಬುಡ್ಗಜಂಗಮರು ಎಲ್ಲಮ್ಮ, ಹುಲಿಗೆಮ್ಮ, ಮಾರಮ್ಮ ಮುಂತಾದ ದೈವಗಳ ಆರಾಧಕ ರಾದರೂ, ಶಿವ, ವಿಷ್ಣು ಮುಂತಾದ ದೈವಗಳನ್ನು ಪೂಜಿಸುತ್ತಾರೆ.

ಸಾಮಾನ್ಯವಾಗಿ ಬುಡ್ಗಜಂಗಮರು ಸ್ವಜಾತಿ ಬೆಡಗಿನವರೊಂದಿಗೆ ರಕ್ತ ಸಂಬಂಧವನ್ನು ಬೆಳೆಸುವುದಿಲ್ಲ. ವಿಜಾತಿ ಬೆಡಗಿನವರೊಂದಿಗೆ ಮಾತ್ರ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೆ. ಇನ್ನುಳಿದಂತೆ ಎಲ್ಲಾ ಶುಭ ಅಶುಭ ಕಾರ್ಯಗಳಲ್ಲೂ ಒಂದೆಡೆ ಸೇರುತ್ತಾರೆ. ಇವರು ಸಾಮಾನ್ಯವಾಗಿ ಊರಿನ ಹೊರ ಭಾಗದಲ್ಲಿ ಸಾಮೂಹಿಕವಾಗಿ ಜೀವಿಸುತ್ತಾರೆ. ಇವರು ಸಾಮಾನ್ಯವಾಗಿ ಗುಡಿಸಲನ್ನು ಹಾಕಿಕೊಂಡಿರುತ್ತಾರೆ. ಇತ್ತೀಚೆಗೆ ಕೆಲವರು ಮನೆಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವರನ್ನು ಸಮಾಜದಲ್ಲಿ ಕೀಳಾಗಿ ಕಂಡರೂ ಸಹ ಅಸ್ಪೃಶ್ಯರೆಂದು ಪರಿಗಣಿಸುವುದಿಲ್ಲದಿರುವುದು. ಈ ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ತಿಳಿಸುತ್ತದೆ.

೨.೩.೩. ಅರ್ಜುನಜೋಗಿ

ಅರ್ಜುನಜೋಗಿ ಎಂಬುದು ಅವರು ಬಳಸುವ ಕಿನ್ನರಿ ವಾದ್ಯದಿಂದ ಪರಂಪರಗತವಾಗಿ ಬಂದಿರುವ ಹೆಸರು. ನಾಥ ಪಂಥಾವಲಂಭಿಗಳಾದ ಅರ್ಜುನಜೋಗಿಗಳನ್ನು ಹಂಡಿಜೋಗಿ, ನರಸಣ್ಣಜೋಗಿ ಎಂದೂ ಸಹ ಕರೆಯಲಾಗುವುದು. ಕರ್ನಾಟಕದ ಅಲೆಮಾರಿಗಳಲ್ಲಿಯೇ ವಿಶಿಷ್ಟ ಜನಪದ ಗಾಯಕರೆಂದು ಅರ್ಜುನಜೋಗಿಗಳನ್ನು ಗುರುತಿಸಲಾಗುತ್ತದೆ. ಕರ್ನಾಟಕದ ಮಲೆನಾಡು, ಬಯಲುಸೀಮೆ, ಕರಾವಳಿ ಪ್ರದೇಶ ಹೀಗೆ ಎಲ್ಲಾ ಕಡೆಯೂ ಇವರು ಕಂಡುಬರುತ್ತಾರೆ. ಇವರನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲಾಗುತ್ತದೆ. ಕೆಲವು ಕಡೆ ಅರ್ಜುನಜೋಗಿಗಳೆಂದು, ಹಂಡಿಜೋಗಿಗಳೆಂದು ಇನ್ನೂ ಕೆಲವು ಕಡೆ ಡಬ್ಬಜೋಗಿ, ನರಸಣ್ಣ ಜೋಗಿ, ಬಳೆಗಾರ ಜೋಗಿ,

ರಾವಳಜೋಗಿ, ಶಿವಜೋಗಿ, ಜೋಗಿ ಪುರುಷ ಮುಂತಾದ ಹೆಸರುಗಳಿಂದ ಗುರುತಿಸಿಕೊಳ್ಳುತ್ತಾರೆಯಾದರು ಮೂಲತಃ ಅವರೆಲ್ಲಾ ಒಂದೇ ಆಗಿದ್ದಾರೆ. ಚಿತ್ರದುರ್ಗ ಭಾಗದಲ್ಲಿ ಅರ್ಜುನಜೋಗಿಗಳೆಂದು ಕರೆಯುತ್ತಾರೆ. "೧.೫.೧೯೬೦ ರಲ್ಲಿ ಹಳೆಮೈಸೂರು ಜಿಲ್ಲೆಗಳಲ್ಲಿ ಕಿನ್ನರಿ ಜೋಗಿಗಳಿಗೆ ಹಂಡಿಜೋಗಿ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಗೆ ಕಲ್ಪಿಸಲಾಯಿತು. ತರುವಾಯ ೧.೫.೧೯೭೭ರಿಂದ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಕರ್ನಾಟಕಕ್ಕೆ ವಿಸ್ತರಿಸಲಾಯಿತು."[೧೩] ಇಂದು ಈ ಸಮುದಾಯ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಮೀಸಲಾತಿ ಪಡೆಯುತ್ತಿದೆ.

ಅರ್ಜುನಜೋಗಿಗಳ ಕುರಿತು ಈ ತನಕ ಹೇಳಿಕೊಳ್ಳುವಂತಹ ಅಧ್ಯಯನಗಳು ನಡೆದಿರುವುದಿಲ್ಲ. ಆದರೆ ಎಡ್ಗರ್ ಥರ್ಸ್ಟನ್ ಅವರ 'ಮ್ಯಾನ್ಯುಯಲ್ ಆಫ್ ಸೌತ್ ಕೆನರ'(೧೯೦೫)ದಲ್ಲಿ "ಜೋಗಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆ ಮಾತನಾಡುವ ಜೋಗಿ ಪುರುಷ ಮತ್ತು ಮರಾಠಿ ಭಾಷೆ ಮಾತನಾಡುವ ಜೋಗಿ ಪುರುಷರು ವಾಸವಾಗಿರುವ ಬಗ್ಗೆ ಉಲ್ಲೇಖವಿದೆ."[೧೪] ಮಾರಾಠಿ ಭಾಷೆ ಮಾತನಾಡುವ ಜೋಗಿ ಪುರುಷರೇ ನರಸಣ್ಣ ಜೋಗಿಗಳು. ಇದರಲ್ಲಿ ಕಿನ್ನರಿ ಹಿಡಿದುಕೊಂಡಿರುವ ಸಾಂಪ್ರದಾಯಿಕ ವೇಷಭೂಷಣದ ಭಾವಚಿತ್ರವನ್ನು ಕೂಡಾ ಕಾಣಬಹುದಾಗಿದೆ.

ಅರ್ಜುನಜೋಗಿಗಳನ್ನು ೧೯೫೦ರಲ್ಲಿ ಬಂದ ಎ ಅಯ್ಯಂಗಾರರ ವರದಿಯಲ್ಲಿ ಹಂಡಿ ಜೋಗಿ ಎಂದು ದಾಖಲಿಸಲಾಗಿದೆ. ಅವರನ್ನು ಅಪರಾಧಿ ಬುಡಕಟ್ಟು ಪಟ್ಟಿಯಲಿರಿಸಲಾಗಿತ್ತು ಎಂಬ ವಿವರಗಳು ದಾಖಲಿಸಿರುವುದು ಕಂಡುಬರುತ್ತದೆ. "Handi jogies were notified as a Criminal Tribe in the districts of Bangalore and Kolar of the Mysore State. Handijogies do not seem to be one caste but composed out of the outcastes of various Hindu castes. They are also known as Handichikkas. This caste is traced to the Pakanati sub-section of the jogis, which name it bore some five generations back when the traditional calling was buffalo - breeding.

They mostly engage in begging. They also hawk medicines and supply herbs to druhhists. Their women sell needles and glass beads in country side. Handi Jogis are classified as Scheduled Castes in Mysore State."[೧೫]

೧೯೦೫ರಲ್ಲಿ ಬಂದ ಎಲ್.ಕೆ.ಎ. ಐಯ್ಯರ್ ಅವರ 'ದ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್' ಕೃತಿಯಲ್ಲಿ "ಜೋಗಿಗಳು ತೆಲುಗು ಬಿಕ್ಷುಕ ವರ್ಗಕ್ಕೆ ಸೇರಿದವರು. ಇದರಲ್ಲಿ ಮೊಂಡರು, ಜೋಗಿ, ಗೊರವ ಮುಂತಾದವರು ಸೇರಿದ್ದಾರೆ."[೧೬] ಹಂಡಿ ಅಥವಾ ಪಾಕಂಡಿ ಜೋಗಿಗಳು ಮೇಲೆ ತಿಳಿಸಿದ ಸಮುದಾಯಕ್ಕಿಂತ ಭಿನ್ನವಾದವರು ಎಂದು ತಿಳಿಸುತ್ತಾರೆ. ಹಂಡಿ ಜೋಗಿಗಳನ್ನು ತೆಲುಗಿನಲ್ಲಿ ಪಂಡಿಜೋಗಲು ಮುಂತಾಗಿ ಕರೆಯುದಾಗಿ ತಿಳಿಸಿದ್ದಾರೆ. ಸಂಸ್ಕೃತದ ಯೋಗ ಪದದಿಂದ ಜೋಗಿ ಪದ ಬಂದಿದೆ. ಆ ಸಮುದಾಯದ ವಿವಾಹ ಸಂಬಂಧಗಳು, ಬೆಡಗು ಮುಂತಾದವುಗಳ ಕುರಿತು ಪ್ರಸ್ತಾಪಿಸಿದ್ದಾರೆ.

"ಕೆ. ಎಸ್. ಸಿಂಗ್ ಅವರು ಪೀಪಲ್ಸ್ ಆಫ್ ಇಂಡಿಯಾದಲ್ಲಿ ಹಂಡಿಜೋಗಿಗಳ ಕುರಿತು ವಿವರಿಸುತ್ತ ಇವರು ಕರ್ನಾಟಕದಲ್ಲಿ ಕಂಡುಬರುತ್ತಾರೆ. ಇವರನ್ನು ಹಂದಿಚಿಕ್ಕ, ಹಂದಿಗೊಲ್ಲ ಎಂದು ಕರೆಯುತ್ತಾರೆ, ಆಂಧ್ರ ಪ್ರದೇಶದಿಂದ ವಲಸೆ ಬಂದ ಸಮುದಾಯ ಇದಾಗಿದೆ"[೧೭] ಎಂದು ತಿಳಿಸುತ್ತಾರೆ.

ನಂದೂರಾಮ್ ಅವರ 'ಎನ್‌ಸೈಕ್ಲೋಪೆಡಿಯ ಆಫ್ ಸೆಡ್ಯೂಲ್ಡ್ ಕಾಸ್ಟ್ ಇನ್ ಇಂಡಿಯ' ಕೃತಿಯಲ್ಲಿ ಕಿನ್ನರಿಜೋಗಿಗಳ ಮೂಲ, ಆರಾಧನಾ ದೈವಗಳು, ಬೆಡಗುಗಳು, ೧೯೦೧ರಿಂದ ೨೦೦೧ರವರೆಗಿನ ಜನಸಂಖ್ಯೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಾನಮಾನಗಳು ಮುಂತಾದ ವಿಚಾರಗಳು ತಿಳಿದುಬರುತ್ತವೆ. ಕರ್ನಾಟಕ ಜನಪದ ಕಲೆಗಳ ಕೋಶ ಕಿನ್ನರಿಜೋಗಿ ಮೇಳದ ಬಗ್ಗೆ ಉಲ್ಲೇಖ ಇದೆ. ಇದರಲ್ಲಿ ಕಿನ್ನರಿಜೋಗಿಗಳ ಐತಿಹ್ಯ, ಪುರಾಣ, ಸಾಂಪ್ರದಾಯಿಕ ವೇಷ ಭೂಷಣ, ಕಿನ್ನರಿಯ ರಚನೆ ಇತ್ಯಾದಿ ವಿಷಯ ಪ್ರಸ್ತಾಪಿಸಿರುವುದು ಅವರ ಹಿನ್ನೆಲೆಯನ್ನು ತಿಳಿಸುತ್ತದೆ. ಮೇಲಿನ ಹಂಡಿ, ಕಿನ್ನರಿ ಎಂಬ ಪದಗಳನ್ನು ಅರ್ಜುನಜೋಗಿಗಳ ಹಿನ್ನೆಲೆಯಲ್ಲಿಯೇ ಪೂರಕವಾಗಿ ಗ್ರಹಿಸಲಾಗಿದೆ.

ಇವರ ಮನೆಮಾತು ಮರಾಠಿಯ ಉಪಭಾಷೆಯಾಗಿದ್ದರೂ ವ್ಯವಹಾರಿಕವಾಗಿ ಸ್ಥಳೀಯ ಭಾಷೆಯನ್ನು ಮಾತನಾಡುವರು. ಕನ್ನಡ ಭಾಷೆಯಲ್ಲಿಯೇ ಅರ್ಜುನಜೋಗಿ ಕಥೆ ಹಾಗೂ ಇತರ ಕಥೆಗಳನ್ನೂ ತಮ್ಮ ಕಿನ್ನರಿ ನುಡಿಸುತ್ತ ಸುಶ್ರಾವ್ಯವಾಗಿ ಹಾಡುವರು. ಅಲೆಮಾರಿಗಳಾದ ಅರ್ಜುನಜೋಗಿಗಳು ಒಂದು ಕಡೆ ನೆಲೆನಿಲ್ಲುವವರಲ್ಲ. ತಮ್ಮ ಧಾರ್ಮಿಕ ಭಿಕ್ಷಾಟನೆ ಮಾಡುತ್ತಾ ಊರಿಂದೂರಿಗೆ ಅಲೆದಾಡುವರು. ಇವರು ಕಿವಿಯೊಳಗೆ ಒಂದು ಹಿತ್ತಾಳೆ, ಬೆಳ್ಳಿ ಇಲ್ಲವೆ ಕಬ್ಬಿಣದ ಉಂಗುರವನ್ನು ಪುರುಷರು ತೊಡುತ್ತಾರೆ. ಕಿವಿಯ ಉಂಗುರವು ನಾಥ ಪಂಥಾವಲಂಭಿಗಳಾದ ಅರ್ಜುನಜೋಗಿಗಳ ಆಚರಣೆಯಲ್ಲಿ ಪ್ರಮುಖ ಪಾತ್ರವಹಿಸುವುದು. ಕಿನ್ನರಿಜೋಗಿಗಳು ಮದುವೆ ಇತ್ಯಾದಿ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದರೆ ಉಂಗುರವನ್ನು ಹಾಕಿಕೊಳ್ಳುವ ಶಾಸ್ತ್ರವನ್ನು ಪೂರ್ಣ ಗೊಳಿಸಲೇಬೇಕು. ಇದು ಅವರ ಸಾಂಸ್ಕೃತಿಕ ಹಿನ್ನೋಟವಾಗಿ ಕಂಡುಬರುತ್ತದೆ.

ಕಿನ್ನರಿ ಜೋಗಿ ಪದನಿಷ್ಪತ್ತಿ: ಕಿನ್ನರಿ ಹಾಗೂ ಜೋಗಿ ಎಂಬ ಎರಡು ಪದಗಳಿಂದ ಕಿನ್ನರಿಜೋಗಿ ಪದ ಬಳಕೆಗೆ ಬಂದಿದೆ. ಭಿಕ್ಷಾಟನೆಗಾಗಿ ಕೈಯಲ್ಲಿ ಹಿಡಿದುಕೊಳ್ಳುವ ಕುಂಬಳಕಾಯಿ ಹಾಗೂ ಬಿದಿರನ್ನು ಬಳಸಿ ಮಾಡಿದ ತಂತಿವಾದ್ಯವೇ ಕಿನ್ನರಿ. ಜೋಗಿ ಎಂಬ ಪದವು ಯೋಗಿ ಪದದಿಂದ ಬಂದಿದೆ. ಪ್ರಾರಂಭದಲ್ಲಿ ಜೋಗಿಗಳು ಒಂದು ಪ್ರತ್ಯೇಕ ಜಾತಿಯಾಗಿರಲಿಲ್ಲ. ನಾಥ ಸಿದ್ಧ ಪರಂಪರೆಗೆ ಸೇರಿದುದಾಗಿತ್ತು. ತರುವಾಯ ಅದು ಜಾತಿ ಸ್ವರೂಪವನ್ನು ಪಡೆದುಕೊಂಡಿತು. ಕಿನ್ನರಿ ಜೋಗಿಗಳಿಗೆ ನಾಥ ಪರಂಪರೆಯಿಂದಾಗಿಯೇ ಹಂಡಿಜೋಗಿ ಎಂಬುದಾಗಿಯೂ ಹೆಸರು ಬಂದಿದೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಜೋಗಿ ಎಂಬುದು ಯೋಗ ಶಬ್ಧದ ಕನ್ನಡ ತದ್ಭವವಾದರೂ ಎರಡಕ್ಕೂ ಒಂದೇ ಅರ್ಥವಿಲ್ಲ. "ಜೋಗಿಗೆ ಜೋಗಿ ತಬ್ಬಿಕೊಂಡರೆ ಮೈಯಲ್ಲಾ ಬೂದಿ. ಜೋಗಿ ಜೋಗಿ ತಟ್ಯಾಡಿದರೆ ಬುರುಡೆ ಬುರುಡೆ ತಟ್ಯಾಡೀತು."[೧೮] –ಕಿಟೆಲ್ ಕೋಶದಲ್ಲಿ ಈ ಗಾದೆಗಳನ್ನು ಜೋಗಿ ಶಬ್ಧದ ವಿವರಣೆಯಲ್ಲಿ

ಕೊಡಲಾಗಿದೆ. ಮೊದಲನೇ ಗಾದೆ ಯಾವುದೋ ಧಾರ್ಮಿಕ ಸಂಪ್ರದಾಯವನ್ನೂ ಎರಡನೇ ಗಾದೆ ವೃತ್ತಿಗಾಯನ ಸಂಪ್ರದಾಯುವನ್ನೂ ನಿರ್ದೇಶಿಸುತ್ತದೆ. ಹಾಡುಗಾರಿಕೆಯನ್ನೇ ಪ್ರಧಾನ ವೃತ್ತಿಯಾಗಿಸಿಕೊಂಡು ವಾದ್ಯವೊಂದನ್ನು ಹಿಡಿದು ಊರಾಡಲು ಹೋಗುವವರೇ ಕಿನ್ನರಿಜೋಗಿಗಳು.

ಜೋಗಿಗಳಲ್ಲಿ ಅನೇಕ ವರ್ಗಗಳಿವೆ. ಹಂಡಿಜೋಗಿ, ಬಾಲಜೋಗಿ, ಅರ್ಜುನಜೋಗಿಗಳು. ಹಂಡೆಜೋಗಿ, ನರಸಣ್ಣ ಜೋಗಿ, ಅರ್ಜುನ ಜೋಗಿಗಳೇ ಕಿನ್ನರಿಜೋಗಿಗಳಾಗಿದ್ದಾರೆ. ಕಿನ್ನರಿಜೋಗಿಗಳನ್ನು ಪ್ರಾದೇಶಿಕವಾಗಿ ಹಂಡಿಜೋಗಿ, ನರಸಣ್ಣ ಜೋಗಿ, ಕಿನ್ನರಿಜೋಗಿ, ಅರ್ಜುನಜೋಗಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇವರನ್ನು ಭೈರಾಗಿ ಜೋಗಿಗಳೆಂದೂ ಕರೆಯುತ್ತಾರೆ. ಇವರು ನಾಥಪಂಥೀಯ ಭೈರವನ ಆರಾಧಕರು. ಹಂಡಿಬಡಗನಾಥ ಮಠ, ನಾಸಿಕದಲ್ಲಿರುವ ಕಾಪಾಲಿ ಮಠ, ಕುಂತಿಮಠ, ಕದರಿಮಠ, ಇತ್ಯಾದಿ ನಾಥ ಸಂಪ್ರದಾಯದ ಮಠಗಳನ್ನು ಆರಾಧನಾ ಕೇಂದ್ರವಾಗಿಸಿಕೊಂಡಿರುವರು. ಆದರೆ ನಾಥ ಪಂಥದ ಕುರಿತಾದ ಯಾವ ಕಾವ್ಯಗಳೂ ಇವರಲ್ಲಿ ಪ್ರಚಲಿತವಿಲ್ಲ. ಆದರೆ ಮಹಾಭಾರತದ ಕಥೆಯನ್ನು ಅನೇಕ ರಾತ್ರಿಗಳವರೆಗೂ ಹಾಡಬಲ್ಲರು. ಅಲೆಮಾರಿಗಳಾದ ಅರ್ಜುನಜೋಗಿಗಳು ಒಂದು ಕಡೆ ನೆಲೆನಿಲ್ಲುವುದಿಲ್ಲ. ತಮ್ಮ ತಂಬೂರಿ (ಕಿನ್ನರಿ) ಹಿಡಿದು ಹಾಡು ಹೇಳುತ್ತಾ ಭಿಕ್ಷಾಟನೆ ಮಾಡಿ ಜೀವನ ಸಾಗಿಸುವುದು ಅವರ ಅಸ್ಮಿತೆಯಾಗಿದೆ.

ಅರ್ಜುನ ಜೋಗಿಗಳು ಮೂಲತಃ ಎಲ್ಲಿಯವರೆಂದು ತಿಳಿದು ಬರುವುದಿಲ್ಲ. ಎರಡು ಮೂರು ತಲೆಮಾರುಗಳಿಂದ ಕರ್ನಾಟಕದಲ್ಲಿ ವಾಸವಾಗಿರುವುದಾಗಿಯೂ, ಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆ ರಾಮನಗರದಲ್ಲಿರುವ ಹಂಡಿ ಬಡಿಗನಾಥ ಮಠ ತಮ್ಮ ಮೂಲ ಮಠವೆಂದು ಹೇಳುತ್ತಾರೆ. ಆನಂತರ ಚಿತ್ರದುರ್ಗದ ಮೊಳಕಾಲ್ಮುರು ಹತ್ತಿರದ ನುಂಕೆಮಲೆ ಮಠ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕದ್ರಿಮಠಗಳು ಸ್ಥಾಪನೆಯಾಗಿವೆಯೆಂದೂ ಕರ್ನಾಟದಲ್ಲಿ ಇನ್ನೂ ಅನೇಕ ಜೋಗಿ ಮಠಗಳಿರುವುದು ತಿಳಿದುಬರುತ್ತದೆ. ಅರ್ಜುನಜೋಗಿಗಳ ಮನೆಮಾತು ಮರಾಠಿ ಆಗಿರುವುದರಿಂದ ಮಹಾರಾಷ್ಟ್ರ ಮೂಲದವರಾಗಿದ್ದು ಬೆಳಗಾವಿಯ ಮೂಲಕ ಕರ್ನಾಟಕಕ್ಕೆ ವಲಸೆ ಬಂದಿರುವ ಸಾಧ್ಯತೆಗಳು ಹೆಚ್ಚಿವೆ. ಮಹಾರಾಷ್ಟ್ರದ ಗಡಿ ಪ್ರದೇಶವಾದ ಬೆಳಗಾವಿ ಮೂಲಕ ಇವರು ಕರ್ನಾಟಕಕ್ಕೆ ಪ್ರವೇಶವಾಗಿರಬೇಕು ಎಂದು ತಿಳಿಯಬಹುದಾಗಿದೆ.

೨.೩.೪. ದೊಂಬಿದಾಸರ

ಹಿಂದುಳಿದ ಜಾತಿ ವರ್ಗಕ್ಕೆ ಸೇರಿರುವ ದೊಂಬಿದಾಸರ ಸಮುದಾಯವು ಅಲೆಮಾರಿ ಸಮುದಾಯಗಳಲ್ಲೊಂದು. ದಾಸರು, ದಾಸರಿ ಎಂಬ ಹೆಸರುಗಳಿಂದ ದಕ್ಷಿಣ ಭಾರತದಲ್ಲೆಡೆ ಚದುರಿಹೋಗಿದೆ.

Edgar Thurston, Syed Siraj ul Hassan, L K Ananthakrishna Iyer, K S Singh ಮುಂತಾದ ವಿದ್ವಾಂಸರ ಕೃತಿಗಳಲ್ಲಿ ದೊಂಬಿದಾಸರ ಉಲ್ಲೇಖವಿದೆ. ಥರ್ಸ್ಟನ್ ಅವರು

ತಮ್ಮ ಕೃತಿಯಲ್ಲಿ 'ದಾಸರಿ'ಗಳ ಕುರಿತು 'ದಾಸರಿಗಳು ಬೇರೆ ಬೇರೆ ಜಾತಿಗಳಿಗೆ ಗುರುಗಳಾಗಿರುವ ವೈಷ್ಣವ ಬ್ರಾಹ್ಮಣರ ಕೈಕೆಳಗಿನ ಸೇವಕರು' ಎಂದಿರುವರು. ದಾಸರಿಗಳ ಕುರಿತ ಈ ಮಾಹಿತಿಯಲ್ಲಿ ಎಚ್ ಎ ಸ್ಟುವರ್ಟ್, ಡಬ್ಲ್ಯೂ ಫ್ರಾನ್ಸಿಸ್, ಎಸ್ ಎಂ ನಟೇಶ್‌ಶಾಸ್ತ್ರಿ ಇವರುಗಳ ಮತ್ತು ಮೈಸೂರು, ತಂಜಾವೂರು, ದಕ್ಷಿಣ ಅರ್ಕಾಟ್ ಜಿಲ್ಲೆ ಇವುಗಳ ಸರ್ವೇ ಹಾಗೂ ಕೈಪಿಡಿಗಳಲ್ಲಿನ ಬರಹಗಳನ್ನು ಧಾರಾಳವಾಗಿ ಬಳಸಿಕೊಂಡಿದ್ದಾರೆ. 'ಸ್ಟುವರ್ಟ್ ಎಂ.ಡಬ್ಲ್ಯೂ. ಫ್ರಾನ್ಸಿಸ್' ಎಂಬವರು ಅನಂತಪುರದ ಭಿಕ್ಷುಕರನ್ನು ಕುರಿತು ಬರೆಯುತ್ತ ಒಡೆದು ಕಾಣುವ ಭಿಕ್ಷುಕರೆಂದರೆ ದಾಸರಿಗಳು. ಈ ಸಮಾಜ ಕಾಪು, ಬಲಿಜ, ಕುರುಬ, ಬೋಯ್ ಹಾಗೂ ಮಾಲ ಜಾತಿಗಳವರಿಂದ ಕೂಡಿ ಆಗಿದೆ. ದಾಸರಿಗಳೆಲ್ಲ ವೈಷ್ಣವರು, ಮನೆ–ಮನೆಯಲ್ಲಿ ಭಿಕ್ಷೆ ಬೇಡಿ ಬದುಕುವವರು. ಕೆಲ ಮನೆತನಗಳಲ್ಲಿ ಈ ವೃತ್ತಿ ಅನುವಂಶಿಕವಾಗಿರುವುದೆಂದು ಪ್ರಸ್ತಾಪಿಸಿದ್ದಾರೆ.

೧೯೦೧ರ ಮೈಸೂರು ಖಾನೇ ಸುಮಾರಿ ವರದಿಯಲ್ಲಿ ಮೈಸೂರು ಪ್ರದೇಶದೊಳಗಿನ ದಾಸರಿಗಳನ್ನು ಶೂದ್ರರ ವಿವಿಧ ವರ್ಗಗಳಿಗೆ ಸಂಬಂಧಿಸಿದ ಭಿಕ್ಷುಕರೆಂದು ಬಣ್ಣಿಸಲಾಗಿದೆ. ಯಾವುದೇ ಚಿಂತೆ ಅಥವಾ ಗಂಡಾಂತರ ಪ್ರಸಂಗದಲ್ಲಿ ಮಾಡಿದ ಪ್ರತಿಜ್ಞೆ ಬಲದಿಂದ ತಿರುಪತಿ ದೇವರಿಗೆ ಅರ್ಪಿತವಾದ ದಾಸರು ಸೇವಕರಾಗುತ್ತಾರೆ. ಅವನ ಹೆಸರಿನಿಂದ ಭಿಕ್ಷೆ ಬೇಡಿ ಬದುಕುತ್ತಾರೆ. ನೆಲ್ಲೂರು ಕೈಪಿಡಿಯಲ್ಲಿ ದಾಸರಿ ಪಂಥಗಳನ್ನು ತೆಲಗುಪ್ರದೇಶ ಹಾಗೂ ಕರ್ನಾಟಕದ ಕಳ್ಳರೆಂದು ಬಣ್ಣಿಸಲಾಗಿದೆ. ಅವರು ವಾಡಿಕೆಯಾಗಿ ಕತ್ತರಿಕಳ್ಳತನ ಮಾಡುವರೆಂದಿದೆ. ದಾಸರಿಗಳು ಬೇರೆ ಬೇರೆ ಜಾತಿಗಳಿಗೆ ಗುರುಗಳಾಗಿ ವರ್ತಿಸುವ ವೈಷ್ಣವ ಬ್ರಾಹ್ಮಣರ ಕೈಕೆಳಗಿನ ಸೇವಕರಾಗಿರುವರು. ಅವರು ಹಳ್ಳಿಗಳಿಗೆ ತಮ್ಮ ಗುರುಗಳ ಆಗಮನದ ಸುದ್ದಿಯನ್ನು ಅವರ ಶಿಷ್ಯವರ್ಗಕ್ಕೆ ತಲುಪಿಸುವ ಕರ್ತವ್ಯ ನಿರ್ವಹಿಸುತ್ತಿದ್ದರು. ಬ್ರಾಹ್ಮಣ ಗುರುಗಳು ಹಳ್ಳಿಗೆ ಆಗಮಿಸುವಾಗ ಹಾಗೂ ಪೂಜೆಯ ಸಂದರ್ಭದಲ್ಲಿ ಇವರು ತರಾಯಿ ಊದುತ್ತಿದ್ದರು. ಬ್ರಾಹ್ಮಣ ಗುರುಗಳು ತಮ್ಮ ಪರಿಯನ್ ಅಥವಾ ಹೊಲೆಯ ಶಿಷ್ಯರನ್ನು ಮುಟ್ಟದಿದ್ದಾಗ ಈ ದಾಸರಿಗಳೇ ಪರಿಯನ್‌ರಿಗೆ ತೀರ್ಥ ಹಂಚುತ್ತಿದ್ದರು. ಪರಿಯನ್‌ನನ್ನು ಶಿಷ್ಯನನ್ನಾಗಿ ಗುರುತಿಸಲು ಬ್ರಾಹ್ಮಣ ಗುರುಗಳು ಶಂಖ ಮತ್ತು ಚಕ್ರಗಳ ಮುದ್ರೆಗಳನ್ನು ಕಾಯಿಸಿ ದಾಸರಿಗಳ ಕೈಯಲ್ಲಿ ಕೊಡುತ್ತಿದ್ದರು, ದಾಸರಿಗಳು ಪರಿಯನ್‌ರಿಗೆ ಆ ಶಂಖ, ಚಕ್ರಗಳ ಮುದ್ರೆಗಳನ್ನೊತ್ತುತ್ತಿದ್ದರು. ದಾಸರಿಗಳು ಮಂತ್ರಾಲೋಚನೆಯ ಸಭೆ, ಮದುವೆಯ ನಿಶ್ಚಿತಾರ್ಥ ಮತ್ತು ಸಾಮಾಜಿಕ ಕೆಲಸಗಳು ಇತರ ಸಂಗತಿಗಳ ತೀರ್ಮಾನದ ಸಂಬಂಧ ಹಬ್ಬಗಳ ಸಂದರ್ಭದಲ್ಲಿ ಪವಿತ್ರ ಕ್ಷೇತ್ರಗಳಾದ ತಿರುತನಿ, ತಿರುಪತಿ ಅಥವಾ ತಿರುವಳ್ಳೂರುಗಳಿಗೆ ಭೇಟಿ ಕೊಡುತ್ತಿದ್ದರು ಎಂಬ ವಿವರ ದೊರೆಯುತ್ತದೆ.

ಥರ್ಸ್ಟನ್ ಅವರ ಪ್ರಬಂಧದಲ್ಲಿ 'ತೆಲುಗು ಬಣಜಿಗ, ಹೊಲೆಯ, ತಿಗಳ ಮತ್ತು ಒಕ್ಕಲಿಗ ಸಮುದಾಯದವರು ವೈಷ್ಣವ ದೀಕ್ಷೆ ಸ್ವೀಕರಿಸಿ ದಾಸರಿಗಳಾಗಿದ್ದಾರೆ' ಎಂದು ಹೇಳಲಾಗಿದೆ. ಮತ್ತೊಂದು ಕಡೆ ದಾಸರಿಗಳಲ್ಲಿ ಆರು ಉಪಪಂಗಡಗಳಾದ 'ಬಲಿಜ, ಜಾನಪ್ಪ, ಪಲ್ಲಿ, ವಲ್ಲುವ, ಗಂಗೆದ್ದುಲ ಮತ್ತು ಗೊಲ್ಲ ದಾಸರಿ' ಇವೆ ಎಂದು ಹೇಳಲಾಗಿದೆ. ಹೊಸದಾಗಿ ದಾಸದೀಕ್ಷೆ ಪಡೆದ ದಾಸರಿಗಳು,

ಮತ್ತೊಂದೆಡೆ ವಂಶಗತವಾಗಿ ಉಳಿದು ಬಂದಿರುವ ದಾಸರಿಗಳು ಎಂಬ ಎರಡು ಗುಂಪು ಇರುವುದಾಗಿ ತಿಳಿದು ಬರುತ್ತದೆ. ಆದರೆ ಇವರಿಬ್ಬರೂ ವೈಷ್ಣವ ಭಿಕ್ಷುಕರೇ ಆಗಿರುವರೆಂಬ ವಿವರಣೆ ಥರ್ಸ್ಟನ್ ಅವರ ಪ್ರಬಂಧದಲ್ಲಿದೆ. ಥರ್ಸ್ಟನ್‌ರರವರು ದೊಂಬಿದಾಸರ ಕುರಿತು ಈ ಕೆಳಗಿನಂತೆ ವಿವರಿಸಿರುವರು.

ದೇವರ ಸೇವಕರಾದ ಈ ದಾಸರಿಗಳ ಕುರಿತು 'ವೈಷ್ಣವ ಧಾರ್ಮಿಕ ಭಿಕ್ಷುಕರು ವಿಷ್ಣುವಿನ ಸಂಕೇತಗಳನ್ನು ಭುಜದ ಮೇಲೆ ಧರಿಸುವ ಇವರು ವೈಷ್ಣವ ಸಹೋದರತ್ವದಿಂದ ಭಿಕ್ಷುಕರಾಗಿರುವರು ಎಂದು ತಿಳಿಯಬಹುದು. 'ದೊಂಬಿ' ಎಂಬುದಕ್ಕೆ ಕನ್ನಡದಲ್ಲಿ ಗಲಾಟೆ, ಗದ್ದಲ ಎಂಬ ಅರ್ಥವಿದೆ. ತಮ್ಮ ಶಂಖ, ಜಾಗಟೆ ವಾದ್ಯಗಳಿಂದ ಗಲಾಟೆ-ಗದ್ದಲವೆಬ್ಬಿಸುವವರನ್ನೇ ದೊಂಬಿದಾಸರೆಂದು ಕರೆದಿರುವ ಸಾಧ್ಯತೆ ಇದೆ. ದೊಂಬಿದಾಸರು ವಿಶೇಷ ವೇಶಭೂಷಣದಲ್ಲಿ ಹಣೆಯ ಮೇಲೆ ವಿಷ್ಣುನಾಮವನ್ನು ಧರಿಸಿರುತ್ತಾರೆ ಮತ್ತು ಕೈಯಲ್ಲಿ ದೀಪದ ಗರುಡಗಂಬ, ಜಾಗಟೆ ಹಿಡಿದು ತಲೆಗೆ ಒಂದು ಶೆಲ್ಲೆ ಕಟ್ಟಿಕೊಂಡು ಭಿಕ್ಷಾಟನೆ ಮಾಡುವವರಾಗಿದ್ದಾರೆ. ವೆಂಕಟೇಶ್ವರನ ಭಕ್ತರು ತಾವೆಂದು ಹೇಳಿಕೊಳ್ಳುವರು. ಬಹುತೇಕ ಇವರನ್ನು ಮೇಲ್ಜಾತಿಗಳೆಂದು ಕರೆದುಕೊಳ್ಳುವವರು ಕೀಳಾಗಿ ಕಾಣುತ್ತಾರೆ.

ದೊಂಬಿದಾಸರಿಗಳು ತೆಲುಗು ಮತ್ತು ಕನ್ನಡವನ್ನು ಮಾತನಾಡುತ್ತಾರೆ. ಇವರಲ್ಲಿ ಎರಡು ಬೆಡಗುಗಳು ಮಾತ್ರ ಇವೆ. ಸಣ್ಣ ಅಕ್ಕಿ ಮತ್ತು ಘಂಟೆಲವರು. ಇವರ ಪ್ರಮುಖ ದೇವರು ಹನುಮಂತ. ಜೊತೆಗೆ ವಿಷ್ಣು-ವೆಂಕಟೇಶನನ್ನೂ ಪೂಜಿಸುವರು. ಹೆಣ್ಣುದೇವರುಗಳಾದ ಹುಲಿಗೆಮ್ಮ, ಮಾರಮ್ಮ, ಯಲ್ಲಮ್ಮ ಇತ್ಯಾದಿ ದೈವಗಳನ್ನೂ ಆರಾಧಿಸುತ್ತಿರುವುದನ್ನು ಕಾಣಬಹುದು.

ಸಾಮಾನ್ಯವಾಗಿ ಭಿಕ್ಷೆಗೆ ಹೋಗುವಾಗ ಮೂರು ಜನರಿರುತ್ತಾರೆ. ದೀಪಸ್ತಂಭವನ್ನು ನೆಲದ ಮೇಲಿಟ್ಟು ಅದರ ಸುತ್ತಲೂ ಇಬ್ಬರು ಕುಣಿಯುತ್ತಾರೆ. ಅವರಲ್ಲಿ ಒಬ್ಬ ಶಂಖವನ್ನು ಊದಿದರೆ ಇನ್ನೊಬ್ಬ ಗಂಟೆಯನ್ನು ಬಾರಿಸುತ್ತಾನೆ. ಮೂರನೆಯವನು ತಂಬೂರಿಯನ್ನು ಬಾರಿಸುತ್ತಾ ವಿಷ್ಣುವನ್ನು ಸ್ತುತಿಸುವ ಪದವನ್ನು ಹಾಡುವನು. ಶನಿವಾರದ ದಿನ ಭಿಕ್ಷೆಗೆ ಹೊರಡುವ ಇವರು, ಭುಜದ ಮೇಲೆ ಕಾವಡಿಗಳನ್ನು ಹಾಕಿಕೊಂಡು ಜೊತೆಯಲ್ಲಿ ವಿಷ್ಣುವಿನ ಚಿಕ್ಕಮೂರ್ತಿ, ಶಂಖ ಇತ್ಯಾದಿ ಪರಿಕರಗಳನ್ನು ಜೊತೆಗೆ ಒಯ್ಯುವರು. ಇದು ಇವರ ಧಾರ್ಮಿಕ ಚರಿತ್ರೆಯಾಗಿ ಸಾಮಾಜಿಕ ಬದುಕಿನ ಸಂಕಥನವೂ ಆಗಿದೆ.

ಎಲ್.ಕೆ. ಅನಂತಕೃಷ್ಣ ಅಯ್ಯರ ಅವರು ಭಿಕ್ಷೆ ಬೇಡುವ ವೈಷ್ಣವ ಜಾತಿಯೇ ದಾಸರಿಯಾಗಿದೆ. ದಾಸರಿ ಎಂಬುದು ಯಾವುದೇ ನಿರ್ದಿಷ್ಟ ಜಾತಿಯನ್ನು ಸೂಚಿಸುವುದಿಲ್ಲ ಎಂದು ಹೇಳುತ್ತಾರೆ. ದೊಂಬಿದಾಸ ಎಂಬುದು ಮೊದಲಿಗೆ ವೈಷ್ಣವ ಪಂಥದ ಅನುಯಾಯಿಗಳಾಗಿದ್ದು ಕಾಲಾಂತರದಲ್ಲಿ ಜಾತಿಯಾಗಿ ಮಾರ್ಪಾಡುಗೊಂಡಿದೆಯೆಂದು ತಿಳಿಯುತ್ತದೆ.

ಮೂಲ ಕುರಿತು: ದೊಂಬಿದಾಸರಲ್ಲಿ ಪ್ರಚಲಿತವಿರುವ ಐತಿಹ್ಯವೊಂದರ ಪ್ರಕಾರ ದಾಸರಿಗಳು ವೈಷ್ಣವ ಸನ್ಯಾಸಿ ಎರಡು ಸಮುದಾಯಕ್ಕೆ ಸೇರಿದ ಗಂಡು ಹೆಣ್ಣಿನ ಸಂಪರ್ಕದಿಂದ ದೊಂಬಿದಾಸ ಎಂಬುವವನು ಜನ್ಮ ತಾಳಿದನು ಎಂದು ಹೇಳಲಾಗುತ್ತದೆ. ಪ್ರಾಯಶಃ ವಿವಿಧ ಮೂಲದ ಜನರು ಒಂದು ಪಂಥದ

ಅನುಯಾಯಿಗಳಾಗಿ ಮಾರ್ಪಾಡುಗೊಂಡರು ಎಂಬುದನ್ನು ಮೇಲಿನ ಐತಿಹ್ಯ ಸೂಚ್ಯವಾಗಿ ತಿಳಿಸುತ್ತದೆ.

ಕುಪ್ಪೆ ನಾಗರಾಜ ಅವರು ತಮ್ಮ 'ದೊಂಬಿದಾಸ' ಕೃತಿಯಲ್ಲಿ ದಾಸರಿಗಳನ್ನು ಕುರಿತು ಬರೆಯುತ್ತ 'ಗುಂಪುಗಳಲ್ಲಿ ನರ್ತನ ಮಾಡುವುದರಿಂದಾಗಿ ಇವರನ್ನು ದೊಂಬಿದಾಸರೆಂದು ಕರೆಯಲಾಗಿದೆ. ಕಳ್ಳ ಅಥವಾ ದೊಂಗ ಎಂಬ ಪದವು(ಪರಿಕಲ್ಪನೆ) ಯಾವುದೇ ಅಪರಾಧ ಪ್ರವೃತ್ತಿಯನ್ನು ಅರ್ಥೈಸುವುದಿಲ್ಲ' ಎಂದು ತಿಳಿಸುತ್ತಾರೆ.

ದೊಂಬಿದಾಸರನ್ನು ಆಟದ ದಾಸರು ಎಂದೂ ಕರೆಯುವ ವಾಡಿಕೆ ಇದೆ. ಭಿಕ್ಷಾಟನೆಯೊಂದಿಗೆ ಊರೂರಿಗೆ ತೆರಳಿ ಬಯಲಾಟ, ಸಣ್ಣಾಟದ ನಾಟಕಗಳನ್ನೂ ಆಡುತ್ತಾರೆ. ಚಿತ್ರದುರ್ಗದ ಕಡೆಗೆ ಇಂದಿಗೂ ಈ ಸಮುದಾಯದವರು ರಂಗಭೂಮಿ ಕಲಾವಿದರಾಗಿ, ನಾಟಕ ಕಲಿಸುವವರಾಗಿ ಸೇವೆಸಲ್ಲಿಸುವುದನ್ನು ಕಾಣುತ್ತೇವೆ.

ಮೊದಲಿಗೆ ಕೇವಲ ಗಂಡಸರು ಹೆಣ್ಣು ಗಂಡಿನ ವೇಷ ಧರಿಸಿ ಆಟವಾಡುತ್ತಿದ್ದರು. ಇತ್ತೀಚೆಗೆ ಇವರಲ್ಲಿ ಮಹಿಳೆಯರೂ ವೇಷ ಕಟ್ಟುವ ಕಲಾವಿದೆಯರಾಗಿ ಜೀವನ ಸಾಗಿಸುವುದನ್ನು ನೋಡಬಹುದು. ಈ ಸಮುದಾಯಕ್ಕೆ ಸೇರಿದ ಕಲಾವಿದೆಯರು ರಂಗಭೂಮಿಯಲ್ಲಿ ಹೆಸರುವಾಸಿಯಾಗಿದ್ದಾರೆ. ಇದು ಅವರ ವೃತ್ತಿ ಮಾರ್ಗದ ಹಿನ್ನೆಲೆಯಾಗಿ ಕಂಡುಬರುತ್ತದೆ.

'ದಾಸರ ಆಟವಲ್ಲ ದೋಸೆಯ ಊಟವಲ್ಲ' ಇದು ಸಮುದಾಯದವರು ಆಡುವ ಬಯಲು ನಾಟಕ ಅಥವಾ ಬಯಲಾಟಕ್ಕೆ ಸಂಬಂಧಿಸಿದ ಗಾದೆ ದೋಸೆ ಎಷ್ಟು ತಿಂದರೂ ಊಟ ಮಾಡುವುದರಿಂದಾಗುವ ತೃಪ್ತಿ ಹೇಗೆ ಸಿಗುವುದಿಲ್ಲವೋ, ಇವರ ಬಯಲಾಟ ನೋಡುವುದರಿಂದ ಸಿಗುವ ಆನಂದ ಆಗುವ ತೃಪ್ತಿ ದಾಸರ ಆಟದಿಂದ ಸಿಗುವುದಿಲ್ಲ ಎಂದು ಚಿತ್ರದುರ್ಗ ಭಾಗದಲ್ಲಿ ಜನ ಇವರನ್ನು ಗುರುತಿಸುವ ಗಾದೆಯಾಗಿದೆ. ಅಲ್ಲದೆ ಈ ಸಮುದಾಯವನ್ನೇ ಕುರಿತಿರುವ ಈ ಗಾದೆಗಳು ಈ ಸಮುದಾಯದ ಸಾಮಾಜಿಕ ಅಂತಸ್ತನ್ನು ಬಿಂಬಿಸುತ್ತದೆ.

ಬುಡಕಟ್ಟು ತಳಸಮುದಾಯಗಳ ಕಣಜವಾಗಿರುವ ಚಿತ್ರದುರ್ಗ ಜಿಲ್ಲೆಯು ತನ್ನದೇ ಆದ ಭೌಗೋಳಿಕ, ಪೌರಾಣಿಕ ಮತ್ತು ಚಾರಿತ್ರಿಕವಾದ ಹಿನ್ನೆಲೆಯನ್ನು ಹೊಂದಿದ್ದು ಇಲ್ಲಿನ ಪ್ರಾದೇಶಿಕತೆ ಇಲ್ಲಿನ ಜನ ಸಮುದಾಯಗಳ ವೃತ್ತಿ ಮಾರ್ಗಗಳ ಹಿನ್ನೆಲೆಯಲ್ಲಿ ಅವರ ಸಾಂಸ್ಕೃತಿಕ ಚರಿತ್ರೆಯನ್ನು ಸೃಷ್ಟಿಸಿಕೊಂಡು ಬಂದಿರುವುದಕ್ಕೆ ಅಲೆಮಾರಿ ಸಮುದಾಯಗಳಿಂದ ಗೊಂದಲಿಗ, ಬುಡ್ಗಜಂಗಮ, ಅರ್ಜುನ ಜೋಗಿ ಮತ್ತು ದೊಂಬಿದಾಸ ಸಮುದಾಯಗಳು ಸಾಕ್ಷಿಪ್ರಜ್ಞೆಗಳಾಗಿ ಜಿಲ್ಲೆಯಲ್ಲಿ ಇಂದಿಗೂ ನಿರಂತರವಾಗಿ ಸಂಚಾರಿಸಿ ತಮ್ಮ ಕಲಾತ್ಮಕತೆಯನ್ನು ಪ್ರದರ್ಶಿಸಿ ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ.

ವೃತ್ತಿ ಗಾಯಕರು						
ಕ್ರಸಂ	ಕಲಾವಿದರು	ಬಳಸುವ ವಾದ್ಯ	ವೇಷಭೂಷಣ	ಪ್ರಮುಖ ಕಥೆಗಳು	ಭಾಗವಹಿಸುವ ಜನರ ಸಂಖ್ಯೆ	ಪ್ರದೇಶ
೧	ಗೊಂದಲಿಗರು	ಚೌಡಿಕೆ, ತಾಳ, ಸಾಂಬಾಳ	ತುಂಬು ತೋಳಿನ ಅಂಗಿ, ಬಿಳಿಯ ಧೋತರ, ರುಮಾಲು, ಜುಬ್ಬಾ, ಕಚ್ಚೆಯ ಪಂಚೆ, ಕರಿಕೋಟು, ಕಂಕುಳೊಳಗೆ ಕಸೆ.	ಸಿರಿಯಾಳ ಶೆಟ್ಟಿ, ಹೇಮರಡ್ಡಿ ಮಲ್ಲಮ್ಮ, ಎಲ್ಲಮ್ಮ, ಹುಲಿಗಮ್ಮ ,ಸತಿ ಸುಲೋಚನ, ಕುಮಾರರಾಮ, ಶೀಲವತಿ, ಅಡವಿಗುಮಾರ, ಟಗರುರಾಜ, ಇತ್ಯಾದಿ	ಇಬ್ಬರು ರಿಂದ ನಾಲ್ಕು ಜನರು ಭಾಗವಹಿಸುತ್ತಾರೆ.	ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಹಾಸನ ಜಿಲ್ಲೆಗಳು
೨	ದೊಂಬಿದಾಸರು	ಏಕತಾರಿ, ತಾಳ, ದಮ್ಮಡಿ, ಗೆಜ್ಜೆ, ಮದ್ದಲೆ, ಶಂಖ, ಜಾಗಟೆ, ತಬಲ, ಹಾರ್ಮೋನಿಯಂ	ಕಚ್ಚೆಯ ಪಂಚೆ, ನಿಲುವಂಗಿ, ಅಥವಾ ಕೋಟನ್ನು ಧರಿಸುತ್ತಾರೆ. ತಲೆಗೆ ರುಮಾಲನ್ನು ಸುತ್ತುತ್ತಾರೆ. ಕಂಕುಳಲ್ಲಿ ಜೋಳಿಗೆ ಸದಾ ಇರಬೇಕು.	ಗೌರಮ್ಮನ ವಿವಾಹ, ಗಂಗೆ–ಗೌರಿ ಜಗಳ, ಗಂಗೆ ಗೌರಿ ವಾದ, ಗಂಗೆ ಗೌರಿ ಸವಾಲು, ಕೃಷ್ಣಕಥೆಗಳು, ಕಲಿ ಯುಗದ ಬಾಲೆ, ಅಣ್ಣ ತಂಗಿ, ಮಾಗಡಿ ಕೆಂಪೇಗೌಡ, ಶ್ರೀಕೃಷ್ಣ ಪಾರಿಜಾತ, ಕೊರವಂಜಿ, ದೇವಗನ್ನೇರು, ತಾನಾಕೆ ನಡೆದಾರು, ಪ್ರೇಮ ಸತ್ಯಭೋಜ,	ಇಬ್ಬರು–ಮೂವರು ಮೇಳದಲ್ಲಿ ದಮ್ಮಡಿಯನ್ನೂ ಬಳಸುತ್ತಾರೆ	ಬಯಲುಸೀಮೆಯ ಪ್ರದೇಶಗಳಲ್ಲೂ ಎಲ್ಲ ಇದ್ದಾರೆ. ವಿಶೇಷವಾಗಿ ತುಮಕೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳು

				ಬಸವಕುಮಾರ, ಲೋಹಿತ ಕುಮಾರ, ಬಂಜೆಹೊನ್ನಮ್ಮ, ಕಟ್ಟಾಳು ಕರಿಯ, ತಟವಾಣಿ ಹೆಣ್ಣು, ಅತ್ತೆಸೊಸೆ, ಮಾರೇಗೌಡ, ಘಾತುಕ ಅಣ್ಣಯ್ಯ, ಬಾಲನಾಗಮ್ಮ, ಇತ್ಯಾದಿ		
೩	ಬುಡ್ಗ ಜಂಗಮ	ತಂಬೂರಿ, ಗುಮ್ಮಟೆ, ತಾಳ, ಗಂಟೆ, ಹಾರ್ಮೋನಿಯಂ, ಶಂಖ, ತಬಲಾ, ಏಕತಾರಿ	ತಲೆಗೆ ಝರಿರುಮಾಲು ಪೇಟ, ಸಾಧಾರಣ ನಿಲುವಂಗಿ,ಕರಿಯ ಕೋಟು, ಹೆಗಲಿನಿಂದ ಇಳಿಬಿದ್ದ ಝರಿಯ ಶಲ್ಯ, ಬಿಳಿಕಚ್ಚೆಪಂಚೆ, ಕೈಯಲ್ಲಿ ಕಿನ್ನರಿ, ಕಾಲಿಲ್ಲಿ ಗೆಜ್ಜೆ, ಎಡಗೈಯ ತೋರುಬೆರಳು ಹಾಗೂ ಹೆಬ್ಬೆರಳುಗಳಿಗೆ ಗಗ್ಗುರಿಗಳು, ಬಲಗೈಯಲ್ಲಿ ತಂಂಬೂರಿ, ಹಣೆಗೆ ವಿಭೂತಿ–ಕುಂಕುಮಗಳು	ಮಾಗಡಿ ಕೆಂಪೇಗೌಡ, ಅಣ್ಣ ತಂಗಿ, ಗಂಗೆ–ಗೌರಿ ಜಗಳ, ಬಾಲನಾಗಮ್ಮ, ಬಲಿಚಕ್ರವರ್ತಿ, ಕುಮಾರರಾಮ ಕಾವ್ಯ, ಮಳಿರಾಯನ ಕಾವ್ಯ, ಕೃಷ್ಣಗೋಲ್ಲರ ಕಾವ್ಯ, ರೇಣುಕೆ ಎಲ್ಲಮ್ಮ, ಪುಣ್ಯವಂತೆ–ಗುಣವಂತೆ, ಬಂಜೆ ಹೊನ್ನಮ್ಮ, ಭಾವುಕರನ್ನೆ, ಕಾಡಸಿದ್ದಮ್ಮ, ನಿಂಗಣ್ಣಗೌಡ, ಬಳ್ಳಾರಿತತ್ವ, ಉಪಕಥೆಗಳು, ಅಡ್ಡ ಕಥೆಗಳು ಇತ್ಯಾದಿ	ಮೇಳದಲ್ಲಿ ದಮ್ಮಡಿಯನ್ನೂ ಬಳಸುತ್ತಾರೆ	ತುಮಕೂರ ಜಿಲ್ಲೆಗಳು

			ಈತನ ವೇಷಭೂಷಣಗಳಾದರೆ ಉಳಿದ ಸಹಕಲಾವಿದರು ಸಾಮಾನ್ಯ ಮಡಿವಸ್ತ್ರ ಧರಿಸಿರುತ್ತಾರೆ. ಜೋಳಿಗೆ.			
೪	ಜೋಗಿಗಳು	ಕಿನ್ನರಿ, ಚಿಟಗಿ, ಸೋರೆ ಬುರುಡೆ, ದಂಬರಿಗೆ, ದಮ್ಮಡಿ, ತಾಳ, ಪಿಳ್ಳಂಗೋವಿ, ಗಗ್ಗರ, ಕಿರುಗೆಜ್ಜೆ.	ತಲೆಗೆ ಬಣ್ಣದ ಮುಂಡಾಸು, ಮುಂಡಾಸಿಗೊಂದು ತ್ರಿಶೂಲ, ಮುಂಡಾಸಿನ ಸುತ್ತ ಗಾಜಿನ ಕಡ್ಡಿಯ ಗುಳೋಪು, ನಿಲುವಂಗಿ ಮೇಲೆ ಅಡ್ಡ ಶಲ್ಯ, ಕಿವಿಗೆ ಕರ್ಣಕುಂಡಲ ಮತ್ತು ಕಾಪಲಿ, ಕೈಯಲ್ಲಿ ಕಿನ್ನರಿ, ಕಾಲಿಗೆ ಗೆಜ್ಜೆ, ಹೆಗಲಿಗೆ ಜೋಳಿಗೆ.	ಅರ್ಜುನ ಜೋಗಿ ಹಾಡು, ರಾಜಹಂಸ–ಪರಹಂಸ, ಶಿವಶಂಕಿನ ಕುಮಾರ, ಆಶಾವತಿ–ಶಾಮಸೇನ, ಚಿತ್ರಶೇಖರ, ಬಸವಕುಮಾರ –ಲೋಹಿತಕುಮಾರ, ಸತಿಶೀಲಾವತಿ, ವೀರಸೇನ–ಕೋಕಿಲೆ, ಗೋಪಮ್ಮನ ಕತೆ, ಧರ್ಮಶೀಲ, ಮಹಾಭಾರತ ಇತ್ಯಾದಿ	ಇಬ್ಬರು	ಸಮಗ್ರ ಕರ್ನಾಟಕ

(ಕೃಪೆ: ಜೀ.ಶಂ. ಪರಮಶಿವಯ್ಯ, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಅಭಿನವ ಪ್ರಕಾಶನ ಬೆಂಗಳೂರು, ೨೦೧೫, ಪು.೧೧೭–೧೧೮)

ಕೊನೆ ಟಿಪ್ಪಣಿ

೧. ಶಂಕರನಾರಾಯಣ ರಾವ್ ಎ.ವಿ., ಇದು ಕರ್ನಾಟಕ, ೨೦೧೦, ಪು.೨೩೮

೨. ರಹಮತ್ ತರೀಕೆರೆ, ಕರ್ನಾಟಕ ನಾಥಪಂಥ, ೨೦೦೯, ಪು.೧೨೬

೩. ಕುಪ್ಪೆ ನಾಗರಾಜ, ದೊಂಬಿದಾಸರು, ೨೦೦೮, ಪು.೪

೪. ಅದೇ, ಪು. ೪–೫

೫. ಮೇತ್ರಿ ಕೆ.ಎಂ., ಮರಗು ಭಾಷೆ, ೨೦೧೨, ಪು.೩೦

೬. ಅದೇ, ಪು.೩೦

೭. ಅನಂತಕೃಷ್ಣ ಅಯ್ಯರ್, ಮೈಸೂರು ಟ್ರೈಬ್ಸ್ ಆ್ಯಂಡ್ ಕಾಸ್ಟ್, ೧೯೩೫, ಪು. ೧೯೭.

೮. ಜೀ.ಶಂ. ಪರಮಶಿವಯ್ಯ, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ೨೦೧೫, ಪು. ೧೯೭.

೯. ನಿಂಗಣ್ಣ ಸಣ್ಣಕ್ಕಿ, ಗೊಂದಲಿಗರ ಸಂಸ್ಕೃತಿ, ೧೯೯೩, ಪು. ೧೬.

೧೦. ವೀರೇಶ ಬಡಿಗೇರ, ಉತ್ತರ ಕರ್ನಾಟಕದ ಗೀತ ಮೇಳಗಳು, ೧೯೯೯, ಪು. ೧೨೬.

೧೧. ಎಡ್ಗರ್ ಥರ್ಸಟನ್, ಎಥ್ನೋಗ್ರಾಫಿಕ್ ನೋಟ್ಸ್ ಆನ್ ಸರ್ದನ್ ಇಂಡಿಯಾ, ೧೯೮೫, ಪು. ೧೮೦.

೧೨. ಅಂಜನಪ್ಪ ಯಳನಾಡು, ಹಗಲುವೇಷದವರ ಸಂಸ್ಕೃತಿ, ೧೯೯೩, ಪು. ೯೫.

೧೩. ಚಂದ್ರಪ್ಪ ಎಂ. ದುಷಂತ್, ಹಂಡಿಜೋಗಿ, ೨೦೦೮, ಪು. ೨೭.

೧೪. ಅದೇ, ಪು. ೨೯

೧೫. ಅಯ್ಯಂಗಾರ್ ಎ., ಅವರ ವರದಿ, ೧೯೪೯, ಪು. ೨೨.

೧೬. ಐಯರ್ ಎಲ್.ಕೆ.ಎ., ದ ಮೈಸೂರು ಟ್ರೈಬ್ ಆ್ಯಂಡ್ ಕಾಸ್ಟ್, ೧೯೩೫, ಪು. ೧೬೪.

೧೭. ಸಿಂಗ್ ಕೆ.ಎಸ್., ಪೀಪಲ್ಸ್ ಆಫ್ ಇಂಡಿಯಾ, ೨೦೦೧, ಪು. ೧೫೬

೧೮. ಕಿಟೆಲ್ ಪದಕೋಶ, ೧೯೫೪, ಪು. ೧೪೩.

ಅಧ್ಯಾಯ : ಮೂರು
ಅಲೆಮಾರಿ ಸಮುದಾಯಗಳಲ್ಲಿ ಮೌಖಿಕ ಸಾಹಿತ್ಯದ ಸ್ವರೂಪ

೩.೧. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ಲಕ್ಷಣಗಳು ಅಥವಾ ಸ್ವರೂಪ

೩.೨. ಅಲೆಮಾರಿ ಸಮುದಾಯಗಳಲ್ಲಿ ಮೌಖಿಕ ಸಾಹಿತ್ಯ ಪ್ರಕಾರಗಳು

೩.೩. ಮೌಖಿಕ ಸಾಹಿತ್ಯ ಪರಂಪರೆ ಮತ್ತು ಅಲೆಮಾರಿ ಸಮುದಾಯಗಳು

೩.೪. ಅಲೆಮಾರಿ ಸಮುದಾಯಗಳು ಹಾಡುವ ಸ್ವರೂಪ

೩.೪.೧. ಗೊಂದಲದ ವಿಧಾನಗಳು

೩.೪.೨. ಬುರ್ರ ಕಥೆಯ ಪ್ರದರ್ಶನ ವಿಧಾನ

೩.೪.೩. ಕಿನ್ನರಿ ಜೋಗಿ ಹಾಡುವ ವಿಧಾನ

೩.೪.೪. ದೊಂಬಿದಾಸರ ಹಾಡುವ ವಿಧಾನ

ಅಧ್ಯಾಯ ಮೂರು
ಅಲೆಮಾರಿ ಸಮುದಾಯಗಳಲ್ಲಿ ಮೌಖಿಕ ಸಾಹಿತ್ಯದ ಸ್ವರೂಪ

ಪೀಠಿಕೆ

"ಮಾನವಶಾಸ್ತ್ರಜ್ಞನರ ದೃಷ್ಟಿಯಿಂದ ಸಂಸ್ಕೃತಿ ಎನ್ನುವುದು ಮಾನವನ ಸಮಸ್ತ ಸಾಮಾಜಿಕ ಪರಂಪರೆಯ ಒಂದು. ಸಂಸ್ಕೃತಿ ಯಾವುದೇ ಒಂದು ಸಮುದಾಯದ ಸಾಮಾಜಿಕ ಪರಂಪರೆಯನ್ನು ಚಿತ್ರಿಸುತ್ತದೆ."[೧] ಮೇಲಿನ ಹೇಳಿಕೆಯು ಮಾನವನಲ್ಲಿ ಸಂಸ್ಕೃತಿಯು ಸಾಮಾಜಿಕವಾದ ಪರಂಪರೆಯನ್ನು ತಿಳಿದುಕೊಳ್ಳುವ ಹಿನ್ನೆಲೆಯಲ್ಲಿ ಬಹುಮುಖ್ಯವಾದದ್ದು. ಈ ಹಿನ್ನೆಲೆಯಲ್ಲಿ ಮುಖ್ಯವಾಗಿ ಇತರ ಜನ ಸಮುದಾಯಗಳ ಸಂಸ್ಕೃತಿಯನ್ನು ವಿಭಿನ್ನವಾಗಿರುವ, ಪ್ರತ್ಯೇಕಿಸಿದಂತಿರುವ ಅಲೆಮಾರಿ ಸಮುದಾಯಗಳ ಸಂಸ್ಕೃತಿಯನ್ನು ಗ್ರಹಿಸಬಹುದಾಗಿದೆ. ಅಲೆಮಾರಿ ಸಮುದಾಯಗಳು ಮಾತ್ರವಲ್ಲ ಜಗತ್ತಿನ ಯಾವುದೇ ಸಮುದಾಯವನ್ನು ತೆಗೆದುಕೊಂಡರು ಸಂಸ್ಕೃತಿ ಜನರ ಜೀವಾಳವಾಗಿ ರೂಪಿತವಾಗಿರುತ್ತದೆ. "ಬಾಹ್ಯವಾದ ಒಂದು ಅಗತ್ಯಕ್ಕಿಂತ ಆಂತರಿಕವಾಗಿ ಅಗತ್ಯವೊಂದು ಪ್ರೇರಣೆಯಾಗಿ ಕ್ರಿಯಾತ್ಮಕ ಸೃಷ್ಟಿಯಾಗಿ ಮೂಡಿ ಬರುವ ಕತೆ, ಕಾವ್ಯ, ಧರ್ಮ, ತತ್ವ, ಮುಂತಾದವುಗಳ ದೃಷ್ಟಿಯೇ ಬೇರೆಯಾಗಿರುತ್ತದೆ. ನಮ್ಮ ದಿನನಿತ್ಯದ ನೀತಿ, ಆಚಾರ, ವಿಚಾರ, ಕಲೆ, ಸಾಹಿತ್ಯ, ಧರ್ಮ, ಮನರಂಜನೆ ಮುಂತಾದ ವಲಯದದಲ್ಲಿ ಸಂಸ್ಕೃತಿಯ ಸೆಲೆಯನ್ನು ಕಾಣಬಹುದು."[೨] ಈ ನೆಲೆಯಲ್ಲಿ ಮಾನವನ ಮೂಲ ಬುಡಕಟ್ಟು ಜೀವನ ದೃಷ್ಟಿಯನ್ನು ಪರಿಶೀಲಿಸಿದಾಗ ಅವನ ನಾಗರಿಕ ಬದುಕಿನ ವಿಕಾಸದ ಕಾಲಘಟ್ಟದಲ್ಲಿ ರೂಪತಾಳಿದ್ದು ಮತ್ತು ಆ ಮೂಲ ಅಶೆಯಗಳನ್ನು ಒಂದು ರೀತಿಯಲ್ಲಿ ಇಂದಿಗೂ ಹಾಗೆಯೇ ಉಳಿಸಿಕೊಂಡು ಬಂದಿರುವುದಕ್ಕೆ ಅವನ ಹಾಡು, ನರ್ತನ, ನಂಬಿಕೆ–ನಿಷೇಧಗಳು, ಅಚಾರ–ವಿಚಾರ ಇತ್ಯಾದಿಗಳು ಕೆಲ ಮೂಲ ಸಂಸ್ಕೃತಿಯ ಪರಂಪರೆಯನ್ನು ಅನುಸರಿಸಿಕೊಂಡು ಬಂದಿರುವ ಜನ ಸಮುದಾಯಗಳು ಇಂದಿಗೂ ನಮ್ಮಲ್ಲಿ ಯಥೇಚ್ಚವಾಗಿ ಕಂಡುಬರುತ್ತವೆ. ಇಂತವುಗಳಲ್ಲಿ ತಮ್ಮದೇ ಆದಂತಹ ವಿಶಿಷ್ಠ ಸಾಂಸ್ಕೃತಿಕ ಪ್ರಜ್ಞೆಯನ್ನು ಒಳಗೊಂಡಿರುವ ಅಲೆಮಾರಿ ಸಮುದಾಯಗಳ ಜೀವನ ದೃಷ್ಟಿಯಲ್ಲಿ ಕಾಣಬಹುದು. ಇಂದಿಗೂ ಇವರಲ್ಲಿ ಪ್ರತ್ಯೇಕ ಜನಸಂಸ್ಕೃತಿ ಅಥವಾ ಉಪಸಂಸ್ಕೃತಿ ಇದೆ. ಆಧುನಿಕ ನಾಗರಿಕ ವ್ಯವಸ್ಥೆಯ ಭರಾಟೆಯ ನಡುವೆಯೂ ತಮ್ಮ ಸಂಸ್ಕೃತಿಯ ಉಳಿವಿಗಾಗಿ

ಹೋರಾಟ ಮಾಡಿಕೊಂಡು ಅದರ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವಂತೆ ಭಾಸವಾಗುತ್ತದೆ. ಈ ಹಿನ್ನೆಲೆಯಿಂದ ಇವರಲ್ಲಿ ಉಳಿದುಕೊಂಡು ಬಂದಿರುವ ಮೌಖಿಕ ಸಾಹಿತ್ಯ 'ಜನಪದ' ಎಂಬಂತೆ ಇವರ ಜನಸಂಸ್ಕೃತಿಯಂತೆ ಸಮೃದ್ಧಿಯಾದ ಫಸುಲಾಗಿ ಇವರಲ್ಲಿ ಬೆಳೆದಿದೆ. ಇವರ ಸಂಪ್ರದಾಯ, ನಂಬಿಕೆ, ಕುಶಲ ಕಲೆಗಾರಿಕೆ ಮುಂತಾದವುಗಳ ಆಗಾಧವಾದ ಜ್ಞಾನಪರಂಪರೆ ಅಥವಾ ತಿಳುವಳಿಕೆಯನ್ನು ಜನಪದ ಸಂಸ್ಕೃತಿಯೆಂದು ನಾವು ಕರೆಯುತ್ತೇವೆ. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವನ್ನು ನಾವು ಅವರ ಜನ ಸಂಸ್ಕೃತಿ ಹಿನ್ನೆಲೆಯಲ್ಲಿ ತಿಳಿಯುವ ಪ್ರಯತ್ನ ಮಾಡಲಾಗಿದೆಯಾದುದರಿಂದ ``Folklore ಪದವನ್ನು ಹೀಗೆ ಅರ್ಥೈಸಿಕೊಳ್ಳಬಹುದಾಗಿದೆ. 'Lore' ಎಂಬ ಪದವನ್ನು ಸಂಸ್ಕೃತಿ ಎಂಬ ಅರ್ಥದಲ್ಲಿ ಬಳಸುವ ಸಂದರ್ಭಗಳನ್ನು ಗಮನಿಸಿದರೆ 'Folk Culture' ಬೇರೆಯಲ್ಲ, 'Folklore' ಬೇರೆಯಲ್ಲ ಎನ್ನುವುದು ಸ್ಪಷ್ಟ. ಶಿಷ್ಟ ಸಂಸ್ಕೃತಿಗಳಿಂದ ದೂರ ಸರಿದ ಪರಂಪರಾನುಗತವಾದ ಬೆಳವಣಿಗೆಯನ್ನು ಪಡೆದ ಜನಸಾಮಾನ್ಯರ ವಿಶಿಷ್ಟ ಸಂಸ್ಕೃತಿಯೇ 'ಜಾನಪದ' ಅವರ ಜೀವನ ಸಮಸ್ತ ವಿಷಯಗಳೂ ಇದರಲ್ಲಿ ಸಮಾವೇಶಗೊಳ್ಳುತ್ತವೆ. ಎಂಬಂತಲೇ ಆಧುನಿಕ ಜಾನಪದ ವಿದ್ವಾಂಸರು ಜಾನಪದ ವಿಶಾಲ ಗರ್ಭದಲ್ಲಿ ಜನಪದ ಜೀವನದ ಯಾವ ಒಂದು ಅಂಗವನ್ನು ಬಿಡದೆ ಅಭ್ಯಾಸಿಸುತ್ತಾ."[೩] ಎಂಬ ನಿಲುವನ್ನು ಒಪ್ಪಿಕೊಳ್ಳಬಹುದಾಗಿದೆ. ಹೀಗಾಗಿ ಮೌಖಿಕ ಪರಂಪರೆ ಮಾನವನ ಬದುಕಿನಲ್ಲಿ ಅತೀ ಮುಖ್ಯವಾದ ಅಂಗವಾಗಿದೆ. ಕೆಲವು ಅಲೆಮಾರಿ ಸಮುದಾಯಗಳಿಗೆ ಅವರ ಮೌಖಿಕ ಸಾಹಿತ್ಯ, ಸಂಸ್ಕೃತಿಯ ಸಂಪತ್ತಿನ ಜ್ಞಾನವೇ ಇವರ ಬದುಕಿನ ಮೂಲಾಧಾರವಾಗಿ ಅವರ ಬದುಕಿನ ಸಂಸ್ಕೃತಿಯಾಗಿ ಬೆಸೆದುಕೊಂಡಿದೆ ಎಂಬುದು ಒಂದು ಭಾಗವಾದರೆ ಅವರ ಮೂಲ ಸಂಸ್ಕೃತಿಯ ರೂಪಕಗಳಾಗಿ ಅವರ ಕಾವ್ಯ, ಕಥೆ, ಒಗಟು, ಒಡಪು, ಗಾದೆ, ನಂಬಿಕೆ–ನಿಷೇಧಗಳು, ಇವೆ ಎಂಬುದನ್ನು ಕಾಣಬಹುದಾಗಿದೆ.

ಅಲೆಮಾರಿಗಳ ಮೌಖಿಕ ಸಾಹಿತ್ಯ ಸಮಾಜಮುಖಿಯಾದದ್ದು. ಲೌಖಿಕ ವೃತ್ತಿಗಾಯಕ ಪರಂಪರೆಯನ್ನು ಅವಲಂಬಿಸಿಕೊಂಡು ಬದುಕುವಂತಹ ಅಲೆಮಾರಿ ಸಮುದಾಯಗಳ ವೃತ್ತಿ ಪರಂಪರೆ ಮುಂದುವರೆಯುವುದಕ್ಕೆ ನೆಲೆ ನಿಂತ ಇತರೆ ಜನ ಸಮುದಾಯಗಳು ಅವರನ್ನು ಗೌರವಿಸುವುದರ ಪ್ರತಿರೂಪವಾಗಿ ಅವರ ಕಲಾ ಸಂಸ್ಕೃತಿಯಿದೆ. ಸದಾ ಕಾಲ ಸಂಚಾರಶೀಲರಾದ ಅಲೆಮಾರಿಗಳು ಯಾವುದಾದರೊಂದು ಗ್ರಾಮಕ್ಕೆ ಬಂದರೆಂದರೆ ಆ ಗ್ರಾಮದಲ್ಲಿ ಹಬ್ಬದ ವಾತವರಣ ನಿರ್ಮಾಣವಾಗುತ್ತದೆ. ಅವರ ಕಲೆಯನ್ನು ನೋಡಲು, ಕೇಳಲು ಜನ ಕಾತುರತೆಯಿಂದ ದೈನಂದಿನ ಕೆಲಸಗಳನ್ನು ಮುಗಿಸಿ ಸಂಜೆ ಹೊತ್ತಿಗೆ ತಯಾರಾಗುತ್ತಿದ್ದರೆಂದರೆ ಅವರ ಸಾಹಿತ್ಯ, ಕಲೆಗಳ ಮೇಲೆ ಜನ ಹೊಂದಿದ್ದಂತಹ ಆಸಕ್ತಿಯನ್ನು ಕಾಣಬಹುದು. ಈ ಆಸಕ್ತಿಯ ಹಿಂದಿನ ಮೂಲ ಉದ್ದೇಶ ಅಲೆಮಾರಿಗಳ ಕಲೆ, ಸಾಹಿತ್ಯಯದಲ್ಲಿರುವ ಸಮಾಜಮುಖಿಯಾದಂತಹ ಸತ್ವವು ನಿಕಟವಾದ ಸಂಬಂಧವನ್ನು ಸಾಧಿಸಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಗೊಂದಲಿಗರು, ದೊಂಬಿದಾಸರು, ಅರ್ಜುನಜೋಗಿಗಳು ಮತ್ತು ಬುಡ್ಗಜಂಗಮ ಅಲೆಮಾರಿ ಸಮುದಾಯಗಳು ಹಾಡುವಂತಹ ಪೌರಾಣಿಕ ಮತ್ತು ಚಾರಿತ್ರಿಕ ಕಾವ್ಯಗಳಾದ ಗಂಗೆ–ಗೌರಿ ಜಗಳ, ಎಲ್ಲಮ್ಮನ ಕಾವ್ಯ, ಕೃಷ್ಣಗೊಲ್ಲರ ಕಾವ್ಯ,

ಅರ್ಜುನಜೋಗಿ ಕಾವ್ಯ, ಕುಮಾರರಾಮನ ಕಾವ್ಯ, ಕೆಂಪೆಗೌಡನ ಕಾವ್ಯ ಮತ್ತು ಬೊಬ್ಬಿಲಿ ನಾಗಿರಡ್ಡಿ ಕಾವ್ಯ ಇತ್ಯಾದಿ ಕಥಾ ವಿಷಯಗಳು ಪೌರಾಣಿಕ ಮತ್ತು ಚಾರಿತ್ರಿಕವಾದರು ವಾಸ್ತವಿಕ ಬದುಕಿನ ತಲ್ಲಣಗಳಿಗೆ ಹತ್ತಿರವಾಗಿ ಸಮಾಜದಲ್ಲಿ ಉತ್ತಮವಾದ ಮೌಲ್ಯಗಳನ್ನು ಬಿತ್ತರಿಸುತ್ತವೆ. ಹೀಗಾಗಿ ಇವರ ಸಾಹಿತ್ಯ ವಾಸ್ತವಿಕವಾಗಿ ಸಮಾಜಮುಖಿಯೊಂದಿಗೆ ಸಾಮಾಜಿಕ ಸಹಚಾರ್ಯವನ್ನು ಸಾಧಿಸಿ ಸಮಾಜಕ್ಕೆ ಮಾನಸಿಕವಾದ ಔಷದೋಪಾದಿಯಲ್ಲಿ ಚಿಕಿತ್ಸಕವಾಗಿರುತ್ತದೆ. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯ ಮತ್ತು ಕಲೆಗಳ ಕಥಾ ವಿಷಯಗಳ ಮೂಲಕ ಪೌರಾಣಿಕ ಮತ್ತು ಚಾರಿತ್ರಿಕ ವಾಸ್ತವಿಕ ಸತ್ಯಾಂಶಗಳನ್ನು ನೀಡುವುದರಿಂದ ಅನೇಕ ವಿದ್ವಾಂಸರು ಇವರನ್ನು 'ಲೌಖಿಕ ವೃತ್ತಿಗಾಯಕರು' ಎಂದು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಮೌಖಿಕ ಸಾಹಿತ್ಯ ಪ್ರಕಾರಗಳನ್ನು ಕೆಳಗಿನಂತೆ ಪರಿಚಯ ಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಹಿನ್ನೆಲೆಯಲ್ಲಿ ಬಹುಮುಖ್ಯವಾದುದ್ದಾಗಿದೆ.

೩.೧. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ಲಕ್ಷಣಗಳು

ಕರ್ನಾಟಕ ಜಾನಪದ ಸಂಸ್ಕೃತಿಯು ಅತ್ಯಂತ ಶ್ರೀಮಂತದಿಂದ ಕೂಡಿದೆ. ಇಲ್ಲಿನ ಕಲೆ, ಸಾಹಿತ್ಯ, ನೃತ್ಯ, ನಾಟಕ, ಕಾವ್ಯ ಇತ್ಯಾದಿ ಪ್ರಕಾರಗಳು ನಮ್ಮ ನಾಡಿನ ಜಾನಪದ ಸಂಸ್ಕೃತಿಯ ಪ್ರತೀಕವಾಗಿವೆ. ಇವೇಲ್ಲಾವುಗಳ ಪ್ರಮುಖ ಅಂಗವಾಗಿರುವ ಮೌಖಿಕ ಸಾಹಿತ್ಯವನ್ನು ನಮ್ಮ ಮುಂದಿನ ಪೀಳಿಗೆಗಳಿಗೆ ರಕ್ಷಿಸುವುದು ಅನಿವಾರ್ಯವಾಗಿದೆ. ಇಂದಿನ ಪಾಶ್ಚಿಮಾತ್ಯ ಶೈಲಿಯ ಜೀವನದ ನಡುವೆ ಇಂದಿಗೂ ನಮ್ಮ ಕೇಲವು ಜನಪದ ಕಲೆ, ಸಾಹಿತ್ಯಗಳು ಅಳಿದು ಉಳಿದುಕೊಂಡು ಬಂದಿವೆ. ಇಂತಹ ಜನಪದ ಸಾಹಿತ್ಯವನ್ನು ರಕ್ಷಿಸುವ ಅನಿವಾರ್ಯತೆ ನಮ್ಮಗೆ ಅಗತ್ಯವಾಗಿದೆ.

ನಮ್ಮ ನಾಡಿನಲ್ಲಿ ಸಮೃದ್ಧವಾದ ಜನಪದ ಗೀತೆಗಳನ್ನು ಸೃಷ್ಟಿಸಿದರವರು ಯಾರು? ಯಾವಾಗ ಸೃಷ್ಟಿಸಿದರು? ಯಾಕಾಗಿ ಸೃಷ್ಟಿಸಿದರು? ಎಂಬ ಪ್ರಶ್ನೆಗಳಿಗೆ ಸಮಾಜದಲ್ಲಿನ ಅನೇಕ ಘಟನವಾಳಿಗಳನ್ನು ಇಟ್ಟುಕೊಂಡು ಮೌಖಿಕ ಸಾಹಿತ್ಯದ ಮೂಲಕ ಅಲೆಮಾರಿ ಸಮುದಾಯಗಳು ಪ್ರಾಚೀನವಾದ ಸಾಮಾಜಿಕ ಚರಿತ್ರೆಯನ್ನು ಬಾಯಿಂದ ಬಾಯಿಗೆ ಹರಿದು ಬಂದು ಇಂದಿಗೂ ಆಕರ್ಷಿಸುವುದನ್ನು ಕಾಣಬಹುದಾಗಿದೆ. ಇದಕ್ಕೆ ಇಂದಿಗೂ ಕಲೆ, ಸಾಹಿತ್ಯಗಳನ್ನು ನಂಬಿಕೊಂಡು ಜನಪದವೇ ಜೀವನ ಎಂದು ಬದುಕುವಂತಹ ವೃತ್ತಿಗಾಯಕ ಅಲೆಮಾರಿ ಸಮುದಾಯಗಳು ಸಾಂಸ್ಕೃತಿಕ ವಕ್ತಾರರಂತೆ ಜೀವಿಸುತ್ತಿದ್ದಾರೆ.

ಅಲೆಮಾರಿ ಸಮುದಾಯಗಳ ವೃತ್ತಿಮಾರ್ಗದ ಹಿನ್ನೆಲೆಯಲ್ಲಿ ಸೃಷ್ಟಿಗೊಂಡತಹ ಮೌಖಿಕ ಸಾಹಿತ್ಯವು ಕಲೋಪಾಸಕತ್ವ, ಸೃಜನಶೀಲತೆ, ಮಾದುರ್ಯವಾದ ಜನ ಸಂಸ್ಕೃತಿಯ ಹೆಜ್ಜೆಗುರುತುಗಳಾಗಿವೆ. ಇವರ ಮೌಖಿಕ ಸಾಹಿತ್ಯವು ಮಾನವನ ದೈನಂದಿನತೆಯಲ್ಲಿ ತಾನು ಮಾಡುವ ತನ್ಮತೆಯ ಸರಮಾಲೆಗಳ ರೀತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಮೌಲ್ಯಗಳನ್ನು ಸೃಷ್ಟಿಸುತ್ತವೆ. ಸಾಮಾಜಿಕ ಸುವ್ಯವಸ್ಥೆಯನ್ನು ಸೂಚಿಸಿ ಸದ್ಯದ ಸಮಸ್ಯೆಗಳಿಗೆ ಪರಿಹಾರವನ್ನು, ಭಕ್ತಿಯ ಗುಣವನ್ನು ಸಾಮುದಾಯಿಕವಾಗಿ ನಿರ್ವಸುತ್ತವೆ. ಹೀಗಾಗಿ ಇವರ ಮೌಖಿಕ ಸಾಹಿತ್ಯ ಮತ್ತು ಕಲೆಗಳು ಇಂದಿಗೂ ತನ್ನಿಂದ ತಾನೇ ಹರಿದು ಬಂದಂತಹ ಮಣ್ಣಿನ ಸಂಸ್ಕೃತಿಯ ಸತ್ವವಾಗಿ ಪರಿಣಮಿಸಿವೆ. ಇವುಗಳ ಆಧಾರದ ಮೇಲೆ ಅಲೆಮಾರಿ ಸಮುದಾಯದ ಮೌಖಿಕ ಸಾಹಿತ್ಯ ಸ್ವರೂಪವನ್ನು ಈ ಕೆಳಗಿನಂತೆ ವ್ಯಕ್ತಪಡಿಸಲಾಗಿದೆ.

೧. ಮೌಖಿಕ ಸಂಪ್ರದಾಯ.

ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವು ಬಹುತೇಕವಾಗಿ ಮೌಖಿಕ ಪರಂಪರೆಯಿಂದ ಕೂಡಿರುವುದು. ಈ ಸಮುದಾಯಗಳು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ, ಕಿವಿಯಿಂದ ಕಿವಿಗೆ ಹೀಗೆ ತಮ್ಮ ಸ್ಮೃತಿಪಟಲದಲ್ಲಿ ಹಲವಾರು ಕಾವ್ಯ, ಕಥೆ, ಐತಿಹ್ಯ, ಗಾದೆ, ಒಗಟು, ಒಡಪು, ನಂಬಿಕೆ–ನಿಷೇಧಗಳು, ಆಚರಣೆ ಇತ್ಯಾದಿ ಪ್ರಕಾರಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಮೌಖಿಕ ಸಾಹಿತ್ಯವು ಜನ ಸಮುದಾಯದ ಸಮಷ್ಟಿ ಪ್ರಜ್ಞೆ ಮತ್ತು ಜನ ಜೀವನದ ಪ್ರತೀಕವಾಗಿ ಸಂಸ್ಕೃತಿಯೊಂದರ ತಾಯಿ ಬೇರುವೆಬಂತೆ ಮತು, ಹಾಡು ಇವು ಪ್ರಚೀನ ಕಾಲದಿಂದಲ್ಲೂ ಬೆಳೆದುಕೊಂಡು ಸಮಸ್ತ ಜೀವನದ ವಿವಿಧ ಮೂಖಗಳನ್ನು ಅನಾವರಣಗೊಳಿಸುತ್ತದೆ. ಇಂತಹ ಮೌಖಿಕ ಸಾಹಿತ್ಯದ ತಿಳುವಳಿಕೆ ಕೇವಲ ಅಲೆಮಾರಿ ಸಮುದಾಯಗಳಿಂದ ಹಾಡಲು ಸಾಧ್ಯ ಎಂದು ಹೇಳಬಹುದು.

೨. ಸಾಮುದಾಯಿಕ ಪುನರ್ ಸೃಷ್ಟಿ.

ಯಾವುದೇ ಸಮುದಾಯದ ಮೌಖಿಕ ಸಾಹಿತ್ಯವು ಕೇವಲ ಒಬ್ಬ ವ್ಯಕ್ತಿಯಿಂದ ಸೃಷ್ಟಿಯಾಗಿರುವುದಿಲ್ಲ. ಹಿರಿಯ ತಲೆವಾರುಗಳಿಂದ ಸೃಷ್ಟಿಯಾಗಿ ನಂತರದ ಬೆಳವಣಿಗೆಯಲ್ಲಿ ಮೂಲ ಕರ್ತೃ ಕಣ್ಮರೆಯಾಗಿರುತ್ತಾನೆ. ಇವನಲ್ಲಿ ಸಾಹಿತ್ಯ ಸೃಷ್ಟಿಯಾಗಲು ಆಂದಿನ ಸಾಮುದಾಯಿಕ ಸಾಂಸ್ಕೃತಿಕ ಸಂಘರ್ಷಗಳ ಒತ್ತಡಗಳು ಕೂಡ ಕಾರಣಗಳಾಗಿರುತ್ತವೆ. ಇಂತಹ ಸಾಮುದಾಯಿಕ ಪುನರ್ ಸೃಷ್ಟಿಯ ಪ್ರಜ್ಞೆಯನ್ನು ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

೩. ವಿಶಾಲ ಮನೋಭಾವನೆ.

ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವು ಸಾಮಾನ್ಯವಾಗಿ ಸಮಷ್ಟಿ ಪ್ರಜ್ಞೆಯ ವಿಶಾಲ ಮನೋಭವನೆಯ ವೈಶಲ್ಯವನ್ನು ಹೊಂದಿರುತ್ತದೆ. ಈ ಸಮುದಾಯಗಳ ಬದುಕಿನ ಸಂಕೀರ್ಣವಾದ ಸೂಕ್ಷ್ಮ ಘಟನೆ ಅಥವಾ ವಿಷಯಗಳನ್ನು ಒಳಗೊಂಡಿರುತ್ತದೆ. ಹೀಗಾಗಿ ಇವರ ಸಾಹಿತ್ಯವು ಮಾನವ ಸಮಾಜದಲ್ಲಿ ವಿಶಾಲವಾದ ಬದುಕಿನ ಮೌಲ್ಯಗಳ ಹಿನ್ನೆಲೆಯಲ್ಲಿ ರಚಿತವಾಗಿರುತ್ತವೆ.

೪. ಚಲನಶೀಲವಾದ ಸಾಹಿತ್ಯ.

ಅಲೆಮಾರಿ ಸಮುದಾಯಗಳು ಸೃಷ್ಟಿಸಿಕೊಂಡಿರುವಂತಹ ಮೌಖಿಕ ಸಾಹಿತ್ಯವು ಸುಮಾರು ವರ್ಷಗಳ ಕಾಲ ನಾಶವಾಗದೆ ಪ್ರಸ್ತುತ ಸಂಧರ್ಭದವರೆಗೂ ಉಳಿಸಿಕೊಂಡು ಬಂದಿರುವುದನ್ನು ನೋಡಬಹುದು. ಹೀಗಾಗಿಯೇ ಇವರ ಸಾಹಿತ್ಯವು ನಶಿಸದೆ ಅದರಲ್ಲಿನ ಸತ್ವಯುತವಾದ ಮೌಲ್ಯಗಳ ಸಂಜೀವತದನ ಗುಣವನ್ನು ಪಡೆದುಕೊಂಡಿದೆ. ಹಾಗಾಗಿ ಈ ಸಮುದಾಯಗಳು ಮೌಖಿಕ ಸಾಹಿತ್ಯ ಕಲೆಗಳ ಮೂಲಕ ಇವತ್ತಿಗೂ ಜೀವಂತವಾಗಿ ಉಳಿಸಿಕೊಳ್ಳುವ ಪ್ರಯತ್ನಮಾಡುತ್ತಿದ್ದಾವೆ.

೫. ಪರಂಪರೆಯಿಂದ ಬಂದದ್ದು.

ವೃತ್ತಿಯಧಾರಿತ ಜಾತಿ ವ್ಯವಸ್ಥೆಯಲ್ಲಿ ವೃತ್ತಿ ಎಂಬುವುದು ಪರಂಪರಗತವಾಗಿ ಬಂದಿರುವಂತದ್ದು. ಆದೇ ರೀತಿ ವೃತ್ತಿಗಾಯಕ ಹಿನ್ನೆಲೆಯಿಂದ ಬಂದದ್ದಂತಹ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯ ಮತ್ತು ವೃತ್ತಿ ಪೀಳಿಗೆಯಿಂದ ಪೀಳಿಗೆ ವರ್ಗಾಯಿಸಲ್ಪಟ್ಟದ್ದಾಗಿದೆ. ಸಮುದಾಯದ ವೃತ್ತಿಗಾಯಕ ಪರಂಪರೆ ಯಾವ ರೀತಿ ಸ್ಥಿತ್ಯಂತರಯನ್ನು ಪಡೆದು ಸಾಗಿದಿಯೋ ಆದೇ ರೀತಿ ಸಾಹಿತ್ಯವು ಪರಂಪರೆಯ ಕೊಡುಗೆಯಾಗಿ ಸಾಗಿಬಂದಿದೆ.

೬. ಅಲೆಮಾರಿ ಸಾಹಿತ್ಯವು ಸರಳತೆಯಿಂದ ಕೂಡಿದೆ.

ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವು ಸಾಮಾನ್ಯವಾಗಿ ಪೇಕ್ಷಕ ವರ್ಗವನ್ನು ಮೇಚ್ಚಿಸುವಂತಹ ಗುರಿಯನ್ನಾಗಿಸಿಕೊಂಡು ಹುಟ್ಟಿಕೊಂಡಿರುವಂತದ್ದು. ಹೀಗಾಗಿ ಎಲ್ಲೂ ಕೂಡ ಕ್ಲಿಷ್ಟವಾಗಿರದೆ, ಅಸ್ಪಷ್ಟತೆಯಿಂದ ಇರದೆ ಭಾಷೆ, ತಂತ್ರಗಾರಿಕೆ, ವಸ್ತು, ನಿರೂಪಣೆ ಕ್ರಮ ಇತ್ಯದಿಗಳು ನೇರವಾಗಿ ಜನರಿಗೆ ಅರ್ಥೈಯಿಸುವ ತನವನ್ನು ಅವರ ಸಾಹಿತ್ಯ ಅಭಿವ್ಯಕ್ತಿ ಕ್ರಮದಲ್ಲಿರುತ್ತದೆ.

೭. ಅಲೆಮಾರಿ ಸಾಹಿತ್ಯವು ವರ್ತಮಾನಕ್ಕನುಗುಣವಾಗಿ ಬದಲಾವಣೆಯಾಗುತ್ತದೆ.

ಶಿಷ್ಟ ಮತ್ತು ಜನಪದ ಸಾಹಿತ್ಯವು ಸಮಾಜಮುಖಿಯಾಗಿರುಂತದ್ದು, ಈ ಸಮಾಜಮುಖಿ ತನ ವರ್ತಮಾನವನ್ನು ಅನುಸರಿಸಿಕೊಂಡು ಬಂದಿರುತ್ತದೆ. ಹೀಗೆ ಅಲೆಮಾರಿ ಸಮುದಾಯಗಳ ಸಾಹಿತ್ಯವು ಪರಂಪರೆಯಿಂದ ಬಂದಿವಂತಾದದ್ದರು ವರ್ತಮಾನದ ಅಭಿರುಚಿಗೆ ಅನುಗುಣವಾಗಿ ಮೂಲ ಪಾಠ್ಯದಲ್ಲಿರುವಂತೆ ಇರದೆ ಬದಲಾವಣೆಗೊಳಪಡುತ್ತದೆ. ಇದು ಇವರ ಮೌಖಿಕ ಸಾಹಿತ್ಯದ ಮುಖ್ಯ ಲಕ್ಷಣವಾಗಿದೆ.

೮. ವಿಶ್ವ ಪ್ರಜ್ಞೆ

ಯಾವುದೇ ಮೌಖಿಕ ಸಾಹಿತ್ಯದ ವಸ್ತವನ್ನು ಅವಲೋಕಿಸಿದಾಗ ಅವುಗಳಲ್ಲಿ ವಿಶ್ವ ಪ್ರಜ್ಞೆ ಅಶಯಗಳನ್ನು ಅನುಸಿಕೊಂಡು ರಚಿತವಾಗಿರುತ್ತವೆ. ಪ್ರತಿದಿನ ಅಲೆಮಾರಿ ಸಮುದಾಯದವು ಸಮಾಜಕ್ಕೆ ಮೌಲ್ಯಯುತವಾದ ಸಂದೇಶವನ್ನು ಸಾರಿ ಕಾಲ, ದೇಶ, ಭಾಷೆ, ಜಾತಿ, ಧರ್ಮದ ಗಡಿಗಳನ್ನು ಮೀರಿಸುವ ವಿಶ್ವ ಪ್ರಜ್ಞೆಯ ದರ್ಶನವನ್ನು ಈ ಸಮುದಾಯಗಳ ಕಥೆ, ಕಾವ್ಯ ಇತರೆ ಪ್ರಕಾರಗಳ ವಸ್ತು ಅಶಯಗಳಾಗಿರುತ್ತವೆ.

೯. ಸಂಸ್ಕೃತಿಯ ಒಂದು ಭಾಗ

ಅಲೆಮಾರಿ ಸಮುದಾಯಗಳ ಜೀವನ ಸಂಸ್ಕೃತಿಯ ಭಾಗವಾಗಿ ಅವರ ಮೌಖಿಕ ಸಾಹಿತ್ಯವು ಹುಟ್ಟಿಕೊಂಡಿರುತ್ತದೆ. ಸಂಸ್ಕೃತಿ ಎಂದರೆ ಉತ್ತಮವಾದ ಮೌಲ್ಯ ಎಂದು ಕರೆಯುತ್ತಾರೆ. ಇದೆ ರೀತಿ ಸಮಾಜದಲ್ಲಿ ಉತ್ತಮವಾದ ಸಂಸ್ಕೃತಿಯ ಗುಣಗಳನ್ನು ಪ್ರತಿಪಾದಿಸುವುದು ಇವರ ಅಭಿವ್ಯಕ್ತಿಯ ಆಶಯವಾಗಿದೆ. ಇಂತಹ ಸಂಸ್ಕೃತಿಯನ್ನು ತಮಗೆ ತಾವೇ ರೂಡಿಸಿಕೊಳ್ಳದೆ ಸಮಾಜದ ಜೋತೆಗೆ

ಸಂಚಾರಿಸಿ ತಮ್ಮ ಮೌಖಿಕ ಸಾಹಿತ್ಯದ ಮೂಲಕ ಜನ ಸಮುದಾಯಗಳಿಗೆ ಸಾಮಾಜಿಕ ಪ್ರಜ್ಞೆಯ ಮೌಲ್ಯಗಳನ್ನು ಹಂಚುವ ಬಹುದೊಡ್ಡ ಕೆಲಸವನ್ನು ಈ ಸಮುದಾಯಗಳು ಮಾಡುತ್ತವೆ.

೧೦. ಆಚರಣೆಗಳ ಭಾಗವಾಗಿ ರೂಪಿತವಾಗಿರುತ್ತವೆ.

ಅಲೆಮಾರಿ ಸಮುದಾಯಗಳಲ್ಲಿನ ಮೌಖಿಕ ಸಾಹಿತ್ಯವು ಸಾಮಾನ್ಯವಾಗಿ ವೃತಿಗಾಯಕ ಪರಂಪರೆಯ ಹಿನ್ನೆಲೆಯಿಂದ ಹುಟ್ಟಿಕೊಂಡಿದೆಯಾದರು. ಸಮಾಜದ ಜೀವನಾವರ್ತನದ ಆಚರಣೆಗಳ ಸಂದರ್ಭದಲ್ಲಿ ಮತ್ತು ಹಬ್ಬ, ಜಾತ್ರೆ, ಉತ್ಸವಗಳು ಇತರೆ ಆನೇಕ ಆಚರಣೆಗಳಲ್ಲಿ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಇನ್ನೂ ಕೇಲವು ಅಲೆಮಾರಿ ಸಮುದಾಯಗಳು ದೇವರ ದೀಕ್ಷೆಯನ್ನು ಪಡೆದು ಜೋಳಿಗೆ ಹಾಕಿಕೊಂಡು ಶಂಕು, ಜಾಗಟೆ, ಕಿನ್ನರಿ, ಏಕತಾರಿ ಇತ್ಯಾದಿ ವಾದ್ಯಗಳೊಂದಿಗೆ ತಮ್ಮ ದೈವಗಳ ಮಹಿಮೆಗಳನ್ನು ಹಾಡಿ ಮೌಖಿಕ ಸಾಹಿತ್ಯದ ಮೂಲಕ ಪ್ರಚಾರಪಡಿಸುತ್ತಾರೆ. ಇಂತಹ ವೃತ್ತಿಗಾಯಕರನ್ನು ಧಾರ್ಮಿಕ ವೃತ್ತಿಗಾಯಕರೆಂದು ಕರೆಯುತ್ತಾರೆ. ಅಲ್ಲದೆ ಇವರು ಯಾವುದೇ ಸಂದರ್ಭದಲ್ಲಿ ಯಾವ ಸ್ಥಳದಲ್ಲಿ ಬೇಕಾದರು ತಮ್ಮನು ಇಷ್ಟಪಡುವಂತಹ ಪ್ರೇಕ್ಷಕವರ್ಗ ಎಲ್ಲಿರುತ್ತದೋ ಅಲ್ಲಿಯೇ ವಾದ್ಯ ಪರಿಕರಗಳೊಂದಿಗೆ ಹೋಗಿ ಕಲೆಯನ್ನು ಪ್ರದರ್ಶಿಸುವ ಮತ್ತೊಂದು ಸ್ವರೂಪವು ಇದೆ.

೧೧. ಪ್ರದರ್ಶನಾತ್ಮಕತೆ ಮತ್ತು ಗಾಯನ ಸ್ವರೂಪ

ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವು ಪ್ರದರ್ಶನಾತ್ಮಕ ಕಥೆಗೆ ಅನುಸಾರವಾಗಿ ವಿವಿಧ ವೇಷಭೂಷಣಗಳೊಂದಿಗೆ ಸಂಗೀತ ವಾದ್ಯಗಳನ್ನು ಬಳಸಿಕೊಂಡು ಗಾಯನವನ್ನು ಮಾಡುತ್ತ ಮನೆ-ಮನೆಯ ಮುಂದೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಇಂತಹ ಪ್ರದರ್ಶನಾತ್ಮಕ ಕಲೆಗಳನ್ನು ಅವರ ಜೀವನೋಪಾಯಕ್ಕಾಗಿ ಪ್ರದರ್ಶಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಇವತ್ತಿಗೂ ಇಂತಹ ಕೆಲೆಗಳನ್ನು ಅನುಸರಿಸಿಕೊಂಡು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯಿತ್ತಾ ಸಂಸ್ಕೃತಿಯ ರಾಯಬಾರಿಗಳಂತೆ ಜನ ಸಮುದಾಯಗಳನ್ನು ಆಕರ್ಷಣೆಗೊಳ್ಳಪಡಿಸಿಕೊಂಡು ಬಂದಿದ್ದಾರೆ. ಅವರು ಅಭಿನಯಿಸುವ ಅಥವಾ ಪ್ರದರ್ಶಿಸುವ ಕಲೆಯ ಸಂಧರ್ಭದ ವಸ್ತು ವಿಷಯಗಳಿಗೆ ಅನುಗುಣವಾಗಿ ಅವರ ಮೌಖಿಕ ಸಾಹಿತ್ಯವಿರುತ್ತದೆ.

೧೨. ಸಮಾಜಮುಖಿಯಾದ ಸಾಹಿತ್ಯ

ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯ ಸಮಾಜದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ. ಸದಾ ಸಂಚಾರಶಿಲರಾದಂತಹ ಇವರು ಯಾವುದೇ ಹಳ್ಳಿ ಅಥವಾ ಪ್ರದೇಶಕ್ಕೆ ಭೇಟಿಕೊಟ್ಟರೆಂದರೆ ಅ ಪ್ರದೇಶಕ್ಕೆ ಅನುಗುಣವಾದಂತಹ ಪೌರಾಣಿಕ ಮತ್ತು ಚಾರಿತ್ರಿಕ ವಸ್ತುವನ್ನು ಬಳಸಿಕೊಂಡು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಅಲ್ಲದೇ ಅಲೆಮಾರಿ ಸಮುದಾಯಗಳ ಸಾಹಿತ್ಯದಲ್ಲಿನ ಮೌಲ್ಯಗಳು ವಿಶೇಷವಾಗಿ ಸಮಾಜದ ಲೌಕಿಕವಾದ ಬದುಕಿನೊಂದಿಗೆ ಹೋಲಿಕೆ ಮಾಡಿ ಹೇಳುವ

ಸಮಾಜ ಮುಖಿಯಾದ ಗುಣ ಬಹುತೇಕ ಇವರ ಸಾಹಿತ್ಯದಲ್ಲಿ ಇರುತ್ತದೆ. ಹೀಗಾಗಿ ಇವರನ್ನು ವಿದ್ವಾಂಸರು, ಸಂಶೋಧಕರು ಲೌಕಿಕ ವೃತ್ತಿ ಗಾಯಕರು ಎಂದು ಕರೆದಿರುವುದನು ಕಾಣುತ್ತವೆ.

೧೩. ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವು ಇತರೆ ಸಮುದಾಯಗಳ ಮೌಖಿಕ ಸಾಹಿತ್ಯಕ್ಕಿಂತ ಭಿನ್ನ.

ಇತರೆ ಸಮುದಾಯಗಳಲ್ಲಿರುವ ಮೌಖಿಕ ಸಾಹಿತ್ಯವು ಶುಭಕಾರ್ಯಗಳಲ್ಲಿ, ಕೆಲಸ ಮಾಡುವ ಸಮಯದಲ್ಲಿ ಇತ್ಯಾದಿ ಸಂದರ್ಭಗಳಲ್ಲಿ ಪ್ರವೃತ್ತಿ ರೂಪದಲ್ಲಿ ವಿಶೇಷವಾಗಿ ಹಾಡುತ್ತಾರೆ. ಆದರೆ ಅಲೆಮಾರಿ ವೃತ್ತಿಗಾಯಕರು ನಿರ್ಮಿಸಿಕೊಂಡತಹ ಮೌಖಿಕ ಸಾಹಿತ್ಯವು ದೈನಂದಿನ ವೃತ್ತಿಯಾದಾರಿತ ನೆಲೆಯಲ್ಲಿ ಅವರ ಮೌಖಿಕ ಸಾಹಿತ್ಯವು ಹುಟ್ಟಿಕೊಂಡಿರುತ್ತದೆ. ಹೀಗಾಗಿ ಇತರೆ ಸಮುದಾಯಗಳಲ್ಲಿ ಇರುವ ಮೌಖಿಕ ಸಾಹಿತ್ಯಕ್ಕಿಂತ ಭಿನ್ನವಾದ ಸಾಹಿತ್ಯವಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯವು ಸಮಾಜದಲ್ಲಿನ ಸಂಬಂಧಗಳನ್ನು ಬೇಸೆಯುವ ಕೊಂಡಿಯಾಗಿದೆ. ಈ ಸಮುದಾಯದ ಮೌಖಿಕ ಸಾಹಿತ್ಯವು ಸಮಾಜದಲ್ಲಿ ಚಲನಶೀಲವಾದ, ವಿಶಿಷ್ಟವಾದ, ಪುನರ್ ಸೃಷ್ಟಿಯಾಗಿರುವ ಮತ್ತು ವಿಶಾಲವಾದ ಜೀವನ ಸಂಸ್ಕೃತಿಯ ಪರಂಪರೆಯೊಂದನ್ನು ವರ್ತಮಾನಕ್ಕೆ ಅನುಗುಣವಾಗಿ ಸೃಷ್ಟಿಯಾಗಿರುತ್ತದೆ. ಸಮಾಜದ ಜೋತೆಗೆ ಚಲನಶೀಲತೆಯಿಂದ ಕೂಡಿರುವಂತಹ ಇವರ ಸಾಹಿತ್ಯವು ಸಮುದಾಯ ಮುಖಿಯಾಗಿರದೆ, ಸಮಾಜಮುಖಿಯಾದ ಮೌಲ್ಯಗಳನ್ನು ಪ್ರತಿಪದಿಸುವುದನ್ನು ಕಾಣುತ್ತೆವೆ. ಹೀಗಾಗಿ ಇವರ ಸಾಹಿತ್ಯವು ಆರೋಗ್ಯಕರವಾದ ಸಮಾಜವನ್ನು ಲೌಕಿಕವಾಗಿ ಕಟ್ಟುವ ಮತ್ತು ತಮ್ಮದೆಯಾದಂತಹ ಸಾಂಸ್ಕೃತಿಕ ಅನನ್ಯತೆಯನ್ನು ಬೆಳೆಸುವುದು ಇವರ ಸಾಹಿತ್ಯದ ಮುಖ್ಯ ಗುರಿಯಾಗಿರುತ್ತದೆ.

೩.೨. ಅಲೆಮಾರಿ ಸಮುದಾಯಗಳಲ್ಲಿ ಮೌಖಿಕ ಸಾಹಿತ್ಯದ ಪ್ರಕಾರಗಳು

ಮೌಖಿಕ ಸಾಹಿತ್ಯ: ತಲೆಮಾರಿನಿಂದ ತಲೆಮಾರಿಗೆ ವಾಕ್ ಸಂಪ್ರದಾಯದ ಮೂಲಕವಾಗಿ ಜನಸಮುದಾಯಗಳ ಸ್ಮೃತಿ ಪಟಲ್ಲದೊಳಗಿರುವ ಪರಂಪರಾಗತವಾದ ಹಾಡುವ ಮಾದರಿಯೇ ಮೌಖಿಕ ಸಾಹಿತ್ಯ. ಇದು ಒಂದು ಗುಂಪಿನ ಸಾಹಿತ್ಯ ಮೂಲದಿಂದಲೂ ಗ್ರಾಮೀಣ ಜನಸಂಸ್ಕೃತಿಯಲ್ಲಿ ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಸಂತೋಷ, ದುಃಖದ ಸಂದರ್ಭಗಳಲ್ಲಿ ತಮಗೆ ಆದ ಭಾವನೆಗಳ ವಿಭಾವ ಸ್ಥಿತಿಯೇ ಮೌಖಿಕ ಸಾಹಿತ್ಯವೆಂದೆ ಹೇಳಬಹುದು. ಸಾಮಾನ್ಯವಾಗಿ ಶಿಷ್ಠ ಕಾವ್ಯಗಳಂತೆ ಜನಪದ ಗೀತೆಗಳನ್ನು ರಚಿಸುವುದಕ್ಕೆ ಮತ್ತು ಹಾಡುವುದಕ್ಕೆ ತನ್ನದೇ ಆದಂತಹ ಔಚಿತ್ಯವಾದ ಬೋಧನ ತಂತ್ರ ನಿಯಮಗಳು ಇರುವುದಿಲ್ಲ. ಅವು ಸಾಂದರ್ಭಿಕವಾಗಿ ಹುಟ್ಟಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಜನರ ಬುದ್ಧಿ ಪೂರ್ವಕ ವಿವೇಚನೆಯಲ್ಲಿ ನೆಲೆಸಿರುವಂತವುಗಳಾಗಿವೆ. ಇದರಲ್ಲಿ ಸಾಮಾಜಿಕ, ಚಾರಿತ್ರಿಕ, ಪೌರಾಣಿಕ ವಸ್ತುಗಳನ್ನಾಧರಿಸಿದ ಕಾವ್ಯಗಳನ್ನೂ ಹಾಡುತ್ತಾರೆ. ಇದು ಜನಪದರ ವೈಶಲ್ಯವೂ ಹೌದು. ಈ ಜನಪದ ಕಾವ್ಯಗಳಲ್ಲಿ ಲಾವಣಿ, ಮಹಾಕಾವ್ಯ, ಖಂಡ ಕಾವ್ಯ, ಸೃಷ್ಟಿ

ಪುರಾಣ ಮುಂತಾದ ಒಳ ಪ್ರಕಾರಗಳನ್ನು ಮೌಖಿಕ ಕಾವ್ಯ ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸರ ಮೌಖಿಕ ಕಾವ್ಯ ಪರಂಪರೆ ಒಳಗೊಂಡಿರುವುದನ್ನು ಕಾಣುತ್ತೇವೆ.

ಜನಪದ ಕಥೆ: ಮಾನವನ ಪ್ರಾಚೀನವಾದಂತಹ ಸಂಸ್ಕೃತಿ ಮತ್ತು ವಾಕ್ ಸಂಪ್ರದಾಯದಲ್ಲಿ ಇರುವಂತಹ ಅತೀ ಪ್ರಾಚೀನ ಮೌಖಿಕ ಸಾಹಿತ್ಯ ಪ್ರಕಾರಗಳಲ್ಲಿ ಜನಪದ ಕಥೆಯೂ ಒಂದಾಗಿದ್ದು, ವಾಕ್-ಸಂಪ್ರದಾಯದ ಮೂಲಕ ಬಾಯಿಂದ ಬಾಯಿಗೆ ಹರಿದು ಬಂದಿರುವ ಪ್ರಕಾರವಾಗಿದೆ. ಇದು ಮಾನವನ ಜೀವಿಯ ಉಗಮದಷ್ಟೇ ಅತೀ ಪ್ರಾಚೀನವಾದ ಪರಂಪರೆಯನ್ನು ಒಳಗೊಂಡಿದೆ. ಸಾಮಾಜಿಕ, ಭಾಷಿಕ, ಚಾರಿತ್ರಿಕ, ಮನಃಶಾಸ್ತ್ರೀಯ ಹಾಗೂ ಮಾನವಶಾಸ್ತ್ರೀಯ ದೃಷ್ಟಿಕೋನಗಳ ಮೂಲಕ ಮನುಷ್ಯನ ಬುದ್ಧಿಮತ್ತೆಗೆ ಅವನ ವಿಚಾರಾಧಾರೆಗಳಿಗೆ, ಅವನ ವಾದ-ವಿವಾದಗಳಿಗೆ, ಅವನ ಆಸಕ್ತಿಗಳಿಗೆ, ಅವನ ಪ್ರಶ್ನೆಗಳಿಗೆ ಎಷ್ಟೋ ಕಥೆಗಳ ಮೂಲಕ ಉತ್ತರಗಳನ್ನು ತಿಳಿಸುವ ಮೌಲ್ಯಗಳಾಗಿ ಜನಸಮುದಾಯಗಳಲ್ಲಿ ನೆಲೆಸಿದೆ. ಐತಿಹ್ಯ, ಪುರಾಣ ರೂಪದ ಕಥೆಗಳು ಇವೆ ಎಂದು 'ಬಾಗ್ಸ್' ಅವರ ಕಥೆಗಳ ವಿಭಾಗ ಕ್ರಮದಿಂದ ತಿಳಿಯಬಹುದು. ಇದೊಂದು ವಾಚಿಕ ಸಂಪ್ರದಾಯವಾಗಿದ್ದು, ಜನಸಮುದಾಯಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಪ್ರಾಚೀನ ಪ್ರಕಾರವಾಗಿದೆ. ಶಿಷ್ಟ ಕಥೆಗಳಿಗೆ ಮೂಲ ಎಂಬುದನ್ನು ತಿಳಿಯಬಹುದಾಗಿದೆ. ಇದು ಕಲಾತ್ಮಕವಾದ ಪ್ರಕಾರವಾಗಿ ಜನತೆಯ ಸಾಂಸ್ಕೃತಿಕ ಚರಿತ್ರೆಯ ಬಹುಮುಖ್ಯ ಭಾಗವಾಗಿ ಮನುಷ್ಯನ ಬೌದ್ಧಿಕ ಮತ್ತು ಕಲಾಭಿರುಚಿಯ ತಿಳುವಳಿಕೆಯನ್ನು ನೀಡುವುದರ ಜೊತೆಗೆ ರಂಜನೆ, ವೈಶಿಷ್ಟ್ಯತೆ, ಗ್ರಾಮೀಣ ಬದುಕಿನ ಸೊಗಸು, ನಾಟಕೀಯತೆ, ಕಥೆಗಳ ಮುಖ್ಯವಾದ ಅಂಗಗಳಾಗಿ ಭಾವನಾತ್ಮಕವಾಗಿ ಸೆಳೆದು ಕಾಲ್ಪನಿಕ, ಚಾರಿತ್ರಿಕ, ಪೌರಾಣಿಕ, ಸಾಮಾಜಿಕ, ಸಾಂಕೇತಿಕ ವಿವೇಚನೆಗಳನ್ನು ಮೂಡಿಸುತ್ತದೆ. ಕಥೆಗಳಲ್ಲಿ ನೀತಿಕಥೆ, ಕಿನ್ನರ ಕಥೆ, ಪುರಾಣ ಕಥೆ, ಅದ್ಭುತ ಕಥೆ, ವಿನೋದ ಕಥೆ, ಪ್ರಾಣಿ ಕಥೆ, ಅತಿಮಾನುಷ ಕಥೆ, ಹಾಸ್ಯ ಕಥೆ, ದುರಂತ ಕಥೆ, ವೀರ ಕಥೆ, ಸಾಹಸ ಕಥೆ, ಮಾಂತ್ರಿಕ ಕಥೆ ಮುಂತಾದ ಒಳ ಪ್ರಕಾರಗಳನ್ನು ಹೊಂದಿರುವುದನ್ನು ಕಾಣಬಹುದು. ಅಲ್ಲದೇ ಯಾವುದೇ ಕಾವ್ಯ, ನಾಟಕವಾದರೂ ಕೂಡ ಮೂಲ ಕಥೆಯನ್ನೇ ಒಳಗೊಂಡಿರುತ್ತದೆ. ಹೀಗಾಗಿ ಕಥೆ ಎಲ್ಲಾ ಪ್ರಕಾರಗಳಿಗೆ ಮೂಲವೆಂದೇ ಭಾವಿಸಬಹುದಾಗಿದೆ. ಇಂತಹ ಕಥೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಧ್ಯಯನಕ್ಕೊಳಪಡಿಸಿಕೊಳ್ಳಲಾಗಿದೆ.

ಒಡಪು: ಮೌಖಿಕ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ 'ಒಡಪು' ಇತರ ಸಾಹಿತ್ಯ ಪ್ರಕಾರಗಳಷ್ಟು ಖ್ಯಾತಿಯನ್ನು ಹೊಂದಿಲ್ಲವಾದರೂ ಇವು ಜನಸಮುದಾಯಗಳಲ್ಲಿ ಪ್ರಮುಖವಾದ ಮೌಲ್ಯಗಳನ್ನ ಬೆಳೆಸುತ್ತವೆ. ಮುಖ್ಯವಾಗಿ ಮಹಿಳೆಯರೇ ಹೆಚ್ಚಾಗಿ ಬಳಸುವ ಪ್ರಕಾರವಾಗಿದ್ದು, ಋತುಮತಿ, ಮದುವೆ, ಸೋಬಾನ, ಜಾತ್ರೆ, ಉತ್ಸವ ದೇವರ ಪೂಜೆಗಳಲ್ಲಿ, ಆರತಿ ಬೆಳಗುವಾಗ ಒಡಪುಗಳನ್ನು ಹೇಳುವುದು ಅವರ ಆಚರಣೆಯ ಭಾಗವಾಗಿ ಸುಖ-ದುಃಖ, ನಡತೆ-ಚಾರಿತ್ರ್ಯ, ಪ್ರೀತಿ-ಪ್ರೇಮ, ಸ್ವಭಾವ-ಗುಣಗಾನ ಮುಂತಾದ ವಿಚಾರಗಳನ್ನು ಒಡಪುಗಳು ತಿಳಿಸುತ್ತವೆಯಲ್ಲದೆ ಅವರು ಹೇಳುವ ಕಥೆ, ಹಾಡು,

ಪುರಾಣ, ಮಹಾಕಾವ್ಯ, ಲಾವಣಿಗಳಲ್ಲೂ ಒಡಪುಗಳು ಒಡಮೂಡಿಗೊಂಡಿರುವುದು ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಜನಪದ ಒಡಪುಗಳನ್ನು ಅಳವಡಿಸಿಕೊಳ್ಳಲಾಗಿದೆ.

ಒಗಟು: ಪುರಾತನ ಕಾಲದಿಂದಲೂ ಮಾನವನ ಕೂತಹಲಗಳಿಗೆ, ಪ್ರಶ್ನೆಗಳಿಗೆ ಉತ್ತರವಾಗಿ ಸಹಜವಾಗಿ ಜನಪದರಲ್ಲಿ ಹುಟ್ಟಿಕೊಂಡ ಪ್ರಾಚೀನ ಜನಪದ ಪ್ರಕಾರಗಳಲ್ಲಿ ಒಂದಾಗಿದ್ದು ಅವರ ಬದುಕಿನ ನಡುವೆ ಸಂತೋಷ ಸಂದರ್ಭದಲ್ಲಿ ಹಾಸ್ಯವಾಗಿ, ಮಾತಿನ ಮಧ್ಯೆ ಅಲಲ್ಲಿ ಬಳಸಿ ಬುದ್ಧಿ ವೈಭವ, ಹಾಸ್ಯ ಪ್ರಿಯತೆ, ಚತುರುಕ್ತಿ, ವಿಡಂಬನ ಸ್ವಾಭಾವ ಮುಂತಾದವುಗಳನ್ನು ಚಿತ್ರಿಸಲು ಒಗಟುಗಳನ್ನು ಬಳಸುತ್ತಾರೆ. ಭಾರತೀಯ ಜನ ಪರಂಪರೆಯಲ್ಲಿ ಕಾವ್ಯ, ಕಥೆ, ಗಾದೆಗಳಂತೆ ಒಗಟು ಪ್ರಮುಖವಾದ ಪ್ರಕಾರವಾಗಿ ಜನಮಾನಸವಾಗಿದೆ. ಇಂತಹ ಮೌಖಿಕ ಸಾಹಿತ್ಯದ ಪ್ರಕಾರ ಅಲೆಮಾರಿ ಸಮುದಾಯಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಈ ನೆಲೆಯಲ್ಲಿ ಈ ಸಾಹಿತಿಕ ಪ್ರಕಾರವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಗಾದೆಗಳು: ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಹೆಚ್ಚು ಜನಪ್ರಿಯವಾಗಿರುವ ಪ್ರಕಾರವೆಂದರೆ ಗಾದೆ. ಇದು ಮನುಷ್ಯನ ಅನುಭವದ ಸಾಂದ್ರತೆಗೆ, ವಸ್ತುವೈವಿಧ್ಯತೆಗೆ, ಸಂಸ್ಕೃತಿ ಸಂಪನ್ನತೆಗೆ, ವಿಚಾರ ವೈಭವಕ್ಕೆ, ಮಾತಿನ ಮಧ್ಯೆದ ಸಿಹಿ ಮಾತಿನಂತೆ ಜನರಲ್ಲಿ ಹಾಸುಹೊಕ್ಕಾಗಿ ಅವರ ಅನನ್ಯ ಸಂಗಾತಿಯಾಗಿ ಊಟಕ್ಕೆ ಉಪ್ಪು ಎಷ್ಟು ಅಗತ್ಯವೋ ಮಾತಿನ ಮಧ್ಯೆ ಗಾದೆಯು ಅಷ್ಟೇ ಆಗತ್ಯವಾಗಿದೆ. ಇದಕ್ಕೆ ಸಂವಾಧಿಯಾಗಿ ನಾಣ್ಣುಡಿ ಎಂದು ಕರೆಯುವ ವಾಡಿಕೆಯೂ ನಮ್ಮಲ್ಲಿದೆ. ಲೋಕೋಕ್ತಿ ಪ್ರಾಚೀನೋಕ್ತಿ, ಸಾರೋಕ್ತಿ, ಸೂಕ್ತಿ, ಸೂತ್ರ, ಹೇಳಿಕೆ, ವಿಧಿ, ನಿಯಮ, ಪ್ರಮಾಣ ಇತ್ಯಾದಿ ಅರ್ಥಗಳನ್ನು ಕೊಡುವುದಲ್ಲದೆ ಅಲೆಮಾರಿ ಸಮುದಾಯಗಳ ಜೀವನ ಸತ್ವ ಮತ್ತು ತತ್ವಗಳಾಗಿ ಪರಿಣಾಮಿಸಿದರ ಪರಿಣಾಮವಾಗಿ ಪ್ರಸ್ತುತ ಅಧ್ಯಯನದಲ್ಲಿ ಗದೆಗಳನ್ನು ಬಳಸಿಕೊಳ್ಳಲಾಗಿದೆ.

ನಂಬಿಕೆ–ನಿಷೇಧ: ನಂಬಿಕೆ–ನಿಷೇಧಗಳು ಮಾನವ ಬದುಕಿನ ದಿಕ್ಸೂಚಿ ಮಾರ್ಗದರ್ಶಿಕಗಳಾಗಿ, ಸಂಮಿತೆಗಳಾಗಿ ನಿರೂಪಿಸುವ ಮತ್ತು ನಿಯಂತ್ರಿಸುವ ಸಾಧನಗಳಾಗಿ ಕೆಲಸ ಮಾಡುತ್ತವೆ. ಈ ನಂಬಿಕೆ–ನಿಷೇಧಗಳು ಯಾವುದೇ ಬರಹದ ರೂಪದಲ್ಲಿರುವ ಸಂಹಿತೆಗಳಲ್ಲ. ಮೌಖಿಕವಾಗಿ ಬಂದಿರುವ ಸಾಂಸ್ಕೃತಿಕ ವಿವೇಚನೆಯ ಹಿನ್ನೆಲೆಯಲ್ಲಿ ಮೂಲ ಬದುಕಿನಲ್ಲಿ ಪ್ರಕೃತಿಯೊಂದಿಗೆ ಜೀವಿಸುತ್ತಿರುವ ನಾವುಗಳು ಭೂಮಿ, ನೀರು, ಗಾಳಿ, ಬೆಂಕಿ ಇದರ ಮೂಲ ಪರಂಪರೆಯ ಬದುಕನ್ನೇ ಆವರಿಸಿಕೊಂಡಿರುವ ಮೂಲವಸ್ತುಗಳಾಗಿವೆ. ಇವುಗಳ ವೈಚಾರಿಕತೆ ನಮಗೆ ಅರ್ಥವಾಗದೆ, ಭೂಮಿ, ಪ್ರಾಣಿ, ಮನುಷ್ಯ, ಹುಟ್ಟು, ಸಾವು, ಕಷ್ಟ, ಸುಖ, ಹೆಣ್ಣು, ಗಂಡು ಇತ್ಯಾದಿಗಳ ಬಗ್ಗೆ ಇನ್ನು ವೈಚಾರಿಕವಾಗಿ ಯೋಚಿಸಿದೇ ಮೂಲ ಪರಂಪರೆಯ ನಿಗೂಢತೆಯ ಬದುಕು ಆವರಿಸಿಕೊಂಡು ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಸಂವೇದಿಸಿಕೊಂಡು ಬದಲಾಗದ ಮತ್ತು ಬಿಡಲಾಗದ ನಂಟೆಂಬಂತೆ ಹಿಂಬಾಲಿಸಿಕೊಂಡು ನಮ್ಮನ್ನು ನಿರೂಪಿಸಿ ನಿಯಂತ್ರಿಸುತ್ತಿರುವುದನ್ನು ಕಾಣುತ್ತೇವೆ. ಪ್ರಸ್ತುತ ಅಲೆಮಾರಿ ಸಮುದಾಯಗಳಲ್ಲಿ ನಂಜಿಕೆ–ನಿಷೇಧಗಳು ಈ ಸಮುದಾಯಗಳಲ್ಲಿ ಹಾಸುಹೊಕ್ಕಾಗಿದೆ. ಅದರಿಂದ ಈ ಅಧ್ಯಯನದಲ್ಲಿ ಒಳಪಡಿಸಿಕೊಳ್ಳಲಾಗಿದೆ.

೩.೩. ಮೌಖಿಕ ಸಾಹಿತ್ಯ ಪರಂಪರೆ ಮತ್ತು ಅಲೆಮಾರಿ ಸಮುದಾಯಗಳು

"ಮಾನವನ ಬದುಕು ಮೂಲದಲ್ಲಿ ಅಲೆಮಾರಿತನದಿಂದ ಆರಂಭವಾಗಿ ನಾಗರಿಕ ಸ್ಥಿತ್ಯಂತರ ಬದುಕಲ್ಲಿ ನೆಲೆಯನ್ನು ಕಂಡುಕೊಂಡು ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ. ಈ ನಾಗರಿಕತೆ ಎಂಬುದು ಸಾಮಾಜಿಕ ವಿಕಾಸದ ಒಂದು ಹಂತ."[೪] ಆದರೆ ಶ್ರೇಣೀಕೃತ ಸಮಾಜ ನಿರ್ಮಾಣಕ್ಕೆ ವಿರುದ್ಧವಾಗಿ ನಮ್ಮ ಚರಿತ್ರೆಯಲ್ಲಿ ನಡೆದ ಜಾತಿ, ಧರ್ಮ, ವರ್ಣ, ಸಂಘರ್ಷಗಳು ಸಮಾಜದಲ್ಲಿ ಜಾತಿಗಳ ಗಡಿಗಳನ್ನು ನಿರ್ಮಾಣ ಮಾಡಿ ಈ ಅಸಮಾನ ಸಮಾಜವನ್ನು ಸೃಷ್ಟಿಸಿ ಆಳ್ವಿಕೆ ಮಾಡಿಕೊಂಡು ಬಂದಿದ್ದಾರೆ. ಇದು ಇಂದಿನ ಜಾಗತಿಕ ಸಂದರ್ಭದಲ್ಲೂ ವಿಷಮವಾದ ಸ್ಥಿತಿ ನಿರ್ಮಿಸಿ ಮಾನವನ ಸಮಾಜದಲ್ಲಿ ಬದುಕಿನ ಪ್ರತ್ಯೇಕತೆಗಳನ್ನು ಸಾಧಿಸಿಕೊಂಡು ಬಂದಿರುವುದರ ಫಲವಾಗಿ ನಮ್ಮಲ್ಲಿ ಇಂದು ಬಹುದೊಡ್ಡ ಸಾಂಸ್ಕೃತಿಕ ಸಂಘರ್ಷಗಳು ನಡೆಯುತ್ತಿರುವುದನ್ನು ಕಾಣಬಹುದಾಗಿದೆ. ಇವೆಲ್ಲವುಗಳ ನಡುವೆ ಪಾರಂಪರಿಕವಾಗಿ ಮುಂದುವರೆದ ಜಗತ್ತಿನೊಂದಿಗೆ ಸಂಘರ್ಷಿಸಿಕೊಂಡು ತಮ್ಮದೇ ಆದ ಭಾಷೆ, ವೃತ್ತಿ. ಸಾಹಿತ್ಯ ಹಾಗೂ ಇತರೆ ಪಾರಂಪರಿಕ ಜ್ಞಾನ ಪರಂಪರೆಯನ್ನು ಉಳಿಸಿಕೊಂಡು ಪ್ರತ್ಯೇಕತೆಯ ಜೀವನ ನಡೆಸುತ್ತಿರುವ ಕೆಲವು ಬುಡಕಟ್ಟು ಸಮುದಾಯಗಳು ಕಾಲದ ಸಂದಿಗ್ಧವಾದ ಸಂಘರ್ಷದಲ್ಲೇ ನಾಗರಿಕ ವ್ಯವಸ್ಥೆಯೊಂದಿಗೆ ಅನುಸಂಧಾನಿಸಲಾಗದೆ ವಾಸದ ನೆಲೆಗಳನ್ನು ಕಳೆದುಕೊಂಡು ವಿವಿಧ ವೃತ್ತಿಗಳನ್ನಾಧರಿಸಿ ಅಲೆಮಾರಿತನದ ಬದುಕನ್ನು ನಡೆಸುತ್ತಿರುವ ಹಲವಾರು ಅಲೆಮಾರಿ ಸಮುದಾಯಗಳು ನಮ್ಮಲ್ಲಿರುವುದನ್ನು ಕಾಣಬಹುದು. ಇಂತಹ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯುಳ್ಳ ಅಲೆಮಾರಿ ಸಮುದಾಯಗಳು ಶತ ಶತಮಾನಗಳನ್ನೂ ಕಳೆದರೂ ನಿಂತ ನೀರಿನಂತೆ ಯಥಾಸ್ಥಿತಿಯಲ್ಲಿಯೇ ಜೀವನ ಸಾಗಿಸುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಭಾರತೀಯ ಏಕತ್ವ ಮತ್ತು ಸಂಸ್ಕೃತಿಯ ಐಕ್ಯತೆಯ ಭರಾಟೆಯಲ್ಲಿ ತಮ್ಮದೇ ಉಪಸಂಸ್ಕೃತಿಯನ್ನು ಉಳಿಸಿಕೊಂಡು ಅಲೆಮಾರಿತನವೇ ತಮ್ಮ ಬದುಕಿನ ಮೂಲ ದ್ರವ್ಯವೆಂಬಂತೆ ನೆಲೆ ಕಾಣದೆ ಅತಂತ್ರವಾಗಿ ಜೀವಿಸುತ್ತಿರುವುದು ಭಾರತದಲ್ಲಿ ಇವರಿಗೆ ಸರ್ವೇಸಾಮಾನ್ಯವಾಗಿದೆ. ಭಾರತದ ಶ್ರೇಣಿಕೃತ ವ್ಯವಸ್ಥೆಯಲ್ಲಿ ಈ ಅಲೆಮಾರಿತನವನ್ನು ವ್ಯವಸ್ಥೆ ಇನ್ನು ಗಟ್ಟಿಗೊಳಿಸಿರುವಂತೆ ಭಾಸವಾಗುತ್ತದೆ.

ಹೀಗಾಗಿ ಮಾನವ ಸಮಾಜದ ಚರಿತ್ರೆಯಲ್ಲಿ ಭಾರತದ ಶ್ರೇಣೀಕರಣಕ್ಕೆ ಒಂದು ವಿಶಿಷ್ಟ ಸ್ಥಾನಮಾನ ಪ್ರಾಪ್ತವಾಗಿದೆ. "ಕಾಲ ಬದಲಾದರೂ ಜಾಗತಿಕ ಮಟ್ಟದ ಉತ್ಪಾದನಾ ವ್ಯವಸ್ಥೆಯಲ್ಲಿ ಕ್ರಾಂತಿಗಳು ನಡೆದು ಹೋದರೂ ಭಾರತದ ಜಾತಿಗಳು ನಮ್ಮ ಪಾರಂಪರಿಕ ಅವಲಂಬನೆಯನ್ನು ಕಾಯ್ದುಕೊಂಡಿದೆ. ಇದಕ್ಕೆ ಅಲೆಮಾರಿಗಳು ಹೊರತಾಗೇನೂ ಇಲ್ಲ. ಇಡೀ ಜಗತ್ತಿನಲ್ಲಿ ಕೃಷಿಕರನ್ನು ಬಿಟ್ಟರೆ ತಮ್ಮ ಸಾಂಪ್ರದಾಯಿಕ ಆರ್ಥಿಕ ಮೂಲಗಳನ್ನು ಉಳಿಸಿಕೊಂಡು ಬಂದವರೆಂದರೆ ಅಲೆಮಾರಿಗಳು ಮಾತ್ರ"[೫] ಎಂಬ ನಿಲುವನ್ನು ಒಪ್ಪಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿಯೇ ಅಲೆಮಾರಿಗಳು ತಮ್ಮ ಬದುಕನ್ನು ನಿರ್ವಹಿಸುವುದಕ್ಕಾಗಿ ಅಲೆಮಾರಿತನ ತಮಗೆ ಶಾಪಗ್ರಸ್ಥವೆನ್ನೋ ಎಂಬಂತೆ ಊರೂರು ಅಲೆಯುತ್ತಾ ವಿವಿಧ ಕುಲವೃತ್ತಿಗಳನ್ನು ಮಾಡುತ್ತಾ ಜೀವನ ನಿರ್ವಹಿಸುತ್ತಿರುವುದನ್ನು ಇಂದಿಗೂ ಕಾಣುತ್ತೇವೆ.

ಬುಡಕಟ್ಟು ಚಿಂತಕರಾದ ಡಾ. ಎ.ಎಸ್. ಪ್ರಭಾಕರ ಅವರು ತಮ್ಮ 'ಆದಿವಾಸಿ ಅಖ್ಯಾನ' ಕೃತಿಯಲ್ಲಿ ಅಲೆಮಾರಿ ಸಮುದಾಯಗಳನ್ನು ಅವರ ವೃತ್ತಿಗಳನ್ನಾಧರಿಸಿ ಈ ಕೆಳಗಿನಂತೆ ಐದು ರೀತಿಯಲ್ಲಿ ವಿಗಂಡಿಸಿರುವುದನ್ನು ಕಾಣಬಹುದು.

೧. ಪ್ರದರ್ಶನ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು

೨. ಕರಕುಶಲ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು

೩. ಧಾರ್ಮಿಕ ಸಂಬಂಧಿ ವೃತ್ತಿಗಳನ್ನು ಅವಲಂಬಿಸಿರುವವರು

೪. ಪಾರಂಪರಿಕ ಮೂಲ ವೃತ್ತಿಗಳಲ್ಲೇ ಇರುವ ಸಮುದಾಯಗಳು

೫. ಬೇಟೆ, ಪಶುಪಾಲನೆ ಮತ್ತು ಆಹಾರ ಸಂಗ್ರಹಣೆಯಂತಹ ಮೂಲ ಕಸುಬುಗಳನ್ನು ಅವಲಂಬಿಸಿರುವವರು ಇತ್ಯಾದಿಯಾಗಿ ವರ್ಗೀಕರಿಸುತ್ತಾರೆ. ಈ ಹಿನ್ನೆಲೆಯಲ್ಲಿಯೇ ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದಲ್ಲಿರುವ ಬಹುತೇಕ ಅಲೆಮಾರಿ ಬಡುಕಟ್ಟು ಸಮುದಾಯಗಳು ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ. ಇವರಲ್ಲಿ ಕರ್ನಾಟಕದ ಸಂದರ್ಭದಲ್ಲಿ ಕಂಡುಬರುವ ದೊಂಬಿದಾಸ, ಸುಡುಗಾಡು ಸಿದ್ಧರು, ಅರ್ಜುನಜೋಗಿಗಳು, ಗೊಂದಲಿಗರು, ಹೆಳವರು, ಹಗಲುವೇಷಗಾರರು, ಇತರ ಸಮುದಾಯಗಳು ಒಂದಲ್ಲ ಒಂದು ರೀತಿಯಲ್ಲಿ ಮೇಲಿನ ವೃತ್ತಿ ಪರಂಪರೆಯನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಗೊಂದಲಿಗರು, ಬುಡ್ಗಜಂಗಮ(ಹಗಲುವೇಷಗಾರರು), ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳು ಪ್ರದರ್ಶನ ಕಲೆಗಳನ್ನು ಮತ್ತು ಧಾರ್ಮಿಕ ಸಂಬಂಧಿ ಗಾಯನ ವೃತ್ತಿಗಳನ್ನು ಅವಲಂಬಿಸಿ ಜೀವಿಸುವ ವರ್ಗದಲ್ಲಿ ಕಂಡುಬರುತ್ತಾರೆ. ಆದರೆ ಇಂದಿನ ಜಾಗತಿಕ ಬದುಕು ಜೀವನೋಪಾಯಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿರುವುದು ಅವರ ಬದುಕಿನ ಅನಿವಾರ್ಯವಾಗಿದೆ. ಜೀವನೋಪಾಯಕ್ಕಾಗಿ ಹಾಡುವ ವೃತ್ತಿಯನ್ನೇ ಅವಲಂಬಿಸಿದ ಕಥೋಪ ಜೀವಿಗಳು ಧಾರ್ಮಿಕ ವೃತ್ತಿ ಗಾಯಕರಂತೆಯೇ ವಿಶಿಷ್ಟ ವಾದ್ಯವೊಂದನ್ನು ಹಿಡಿದು ಹಾಡುಗಾರಿಕೆಯನ್ನು ಅವಲಂಬಿಸಿ ಬದುಕುವಂತಹ ಇತರ ಗಾಯಕ ತಂಡಗಳನ್ನು ನಾವು ಕಾಣಬಹುದು. ಯಾವ ದೇವರ ಸಂಪ್ರದಾಯಕ್ಕೆ ಸೇರದೆ ಯಾವುದೇ ರೀತಿಯ ದೈವದ ಕಥೆಗಳನ್ನಾಧರಿಸಿ ಹಾಡಬಹುದು. ಪೌರಾಣಿಕ, ಚಾರಿತ್ರಿಕ ಹಾಗೂ ವಾಸ್ತವಿಕ ಕಥೆಗಳನ್ನು ಹಾಡುತ್ತಾ. ಭೀಕ್ಷಾಟನೆಯೇ ಇವರ ವೃತ್ತಿ ಧರ್ಮವೆಂದು ಸಾಮಾಜಿಕ ವ್ಯವಸ್ಥೆ ಕರೆದರೂ ಇದಕ್ಕೆ ಬದಲಾಗಿ ಜೀವನೋಪಾಯಕ್ಕಾಗಿ ತಮ್ಮ ಕಲೆಗಳನ್ನು ಪ್ರದರ್ಶಿಸುವ ಮತ್ತು ಹಾಡುವವರು ಎಂದು ಗುರುತಿಸುವುದು ಸೂಕ್ತ ಎಂಬುದನ್ನು ಒಪ್ಪಿಕೊಳ್ಳಬಹುದು.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಕಂಡುಬರುವಂತಹ ದೊಂಬಿದಾಸ, ಗೊಂದಲಿಗ, ಬುಡ್ಗಜಂಗಮ ಮತ್ತು ಅರ್ಜುನಜೋಗಿ ಸಮುದಾಯಗಳು ಇದರಲ್ಲಿ ಕೆಲವರು ಹಾಡುವುದನ್ನೇ ವೃತ್ತಿಯನ್ನಾಗಿಸಿಕೊಂಡರೆ ಇನ್ನು ಕೆಲ ಸಮುದಾಯಗಳು ಕಲೆ ಪ್ರದರ್ಶಿಸುವುದರ ಜೊತೆಗೆ ಹಾಡುವುದನ್ನು ತಮ್ಮ ವೃತ್ತಿ ಬದುಕಲಿ ಅಳವಡಿಸಿಕೊಂಡಿದ್ದಾರೆ. ಇವರು ಅನೇಕ ಖಂಡಕಾವ್ಯಗಳನ್ನು, ಮಹಾಕಾವ್ಯಗಳನ್ನು,

ಸೃಷ್ಟಿಪುರಾಣಗಳನ್ನು, ಆಚರಣೆಗೆ ಸಂಬಂಧಿಸಿದ ಹಾಡುಗಳು ಅಲ್ಲದೆ ಪ್ರದರ್ಶನ ಕಲೆಗಳಲ್ಲೂ ಪ್ರವಿಣ್ಯತೆ ಒಳಗೊಂಡು ಸಾಂಸ್ಕೃತಿಕವಾಗಿ ಪರಸ್ಪರ ಕೊಡುಕೊಳ್ಳುವಿಕೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧವನ್ನು ಹೊಂದಿರುವುದನ್ನು ಕಾಣಬಹುದು. ಇಂತಹ ತಾತ್ವಿಕ ಚಿಂತನೆಯನ್ನು ತೌಲನಿಕವಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಬಹುದಾಗಿದೆ.

೩.೪. ಅಲೆಮಾರಿ ಸಮುದಾಯಗಳು ಹಾಡುವ ಸ್ವರೂಪ

ಅಲೆಮಾರಿ ಸಮುದಾಯಗಳು ಹಾಡುವ ಸ್ವರೂಪ ವಿಧಾನಗಳಿಂದಲೇ ತಮ್ಮನ್ನು ತಾವು ಗುರುತಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ವ್ಯವಸ್ಥೆ ಸೃಷ್ಟಿಸಿದ ವೃತ್ತಿ ಮಾರ್ಗಗಳೇ ಇಲ್ಲಿ ಗೊಂದಲಿಗ, ಬುಡ್ಗ ಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳು ಜಾತಿಯ ರೂಪಕಗಳಂತೆ ಕಾಣುತ್ತವೆಯಾದರೂ ಅವರ ಕಲೆ, ಹಾಡುವ ಸ್ವರೂಪ ವಿಧಾನಗಳು ಒಂದೇ ಎಂಬುದಾಗಿ ಕಾಣುತ್ತವೆ. ಆದರೆ ಅವುಗಳ ಸಮಯ, ಸಂದರ್ಭ, ವಸ್ತು, ತಂತ್ರ ನಿರೂಪಣೆಯ ಕ್ರಮ ಇತ್ಯಾದಿಗಳಲ್ಲಿ ಭಿನ್ನತೆಯನ್ನು ಕಾಣುತ್ತೆಯದರೂ ಈ ಸಮುದಾಯಗಳ ಮೌಖಿಕ ಸಾಹಿತ್ಯ ಮತ್ತು ಕಲೆಗಳು ಸಾಮಾಜಿಕ ಸಂಬಂಧಗಳ ಕೊಂಡಿಯಾಗಿ ಸಮಾಜದಲ್ಲಿನ ಮೌಲ್ಯಯುತವಾದ ಬದುಕಿಗೆ ಆಶೆಯಗಳಾಗಿವೆ.

೩.೪.೧. ಗೊಂದಲಿಗರ ಗೊಂದಲದ ವಿಧಾನಗಳು

ಗೊಂದಲಿಗ ತಂಡಗಳು ಗೊಂದಲ ಹಾಕಿ ಹಾಡುವ ಕ್ರಮಗಳಲ್ಲಿ ಹಲವಾರು ವಿಧಾನಗಳು ಉಂಟು. ಗೊಂದಲ ಕಟ್ಟುವುದು ಒಂದು ಧಾರ್ಮಿಕ ವಿಧಿಯಾಚರಣೆ ಎಂದು ಭಾವಿಸಲಾಗುತ್ತದೆ. ಹಾಗೆ ಗೊಂದಲ ಕಟ್ಟಿ ಹಾಡುವುದಕ್ಕೆ ಒಂದು ವಿಶಿಷ್ಟ ಗೌರವವನ್ನು ಇಂದಿಗೂ ಕೊಡಲಾಗುತ್ತದೆ. ದೇವೀ ಆರಾಧನೆಗೆ ಸಂಬಂಧಿಸಿದ ಸಾಮೂಹಿಕ ವಿಧಿಕ್ರಿಯೆ ಈ ಗೊಂದಲ. "ಇದು ಸಾಮಾನ್ಯವಾಗಿ ಅಂಬಾಭವಾನಿ ದೇವಸ್ಥಾನ, ಭಕ್ತರ ಮನೆಯ ಮದುವೆ, ಮುಂಜಿ ಮುಂತಾದ ಮಂಗಳ ಕಾರ್ಯಗಳ ಸಂದರ್ಭ ಗೊಂದಲಿಗರಾಟದ ಪ್ರಶಸ್ತ್ಯ ದಿನ. ಗೊಂದಲವನ್ನು ಹೆಚ್ಚಾಗಿ ಬ್ರಾಹ್ಮಣರು, ಗೊಂದಲಿಗರು, ಲಂಬಾಣಿಗಳು, ವಿಶ್ವಕರ್ಮರು, ಲಿಂಗಾಯತರು ಹಾಕಿಸುತ್ತಾರೆ. ಬೇಡ, ಕುರುಬ, ಹರಿಜನರೂ ಕೂಡ ಗೊಂದಲ ಹಾಕಿಸುವ ಕುರಿತು ನಿಂಗಣ್ಣ ಸಣ್ಣಕ್ಕಿಯವರು ಉಲ್ಲೇಖಿಸಿದ್ದಾರೆ."[೬] ಇದು ಗೊಂದಲಿಗರ ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನಮಾನಗಳನ್ನು ತಿಳಿಸುತ್ತದೆ.

ಗೊಂದಲದ ಪ್ರಕಾರಗಳು, ಅವು ಈ ಕೆಳಗಿನಂತಿವೆ.

೧. ಹರಕೆಯ ಗೊಂದಲ

೨. ಆಮಂತ್ರಣ ಗೊಂದಲ

೩. ಬಯಲು ಗೊಂದಲ

೪. ಗುಡಿ ಗೊಂದಲ

ದೇವೀ ಭಕ್ತರು ಮದುವೆ, ಮುಂಜಿ ಮುಂತಾದ ವಿಶಿಷ್ಟ ಸಂದರ್ಭಗಳಲ್ಲಿ ತಾವು ಗೊಂದಲ ಹಾಕಿಸುತ್ತೇವೆಂದು ಹರಕೆ ಹೊತ್ತು ಗೊಂದಲ ಹಾಕಿಸುತ್ತಾರೆ. ಇಲ್ಲವೆ ತಮ್ಮ ಕುಟುಂಬದಲ್ಲಿ ಏನಾದರೂ ತೊಂದರೆಗಳಿದ್ದು, ಅವುಗಳ ಪರಿಹಾರವಾದರೆ, ಗೊಂದಲ ಹಾಕಿಸುತ್ತೇವೆ ಎಂದು ಬೇಡಿಕೊಂಡಿರುತ್ತಾರೆ. ಈ ರೀತಿ ಬೇಡಿಕೊಂಡ ಭಕ್ತರು ತಮ್ಮ ಹರಕೆ ತೀರಿಸುವುದಕ್ಕಾಗಿ ಹಾಕಿಸುವ 'ಗೊಂದಲಕ್ಕೆ ಹರಕೆ' ಗೊಂದಲವೆಂದು ಕರೆಯಬಹುದು.

'ಬಯಲು ಗೊಂದಲ'ವೆಂದರೆ, ಇದಕ್ಕೆ ಯಾವುದೇ ಪೂರ್ವ ನಿಶ್ಚಿತ ವೇಳೆ ನಿಗಧಿಯಾಗಿ ರುವುದಿಲ್ಲ. ಗೊಂದಲಿಗರು ಭಿಕ್ಷಾಟನೆಗಾಗಿ ಯಾವುದೇ ಊರಿನಲ್ಲಿ ತಂಗಿದಾಗ ಅಲ್ಲಿಯ ಸ್ಥಳೀಯ ಜನರು ಅಥವಾ ಭಕ್ತರು ಗೊಂದಲ ಹಾಕಿಸುವ ಉತ್ಸಾಹದಿಂದ ಅಲ್ಪಸ್ವಲ್ಪ ಹಣ ಕೂಡಿಸಿ, ಗೊಂದಲಿಗರಿಗೆ ಕೊಟ್ಟು ಯಾವುದಾದರೂ ಗುಡಿಯ ಆವರಣ, ಬಯಲಿನಲ್ಲಿ ಅವರಿಂದ ಹಾಡು, ಕಥೆಯನ್ನು ಹೇಳಿಸುತ್ತಾರೆ. ಇಲ್ಲವೇ ಯಾವುದಾದರೂ ಚಾವಡಿ ಕಟ್ಟೆ ಮೇಲೆ ಇಲ್ಲವೇ ಬಯಲಿನಲ್ಲಿ ಈ ಗೊಂದಲವನ್ನು ನಡೆಸುತ್ತಾರೆ. ಇದು ತುಂಬಾ ಸರಳ ರೀತಿಯಲ್ಲಿ ನಡೆಯುವ ಆಟವಾಗಿರುತ್ತದೆ. ಇಲ್ಲಿ ಪೂರ್ವರಂಗದ ತಯಾರಿ ಇರದೇ ಕೇವಲ ಸಾಮಾನ್ಯ ಬೆಳಕಿನ ವ್ಯವಸ್ಥೆಯೊಂದಿಗೆ ಆಟ ನಡೆಯುವಂಥದ್ದು.

'ಗುಡಿ ಗೊಂದಲ'ವು ಸಾಮಾನ್ಯವಾಗಿ ವಿಶೇಷವಾದ ಹಬ್ಬ ಹರಿದಿನಗಳಲ್ಲಿ ಹರಿಕಥೆಯ ಮಾದರಿಯಲ್ಲಿ ನಡೆಯುವ ಗೊಂದಲವಾಗಿರುತ್ತದೆ. ದೀಪಾವಳಿ, ದುರ್ಗಾಷ್ಟಮಿ, ಮಹಾನವಮಿ, ಆಷಾಡ ಮಾಸದ ಯಾವುದಾದರೂ ಮಂಗಳವಾರ ಇಲ್ಲವೆ ಶುಕ್ರವಾರ ಗಳಂದು ದೇವಾಲಯದ ಪ್ರಾಂಗಣದಲ್ಲಿ ಗೊಂದಲಿಗರು ನಡೆಸಿಕೊಡುವ ಆಟವಾಗಿರುತ್ತದೆ.

'ಆಮಂತ್ರಣ ಪದ್ಧತಿಯ ಗೊಂದಲ'ದಲ್ಲಿ ಗೊಂದಲಿಗರ ಆಟ ಆಡಿಸುವ ಕುಟುಂಬಗಳು ಮೊದಲಿಗೆ ಆಟ ಆಡಿಸುವ ದಿನ ನಿಶ್ಚಯಿಸಿಕೊಂಡು, ಇಂಥ ದಿನ ಆಟಕ್ಕೆ ಬರಬೇಕು ಎಂದು ತಿಳಿಸಿ ಗೊಂದಲಿಗ ವ್ಯಕ್ತಿಗಳಲ್ಲಿ ಆಟ ಆಡಿಸಲು ಎಷ್ಟು ಹಣ ಕೊಡಬೇಕೆಂದು ನಿಶ್ಚಿಯಿಸಿಕೊಂಡು ವೀಳ್ಯ ಕೊಟ್ಟು ಬರುತ್ತಾರೆ. ವೀಳ್ಯ ಕೊಡುವಾಗ ವೀಳ್ಯದೆಲೆ, ಅಡಿಕೆ, ಅರಿಶಿಣ, ಕುಂಕುಮಗಳನ್ನು ಕೊಡುತ್ತಾರೆ. ಭಕ್ತರ ಮನೆಗಳಲ್ಲಿಯೇ ಸಾಮಾನ್ಯವಾಗಿ ಗೊಂದಲವಾಡಿಸುತ್ತಾರೆ. ಯಾವ ಜಾಗದಲ್ಲಿ ಗೊಂದಲ ಆಡಿಸಬೇಕೋ ಅಲ್ಲಿ ಮೊದಲಿಗೆ ಗೊಂದಲಿ ಗರು ಕಳಶ ಪ್ರತಿಷ್ಠಾಪನೆ ಮಾಡುತ್ತಾರೆ. ಇದಕ್ಕೆ ಪ್ರಾಣ ಪ್ರತಿಷ್ಠಾಪನೆ ಎಂದು ಕರೆಯುತ್ತಾರೆ.

ಈ ಪದ್ಧತಿಯಲ್ಲಿ ಇನ್ನೊಂದು ರೀತಿಯ ಅನುಸರಣೆಯೂ ನಡೆಯುತ್ತದೆ. ಭಕ್ತರು ಗೊಂದಲಿಗರ ಮನೆಯಿಂದ ಕವಡೆ ಸರವನ್ನು ತಮ್ಮ ಮನೆಗೆ ತರುವರು. ಸಾರಿಸಿದ ನೆಲದಲ್ಲಿ ಚೌರಂಗ, ರಂಗೋಲಿ ಹಾಕಿ ಅಷ್ಟ ದಿಕ್ಕುಗಳನ್ನು ಆ ಚೌರಂಗದಲ್ಲಿ ಸೂಚಿಸುವರು. ಚೌರಂಗದ ಮಧ್ಯ ಭಾಗದಲ್ಲಿ ಒಂದು ಮಣೆಯನ್ನೂ ಹಾಕಿ ಅದರ ಮೇಲೆ ತುಂಬಿದ ತಂಬಿಗೆ ಇಡುವರು. ತಂಬಿಗೆಯ ಕಂಠಕ್ಕೆ ಐದು ವೀಳ್ಯದೆಲೆ ಇಟ್ಟು ತೆಂಗಿನಕಾಯಿ ಇಡುವರು. ತೆಂಗಿನ ಕಾಯಿಯ ಮೇಲ್ಭಾಗಕ್ಕೆ ಒಂದು ಕುಪ್ಪುಸದ

ಖಣ ಹಾಕಿ ಅರಿಶಿಣ, ಕುಂಕುಮ ಹಚ್ಚಿ ಪೂಜಿಸುವರು. ಶ್ರೀಮಂತ ಕುಟುಂಬಗಳಲ್ಲಿ ಈ ತಂಬಿಗೆಗೆ ಬಂಗಾರದ ಆಭರಣಗಳನ್ನು ಹಾಕಿ ಅಲಂಕರಿಸುವುದೂ ಉಂಟು. ತಂಬಿಗೆಯ ಮುಂಭಾಗದಲ್ಲಿ ಭಂಡಾರ, ಅರಿಶಿಣ ಕೊಂಬು, ಉತ್ತುತ್ತಿ, ವೀಳ್ಯದೆಲೆ, ಅಡಿಕೆ ಮುಂತಾದ ಪದಾರ್ಥಗಳನ್ನು ಇಡುತ್ತಾರೆ. ಯಾವುದಾದರೂ ಸಿಹಿಯನ್ನೋ, ಇಲ್ಲವೆ ಮಾಂಸಾಹಾರವನ್ನೋ ನೈವೇದ್ಯಕ್ಕೆ ಇಡುತ್ತಾರೆ. ಈ ತಂಬಿಗೆಯನ್ನು ಪ್ರತಿಷ್ಠಾಪಿಸುವ ಜಾಗಕ್ಕೆ ಬಾಳೆಕಂಬ, ಕಬ್ಬಿನಿಂದ ಮಂಟಪವನ್ನು ಅಲಂಕರಿಸುವುದುಂಟು. ತುಂಬಿದ ತಂಬಿಗೆಯನ್ನು ಭಕ್ತರು ದೇವಿ (ಅಂಬಾಭವಾನಿ) ಎಂದೇ ಪರಿಗಣಿಸುವರು.

ರಾತ್ರಿ ಬಂದ ಗೊಂದಲಿಗ ಈ ಕಳಸವನ್ನು ಪೂಜಿಸುವ ಮೂಲಕ ತನ್ನ ಆಟಕ್ಕೆ ನಾಂದಿ ಹಾಡುತ್ತಾನೆ. ಪೂಜೆ ಮುಗಿದ ನಂತರ ದೇವಿಯ ಮಹಿಮೆಯನ್ನು ತಿಳಿಸುವ ಹಾಡುಗಳನ್ನು ಹಾಡಲಾಗುತ್ತದೆ. ಈ ಗೊಂದಲ ಕಾರ್ಯಕ್ರಮದಲ್ಲಿ ಪೂರ್ವರಂಗ ಮತ್ತು ಉತ್ತರರಂಗಗಳೆಂದು ಇರುತ್ತವೆ. ಪೂರ್ವರಂಗದಲ್ಲಿ ಕಳಸ ಪ್ರತಿಷ್ಠಾಪನೆ, ಪ್ರಾರ್ಥನೆ, ದೇವಿಯ ಮಹಿಮೆ, ಪವಾಡಗಳ ಸ್ತುತಿ ಬಹುಮುಖ್ಯವಾಗಿರುತ್ತವೆ. ಪೂರ್ವರಂಗ ರಾತ್ರಿ ಹನ್ನೆರಡು ಗಂಟೆಗೆ ಮುಗಿಯುತ್ತದೆ. ಮುಗಿಯುವಾಗ ಮತ್ತೆ ಕಳಸಕ್ಕೆ ಪೂಜೆ ಆರತಿಯನ್ನು ಅರ್ಪಿಸುತ್ತಾರೆ. ಇದು ಪೂರ್ವ ರಂಗವನ್ನು ಉತ್ತರ ರಂಗದಿಂದ ಬೇರ್ಪಡಿಸುವ ಕ್ರಮವಾಗಿ ಕಂಡು ಬರುತ್ತದೆ.

ಪೂರ್ವರಂಗದ ಆರಂಭದಲ್ಲಿ ದೀವಟಿಗೆಯವನು ಬರುತ್ತಾನೆ. ಈತನಿಗೆ ತ್ವಂತೆ ಮಾಮ ಎಂದು ಕರೆಯುತ್ತಾರೆ. ದೀವಟಿಗೆ ಮಾಮ ಎಂದೂ ಕರೆಯುವ ವಾಡಿಕೆ ಇದೆ. ಈತನದು ದೀವಟಿಗೆ ಸೇವೆ, ಈತನು ಗೊಂದಲದುದ್ದಕ್ಕೂ ಕೈಯಲ್ಲಿ ಎಣ್ಣೆ ದೀವಟಿಗೆ ಹಿಡಿದಿರುತ್ತಾನೆ. ತಲೆಗೆ ಕುಲಾವಿ ಕಟ್ಟಿಕೊಂಡು, ಜಿಡ್ಡಾದ ಕವಡೆ ಕಟ್ಟಿದ ನಿಲುವಂಗಿಯನ್ನು ಹಾಕಿಕೊಂಡಿ ರುತ್ತಾನೆ. ಗೊಂದಲಿಗರು ಹಾಡಿ ಕುಣಿದಂತೆ ತ್ವಂತ ಮಾಮನೂ ಅವರ ಹಾಡಿನೊಂದಿಗೆ ತುಂಬಾ ಭಾವುಕನಾಗಿ ಕುಣಿಯುತ್ತಿರುತ್ತಾನೆ. ಇಡೀ ವಾತಾವರಣವನ್ನೆ ದೈವತ್ವದ ವಾತಾವರಣ ವಾಗಿ ಮಾರ್ಪಡಿಸುವವನು ಇವನು. ಗೊಂದಲದ ಸಮ್ಮೋಹಕ ಹಾಡು ಕುಣಿತಗಳ ಜೊತೆಗೆ ಈ ತ್ವಂತ ಮಾಮನ ಆವೇಶದ ಕುಣಿತ ನೋಡುಗರನ್ನು ಹೆಚ್ಚು ಆಕರ್ಷಿಸುತ್ತದೆ. ಪೂರ್ವರಂಗದಲ್ಲಿ ಶಕ್ತಿಯನ್ನು ಸ್ತುತಿಸಿ ಅವಳನ್ನು ಆಹ್ವಾನಿಸುವ ಕ್ರಮ ಇದೆ. ಸಾಂಬಾಳ, ಚೌಡಿಕೆ, ತಾಳದೊಂದಿಗೆ ಹಿಮ್ಮೇಳ ಮುಮ್ಮೇಳಗಳ ಜೊತೆ ಗೂಡಿ ಹಾಡುತ್ತಾ ದೇವಿಯನ್ನು ಆಹ್ವಾನಿಸುತ್ತಾರೆ.

"ಮುಮ್ಮೇಳ : ಬಾರಮ್ಮ ಬಾ ತಾಯಿ
ನೀ ಅಂಬಾ ಬಾರಮ್ಮ ಬಾ ತಾಯೇ॥
ಹಿಮ್ಮೇಳ : ಭಾಗ್ಯವ ಕೊಡು ಬಾರಮ್ಮ ನೀ ತಾಯೇ
ಸೌಭಾಗ್ಯವ ನೀಡು ಬಾರಮ್ಮ॥
ಮುಮ್ಮೇಳ : ಬಾರಮ್ಮ ಬಾ ತಾಯೇ॥
ಅಂಬಾ, ನೀ ಭಕ್ತರ ಮನಿಗೆ ಬಾರಮ್ಮ
ಹುಲಿಗೆಮ್ಮ ಭಕ್ತರ ಉದ್ಧರಿಸು ಬಾರಮ್ಮ॥"[೭]

ಈ ರೀತಿಯ ಪ್ರಾರ್ಥನೆ ಪ್ರದೇಶದಿಂದ ಪ್ರದೇಶಕ್ಕೆ, ಇಲ್ಲವೇ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ ಸಾಧ್ಯತೆಯೂ ಇದೆ ಎಂದೇ ಹೇಳಬಹುದಾಗಿದೆ.

ನಿಜವಾಗಿ ಗೊಂದಲಿಗರ ಆಟ ಪ್ರಾರಂಭವಾಗುವುದೇ ಉತ್ತರ ರಂಗದಲ್ಲಿ. ಇದು ಸಾಮಾನ್ಯವಾಗಿ ರಾತ್ರಿ ಹನ್ನೆರಡರ ನಂತರ ಆರಂಭಗೊಳ್ಳುತ್ತದೆ. ಗೊಂದಲಿಗರ ಆಟವೆಂದರೆ ಅದೊಂದು ನೃತ್ಯ ರೂಪಕವಿದ್ದಂತೆ, ಅಲ್ಲಿ ಹಾಡು, ಸಂಭಾಷಣೆ, ನೃತ್ಯ ಎಲ್ಲವೂ ಇರುತ್ತವೆ. ಗೊಂದಲಿಗರ ಆಟದಲ್ಲಿ ಧಾರ್ಮಿಕ, ನೈತಿಕ, ಹಾಸ್ಯ ಎಲ್ಲವೂ ಸೇರಿ ನೋಡುಗನಿಗೆ ಬೇಸರವುಂಟಾಗದಂತೆ ಆಟ ಸಾಗುತ್ತದೆ. ಸಾಮಾನ್ಯವಾಗಿ ಬೆಳಗಿನವರೆಗೂ ನಡೆಯುವ ಈ ಆಟದ ಕೊನೆಗೆ ಮಂಗಳಾರತಿ ಮಾಡುವ ಮೂಲಕ ಆಟ ಕೊನೆಗೊಳ್ಳುತ್ತದೆ.

'ಗೊಂದಲ' ಎನ್ನುವುದು ಇಂತಹ ಸಂದರ್ಭಗಳಲ್ಲಿ ಒಂದು ಧಾರ್ಮಿಕ ಕ್ರಿಯೆಯಾಗಿ ರುತ್ತದೆ. ಸಾಮಾನ್ಯವಾಗಿ ಗೊಂದಲವನ್ನು ಹಾಕಿಸುವವರು ತಮ್ಮ ಇಷ್ಟಾರ್ಥ ಸಿದ್ಧಿಸುವು ದಕ್ಕಾಗಿ ಗೊಂದಲ ಹಾಕಿಸುತ್ತಾರೆ. ಇಲ್ಲವೆ ಮದುವೆ ಮುಂತಾದ ಮಂಗಳ ಕಾರ್ಯದಲ್ಲಿ ಗೊಂದಲ ಹಾಕಿಸುತ್ತಾರೆ. ಮದುವೆ ಸಂದರ್ಭದಲ್ಲಿ ಗೊಂದಲ ನಡೆಸಿದರೆ ಹಾಡುಗಾರಿಕೆಯ ಕೊನೆಗೆ ನಡೆಯುವ ಮಂಗಲಕ್ಕೆ ನವ ದಂಪತಿಗಳು ಬಂದು ಕಳಸವನ್ನು ಐದು ಭಾರಿ ಸುತ್ತು ಹಾಕಿ ನಮಸ್ಕಾರ ಮಾಡಿ ಗೊಂದಲಿಗನಿಗೆ ದಕ್ಷಿಣೆಯನ್ನು ವೀಳ್ಯದಲ್ಲಿಟ್ಟು ಕೊಡುತ್ತಾರೆ. ಅದಕ್ಕಿಂತ ಮೊದಲು ನವ ದಂಪತಿಗಳು ಬಂದು ಕೈಮುಗಿದು ನಿಂತಿರುತ್ತಾರೆ. ಆ ಪ್ರದೇಶ(ಓಣಿ)ದ ಜನರೆಲ್ಲಾ ಗೊಂದಲಕ್ಕೆ ಹಾಜರಾಗಿರುತ್ತಾರೆ. ಕೊನೆ ಹಂತದಲ್ಲಿ ವಾದ್ಯಗಳನ್ನು ತಾರಕವಾಗಿ ಬಾರಿಸುತ್ತಾ ಅಂಬಾ ದೇವತೆಯ ಕುರಿತು ಜೋರಾಗಿ ಉದ್ಘೋಷಗಳನ್ನು ಹಾಡುತ್ತಾ, ಗೊಂದಲಿಗರು ಆವೇಶಭರಿತವಾಗಿ ಕುಣಿಯುತ್ತಿರುತ್ತಾರೆ. ಈ ಸಂದರ್ಭದಲ್ಲಿ ಅಲ್ಲಿ ನೆರೆದ ಬಹುಪಾಲು ಜನರಿಗೆ ಏಕಕಾಲಕ್ಕೆ ದೈವಾವೇಶವಾಗಿ ಗೊಂದಲಿಗರೊಂದಿಗೆ ತಾವೂ ಕುಣಿಯುತ್ತಾ ಒಬ್ಬರ ಮೈಗೊಬ್ಬರು ದೀವಟಿಗೆಯನ್ನು ಸವರಿಕೊಳ್ಳುತ್ತಿರುತ್ತಾರೆ. ಆವೇಶದಿಂದ ಮೂರ್ಛೆಗೆ ಒಳಗಾದವರಿಗೆ ಭಂಡಾರ ಹಚ್ಚಿ ಆವೇಶ ಶಮನಗೊಳಿಸುತ್ತಾರೆ. ಆವೇಶಕ್ಕೆ ಒಮ್ಮೊಮ್ಮೆ ನವ ವಧುವರರೂ ಈಡಾಗುವ ಸಂದರ್ಭವುಂಟು. ಈ ಸಂದರ್ಭ ದಲ್ಲಿ ದೇವಿ ಪ್ರಸನ್ನಳಾಗಿ ಗೊಂದಲ ಹಾಡಿಸುವವರನ್ನು ಕರುಣಿಸಿದ್ದಾಳೆಂದೇ ನಂಬುತ್ತಾರೆ. ಕೊನೆಗೆ ದೀವಟಿಗಳನ್ನು ಹಾಲು ತುಪ್ಪದಲ್ಲಿ ಅದ್ದಿ ನಂದಿಸುತ್ತಾರೆ. ಇದಕ್ಕೆ 'ಗೊಂದಳ ಘಾಳನಿ' ಎಂದು ಕರೆಯುತ್ತಾರೆ. ಗೊಂದಲಿಗರ ಆಟದಲ್ಲಿ ತೀರ ಸಹಜ ಕ್ರಿಯೆ ಎಂಬಂತೆ ನಡೆಯುವ ಈ ಕೊನೆಯ ದೃಶ್ಯವು ಒಂದು ವಿಚಿತ್ರ ಸನ್ನಿವೇಶವನ್ನು ನಿರ್ಮಾಣ ಮಾಡಿ ಬಿಡುತ್ತದೆ. ಮಂಗಳೂರು ಪ್ರಾಂತ್ಯದಲ್ಲಿ ನಡೆಯುವ ಸಿರಿ ಆಚರಣೆಯನ್ನು ನೆನಪಿಗೆ ತರುವ ಸನ್ನಿವೇಶ ಇದಾಗಿದೆ. ಇದು ಸಮಾಜಶಾಸ್ತ್ರಜ್ಞರಿಗೆ ಮತ್ತು ಮಾನಸಿಕ ತಜ್ಞರಿಗೆ ತುಂಬಾ ವಿಶಿಷ್ಟವಾದ ಸಂಶೋಧನಾ ವಸ್ತುವಾಗಬಲ್ಲದು. ಇಲ್ಲಿ ಅದೇನಿದ್ದರೂ ಒಪ್ಪಿತ ಮನಸ್ಸುಗಳ ಸಾಮ್ರಾಜ್ಯ ಮಾತ್ರ ನಿರ್ಮಿತವಾಗಿರುತ್ತದೆ. ಅಲ್ಲದೆ ಗೊಂದಲಿಗರ ವೃತ್ತಿ ಬದುಕಿನಲ್ಲಿ ಸಂವೇದಿತವಾಗಿರು ಅಸ್ಮಿತೆಯನ್ನು ಧ್ವನಿಸುತ್ತದೆ.

ಕಾವ್ಯ ಸಂದರ್ಭ : ಗೊಂದಲಿಗರ ಆಟಗಳನ್ನು ಈ ಮೊದಲು ತಿಳಿಸಿದಂತೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಂದು ಗುರುತಿಸಬಹುದು. ಆದರೆ ಯಾವುದೇ ಗೊಂದಲಿಗರ ಕಾವ್ಯ, ಆಟ ಜಾನಪದ ರೂಪಗಳನ್ನೇ ಹೊಂದಿರುತ್ತವೆ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ 'ಸತಿ ಸುಲೋಚನ', 'ಸಿರಿಯಾಳ ಶೆಟ್ಟಿ', 'ಹೇಮರೆಡ್ಡಿಮಲ್ಲಮ್ಮ', 'ಎಲ್ಲಮ್ಮ', 'ಹುಲಿಗೆಮ್ಮ', ಮುಂತಾದ ಕಾವ್ಯಗಳು ಪೌರಾಣಿಕ ಕಾವ್ಯಗಳಾಗಿವೆ. ಹಾಗೆ ಕುಮಾರ ರಾಮ, ಶೀಲಾವತಿ ಮುಂತಾದ ಕಾವ್ಯಗಳನ್ನು ಐತಿಹಾಸಿಕ ಹಿನ್ನೆಲೆಯ ಕಾವ್ಯಗಳು ಎನ್ನಬಹುದು. ಹಾಗೆ ಅಡವಿ ಗುಮಾರ, ಟಗರುರಾಜ, ಮುಂತಾದ ಕಾವ್ಯಗಳನ್ನು ಸಾಮಾಜಿಕ ಕಾವ್ಯಗಳು ಎಂದು ಗುರುತಿಸ ಬಹುದು. ಹಾಗೆ ಗೊಂದಲಿಗರ ಆಟ ನಡೆಯುವುದನ್ನು ಮೂರು ಸಂದರ್ಭಗಳ ಮೂಲಕ ಗುರುತಿಸಬಹುದು.

೧. ಧಾರ್ಮಿಕ ವಿಧಿ ಆಚರಣಾ ಸಂದರ್ಭ

೨. ಭಿಕ್ಷಾಟನೆ ಸಂದರ್ಭ

೩. ಮನೋರಂಜನೆ ಸಂದರ್ಭ

ಮೂಲತಃ ಧಾರ್ಮಿಕ ಆಚರಣೆಯ ಒಂದು ಅಂಗವಾಗಿ ಈ ಕಾವ್ಯ ಪ್ರಕಾರ ಪ್ರಚಲಿತ ವಾಗಿವೆ. ಈ ಪೂರ್ವದಲ್ಲಿಯೇ ತಿಳಿಸಿರುವಂತೆ ಹಲವಾರು ಸಮುದಾಯಗಳು, ತಮ್ಮ ಮನೆಯಲ್ಲಿ ನಡೆಯುವ ಮದುವೆ-ಮುಂಜಿ, ಹಬ್ಬ-ಹರಿದಿನ, ಜಾತ್ರೆ-ಉತ್ಸವ ಮುಂತಾದ ಸಂದರ್ಭಗಳಲ್ಲಿ ತಮ್ಮ ಮನೆಗೆ ಒಳಿತಾಗಲೆಂದೋ ಅಥವಾ ಒಳಿತಾದುದಕ್ಕೋ ಈ ಗೊಂದಲಿಗರ ಆಟವನ್ನು ಆಡಿಸುವುದು ವಾಡಿಕೆ. ಧಾರ್ಮಿಕ ವಿಧಿ ಆಚರಣೆಯಲ್ಲಿ 'ಗೊಂದಲ' ಕಟ್ಟುವುದು ಎಂದೇ ಇದಕ್ಕೆ ಹೆಸರುಂಟು. ದೇವಿಯ ವಿವಿಧ ಅವತಾರಗಳನ್ನು, ಪವಾಡಗಳನ್ನು ಇಂಥ ಸಂದರ್ಭಗಳಲ್ಲಿ ಗೊಂದಲಿಗರು ಹಾಡುತ್ತಾರೆ. ಹಾಗೆ ತಮ್ಮ ವಂಶದ ಹುಡುಗನಿಗೆ 'ಗೊಂದಲ'ದ ದೀಕ್ಷೆ ಕೊಡುವಾಗಲೂ ಈ ರೀತಿಯ ಗೊಂದಲ ಕಟ್ಟುವುದುಂಟು. ದೇವಿಯ ಹೆಸರಿನಲ್ಲಿ ಗೊಂದಲ ಹಾಕುವಾಗ ತುಂಬಾ ನಿಯಮಬದ್ಧವಾಗಿ, ಮಂಗಲ ಕಾರ್ಯದ ನಿಮಿತ್ತವಾಗಿಯೆ ಈ ಆಟ ನಡೆಯಲ್ಪಡುತ್ತದೆ. ಗೊಂದಲ ಹಾಕಿಸುವುದರಿಂದ ತಮ್ಮನ್ನು ಕಾಡುವ ದುಷ್ಟ ಶಕ್ತಿಗಳನ್ನು ದೂರವಿರಿಸಿ, ದೇವಿಯ ಆರ್ಶೀವಾದ ಪಡೆಯುವ ಮುಖ್ಯ ಉದ್ದೇಶವೂ ಗೊಂದಲ ಹಾಕಿಸುವವರದಾಗಿರುತ್ತದೆ. ಮಂಗಲ ಕಾರ್ಯ ನಡೆಯಬೇಕಾದ ಮನೆಯಲ್ಲಿ ಧಾರ್ಮಿಕ ಪರಿಸರವನ್ನು ನಿರ್ಮಿಸುವುದರಲ್ಲಿ ಗೊಂದಲಿಗರ ಆಟ ಮಹತ್ವದ ಪಾತ್ರವಹಿಸುತ್ತದೆ. ಹಾಗಾಗಿ ಧಾರ್ಮಿಕ ವಿಧಿ ಆಚರಣೆಯಾಗಿ ಈ ಕಾವ್ಯ ಪ್ರಕಾರ ಇನ್ನೂ ಜೀವಂತವಾಗುಳಿದಿದೆ.

ಭಿಕ್ಷಾಟನಾ ಸಂದರ್ಭ: "ಗೊಂದಲಿಗ ಸಮುದಾಯವು ಮೂಲತಃ ಅಲೆಮಾರಿ ಸಮುದಾಯ. ಅವರು ಮೂಲದಲ್ಲಿ ದೊಂಬಿದಾಸರಂತೆ ಧಾರ್ಮಿಕ ಪ್ರಚಾರಕ ಸಮುದಾಯದಂತೆ ಕಂಡುಬಂದರೂ, ಇಂದು ನಿತ್ಯ ಜೀವನಕ್ಕಾಗಿ ಹಲವಾರು ನಮೂನೆಯ ಚಿಕ್ಕ ವ್ಯಾಪಾರಗಳನ್ನು ನಡೆಸುವುದನ್ನು ಕಾಣಬಹುದು. ಅದರೂ ಸಹ ಅವರ ಅಲೆಮಾರಿ ಬದುಕಿಗೆ ಹೊಂದುವಂತಹ ವ್ಯಾಪಾರಗಳನ್ನೇ ಹೆಚ್ಚಾಗಿ ಅವಲಂಬಿಸಿ ರುವುದು ಕಂಡುಬರುತ್ತದೆ. ಆದರೆ ಇವರಲ್ಲಿ ಇಂದಿಗೂ ಭಿಕ್ಷಾಟನೆಯನ್ನು

ಅವಲಂಬಿಸಿದ ಕುಟುಂಬಗಳೇ ಹೆಚ್ಚಾಗಿ ಕಂಡುಬರುತ್ತದೆ. ಭಿಕ್ಷೆ ಬೇಡುವುದು ಅವಮಾನವೆಂದು ಭಾವಿಸದ ಈ ಸಮುದಾಯ ಭಿಕ್ಷಾಟನೆಯು ದೇವರಿಗಾಗಿ ನಡೆಸುವ ಒಂದು ಚಾಕರಿ ಎಂದು ಭಾವಿಸುವುದನ್ನು ಕಾಣಬಹುದಾಗಿದೆ. ಆದರೆ ಧಾರ್ಮಿಕ ವಿಧಿ ಆಚರಣೆಯಾಗಿ 'ಗೊಂದಲ' ಕಟ್ಟಿ ಹಾಡುವಾಗ 'ಗೊಂದಲಿಗರು' ಇಡೀ ಒಂದು ಕಥೆಯನ್ನು ರಾತ್ರಿ ಪೂರ್ತಿ ಹಾಡುವುದನ್ನು ಕಾಣಬಹುದು. ಆದರೆ ಭಿಕ್ಷಾಟನೆಯಂಥ ಸಂದರ್ಭದಲ್ಲಿ ಲಘುವಾದ ಹಾಡುಗಳನ್ನು, ಅಂದರೆ ತತ್ವಪದಗಳು, ದೇವಿಯ ಸ್ತುತಿ ಪದಗಳನ್ನು ಹಾಡುವುದನ್ನು ಕಾಣಬಹುದು. ಭಿಕ್ಷಾಟನಾ ಸಂದರ್ಭದಲ್ಲಿಯೂ ಗೊಂದಲಿಗರು ಇಬ್ಬಿಬ್ಬರಾಗಿ ಭಿಕ್ಷೆಗೆ ಹೊರಡುವುದುಂಟು (ಮುಮ್ಮೇಳ, ಹಿಮ್ಮೇಳ, ಚೌಡಿಕೆ ಬಾರಿಸುವಾತ ಮತ್ತು ಸಾಂಬಾಳಕಾರ). ಊರು ದೊಡ್ಡದಾಗಿದ್ದು ತ್ವರಿತವಾಗಿ ಭಿಕ್ಷಾಟನೆ ಮಾಡಬೇಕಾದ ಸಂದರ್ಭದಲ್ಲಿ ಇಬ್ಬರೂ ಬೇರೆ ಬೇರೆಯಾಗಿಯೂ ಭಿಕ್ಷಾಟನೆ ಮಾಡುವುದುಂಟು. ಆದರೆ ಇಂದು ಭಿಕ್ಷಾಟನೆಗಾಗಿ ಬರುವ 'ಗೊಂದಲಿಗರು' ವಿರಳವೆಂದೇ ಹೇಳಬಹುದು. ಗೊಂದಲಿಗರ ಆಟಗಳಲ್ಲಿ ಧಾರ್ಮಿಕ ವಿಧಿಯಾಗಿ, ಬಿಕ್ಷಾಟನೆಗಾಗಿ ಹಾಡಲ್ಪಡುವಂತೆ, ಮನೋರಂಜನೆ ಮಾಧ್ಯಮವಾಗಿಯೂ ಹಾಡುವುದನ್ನು ಕಾಣಬಹುದು. 'ಗೊಂದಲ'ವು ಸಾಂಪ್ರದಾಯಿಕ ಆರಾಧನಾ ರೂಪವಾದರೆ ಆಟವೇ ಭಕ್ತಿ ಆರಾಧನೆಯನ್ನು ಒಳಗೊಂಡಿದೆ."[೮] ಗೊಂದಲಿಗರ ಆಟವು ಆರಾಧನಾ ಪ್ರಕಾರವಾದಂತೆ ಸುದೀರ್ಘವಾದ ಕಾವ್ಯವೂ ಹೌದು. ಹಾಗೆ ಒಂದು ರೀತಿ ರಂಗಪ್ರಕಾರವಾಗಿಯೂ ಗೋಚರಿಸುತ್ತದೆ. ಗೊಂದಲಿಗರ ಆಟದಲ್ಲಿ ಭಕ್ತಿಯ ಜೊತೆಗೆ ಮನೋರಂಜನೆಯು ಸೇರಿದೆ. ಕೇವಲ ಕಥೆ ಹಾಡುಗಳೊಂದಿಗೆ ಇಡೀ ಮೇಳ ಅರ್ಥಗಾರಿಕೆಯ ಕ್ರಿಯೆಯನ್ನು ನಿರ್ವಹಿಸುತ್ತದೆ. ಈ ಕ್ರಿಯೆಯಲ್ಲಿ ಮನುಷ್ಯರು ಮತ್ತು ಮನುಷ್ಯರಲ್ಲದ ರಂಗ ಪರಿಕರಗಳೂ ಸಹ ಮನುಷ್ಯನಷ್ಟೇ ಸಮರ್ಥವಾದ ಸಂವಹನ ಮಾಧ್ಯಮವಾಗಿ ಬಳಕೆ ಗೊಳ್ಳುತ್ತವೆ. ಗೊಂದಲಿಗರ ಆಟದ ವಿಶೇಷತೆ ಇರುವುದು ಈ ನೆಲೆಯಲ್ಲಿಯೆ. ಕೇವಲ ಇಬ್ಬರು ಕಲಾವಿದರನ್ನು ಮಾತ್ರ ದುಡಿಸಿಕೊಂಡು ನಡೆಯುವ ಗೊಂದಲಿಗರ ಆಟವು, ಪೂರ್ವನಿಶ್ಚಿತವಲ್ಲದೆ ಅನಿರೀಕ್ಷಿತವಾಗಿ ನಡೆಯುವುದೇ ಹೆಚ್ಚು. ಭಿಕ್ಷಾಟನೆಗಾಗಿ ಬರುವ ಗೊಂದಲಿಗರು ತಾವು ನಡೆಸಿಕೊಡುವ ಆಟಗಳಿಗೆ ನಿಶ್ಚಿತವಾದ ಸಂಭಾವನೆಯನ್ನು ನಿಗದಿಪಡಿಸಿರುವುದಿಲ್ಲ. ಗೊಂದಲ ಹಾಕಿಸುವವರ ಯೋಗ್ಯತೆಗೆ ತಕ್ಕಂತೆ ಸಂಭಾವನೆ ಕೇಳುವುದು ವಾಡಿಕೆ. ಗೊಂದಲಿಗರ ಆಟವೆಂದರೆ ಭಕ್ತಿಯೊಂದಿಗೆ ಹಾಸ್ಯ, ಶೃಂಗಾರ, ವೀರ ಮುಂತಾದ ನವರಸಗಳ ಬೆರಕೆಯಾಗಿರುತ್ತದೆ. ಹಾಗೆ ಆಟದ ಮಧ್ಯಕ್ಕೆ ಪ್ರೇಕ್ಷಕರಿಗೆ ಬೇಸರವಾಗದಂತೆ ಮನೋರಂಜನೆಯ ಹಾಡುಗಳನ್ನು ಗೊಂದಲಿಗರು ಹಾಡುತ್ತಾರೆ. ಗೊಂದಲಿಗರ ಹಾಡು ಮತ್ತು ಕಥೆಗಳು ಮನೋರಂಜನೆ, ಆರಾಧನೆ ಮತ್ತು ಭಕ್ತಿ ಹೀಗೆ ಯಾವುದೇ ಆಶಯಗಳನ್ನು ಒಳಗೊಂಡಿದ್ದರೂ ಅವರ ಬಾಯಿಯೊಳಗಿಂದ ಬರುವ ಸ್ವರ್ಗ, ಪಾತಾಳ, ದೇವಲೋಕ, ಮರ್ತ್ಯಲೋಕ ಮುಂತಾದ ಅತಿಮಾನುಷ ರಮ್ಯ ವಿಷಯಗಳು ಅವರ ಬದುಕಿನ ಕಲ್ಪನಾ ಶಕ್ತಿಯ ಪ್ರತಿರೂಪಗಳಾಗಿವೆ ಎಂಬುದನ್ನು ಮರೆಯಲಾಗದು.

೩.೪.೨. ಬುಡ್ಗಜಂಗಮರ ಬುರ್ರಕಥೆಯ ಪ್ರದರ್ಶನ ವಿಧಾನ

ಬುಡ್ಗ ಜಂಗಮ ತಂಡಗಳು ಬುರ್ರಕಥೆಯನ್ನು ಹಾಡುವ ಕ್ರಮದಲ್ಲಿ ಹಲವಾರು ವಿಧಾನಗಳುಂಟು. ಹಾಗೆ ಬುರ್ರಕಥೆ ಹಾಡುವುದನ್ನು ಒಂದು ಧಾರ್ಮಿಕ ವಿಧಿಯಾಚರಣೆ ಎಂದು ಭಾವಿಸಲಾಗುತ್ತದೆ. ಬುರ್ರಕಥೆ ಹಾಡುವವರನ್ನು ವ್ಯವಸ್ಥೆಯಲ್ಲಿ ತುಂಬಾ ನಿಕೃಷ್ಟವಾಗಿ ನೋಡಿದರೂ ಹಾಡುಗಾರಿಕೆ ಸಂದರ್ಭದಲ್ಲಿ ಇವರಿಗೆ ವಿಶೇಷ ಗೌರವಗಳು ದೊರೆಯುತ್ತವೆ. ಇದು ಸಮಾಜ ಇವರ ಕಲೆಗೆ ಕೊಡುವ ಗೌರವವಾಗಿದೆ.

ಗೊಂದಲಿಗರಂತೆ ಯಾವ ಧಾರ್ಮಿಕ ಆಚರಣೆಯ ಹಿನ್ನೆಲೆ ಇವರಿಗೆ ಇಲ್ಲದಿದ್ದರೂ, ಮಳೆ ಬಾರದಿದ್ದರೆ, ಊರಿಗೆ ಅಥವಾ ತಮ್ಮ ಮನೆಗೆ ಒಳ್ಳೆಯದಾಗಬೇಕೆಂದು ಭಾವಿಸುವವರು ಬುರ್ರಕಥೆಯನ್ನು ಹಾಡಿಸುತ್ತಾರೆ. ಹಾಗೆ ಬುರ್ರಕಥೆಯನ್ನು ಇಂತಹದೇ ಜಾತಿಯವರು ಹಾಡಿಸಬೇಕೆನ್ನುವ ಕಡ್ಡಾಯವಿಲ್ಲ. ಸಾಮಾನ್ಯವಾಗಿ ಎಲ್ಲ ಜಾತಿಯವರು, ಬುರ್ರಕಥೆಯನ್ನು ಹಾಡಿಸುತ್ತಾರೆ. ಒಂದು ಓಣಿಯ ಇಲ್ಲವೆ, ಒಟ್ಟಾರೆಯಾಗಿ ಇಡೀ ಊರವರು ಸೇರಿ ಬುರ್ರಕಥೆ ಹಾಡಿಸುವುದೇ ಹೆಚ್ಚು. ಬುರ್ರಕಥೆಯು ಪ್ರದರ್ಶನಗೊಳ್ಳುವ ಕ್ರಮವನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಹರಕೆಯ ಬುರ್ರಕಥೆ

೨. ಆಮಂತ್ರಣ ಬುರ್ರಕಥೆ

೩. ಬಯಲು ಬುರ್ರಕಥೆ

ಮೊದಲೆ ತಿಳಿಸಿರುವಂತೆ ತಮ್ಮ ಮನೆಗೆ ಕೆಡುಕಾಗಿದೆ. ಇಂತಹ ಕಥೆಯನ್ನು ಹಾಡಿಸಿದರೆ, ತಮಗೆ ಒಳಿತಾಗುತ್ತದೆ ಎಂದು ಭಾವಿಸಿದ ಮನೆಯವರು ಬುರ್ರಕಥೆ ಹಾಡುಗಾರರನ್ನು ಕರೆಯಿಸಿ ತಮಗೆ ಬೇಕಾದ ಹಾಡನ್ನು ಹಾಡಿಸಿ, ಅವರಿಗೆ ಬಟ್ಟೆ, ಆಕಳು, ಇಲ್ಲವೆ ದವಸ-ಧಾನ್ಯಗಳನ್ನು ಅಥವಾ ಹಣ ಮುಂತಾದವುಗಳನ್ನು ಕಾಣಿಕೆಯಾಗಿ ಕೊಡುತ್ತಾರೆ.

ಹಾಗೆ ಓಣಿಯವರೆಲ್ಲಾ ಸೇರಿ ಬುರ್ರಕಥೆಯನ್ನು ಹಾಡಿಸಬೇಕೆಂದು(ತಮ್ಮ ಊರಿಗೆ ಒಳಿತಾಗಲೆಂದು) ನಿರ್ಣಯಿಸಿ ತಮಗೆ ಇಷ್ಟವಾದ ಕಾವ್ಯಗಳನ್ನು ಹಾಡಿಸಿ, ಇಡೀ ಓಣಿ ಯವರು ಚಂದಾ ಎತ್ತಿ ಅವರಿಗೆ ಕಾಣಿಕೆಯಾಗಿ ಹಣ ಮತ್ತು ಬಟ್ಟೆಗಳನ್ನು ಕೊಡುವುದುಂಟು. ಹಾಗೆ ಇಡೀ ಗ್ರಾಮದವರು ಸೇರಿ ತಮ್ಮ ಊರಿಗೆ ಒಳಿತಾಗಲೆಂದು ಬುರ್ರಕಥೆಯನ್ನು ಹಾಡಿಸುವುದು ಎಂದರೆ ಸಾಮಾನ್ಯವಾಗಿ ಭಿಕ್ಷಾಟನೆಗಾಗಿ ಬಂದ ಬುರ್ರಕಥೆಯವರಿಂದ ಹಾಡು ಹಾಡಿಸಿ ಕಾಣಿಕೆ ಅರ್ಪಿಸುವುದು ಕಂಡುಬರುತ್ತದೆ.

ಇನ್ನು ಕೆಲವು ವೇಳೆ ಬುಡ್ಗಜಂಗಮರು ಇರುವಲ್ಲಿಗೆ ಬುರ್ರಕಥೆ ಹಾಡಿಸಬೇಕೆನ್ನುವ ಊರಿನ ಪ್ರತಿನಿಧಿಗಳು ತೆರಳಿ ವೀಳ್ಯಕೊಟ್ಟು, ಅವರನ್ನು ಹಾಡುಗಾರಿಕೆಗಾಗಿ ಆಮಂತ್ರಿಸುವುದೂ ಉಂಟು. ಎಂತಹ ಸಂದರ್ಭದಲ್ಲಿ, ಹಾಡುಗಾರಿಕೆಗಾಗಿ ಹಣ ಎಷ್ಟು ಕೊಡಬೇಕು ಎಂದು ನಿಶ್ಚಯಿಸಿ ವೀಳ್ಯಕೊಟ್ಟು ಬರುತ್ತಾರೆ. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ವೀಳ್ಯದ ಎಲೆ, ಅಡಿಕೆ, ಹನ್ನೊಂದು ರೂಪಾಯಿ ಇಲ್ಲವೆ ಇಪ್ಪತ್ತೊಂದು ರೂಪಾಯಿಗಳನ್ನು ಕೊಟ್ಟು ಬರುತ್ತಾರೆ.

ಬಯಲು ಬುರ್ರಕಥೆಗೆ ಇಂತಹದೇ ಜಾಗವೆಂಬುದಿಲ್ಲ. ಎಲ್ಲಿ ಬಯಲಿರುತ್ತದೋ ಅಲ್ಲಿ ಬುರ್ರಕಥೆಯನ್ನು ಹಾಡಲಾಗುತ್ತದೆ. ಒಟ್ಟಾರೆಯಾಗಿ ತಮ್ಮ ಹಾಡುಗಾರಿಕೆಯನ್ನು ಕೇಳುವ ಶ್ರೋತೃಗಳಿದ್ದರೆ ಸಾಕು. ಅವರಿಂದ ದೊರೆತ ಚಿಲ್ಲರೆ ಕಾಸನ್ನೆ ಜೀವನಾಧಾರಕ್ಕೆ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಬುರ್ರಕಥೆ ಹಾಡುಗಾರಿಕೆ ಎಲ್ಲಾ ಜನಪದ ಹಾಡುಗಾರಿಕೆ ಗಳಂತೆಯೆ ರಾತ್ರಿಯ ವೇಳೆ ಜರುಗುತ್ತದೆ. ಮೊದಲಿಗೆ ಕಳಸ ಪೂಜೆ ಮಾಡುತ್ತಾರೆ ಮತ್ತು ದೇವಾನು ದೇವತೆಗಳನ್ನು ಸ್ತುತಿಸುವ ಹಾಡುಗಳನ್ನು ಹಾಡಿ ನಂತರ ಮುಖ್ಯ ಕಥೆಯ ಹಾಡುಗಾರಿಕೆಗೆ ತೊಡಗುತ್ತಾರೆ. ಬುರ್ರಕಥೆಯ ಹಾಡುಗಾರಿಕೆಯೆಂದರೆ ಅಭಿನಯ, ಸಂಭಾಷಣಾ ಮತ್ತು ಹಾಡುಗಾರಿಕೆ, ಬುರ್ರಕಥೆಯನ್ನು ಹಾಡುವವರು ಸ್ವಭಾವತಃ ಒಳ್ಳೆಯ ನಟರೂ ಆಗಿರುತ್ತಾರೆ. ಬುಡ್ಗ ಎನ್ನುವ ವಾದ್ಯ, ತಂಬೂರಿ ಮತ್ತು ಗಗ್ಗರಿಗಳನ್ನು ಬಳಸಿ ಹಾಡುವ ಇವರು ಸಾಮಾನ್ಯವಾಗಿ ಇಬ್ಬರು ಅಥವಾ ಮೂವರು ಸೇರಿ ಹಾಡುತ್ತಾರೆ. ಮುಖ್ಯ ಹಾಡುಗಾರ ಅಥವಾ ಹಾಡುಗಾರ್ತಿಯು ಕಥೆಯನ್ನು ಹಾಡಿದಂತೆ, ಹಿಮ್ಮೇಳದಲ್ಲಿರುವವರು ಡುಮ್ಮಿಯನ್ನು ಬಾರಿಸುತ್ತಾ 'ತಂದಾನ, ತಂದಾನ, ತಾನ ತಾನ ತಂದಾನೆ' ಎಂದು ಹಾಡುತ್ತಾರೆ. ಮುಖ್ಯ ಹಾಡುಗಾರ್ತಿ ಸಂಭಾಷಣೆ ಹೇಳಬೇಕಾದರೆ ಹೌದು, ಹಾಂ, ಆಹಾಂ ಮುಂತಾದ ಉದ್ಗಾರಗಳನ್ನು ಹಿಮ್ಮೇಳದವರು ಮಾಡುತ್ತಾರೆ. ಕಥೆ ಯಾವುದೇ ಇದ್ದರೂ ಹಾಡುವ ಶೈಲಿ, ಪ್ರಾರ್ಥನೆ ಮುಂತಾದವುಗಳು ಮೇಳದಿಂದ ಮೇಳಕ್ಕೆ ಅಲ್ಪಸ್ವಲ್ಪ ಭಿನ್ನತೆಯನ್ನು ಹೊಂದಿರುತ್ತದೆ. ಹಾಗೆಯೇ ಒಂದೇ ಕಥೆಯನ್ನು ಬೇರೆ ಬೇರೆ ಕಡೆ, ಬೇರೆ ಬೇರೆ ವೇಳೆಯಲ್ಲಿ ಹಾಡುವಾಗ ಹಾಡುಗಾರರ ಹಾಡುಗಾರಿಕೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಾಗುವುದೂ ಉಂಟು. ಹಾಡುಗಾರಿಕೆ ಒಮ್ಮೊಮ್ಮೆ ದೀರ್ಘಗೊಂಡರೆ ಇನ್ನೂ ಕೆಲವು ಸಾರಿ ಮೊಟಕು ಗೊಳ್ಳುವುದೂ ಉಂಟು. ಬುರ್ರಕಥೆಯ ಕಲಾವಿದರು ತಮ್ಮ ಹಾಡುಗಾರಿಕೆ ಮೂಲಕ ಒಂದು ವಿಶಿಷ್ಟ ಸನ್ನಿವೇಶವನ್ನೆ ಸೃಷ್ಟಿ ಮಾಡಿಬಿಡುತ್ತಾರೆ. ಬುರ್ರಕಥೆಯನ್ನು ಪ್ರಾರಂಭಕ್ಕೆ ಕೇಳಲು ಕುಳಿತರೆ ಕೊನೆಯವರೆಗೂ ಕೇಳಬೇಕು ಎನ್ನುವ ಭಾವನೆಯನ್ನು ಕಲಾವಿದರು ಸೃಷ್ಟಿಸಿ ಬಿಡುತ್ತಾರೆ.

ಸಾಮಾನ್ಯವಾಗಿ ಬಳ್ಳಾರಿ ಭಾಗದಿಂದ ಚಿತ್ರದುರ್ಗ ಭಾಗಕ್ಕೆ ಬಂದಿರುವ ಬುಡ್ಗಜಂಗಮರು ಬಾಲನಾಗಮ್ಮ, ಕುಮಾರರಾಮ, ಕೃಷ್ಣಗೊಲ್ಲರ ಕಾವ್ಯ, ಎಲ್ಲಮ್ಮನ ಕಥೆ, ಬಲಿಚಕ್ರವರ್ತಿಯ ಕಥೆ, ಬಬ್ಬಿಲಿ ನಾಗಿರೆಡ್ಡಿ ಕಥೆ, ಮಾರ್ವಾಡಿ ಶೇಠಿ ಕಥೆ, ಆದವಾನಿ ಲಕ್ಷ್ಮಮ್ಮನ ಕಥೆ, ಗುಡೇಕಲ್ ಭೀಮಲಿಂಗನ ಕಥೆ ಮುಂತಾದ ಕಾವ್ಯಗಳನ್ನು ಹಾಡುತ್ತಾರೆ.

ಬುರ್ರಕಥೆ ಹಾಡುಗಾರಿಕೆ ಮತ್ತು ಕಥೆಗಳ ಸ್ವರೂಪ

ಬಹುಪಾಲು ವೃತ್ತಿಗಾಯಕರ ಹಾಡುಗಾರಿಕೆಯನ್ನು ಹೋಲುವ ಬುರ್ರಕಥೆ ಸ್ವರೂಪವು ಮೇಳ ಸಮೂಹದಿಂದ ಕೂಡಿರುತ್ತದೆ. ಅಂದರೆ ಒಬ್ಬರಿಗಿಂತ ಹೆಚ್ಚಿನ ಅಂದರೆ ಇಬ್ಬರಿಂದ ಮೂವರವರೆಗೂ ಈ ಬುರ್ರಕಥೆಯನ್ನು ಹಾಡುವವರಿರುತ್ತಾರೆ. ಹಾಡುಗಾರಿಕೆಯಲ್ಲಿ ಸಾಮಾನ್ಯವಾಗಿ ಬುಡ್ಗ ಅಥವಾ ತಂಬೂರಿಯನ್ನು ಹಿಡಿದ ವ್ಯಕ್ತಿಯು ಮುಂದುಲಾಡಿಕೆಯನ್ನು ಹಾಡುವವರಾಗಿದ್ದರೆ. ಡುಮ್ಮಿ ಅಥವಾ

ಬುರ್ರ ಎನ್ನುವ ವಿಶಿಷ್ಟವಾದ ಚರ್ಮವಾದ್ಯವನ್ನು ನುಡಿಸುವವರು ಹಿಮ್ಮೇಳದಲ್ಲಿ ಜೊತೆ ಕೂಡಿ ಹಾಡುತ್ತಾರೆ. ಜೊತೆಗೆ ಒಮ್ಮೊಮ್ಮೆ ಬರಿಕೈಯಲ್ಲಿಯೆ ಹಿಂದಲಾಡಿಕೆ (ಹಿಮ್ಮೇಳ) ಹಾಡುವುದುಂಟು.

ಸಾಮಾನ್ಯವಾಗಿ ಬುರ್ರಕಥೆಯು ಗೊಂದಲಿಗರ ಕಾವ್ಯಗಳಂತೆಯೇ ಪದ್ಯ-ಗದ್ಯ ಸ್ವರೂಪದಲ್ಲಿರುತ್ತವೆ. ಮೊದಲು ಹಾಡುಗಾರಿಕೆ, ನಂತರ ಗದ್ಯದಲ್ಲಿ ಕಥೆಯನ್ನು ಮುಮ್ಮೇಳದವನು/ಳು ನಾಟಕೀಯವಾಗಿ ಅಭಿನಯಿಸುತ್ತಾ ಅಭಿವ್ಯಕ್ತಿಸುತ್ತಾರೆ. ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳು, ಪವಾಡ ಪುರುಷರ, ಬೈರಾಗಿಗಳ, ಸಾಧಕರ ಮಹಿಮೆಗಳನ್ನು ಅವರ ಜೀವನ ಪ್ರೀತಿಯ ವಿಶೇಷಗಳೆನಿಸಿದ ಮದ್ಯ, ಮಾಂಸ, ಮೈಥುನ, ಭಂಗಿ ಸೇವೆಯಂತಹ ನಿರಾಕರಿಸಲಾಗದ ವಿಚಾರಗಳ ದೀರ್ಘ ಕಥನಕಗಳು ನಮ್ಮಲ್ಲಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿ ಪಡೆದವುಗಳು. ಆಳರಸರ ಇತಿಹಾಸ ಮಾತ್ರ ಇತಿಹಾಸವಲ್ಲ. ಜನಸಾಮಾನ್ಯರಿಗೂ ಒಂದು ಇತಿಹಾಸವಿದೆ ಎನ್ನುವ ಮೌಲ್ಯಗಳನ್ನು ದೊಂಬಿದಾಸರ ಲಾವಣಿಗಳಂತೆ ಬುರ್ರ ಕಥೆಯಂತಹ ಕಾವ್ಯ ಪ್ರಕಾರಗಳು ಎತ್ತಿ ಹಿಡಿಯುತ್ತವೆ.

ಮೊದಲೇ ತಿಳಿಸಿರುವಂತೆ ಪದ್ಯಗದ್ಯ ಶೈಲಿಯಲ್ಲಿರುವ ಈ ಹಾಡುಗಾರಿಕೆಯನ್ನು ನೋಡಿದರೆ, ಒಂದು ನಾಟಕವನ್ನು ನೋಡಿದ ಅನುಭವವಾಗುತ್ತದೆ. ಸಂದರ್ಭಕ್ಕೆ ತಕ್ಕಂತೆ ಮುಮ್ಮೇಳದ ವ್ಯಕ್ತಿಗಳು ಪಾತ್ರಗಳನ್ನು ಬದಲಿಸಿಕೊಳ್ಳುತ್ತಾರೆ. ಹಾಡಿನ ಗತಿಗೆ ಹೊಂದುವಂತೆ ರಾಗಬದ್ಧವಾಗಿ ಗದ್ಯದಲ್ಲಿ ಕಥೆಯ ವಿವರಣೆ, ಸಂಭಾಷಣೆ ಮುಂತಾದವುಗಳನ್ನು ಕೊಡುತ್ತಾರೆ.

ಹಿಮ್ಮೇಳ: ಗೊಂದಲಿಗರ ಆಟಗಳಂತೆಯೇ ಬುರ್ರಕಥೆಯ ಹಾಡುಗಾರಿಕೆಗೂ ರಂಗ ಸ್ವರೂಪವನ್ನು ನಿರ್ಮಿಸಿಕೊಡುವುದೇ ಈ ಹಿಮ್ಮೇಳ. ಈ ಹಿಮ್ಮೇಳವು ಕಾವ್ಯಕ್ಕೆ ಪೂರಕವಾಗಿ ಬಳಸಿ ಕೊಳ್ಳುವ ಪರಿಕರಗಳು, ಹಾಡುಗಾರಿಕೆ ಮತ್ತು ಆಟವನ್ನು ಇಬ್ಬರು ಇಲ್ಲವೆ ಮೂವರು ನಡೆಸಿಕೊಡುವರು. ಇಲ್ಲಿ ಮುಮ್ಮೇಳದ ಹಾಡುಗಾರ್ತಿ ಮತ್ತು ಹಾಡುಗಾರನ ಪಾತ್ರ ಅತಿ ಮಹತ್ವದ್ದು. ಆದರೆ ಅವನಿಗೆ ಪೂರಕವಾಗಿ ಕಥೆ ಮುಂದುವರೆಯಲು ಸಹಕಾರಿಯಾದುದು ಹಿಮ್ಮೇಳ ಮತ್ತು ವಾದ್ಯಪರಿಕರಗಳು. ಇಲ್ಲಿ ಮುಮ್ಮೇಳ ಮತ್ತು ಹಿಮ್ಮೇಳದವರೆಲ್ಲಾ ಹಾಡುಗಾರಿಕೆಯೊಂದಿಗೆ ವಾದ್ಯಗಳನ್ನು ನುಡಿಸುವ ಕಲಾವಿದರಾಗಿರುತ್ತಾರೆ. ಮುಖ್ಯ ಹಾಡುಗಾರ್ತಿ ಸಾಮಾನ್ಯವಾಗಿ ತಂಬೂರಿ ಮತ್ತು ಗಗ್ಗರಿ ನುಡಿಸುತ್ತಾರೆ. ಹಿಮ್ಮೇಳದವರು ಡುಮ್ಕಿಯನ್ನು ಬಾರಿಸುತ್ತಾರೆ. ಬುರ್ರಕಥೆ ನಡೆಸಲು ಇಂಥದೇ ಜಾಗವಾಗಬೇಕೆನ್ನುವುದು ಕಡ್ಡಾಯವಾಗಿರುವುದಿಲ್ಲ. ಯಾವುದೋ ಕಟ್ಟೆಯೋ, ಇಲ್ಲವೇ ಯಾವುದಾದರೂ ಬಯಲು ಜಾಗ ಅಥವಾ ಗುಡಿ ಬಯಲು ಹೀಗೆ ಪ್ರೇಕ್ಷಕರು ಸೇರುವ ಯಾವುದೇ ಸ್ಥಳವಾದರೂ ಸರಿ ಇವರು ಹಾಡುಗಾರಿಕೆಯನ್ನು ಪ್ರಾರಂಭಿಸುತ್ತಾರೆ. ಮುಮ್ಮೇಳದ ಹಾಡುಗಾರಿಕೆಗೆ ಉಸಿರ್ದಾಣಗಳಂತೆ ಹಿಮ್ಮೇಳದವರು ಕಾರ್ಯ ನಿರ್ವಹಿಸುತ್ತಾರೆ. ಇದರಿಂದಾಗಿ ಮುಮ್ಮೇಳದವನು ಮುಂದಿನ ಸಾಲನ್ನು ಎತ್ತಿಕೊಂಡು ಹಾಡಲು ಸಹಾಯಕವಾಗುತ್ತದೆ. ಬಯಲಾಟದಲ್ಲಿ ಸಾರಥಿ ಇರುವಂತೆ ಬುರ್ರಕಥೆಗೆ ಹಿಮ್ಮೇಳದವನು ಸಹಕರಿಸುತ್ತಾನೆ.

[illegible]

ಕಾವ್ಯ ಸಂದರ್ಭ: ಬುರ್ರಕಥೆಗಳ ಆಟಗಳನ್ನು ಈ ಮೊದಲು ತಿಳಿಸಿರುವಂತೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಂದು ಗುರುತಿಸಬಹುದು. ಆದರೆ ಈ ಎಲ್ಲಾ ಪ್ರಕಾರದ ಕಾವ್ಯಗಳು ಜಾನಪದ ರೂಪುಗಳನ್ನೇ ಹೊಂದಿರುತ್ತವೆ. ಒಮ್ಮೊಮ್ಮೆ ಪೌರಾಣಿಕ ಕಥೆಯಲ್ಲಿ ಐತಿಹಾಸಿಕ ವಿಷಯಗಳನ್ನು, ಇಲ್ಲವೆ ಐತಿಹಾಸಿಕ ವಿಷಯಗಳಲ್ಲಿ ಪೌರಾಣಿಕ ಕಥೆಯನ್ನು ತಮಗೆ ಗೊತ್ತಿಲ್ಲದೆಯೆ ಸೇರಿಸಿ ಕಾವ್ಯಗಳನ್ನು ಹಾಡುವುದನ್ನು ಕಾಣಬಹುದು.

ಬುರ್ರಕಥೆಗಳನ್ನು ಹಾಡುವ ಮೂರು ಸಂದರ್ಭಗಳ ಮೂಲಕ ಗುರುತಿಸಬಹುದು.

೧. ಬರ ಪರಿಹಾರ ಅಥವಾ ಸಂಕಷ್ಟ ಪರಿಹಾರಾರ್ಥವಾಗಿ ಹಾಡಿಸುವ ಬುರ್ರಕಥೆ ಸಂದರ್ಭ

೨. ಭಿಕ್ಷಾಟನೆ ಸಂದರ್ಭ

೩. ಮನೋರಂಜನೆ ಸಂದರ್ಭ

ಈ ಮೊದಲೇ ತಿಳಿಸಿದಂತೆ ತಮ್ಮ ಊರಿಗೆ ಮಳೆ ಬಾರದಿದ್ದಾಗ ಬುರ್ರಕಥೆಗಳನ್ನು ಹಾಡಿಸಿದರೆ ಮಳೆ ಬರುತ್ತದೆನ್ನುವ ನಂಬಿಕೆ ಚಿತ್ರದುರ್ಗ ಪ್ರಾಂತ್ಯದ ಜನಪದರಿಗಿದೆ. ಹಾಗಾಗಿ ಈ ಹಾಡುಗಾರರನ್ನು ಮಳೆ ಬಾರದ ದಿನಗಳಲ್ಲಿ ಕರೆಸಿ ಹಾಡುಗಳನ್ನು ಹಾಡಿಸುತ್ತಾರೆ. ಹಾಗೆಯೇ ಮನೆಯಲ್ಲಿ ತುಂಬಾ ಸಂಕಷ್ಟಗಳು ಮೈದೋರಿದಾಗ ಬುರ್ರ ಕಥೆಯವರಿಂದ ಒಳ್ಳೆಯ ಕಥೆಗಳನ್ನು ಹಾಡಿಸಿದಲ್ಲಿ ಮನೆಗೆ ಅಂಟಿದ ದಾರಿದ್ರ್ಯ ತೊಲಗುತ್ತದೆ ಎನ್ನುವ ನಂಬಿಕೆ ಸಹ ಇದೆ. ಹೀಗಾಗಿ ಒಂದು ಮನೆಯವರೆ ಸ್ವತಂತ್ರವಾಗಿ ಬುರ್ರಕಥಾ ಹಾಡುಗಾರರನ್ನು ಕರೆಸಿ ಮನೆ ಮುಂದಿನ ಅಂಗಳದಲ್ಲಿ ಹಾಡಿಸಿ, ಅವರಿಗೆ ಕಾಣಿಕೆ ಕೊಟ್ಟು ಸಂತೃಪ್ತಿಪಡಿಸಿ ಕಳಿಸುವುದುಂಟು.

ಭಿಕ್ಷಾಟನಾ ಸಂದರ್ಭ: ಬುಡ್ಗ ಜಂಗಮರು ಮೂಲತಃ ಅಲೆಮಾರಿ ಸಮುದಾಯ. ಇವರು ಇಂದು ನಡೆಸುವ ಚಿಕ್ಕ ವ್ಯಾಪಾರ ಸ್ವರೂಪವು ಇವರ ಅಲೆಮಾರಿ ಬದುಕಿನ ಪ್ರತಿರೂಪದಂತೆ ಕಂಡುಬರುತ್ತದೆ. ಇವರ ವ್ಯಾಪಾರ, ವ್ಯವಸಾಯಗಳಿಗಿಂತ ಭಿಕ್ಷಾಟನೆಯನ್ನೇ ಹೆಚ್ಚು ಅವಲಂಬಿಸಿರು ವುದನ್ನು ಕಾಣಬಹುದು. ಗೊಂದಲಿಗ, ಅರ್ಜನಜೋಗಿ ಮತ್ತು ದೊಂಬಿದಾಸರಂತೆ ಇವರೂ ಸಹ ಭಿಕ್ಷಟಾನೆ ದೇವರ ಸೇವೆಯೆಂದೇ ಭಾವಿಸುತ್ತಾರೆ. ಬುರ್ರಕಥೆಯನ್ನು ತಮ್ಮ ಹಾಡುಗಾರಿಕೆಯನ್ನು ರಾತ್ರಿಗಳಲ್ಲಿ ಹಾಡುವಂತೆ ಭಿಕ್ಷಾಟನಾ ಸಂದರ್ಭದಲ್ಲಿ ಹಾಡುವುದಿಲ್ಲ. ತಮಗೆ ಅನುಕೂಲವಾದಂತೆ ಇಬ್ಬಿಬ್ಬರು ಭಿಕ್ಷಾಟನೆಗೆ ಹೋಗುವುದುಂಟು. ಇಲ್ಲವೆ ಒಬ್ಬೊಬ್ಬರೇ ಭಿಕ್ಷಾಟನೆಗೆ ಹೋಗುವುದೂ ಉಂಟು. ಭಿಕ್ಷಾಟನಾ ವೇಳೆಯಲ್ಲಿ ತಮಗೆ ತೋಚಿದ ಹಾಡುಗಳನ್ನು ಹಾಡುವುದುಂಟು. ಬುರ್ರಕಥೆಗಳಲ್ಲಿ ಬಿಕ್ಷಾಟನೆಗಾಗಿ, ಬರ ಪರಿಹಾರ ಮತ್ತು ಸಂಕಷ್ಟ ಪರಿಹಾರಗಳಿಗೆ ಹಾಡಲ್ಪಡುವಂತೆಯೇ ಮನೋರಂಜನೆಗಾಗಿಯೂ ಹಾಡಲ್ಪಡುತ್ತದೆ. ಸುದೀರ್ಘವಾದ ನಾಟಕೀಯ ಕಾವ್ಯ ಪ್ರಕಾರವಾದ ಬುರ್ರಕಥೆಗಳಲ್ಲಿ ಭಕ್ತಿ ಮತ್ತು ಜನಪದ ಅತಿ ರಂಜಕತೆ ಮತ್ತು ರಮ್ಯತೆಗಳು ಜನಪದ ಕಥೆ, ಕಾವ್ಯಗಳಲ್ಲಿ ವಿಶೇಷ ಸಂದೇಶಗಳನ್ನು ಪ್ರಕಟಿಸುವಂತೆಯೇ ಮನೋರಂಜನೆಯನ್ನು ಪ್ರಕಟಿಸುತ್ತವೆ. ಗೊಂದಲಿಗರ ಆಟಗಳಂತೆಯೇ ಬುರ್ರಕಥೆಗಳು ಸಹ ಕನಿಷ್ಠ ಸಂಖ್ಯೆಯ ಕಲಾವಿದರನ್ನು ಮಾತ್ರ ಬಳಸಿಕೊಂಡು ಹಾಡಲ್ಪಟ್ಟರೂ ಅವುಗಳು ಪೂರ್ವ ನಿಶ್ಚಿತವಲ್ಲದೆ.

ಅನಿರೀಕ್ಷಿತವಾಗಿ ರಂಗಗಳನ್ನು ನಿರ್ಮಿಸಿಕೊಳ್ಳುವುದೇ ಹೆಚ್ಚು. ಇವರ ಹಾಡುಗಾರಿಕೆಗೆ ನಿಗದಿತ ಸಂಭಾವನೆ ಇರುವುದಿಲ್ಲ. ಹಾಡಿಸುವವರ ಯೋಗ್ಯತೆಯನ್ನು ಅನುಸರಿಸಿ ಕಲಾವಿದರು ಸಂಭಾನೆಯನ್ನು ನಿರ್ಧರಿಸುವುದುಂಟು. ಇನ್ನೂ ಕೆಲವು ವೇಳೆ ಕೊಟ್ಟಷ್ಟೇ ಸಂಭಾವನೆಗೆ ಸಂತೃಪ್ತಿಗೊಂಡು ಬುರ್ರ ಕಥೆಗಳನ್ನು ಹಾಡುವುದೂ ಉಂಟು. ಬುರ್ರಕಥೆಗಳನ್ನು ನೋಡಿದರೆ, ರಂಗ ಮಾಧ್ಯಮವನ್ನೇ ನೋಡಿದಂತಾಗುತ್ತದೆ. ಬುರ್ರಕಥೆಯೆಂದರೆ ನವರಸಗಳ ಮಿಶ್ರಣ, ಈ ಬುರ್ರಕಥೆಯು ಭಕ್ತಿ ಹಾಗೂ ಮನುಷ್ಯನ ಆಶಯಗಳನ್ನು ದುಡಿಸಿಕೊಂಡ ಒಂದು ಜನಪದ ಮಾಧ್ಯಮವಾಗಿ ಕಂಡುಬರುತ್ತದೆ.

೩.೪.೩. ಅರ್ಜುನಜೋಗಿ ಹಾಡುವ ವಿಧಾನ

ಅಲೆಮಾರಿ ಸಮುದಾಯವಾದ ಕಿನ್ನರಿ ಜೋಗಿಗಳು ಅವರ ವಾದ್ಯದೊಂದಿಗೆ ತಮ್ಮ ಸಮುದಾಯವನ್ನು ಗುರುತಿಸಿಕೊಳ್ಳುವ ಹಿನ್ನೆಲೆಯಲ್ಲಿ ಕಿನ್ನರಿಯನ್ನು ನುಡಿಸುತ್ತಾ ಇವರು ಊರೂರ ಮೇಲೆ ಬರುತ್ತಿದ್ದ ಜೋಗಿಗಳನ್ನು ಜನರು ಆದರದಿಂದ ಕರೆದು ಗೌರವಿಸುತ್ತಿದ್ದರು. ಅವರ ಕಿನ್ನರಿಯ ನಾದವನ್ನು ಮನಸಾರೆ ಮೆಚ್ಚಿಕೊಂಡಿದ್ದರು: ಕೂರಿಸಿ ಹಾಡಿಸಿ ಕೇಳುತ್ತಿದ್ದರು.

"ಕಿನ್ನರಿ ಸ್ವಾಮಿ ನಿನ್ನ ಕೇರಿಗೆ ಬಾರೋ
ನಮ್ಮಲ್ಲಿ ಒಬ್ಬ ಸೂಜಾಣ-ಕಂದಯ್ಯ
ನಿನ್ನ ಕಿನ್ನರಿಗೆ ದನಿಯ ಕೊಡುತ್ತಾರೆ."[೯]

ಮೇಲಿನ ಕಾವ್ಯಭಾಗವನ್ನು ಗಮನಿಸಿದಾಗ ಕಿನ್ನರಿಯ ವಾದ್ಯದ ಜನಪ್ರಿಯತೆ ಇರುವುದು ಕಂಡುಬರುತ್ತದೆ. ಆ ವಾದ್ಯವನ್ನು ಹಿಡಿದು ಅಪೂರ್ವ ರೀತಿಯಲ್ಲಿ ಶೃಂಗಾರಿಸಿಕೊಂಡು ಜೋಗಿ ವೇಷಧಾರಿಗಳು ಜನ ಸಮುದಾಯದ ಬದುಕಿನ ಮೇಲೆ ಎಷ್ಟು ಪ್ರಭಾವಿತರಾಗಿದ್ದರು ಎಂಬುದನ್ನು ಮುಖ್ಯವಾಗಿ ಕಾಣಬಹುದು. ಮೌಖಿಕ ಸಾಹಿತ್ಯದಲ್ಲಿ ಕಂಡು ಬರುವ ಪ್ರೇಮ ಜನಪದ ಗೀತೆಗಳಲ್ಲಂತೂ ಕಿನ್ನರಿಯ ಪಾತ್ರ ಪ್ರೀಯವಾದ್ದು ಜೋಗಿಗಳನ್ನು ಜನ ಆಹ್ವಾನಿಸುವ ಮೇಲಿನ ಬಗ್ಗೆಯಿಂದ ತಿಳಿಯಬಹುದಾಗಿದೆ. ಕೋಲಾಟದ ಹಾಡಿನಲ್ಲಿ ಕಿನ್ನರಿಯ ವಾದ್ಯವು ಸಮಾಜದಲ್ಲಿ ಜನಪದರಿಗೆ ಎಷ್ಟು ಅತಿಶೆಯವಾಗಿತ್ತು ಎಂಬುವುದನ್ನು ಈ ಕೆಳಗಿನ ಸಾಲುಗಳಲ್ಲಿ ಗ್ರಹಿಸಬಹುದು.

"ಬೆಟ್ಟದ ಮ್ಯಾಗಳ ಜಲ್ಲೇಬಿದರು
ಬೇಲಿ ಮ್ಯಾಗಳ ಸೋರೆಬರುಡೆ
ಲೋಲುಕಿನ್ನುಡಿ ನೋಡಿಸೋನ್ಯಾರಯ್ಯೋ
ಚೆಲುವಯ್ಯ ಚೆಲುವೋ
ಕೇರಿ ಕೇರಿ ತಿರುಗುತೀಯ
ಭಾರಿ ಕಿನ್ರಿ ನುಡಿಸುತೀಯ
ನಮ್ಮ ಕೇರಿಗೆ ಯಾಕೆ ಬರವಲ್ಯೋ

ನಿಲ್ಲಯ್ಯ ರಾಜ
ನಮ್ಮ ಕೇರ್‍ಗೆ ಬಂದರ್‍ನೀನು
ಕರಿಯ ಕಂಬಳಿ ಗದ್ಗೆ ಹೂಡಿ
ಗಂದವೀಳ್ಯ ತಂದು ಕೊಡ್ಡೆನೋನೆ
ಕೋಗಿಲ್ಹಾಗೆ ಕೂಗುತೀಯಲ್ಲೋ
ನಿಲ್ಲಯರಾಜ."[೧೦]

ಅರ್ಜುನಜೋಗಿ ಜನ ಸಮುದಾಯದ ಮನಸ್ಸನ್ನು ಯಾವ ರೀತಿ ಆಕರ್ಷಿಸಿದ ಎಂಬುದನ್ನು ಈ ಮೇಲಿನ ಗೀತೆ ಸರಳವಾಗಿ ಅರ್ಥೈಸುತ್ತದೆ. ಜನ ಸಮುದಾಯಗಳು ಶೋತೃವರ್ಗ ಅವನು ಬರುವಿಕೆಗಾಗಿ ಕೇರಿಗೆ ಆಹ್ವಾನ ರೀತಿಯು ರಮಣಿಯವಾಗಿದೆ. ಇದ್ದರಿಂದ ಕಿನ್ನರಿಯ ನಾದಕ್ಕೆ ಜನ ಮರುಹೋಗಿದ್ದರು ಎಂಬುದನ್ನು 'ಭಾರಿ ಕಿನ್ರಿ ನಡುಸುತೀಯ ನಮ್ಮ ಕೇರಿಯ ಬರವಲ್ಯೊ ನಿಲ್ಲಯ್ಯರಾಜ' ಎಂದು ಅಲೆಮಾರಿಯಾದ ಜೋಗಿಯ ಆಪ್ತತೆಯಿಂದ ಅವನನ್ನು ನಿಲ್ಲುಸುತ್ತಾರೆ. ಆನಂತರದಲ್ಲಿ ಅವನ ವಾದ್ಯ ನಾದಕ್ಕೆ, ಹಾಡಿನ ಸಿರಿಗೆ, ಅವನ ಮೋಹಕ ವೇಷಭೂಷಣದ ಸೇಳತಕ್ಕೊಳಗಿರುವುದನ್ನು ಈ ಪದ್ಯದಲ್ಲಿ ಕಾಣಬಹುದು.

"ಹಾರವರ ಕೇರಿಯ ಗಾರೆಜಗಲಿಯ ಮೇಲೆ
ಭಾರಿ ಕಿನ್ನರಿ ನುಡಿಸುವನೆ–ನನಕೂಡು
ಬೇಗ ಬಿಟ್ಟಾವು ಚಳಿಜ್ವರ."[೧೧]

ಹೀಗೆ ಅರ್ಜುನಜೋಗಿಗಳು ಇತರ ಅಲೆಮಾರಿ ಜನಪದ ಗಾಯಕರಂತೆ ಹೆಚ್ಚು ಜನ ಸಮುದಾಯದ ಮನಸ್ಸನ್ನು ಗೆದ್ದುಕೊಂಡಿದ್ದ ಕಲಾವಿದರು. ಅವರು ಜೋಳಿಗೆಯನ್ನು ಹೆಗಲಿಗೆ ಹಾಕಿ ಭಿಕ್ಷೆಗೆ ಬಂದರೆ ವಿಶೇಷವಾದ ಗೌರವ ಅವರಿಗೆ ಸಿಗುತ್ತಿತ್ತು. "ಸೊಗಸಾದ ಮುಂಡಾಸು ಕಟ್ಟಿ, ಮಣಿಕಚ್ಚು, ತುರಾಯಿ, ಮುತ್ತಿನಸರ, ಗಾಜಿನ ಕೊಳವೆಗಳಿಂದ ಅದನ್ನು ಅಲಂಕರಿಸಿ, ಎಡಕ್ಕೆ ಸ್ವಲ್ಪ ವೋರೆಯಾಗಿ ಧರಿಸಿ, ಬಲಕ್ಕೆ ಒಂದು ಬಟ್ಟೆಯನ್ನು ಸುತ್ತಿ, ತ್ರಿಶೂಲವನ್ನು ಸಿಕ್ಕಿಸಿಕೊಂಡು ಬೀದಿಯಲ್ಲಿ ಕಾಣಿಸಿಕೊಂಡರೆ ಕಿನ್ನರಿಯನ್ನು ಹಿಡಿದ ಯಕ್ಷನೊಬ್ಬ ಕಾಣಿಸಿಕೊಂಡ ಅನುಭವವಾಗುತ್ತಿತ್ತು.

ಅವನ ಕರಿಯ ನಿಲುವಂಗಿ ನಡುಪಟ್ಟಿ, ಕಚ್ಚೆಯ ಪಂಚೆ, ಕೈಯ ದೊಣ್ಣೆಗಳು, ಎಲ್ಲದಕ್ಕೂ ಮಿಗಿಲಾಗಿ ಆ ಕಿನ್ನರಿ, ಅದರ ಅಲಂಕಾರ, ಅದರಿಂದ ಮಿಡಿಯುವ ಮೋಹಕ ನಾದ, ಅಷ್ಟೇ ಅನುಪಮವಾಗಿ ಜೋಗಿಯ ನಾಲಗೆಯಿಂದ ಚಿಮ್ಮಿ ಬರುವ ಹಾಡು–ಇವೆಲ್ಲವೂ ಈ ಕಲಾವಿದರನ್ನು ಜನಪದ ವೃತ್ತಿಗಾಯಕರ ಸಾಲಿನಲ್ಲಿ ಒಂದು ಉನ್ನತ ಸ್ಥಾನದಲ್ಲಿ ನಿಲ್ಲಿಸುತ್ತವೆ. ಕಿನ್ನರಿಯನ್ನು ವೀಣೆಯೆಂದೂ ಕರೆಯಲಾಗುವುದು. ಭಾರತದ ಎಲ್ಲ ಕಡೆಗಳಲ್ಲೂ ಕಿನ್ನರಿ ಜನಪದ ವೃತ್ತಿಗಾಯಕರಲ್ಲಿ ಬಳಕೆಯಲ್ಲಿದೆ. ಪಾಂಡವರು ವನವಾಸಕ್ಕೆ ಹೋಗಿದ್ದಾಗ ಸಿಂಗನಾದವನ್ನು ಊದಿಕೊಂಡು ಭಿಕ್ಷೆ ಬೇಡುತ್ತಿದ್ದ ಜೋಗಿಗಳನ್ನು

ನೋಡಿ, ಅರ್ಜುನ ಸಿದ್ಧರ ಬೆಟ್ಟದಿಂದ ಬಿದಿರು ಮತ್ತು ಸೋರೆ ಬುರುಡೆಗಳನ್ನು ತಂದು ಕಿನ್ನರಿಯನ್ನು ಮಾಡಿಕೊಟ್ಟು 'ಪಂಚ ಪಾಂಡವರ ಹೆಸರು ಹೇಳಿಕೊಂಡು ತಿರುಗಿ' ಎಂದು ಹರಸಿದ. ತಾನೇ ಭೂಪ್ರದಕ್ಷಿಣೆಯನ್ನು ಮುಗಿಸಿ ಹಸ್ತನಾವತಿಗೆ ಮರಳಿದಾಗ ಜೋಗಿಯ ವೇಷವನ್ನು ಧರಿಸಿ ಕಿನ್ನರಿಯನ್ನು ಹಿಡಿದು, ಕಾಲಿಗೆ ಗೆಜ್ಜೆಕಟ್ಟಿ ಕುಂತಿದೇವಿಯ ಅರಮನೆಯ ಮುಂದೆ ನರ್ತಿಸುತ್ತ ಬಂದ ಕಥೆ 'ಅರ್ಜುನಜೋಗಿಯ' ಅರಮನೆಯ ಮುಂದೆ ನರ್ತಿಸುತ್ತ ಬಂದ ಕತೆ 'ಅರ್ಜುನಜೋಗಿಯ' ಹಾಡಿನಲ್ಲಿ ಬರುತ್ತದೆ. ಇದು ಅವರ ಜೀವನ ವೃತ್ತಿಮಾರ್ಗ ಮತ್ತು ಕಲೆಯ ಹಿನ್ನೆಲೆಯನ್ನು ತಿಳಿಸುತ್ತದೆ.

ಉದ್ದನೆಯ ಗಳುವಿಗೆ ಮಾಗಿ ಬುರುಡೆಗಳನ್ನು ಅಳವಡಿಸಿ ಮಾಡಿಕೊಂಡ ತಂತೀವಾದ್ಯ ಕಿನ್ನರಿ ಒಂದು ಕಡೆಯಲ್ಲಿ ಮೂಗ ಅಥವಾ ಸೂಲಂಗಿ ಮರದಿಂದ ಮಾಡಿದ ಗಿಣಿಯಿಂದ ಕೂಡಿದ ಮೂರು ಮೊಳ ಉದ್ದದ ಗಳುವಿನ ನಡುವಿನ ಹತ್ತು ಅಥವಾ ಹನ್ನೆರು 'ಸಾರಿ'ಗಳನ್ನು ಜೇನುಮೇಣದಿಂದ ಒಂದರ ಪಕ್ಕದಲ್ಲೊಂದರಂತೆ ಜೋಡಿಸಲಾಗುವುದು. ಜೇನುಮೇಣವನ್ನು ಕರಗಿಸಿ ಇವುಗಳನ್ನು ಗಟ್ಟಿಯಾಗಿ ಕೂರಿಸಲಾಗುವುದು. ಮುಳ್ಳು ಹಂದಿಯಂಥ ಒಂದು ಜಾತಿಯ ಪ್ರಾಣಿಯ ಬೆನ್ನ ಮೇಲಿನ ಚಕ್ಕೆಗಳೇ ಈ ಸಾರಿಗಳು. ಇವುಗಳ ಮೇಲೆ ಒಂದು ತಂತಿ ಹಾದುಹೋಗಿರುತ್ತದೆ. ಸ್ವಲ್ಪ ಉದ್ದವಾದ ಕಬ್ಬಿಣದ ಮೊಳೆಯೊಂದರ ಮೇಲೆ ಇನ್ನೊಂದು ತಂತಿ ಹಾದುಹೋಗಿರುತ್ತದೆ. ಗಳುವಿನ ಇನ್ನೊಂದು ಭಾಗಕ್ಕೆ ಮೂರು ಮಾಗಿಯ ಬುರಡೆಗಳನ್ನು ನಾಲ್ಕು 'ಉನುಲು'ಗಳನ್ನು ಮಾಡಿ ದಾರದಿಂದ ಕಟ್ಟಿ ಆದರ ಮೇಲೂ ಜೇನು ಮೇಣವನ್ನು ಮೆತ್ತಲಾಗುವುದು. ಮೂರು ಬುರುಡೆಗಳಲ್ಲಿ ಮಧ್ಯದ ಬುರುಡೆ ಮಾತ್ರ ಮೇಣಕ್ಕೆ ಅಂಟಿರುತ್ತದೆ- ಜೋಗಿಗಳ ಕಾವಿಬಟ್ಟೆ, ಕಲ್ಗಿ, ತುರಾಯಿ, ಮಣಿಗಳ ಮುಂಡಾಸಿನ ಕಾಸೆಗಳನ್ನು ಪಡೆದು, ಹಣೆಗೆ ವಿಭೂತಿ, ಗಂಧ ಎರಡನ್ನೂ ಧರಿಸುತ್ತಾರೆ. ಕೊರಳಿಗೆ ಮಣಿ, ರುದ್ರಾಕ್ಷಿಯ ಸರಗಳೆರಡನ್ನೂ ಹಾಕುತ್ತಾರೆ. ತರತರದ ಬಟ್ಟೆಗಳನ್ನು ನಿಲುವಂಗಿಯ ಮೇಲೆ ಎರಡು ಭುಜಗಳಲ್ಲೂ ಇಳಿಬಿಡುತ್ತಾರೆ. ಮಾಗಿಯ ಬುರುಡೆಯ ಅಕ್ಷಯ ಪಾತ್ರೆಯನ್ನು ಹಿಡಿದು ಭಿಕ್ಷೆಗೆ ಹೊರಡುತ್ತಾರೆ. ಜೋಗಿಗಳು ದೊಂಬಿದಾಸರಂತೆ ಅನೇಕ ದಿನಗಳವರೆಗೆ ಊರುಬಿಟ್ಟು ಹೋಗುತ್ತಾರೆ. ಬಹುಮಟ್ಟಿಗೆ ಗುಂಪುಗಳಲ್ಲಿಯೇ ಹೋಗುತ್ತಾರೆ."[೨]

ಅರ್ಜುನ ಜೋಗಿಗಳನ್ನು ಹಾರವರ ಕೂಡ ಜಾತಿಯನ್ನು ಲೇಕ್ಕಿಸದೆ ಅವನ್ನು ಅವರ ಮನೆಯ ಜಗಲಿಯ ಕಟ್ಟೆಯ ಮೇಲೆ ಕುರಿಸಿಕೊಂಡು ಹಾಡುನೊಂದಿಗೆ ಕಿನ್ನರಿಯ ನಾದ ಕೇಳಿದರೆ ಬಂದ ಚಳಿ-ಜ್ವರವು ಹೋಗುತ್ತದೆ ಎಂಬ ನೀಲುವು ಕಿನ್ನರಿಜೋಗಿ ಸಮಾಜದ ಮಾನಸಿಕ ಮತ್ತು ದೈಹಿಕ ರೋಗಗಳಿಗೆ ಅವರ ಹಾಡುವ ಕಾವ್ಯ ಕಲೆಯಲ್ಲಿ ಚಿಕಿತ್ಸಕ ಚತುರತೆಯನ್ನು ಕಾಣಬಹುದು.

೩.೪.೪. ದೊಂಬಿದಾಸರ ಹಾಡುವ ವಿಧಾನಗಳು

ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುವ ವೃತ್ತಿಗಾಯಕ ಪರಂಪರೆಗೆ ಸೇರಿದ ದೊಂಬಿದಾಸ ಸಮುದಾಯದವರು ಕಥೋಪಜೀವಿಗಳಾಗಿದ್ದು, ಪೌರಾಣಿಕ, ಚಾರಿತ್ರಿಕ ಹಾಗೂ ಸಾಮಾಜಿಕ ಕಥಾವಿಷಯಗಳನ್ನಾಧರಿಸಿದ ಲಾವಣಿ, ಕಾವ್ಯಗಳನ್ನು ಏಕತಾರಿಯನ್ನು ಹಿಡಿದುಕೊಂಡು ತತ್ವಪದಗಳನ್ನು

ಹಾಡಿಕೊಂಡು ಹಗಲು ಸಮಯದಲ್ಲಿ ಬೀಕ್ಷಾಟನೆ ಮಾಡುವ ಇವರು ರಾತ್ರಿ ಸಮಯದಲ್ಲಿ ಬಯಲಾಟಗಳನ್ನು ಆಡುವುದರಲ್ಲಿ ನಿಪುಣತೆಯನ್ನು ಪಡೆದುಕೊಂಡಿದ್ದಾರೆ. ರಾಜಸತ್ಯವ್ರತ, ಶನಿಮಹಾತ್ಮೆ, ಸತ್ಯಹರಿಶ್ಚಂದರ, ಕರಿಭಂಟನ ಕಾಳಗ, ಗಜಗೌರಿ ವ್ರತ, ಶ್ರೀಕೃಷ್ಣ ಪರಿಜಾತ, ಗಿರಿಜಾಕಲ್ಯಾಣ, ಶಶಿರೇಖಾ ಭರಣಿ ಮುಂತಾದ ಕಥಾವಸ್ತುಗಳನ್ನಾಧರಿಸಿದ ಬಯಲಾಟಗಳನ್ನು ಆಡಿ ಜೀವಿಸುವ ಇವರು ಬಯಲಾಟಗಳನ್ನಾಡುವ ರಾತ್ರಿ ಸಂದರ್ಭದಲ್ಲಿ ದೊಂಬಿ ಏಳುತ್ತಿದ್ದರಿಂದ ಜನ ಇವರನ್ನು ದೊಂಬಿದಾಸರೆಂದು ಕರೆಯುತ್ತಾರೆ. ಅಲ್ಲದೇ ಇವರ ನಾಟಕಗಳಿಂದ ಸಂತೃಪ್ತರಾಗದೆ ದಾಸರಾಟ ಆಟವಲ್ಲ ದೊಸೆ ಊಟ ಊಟವಲ್ಲ ಎಂದು ಗಾದೆಯಿಂದ ಗುರುತಿಸುತ್ತಾರೆ. ಅಲ್ಲದೆ ಇವರ ವೇಷದ ಹಿನ್ನೆಲೆಯಲ್ಲಿ ಹೆಣ್ಣುವೇಷದವರೆಂದು ಕರೆಯುತ್ತಾರೆ. 'ದಾಸರು ಕಥೆ ಹೇಳಿ ಹೊಟ್ಟೆ ತುಂಬಿಸಿಕೊಳ್ಳುವ ಹಾಡನ್ನು ಹೇಳಿ ಭೀಕ್ಷೆ ಬೇಡುವ ದಲಿತವರ್ಗಕ್ಕೆ ಸೇರಿದವರು ಹರಿದಾಸರಲ್ಲ. ಇವರು ದೊಂಬೆದಾಸರು' ಎಂದು ಬಿ.ಬಿ. ಮಹೀಶವಾಡಿ ಅವರು ತಿಳಿಸಿರುವುದು ಸೂಕ್ತವೆನ್ನಿಸುತ್ತದೆ.

ದೊಂಬಿದಾಸ ಎಂಬ ಹೆಸರಲ್ಲಿ ದಾಸ ಎಂಬ ಹೆಸರು ಹೇಳುವಂತೆ ಇವರು ವೈಷ್ಣವರಾಧಕರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೇವಲ ವೈಷ್ಣವ ಮತ ಪ್ರಸಾರಕ್ಕಾಗಿ ಮೀಸಲಾಗದೆ ಶೈವ ಮತ ಸಂಬಂಧಪಟ್ಟಂತೆ ಕೆಲ ಕಥನಗಳನ್ನು ಹಾಡುತ್ತಾರೆ. ಈ ಸಮುದಾಯದಲ್ಲಿ ಕೆಲವರು 'ವೈಷ್ಣವ ದಾಸ' ಧೀಕ್ಷೆ ಪಡೆದು ಶಂಖ, ಜಾಗಟೆ, ಗರಡುಗಂಭ, ಭವನಾಶಿ ಹಿಡಿದು ಜೋಳಿಗೆ ಹಾಕಿಕೊಂಡು ದೇವರು ದೈವದ ಹೆಸರಿನಲ್ಲಿ ಬೀಕ್ಷೆ ಬೇಡುವ ವರ್ಗವು ಇವರಲ್ಲಿದೆ. ಸಂಸ್ಕೃತಿಯ ಪ್ರಚಾಕರಾದ ಇವರು ಮೇಲಿನ ಸಂದರ್ಭಗಳಲ್ಲಿ ತಮ್ಮ ಸಾಹಿತ್ಯವನ್ನು ಪ್ರಚುರಪಡಿಸುತ್ತಾ ಇತರ ಜನಸಮುದಾಯಗಳಿಂದ ಮೆಚ್ಚುಗೆ ಪಡೆದುಕೊಂಡು ಜೀವಿಸುತ್ತಿದ್ದಾರೆ.

ಹೀಗೆ ಅಲೆಮಾರಿ ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ ಮತ್ತು ದೊಂಬಿದಾಸ ಸಮುದಾಯಗಳು ವೃತ್ತಿ ಪರಂಪರೆಯಲ್ಲಿ ವೃತ್ತಿಗಾಯಕ, ಕಲಾವಿದರಾಗಿ ತಮ್ಮದೇ ಆದಂತಹ ಸಾಹಿತ್ಯವನ್ನು ಕಟ್ಟಿಕೊಂಡು ಬದುಕಿನ ಹಿನ್ನೆಲೆಯಲ್ಲಿ ಒಂದೇಯಾದರೂ ಅವುಗಳು ಹಾಡುವ ಸಂದರ್ಭ, ವಿಧಾನಗಳಲ್ಲಿ ಭಿನ್ನತೆಯನ್ನು ಕಾಣುವುದು ಅವರ ಬದುಕಿನ ಸಂದರ್ಭ ಮತ್ತು ಮುಖವಾಡಗಳ ಮತ್ತೊಂದು ರೂಪಗಳಾಗಿ ಇಟ್ಟ ಹೆಜ್ಜೆ ತೊಟ್ಟ ರೂಪಗಳಾಗಿ ಇವರು ಇತರೆ ಸಮುದಾಯಗಳ ಜೊತೆಗೆ ತಮ್ಮನ್ನು ಗುರುತಿಸಿಕೊಂಡು ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ.

ಕೊನೆ ಟಿಪ್ಪಣಿ

೧. ತಿಪ್ಪೆರುದ್ರಸ್ವಾಮಿ ಹೆಚ್., ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, ೧೯೬೮, ಪು.೫೫.

೨. ಪರಮಶಿವಯ್ಯ ಜೀ.ಶಂ., ದಕ್ಷಿಣ ಕರ್ನಾಟದ ಜನಪದ ಕಾವ್ಯಪ್ರಕಾರಗಳು, ೨೦೧೫, ಪು.೩೨.

೩. ಅದೇ, ೨೦೧೫, ಪು.೩೪.

೪. ಭಗವತ್ ಶರಣ ಉಪಾಧ್ಯಾಯ. ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ. ೨೦೧೪. ಪು.೭೩.

೫. ಪ್ರಭಾಕರ ಎ.ಎಸ್., ಆದಿವಾಸಿ ಅಖ್ಯಾನ, ೨೦೦೬, ಪು.೪೦೫.

೬. ಸೋಮಶೇಖರ ಇಮ್ರಾಪುರ (ಸಂ), ನಿಂಗಣ್ಣ ಸಣ್ಣಕ್ಕಿಯವರ ಲೇಖನ, ೧೯೯೩, ಪು.೨೬೩.

೭. ಮುದ್ದೇನೂರು ಸಂಗಣ್ಣ, ಗೊಂದಲಿಗರ ದೇವೇಂದ್ರಪ್ಪನ ಆಟಗಳು, ೨೦೦೮, ಪು.೬೮.

೮. ನಿಂಗಣ್ಣ ಸಣ್ಣಕ್ಕಿ, ಗೊಂದಲಿಗರ ಸಂಸ್ಕೃತಿ, ೧೯೯೩, ಪು. ೧೮೫.

೯. ಪರಮಶಿವಯ್ಯ ಜೀ.ಶಂ, ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು, ೨೦೧೫, ಪು.೩೫೦.

೧೦. ಅದೇ, ೨೦೧೫, ಪು.೩೫೦.

೧೧. ಅದೇ, ೨೦೧೫, ಪು.೩೫೧.

೧೨. ಅದೇ, ೨೦೧೫, ಪು.೩೫೧-೩೫೨.

ಅಧ್ಯಾಯ : ನಾಲ್ಕು

ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ

ಅಧ್ಯಾಯ ನಾಲ್ಕು
ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ

ಪೀಠಿಕೆ

ಜನ ಸಮುದಾಯಗಳು ಅನಾದಿ ಕಾಲದಿಂದಲೂ ತಮ್ಮ ಬದುಕಿನ ಸಂವೇದನೆಯ ಜೊತೆಗೆ ಬೆರೆತುಕೊಂಡು ಬಂದಿರುವ ರೀತಿ ನೀತಿ ಕ್ರಮ ಇತ್ಯಾದಿಗಳ ಹಿನ್ನೆಲೆಯಲ್ಲಿ ಮೌಖಿಕ ಸಾಹಿತ್ಯ ಹುಟ್ಟಿಕೊಂಡು ಬೆಳೆದುಬಂದಿದೆ. ಆದರೆ ಆ ಕಾಲಕ್ಕೆ ಅದರ ಸ್ವರೂಪ ಯಾವ ರೀತಿ ಇತ್ತು ಎಂದು ಖಚಿತವಾಗಿ ಗ್ರಹಿಸಲು ಸಾಧ್ಯವಿಲ್ಲ. ಯಾವ ಕಾಲಕ್ಕೂ ಅದು ಶಿಷ್ಟ ಸ್ವರೂಪವನ್ನು ಪಡೆಯದೆ ಮೌಖಿಕವಾಗಿ ಜನಸಮುದಾಯಗಳ ಸ್ಮೃತಿಪಟಲದೊಳಗಡೆಯೇ ಉಳಿದುಕೊಂಡು ಬಂದಿದೆ. ಹೀಗಾಗಿ ಕಾಲಕಾಲಕ್ಕೆ ಅದರ ಸ್ವರೂಪ ಮಾರ್ಪಾಡಾಗಿರಬಹುದು. ಆದರೆ ಸಮುದಾಯಗಳ ಬದುಕಿನ ಒಂದು ಭಾಗವಾಗಿ ಉಳಿದುಕೊಂಡು ಬಂದಿದೆ. ಅಲ್ಲದೇ ಇಂದಿನ ಶಿಷ್ಟ ಸಾಹಿತ್ಯದಂತೆ ಪ್ರಕಾರಗಳ ವಿವೇಚನೆಯನ್ನು ಅರಿಯದ ಸಮುದಾಯಗಳು ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ಪ್ರಜ್ಞೆಯನ್ನೊಳಗೊಂಡಿರುವ ಮೌಖಿಕ ಜ್ಞಾನ ಪರಂಪರೆ ಹೊಂದಿರುವುದನ್ನು ಕಾಣಬಹುದು. ಈ ಮೇಲಿನ ನಿಲುವುಗಳನ್ನು ಅವರ ಬದುಕಿನ ಒಂದು ಭಾಗವಾಗಿ ಕಲೆ ಸಾಹಿತ್ಯವೇ ಅವರ ಬದುಕೆಂಬಂತೆ ಬದುಕಿದ, ಬದುಕುತ್ತಿರುವ ಅಲೆಮಾರಿ ಸಮುದಾಯಗಳ ಮೌಖಿಕ ಸಾಹಿತ್ಯದ ಅಂತಾರ್ಯದಲ್ಲಿ ಕಾಣಬಹುದಾಗಿದೆ.

ನಮ್ಮ ಸಮುದಾಯಗಳಲ್ಲಿ ಪುರಾಣ, ಪುಣ್ಯ ಕಥೆಗಳ ಮೇಲೆ ಪ್ರಾಚೀನ ಕಾಲದಿಂದಲೂ ಆಳವಾದ ಪ್ರಜ್ಞೆ ಮತ್ತು ನಂಬಿಕೆ ಇದೆ. ಪುರಾಣ ಪ್ರಜ್ಞೆಯು ಸಮುದಾಯಗಳನ್ನು ನಿಜಕ್ಕೂ ಕಾಡಿದಂತೆ ಭಾರತೀಯ ಪರಂಪರೆಯಲ್ಲಿ ಬೇರಾವುದು ಕಾಡಿಲ್ಲವೆನ್ನಬಹುದು. ಅವು ನಮ್ಮ ಪರಂಪರೆ ಹುಟ್ಟಿದ ಪರಿಸರಗಳ ಸಂವೇದಿತನದ ಹಿನ್ನೆಲೆಯಲ್ಲಿ ನಿರ್ಮಿತವಾಗಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಪೌರಾಣಿಕ ಅಥವಾ ಪುರಾಣ ಪ್ರಜ್ಞೆಯ ಮೌಖಿಕ ಸಾಹಿತ್ಯ ಇಂದಿನ ನಮ್ಮ ಸಾಂಸ್ಕೃತಿಕ ಚರ್ಚೆ ಮತ್ತು ಸಂಘರ್ಷವೂ ಆಗಿದೆ. ಪುರಾಣದ ವಸ್ತುವನ್ನು ಒಳಗೊಂಡಿರುವ ಕಥನಗಳಲ್ಲಿ ಬರುವ ಸಂಗತಿಗಳು ಜೀವನದಲ್ಲಿ ನೈಜವಾಗಿ ಆಗಿ ಹೋದ ಘಟನೆಗಳೇ ಎಂಬಂತಹ ಬಲವಾದ ನಂಬಿಕೆಗಳ ಅಪ್ಪತೆ ಜನರಲ್ಲಿದೆ. ಈ

ಹಿನ್ನೆಲೆಯಲ್ಲಿ ಪುರಾಣಗಳು ನಮ್ಮ ಭಾರತೀಯ ಪರಂಪರೆಯಲ್ಲಿ ಮಾತ್ರವಲ್ಲ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಅವರ ಸಾಂಸ್ಕೃತಿಕ ಪ್ರಜ್ಞೆಯಾಗಿ ಸಂಸ್ಕೃತಿಯೊಂದರ ತಳದಿಯಾಗಿವೆ. ಪುರಾಣಗಳಿಗೆ ಸಂಬಂಧಿಸಿದ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಮೌಖಿಕ ಪರಂಪರೆ ಜೀವ ನೀಡಿ ಪ್ರತಿಕ್ರಿಯಿಸಿವೆ ಎಂಬುದಕ್ಕೆ ಅಲೆಮಾರಿ ಸಮುದಾಯಗಳಾದ ಬುಡ್ಗಜಂಗಮ, ದೊಂಬಿದಾಸ, ಗೊಂದಲಿಗ, ಅರ್ಜುನಜೋಗಿ ಸಮುದಾಯಗಳ ಬದುಕಿನ ಅವಿಭಾಜ್ಯ ಅಂಗವಾದ ಅವರ ಮೌಖಿಕ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ ಅತಿಯಾಗಿ ಕಾಡಿದಂತೆ ತೋರುತ್ತದೆ. ಇಂತಹ ಪುರಾಣಗಳ ವಸ್ತುವನ್ನೊಳಗೊಂಡಿರುವ ಮೌಖಿಕ ಸಾಹಿತ್ಯ ಸಾಮಾನ್ಯವಾಗಿ ಒಂದೇ ಕಥಾವಸ್ತುವನ್ನೇ ಕುರಿತು ಇರುತ್ತದೆ. ಜೊತೆಗೆ ಅದು ಅತಿಮಾನಷು ನಿರ್ಮಿತ ಸಂಕಲ್ಪದ ವೀರ ಪರಂಪರೆಯನ್ನು ಪ್ರತಿಪಾದಿಸುವ ಪ್ರಜ್ಞೆಯನ್ನು ಒಳಗೊಂಡಿರುತ್ತದೆ. ಈ ನೆಲೆಯಲ್ಲಿ ಸಮುದಾಯಗಳ ಬದುಕಿನಲ್ಲಿ ಅವರಿಗೆ ಕಾಣದ ರೀತಿಯಲ್ಲಿ ಅದು ಚೈತನ್ಯ ಶಕ್ತಿಯಾಗಿರುತ್ತದೆ. ಸಮುದಾಯಗಳ ಮೂಲ ಸಂಸ್ಕೃತಿಯನ್ನು ಶೋಧಿಸಿ ಹೊಸದಾದ ಸಾಂಸ್ಕೃತಿಕ ಲೋಕವನ್ನು ನಿರ್ಮಿಸುವ ಪ್ರಜ್ಞೆಯನ್ನು ಬೆಳೆಸುವ ಲೋಕದೃಷ್ಟಿ ಪುರಾಣಗಳಲ್ಲಿ ಚಿರಂತನವಾದದ್ದು. ಈ ಲೋಕದೃಷ್ಟಿಯಲ್ಲಿ ಜನಾಂಗವೊಂದು ಇಟ್ಟುಕೊಂಡಿರುವ ಸಂಸ್ಕೃತಿಯ ಪರಂಪರೆಯನ್ನು ಅವರ ಮೌಖಿಕ ಸಾಹಿತ್ಯದಲ್ಲಿ ಕಾಣಬಹುದು. ಜೊತೆಗೆ ಸಮುದಾಯಗಳು ಬದುಕಿನ ಅಸ್ಮಿತೆ ಬಗೆಗೆ ತೋರಿರುವ ಪ್ರತಿಕ್ರಿಯೆಗಳ ಪ್ರತಿರೂಪವಾಗಿ ಪುರಾಣದ ಕಥನಗಳು ಅವರನ್ನು ಪ್ರತಿಭಾವಿಸುತ್ತವೆ.

ಪುರಾಣದ ವಸ್ತು ಕಥೆಗಳು ಆರಂಭದಿಂದ ಅಂತ್ಯದವರೆಗೂ ತುಂಬಾ ಗಾಂಭಿರ್ಯದಿಂದ ಕೂಡಿರುತ್ತವೆಂದು ಜನಪದರು ಪರಿಭಾವಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಕಟ್ಟಿಕೊಂಡು ಬಂದ ಪೌರಾಣಿಕ ಅಥವಾ ಪುರಾಣದ ಮೌಖಿಕ ಸಾಹಿತ್ಯ ಮುಖ್ಯವಾದ ಉದ್ದೇಶಗಳನ್ನು ಸಾಧಿಸುತ್ತದೆ. ಪ್ರಪಂಚದ ಪ್ರತಿಯೊಂದು ದೇಶದಲ್ಲಿನ ಜನಸಮುದಾಯಗಳು ಭಿನ್ನ ಭಿನ್ನವಾದ ಸಾಂಸ್ಕೃತಿಕ ಜಗತ್ತೊಂದನ್ನು ನಿರ್ಮಿಸಿಕೊಂಡಿರುತ್ತಾರೆ. ಇದಕ್ಕೆ ಸಾಕ್ಷಿ ಎಂಬಂತೆ ವಿಶ್ವ, ಜನಾಂಗ, ಸೃಷ್ಟಿ ಲಯಗಳನ್ನು ಪುರಾಣಗಳು ನಿರೂಪಿಸುತ್ತವೆಂಬುದಕ್ಕೆ ಬುಡ್ಗಜಂಗಮ, ದೊಂಬಿದಾಸ, ಜೋಗಿ ಮತ್ತು ಗೊಂದಲಿಗ ಸಮುದಾಯಗಳು ಸೃಷ್ಟಿಸಿಕೊಂಡಿರುವ ಸೃಷ್ಟಿಪುರಾಣಗಳಲ್ಲಿ ಕಾಣಬಹುದು. ಜಗತ್ತಿನಲ್ಲಿ ಪರರ ಉಪಕಾರ, ಸಹಕಾರದ ಬದುಕಿನಿಂದ ಕೂಡಿರುವ ಸಾಮಾಜಿಕ ಸಂರಚನೆಯ ದೃಷ್ಟಿಯನ್ನು ನಿರೂಪಿಸುತ್ತವೆ. ಈ ಅಲೆಮಾರಿ ಸಮುದಾಯಗಳು ಸೃಷ್ಟಿಸಿಕೊಂಡಿರುವ ಪುರಾಣಗಳ ಪಾತ್ರಗಳು, ಕಥಾ ನಾಯಕರುಗಳ ವಿವೇಕ ಮತ್ತು ಆದರ್ಶಗಳನ್ನು ತಮ್ಮ ನಿಜ ಬದುಕಿನಲ್ಲಿ ಅನುಸಂಧಾನಿಸುತ್ತವೆಯೇನೋ ಎಂಬಂತೆ ಕಂಡುಬರುತ್ತವೆ.

ಪುರಾಣವನ್ನು ಕಥಾವಸ್ತುಗಳನ್ನಾಗಿ ಮಾಡಿಕೊಂಡಿರುವ ಮೌಖಿಕ ಕಾವ್ಯಗಳು, ಹುಟ್ಟು-ಸಾವು, ಪುರ್ನಜನ್ಮ, ಸ್ವರ್ಗ-ನರಕ, ಅಮರತ್ವಗಳನ್ನು ಮುಖ್ಯವಾಗಿ ಧ್ವನಿಸುತ್ತವೆ. ಇವು ಸಂಘರ್ಷಗಳು ಉತ್ತಮ ನೈತಿಕ ಗುಣಗಳ ಸ್ವೀಕಾರ ಮತ್ತು ಪುರಸ್ಕಾರ, ಅನೈತಿಕ ದುರ್ಗುಣಗಳ ತಿರಸ್ಕಾರ ಈ ಹಿನ್ನೆಲೆಯಲ್ಲಿ

ಕಥೆಯ ನಾಯಕ ನೈತಿಕತೆಯ ಪ್ರತೀಕವಾಗಿ ಚಿತ್ರಿತನಾಗಿರುತ್ತಾನೆ. ಇದು ಪುರಾಣಗಳ ಮೂಲಭೂತ ಅಂಶಗಳಲ್ಲಿ ಒಂದಾಗಿರುತ್ತದೆ ಎಂಬುದನ್ನು ನಾವು ಅಲೆಮಾರಿ ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ಅರ್ಜುನ ಜೋಗಿ ಮತ್ತು ದೊಂಬಿದಾಸರ ಮೌಖಿಕ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

೪.೧. ಸೃಷ್ಟಿ ಪುರಾಣ

ಭೂಮಿಯ ಮೇಲೆ ಮಾನವನ ಉಗಮದ ಚರಿತ್ರೆಯನ್ನು ಖಚಿತವಾಗಿ ಕಾಲಬದ್ಧವಾಗಿ ಸಾಕ್ಷ್ಯಾಧಾರಗಳ ಸಮೇತ ವೈಜ್ಞಾನಿಕವಾಗಿ ನಿರೂಪಿಸುವುದು ಬಹಳ ಪರಿಶ್ರಮದ ಕೆಲಸವಾಗಿದೆ. ಇದುವರೆಗೂ ಮಾನವನ ಉಗಮ, ವಿಕಾಸದ ಬಗ್ಗೆ ನಡೆದ ಎಲ್ಲಾ ವೈಜ್ಞಾನಿಕ ಸಿದ್ಧಾಂತಗಳು ಒಂದನೊಂದು ತಿರಸ್ಕರಿಸುವ ಮತ್ತು ತನ್ನದೇ ಆದ ನೆಲೆಗಟ್ಟಿನೊಳಗೆ ಸಿದ್ಧಾಂತ ಪ್ರತಿಪಾದಿಸಿ ಗೊಂದಲಗಳನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದು. ಇನ್ನು ಭಾರತೀಯ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಮಾಜದ ಬೆಳವಣಿಗೆಯ ಪರಿಕಲ್ಪನೆ ಅಥವಾ ಮಾನವನ ಚರಿತ್ರೆಯ ಬೆಳವಣಿಗೆಯ ಪರಿಕಲ್ಪನೆಗಳು ವ್ಯವಸ್ಥೆ ರೂಪಿಸಿದ ಮತೀಯ ಸಿದ್ಧಾಂತಗಳಾಗಿವೆ ಮತ್ತು ಶಿಷ್ಟ ಮಾದರಿಯ ದೃಷ್ಟಿಕೋನಗಳು ಒಂದು ನಿಲುವನ್ನು ಪ್ರತಿಪಾದಿಸಿದರೆ ಅವ್ಯಕ್ತ ಶಿಷ್ಟ ಮಾದರಿಗಳು ತಮ್ಮ ಮೌಖಿಕ ಪರಂಪರೆಗಳ ನೆಲೆಗಳಲ್ಲಿ ಮಾನವ ಸಮಾಜದ ಬೆಳವಣಿಗೆಯನ್ನು ಬೇರೊಂದು ನೆಲೆಗಳಲ್ಲಿ ಕಥನಗಳ ಮೂಲಕ ಕಟ್ಟಿಕೊಂಡು ಬಂದಿರುವುದನ್ನು ಕಾಣಬಹುದು. ಹೀಗಾಗಿ ಮಾನವ ಸಮುದಾಯ ಹೇಗೆ ಸೃಷ್ಟಿಯಾಯಿತು, ವಿಶ್ವದ ಸೃಷ್ಟಿ ಹೇಗಾಯಿತು, ಯಾರಿಂದ ಸೃಷ್ಟಿಯಾಯಿತು ಎಂಬ ಪ್ರಶ್ನೆಗಳಿಗೆ ನಮಗೆ ಮೂಲಭೂತವಾಗಿ ಉತ್ತರ ದೊರೆಯುವುದು ಜನ ಸಮುದಾಯಗಳಿಂದ ನಿರ್ಮಿತವಾದ ಸೃಷ್ಟಿ ಪುರಾಣಗಳಿಂದ ಎಂಬುದು ಬಹುದೊಡ್ಡ ತಾತ್ವಿಕ ವಿಚಾರವಾಗಿದೆ.

"ಸಮುದಾಯಗಳ ಸಾಮಾಜಿಕ ಚರಿತ್ರೆಯನ್ನು ಬರೆಯುವಾಗ ಸಾಮಾನ್ಯವಾಗಿ ಸಾಮಾಜಿಕ ಮಾನವಶಾಸ್ತ್ರಜ್ಞರು ಅಭಿಜಾತ ದಾಖಲೆಗಳನ್ನು ಹುಡುಕಿಕೊಂಡು ಹೋಗುವುದು ಸಾಮಾನ್ಯ. ಈ ಅಬಿಜಾತ ದಾಖಲೆಗಳೆಂದರೆ ಮಹಾಕಾವ್ಯಗಳು, ಶಾಸನಗಳು ಮತ್ತು ಶಿಷ್ಟ ಪುರಾಣದಲ್ಲಿನ ಉಲ್ಲೆಖನಗಳು."[೧] ಕೇವಲ ಸಿದ್ಧಮಾದರಿಗಳನ್ನು ಸಂಗ್ರಹಿಸಿ ಸಮುದಾಯದ ಪರಂಪರೆಯನ್ನು ಹುಡುಕುವುದು ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ಅಧ್ಯಯನಗಳ ವಿವೇಚನೆಯ ದೃಷ್ಟಿಯ ಹಿನ್ನೆಲೆಯಲ್ಲಿ ಮೇಲಿನ ಗ್ರಹಿಕೆಯನ್ನು ಒಪ್ಪಿಕೊಳ್ಳಬಹುದಾಗಿದೆ. ಹೀಗಾಗಿ ಆಯಾ ಸಮುದಾಯಗಳೇ ಸೃಷ್ಟಿಸಿಕೊಂಡ ಬಂದಿರುವ ಸೃಷ್ಟಿಪುರಾಣಗಳು ಸಮುದಾಯದ ಚರಿತ್ರೆಯ ಅನನ್ಯತೆಯನ್ನು ಪ್ರತಿಪಾದಿಸುತ್ತವೆ ಎಂಬುದನ್ನು ತಿಳಿಯಬಹುದು.

ಪುರಾಣಗಳು ಜಗತ್ತಿನ ಎಲ್ಲ ಜನ ಸಮುದಾಯಗಳ ಪಾರಂಪರಿಕವಾದ ಮೌಖಿಕ ಪ್ರಜ್ಞೆಯಲ್ಲಿ ಕಂಡುಬರುತ್ತವೆ. ಇವು ಕಾಲ, ದೇಶ, ಸ್ಥಳಗಳನ್ನು ಅವಲಂಬಿಸಿಕೊಂಡು ನಂತರ ಧರ್ಮ, ಜಾತಿಗಳ ಲೋಕದೃಷ್ಟಿಯಲ್ಲಿ ಬೇರೆ ಬೇರೆ ರೂಪಗಳನ್ನು ಅಥವಾ ದಂತಕಥೆಗಳನ್ನು ಕಥನಗಳ ರೂಪದಲ್ಲಿಯೋ, ಕಥೆಗಳ ರೂಪದಲ್ಲಿಯೋ ಬಂದಿರುವುದನ್ನು ಕಾಣಬಹುದು. ಹೀಗಾಗಿ ಪ್ರತಿಯೊಂದು ಸಮುದಾಯದಿಂದ

ಸಮುದಾಯಕ್ಕೆ ಮತ್ತು ಪ್ರಾದೇಶಿಕವಾಗಿ ಅವು ಒಂದಕ್ಕಿಂತ ಮತ್ತೊಂದು ಭಿನ್ನವಾಗಿರುತ್ತವೆ. ಪ್ರತಿಯೊಂದು ಜನಸಮುದಾಯ ತನ್ನ ಸಮುದಾಯದ ಮೂಲ ಪುರುಷನ ಸೃಷ್ಟಿ, ಆರಾಧಿಸುವ ದೈವ ಆಚರಿಸುವ ಧರ್ಮ, ನಂಬಿದ ತತ್ವ ಎಲ್ಲಕ್ಕೂ ಸಮರ್ಥನೆ ಮಾಡಿಕೊಳ್ಳಲು ಮತ್ತು ನಂಬಿಕೆ ಹುಟ್ಟಿಸಲು ಅನೇಕ ಪುರಾಣಗಳು ಪ್ರಯತ್ನಿಸುತ್ತವೆ. ಒಂದು ಕಾಲಕ್ಕೆ ಪುರಾಣಗಳೆಂದರೆ ಅದು ಕಟ್ಟುಕಥೆ, ಅದು ವಿಜ್ಞಾನ ಪೂರ್ವಯುಗದ ಪ್ರಾಗೈತಿಹಾಸಿಕ ಕಾಲದ ಅವಿದ್ಯಾವಂತ ಅನಾಗರಿಕ ಜನ ಸಮುದಾಯಗಳ ಕಾಲ್ಪನಿಕ ಸೃಷ್ಟಿ ಎಂಬ ಅಬಿಪ್ರಾಯ ಇತ್ತು. ಆದರೆ ಇಂದು ಪ್ರತಿಯೊಂದು ಸಮುದಾಯದ ಅಧ್ಯಯನ ಮಾಡಬೇಕಾದರೆ ಆ ಸಮುದಾಯಗಳಲ್ಲಿರುವ ಸೃಷ್ಟಿ ಪುರಾಣಗಳ ಅಧ್ಯಯನ ಅತ್ಯಂತ ಅವಶ್ಯಕ ಎಂದು ವಿದ್ವಾಂಸರ ಅಭಿಪ್ರಾಯಪಟ್ಟಿದ್ದಾರೆ."[೨] ಎಂಬಂತೆ ಪ್ರಸ್ತುತ ಅಧ್ಯಯನದಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ಅರ್ಜುನ ಜೋಗಿ ಮತ್ತು ದೊಂಬಿದಾಸ ಸಮುದಾಯಗಳ ಸೃಷ್ಟಿ ಪುರಾಣಗಳನ್ನು ತೌಲನಿಕವಾಗಿ ಈ ಕೆಳಗಿನಂತೆ ಅಧ್ಯಯನಕ್ಕೊಳಪಡಿಸಿ ಕೊಳ್ಳಲಾಗಿದೆ.

೪.೧.೧. ಗೊಂದಲಿಗರ ಸೃಷ್ಟಿ ಪುರಾಣ

ಯಾವುದೇ ಸಮುದಾಯದ ಸೃಷ್ಟಿ ಪುರಾಣಗಳನ್ನು ತೆಗೆದುಕೊಂಡರು ಹಲವಾರು ರೀತಿಯಲ್ಲಿ ದಂತಕಥೆಗಳನ್ನು ಮತ್ತು ಕಾವ್ಯಗಳನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. ಇದೇ ರೀತಿ ಗೊಂದಲಿಗರ ಸೃಷ್ಟಿ ಪುರಾಣದ ಕಥೆಗಳು ಹಲವಾರು ರೀತಿಯಲ್ಲಿ ಇವೆ. ರೇಣುಕಾ ಮಹಾತ್ಮೆ ಕತೆಯಲ್ಲಿ ಬರುವ ಗೊಂದಲದ ಕಥೆ ಈ ರೀತಿ ಇದೆ. "ಸವದತ್ತಿಯ ಎಲ್ಲಮ್ಮ(ರೇಣುಕಾ ದೇವಿ) ದೇವಿಯ ಮಗನಾದ ಪರಶುರಾಮನು ಆ ಪರಿಸದಲ್ಲಿದ್ದ ಬೆಟ್ಟಾಸುರ ಎಂಬ ರಾಕ್ಷಸನನ್ನು ಸಂಹರಿಸಿ ಅವನ ತಲೆಯನ್ನು ಕತ್ತರಿಸಿದ, ಆಗ ಆ ದೈತ್ಯನ ಶಿರದ ಬ್ರಹ್ಮರಂಧ್ರದಿಂದ ತಂತುವೊಂದು ಹೊರಬರುತ್ತದೆ. ಆ ದೈತ್ಯನ ದೇಹವನ್ನೇ ಚೌಡಿಕೆಯನ್ನು ಮಾಡಿ ಆ ತಂತುವನ್ನು ಮಿಡಿದಾಗ ಆದರಿಂದ ತಿಂತೃಣ ಎಂಬ ನಾದ ಹೊರಡುತ್ತದೆ. ಪರಶುರಾಮ ಚೌಡಕಿಯನ್ನು ನುಡಿಸುತ್ತಾ ತಾಯಿಯ ಹತ್ತಿರ ಬಂದು ಅವಳಿಗೆ ನಮಸ್ಕರಿಸುತ್ತಾನೆ. ಪರಶುರಾಮ ಆ ತೃಣ ತೃಣ ನಾದ ಮಾಡುತ್ತ ಉದೋ ಉದೋ ಎಂಬ ನಾದ ಘೋಷ ಮಾಡುತ್ತಾ ಆನಂದಮಯವಾಗಿ ಗೊಂದಲ ರೂಪದಿಂದ ಸ್ತುತಿಸಿದ ವಾಕ್ಯವೇ ಗೋಂಧಳವು ಇಲ್ಲಿಂದಲ್ಲೇ ಗೊಂದಲ ಗೊಂದಲಿಗರು ಹುಟ್ಟಿದರೆಂದು ಸಮರ್ಥ ರಾಮದಾಸರ ಶಿಷ್ಯನಾದ ದಿನಕರ ಸ್ವಾಮಿಯವರ 'ಸ್ವಾನುಭವ ದಿನಕರ' ಎಂಬ ಪುಸ್ತಕದಲ್ಲಿದೆ. ಜಮದಗ್ನಿ ಋಷಿಯ ಪತ್ನಿ ರೇಣುಕಾ ದೇವಿ ನಮ್ಮ ಜಾತಿಯನ್ನು ಸೃಷ್ಟಿಸಿದವರೆಂದು ಹೇಳಿಕೊಳ್ಳುತ್ತಾರೆ."[೩] ಈ ಹಿನ್ನೆಲೆಯಲ್ಲಿ ಗೊಂದಲಿಗರು ತಮ್ಮ ಮನೆದೇವತೆ ಅಥವಾ ಆರಾಧ್ಯ ದೈವವಾಗಿ ಪೂಜಿಸುತ್ತಾ ಗೊಂದಲ ಹಾಕುವ ಕಥನಗಳಲ್ಲಿ ರೇಣುಕಾ ಮಹಾತ್ಮೆ ಎಂಬ ಕಥನವನ್ನು ಭಕ್ತಿ ಪ್ರಧಾನವಾಗಿ ಹಾಡಿ ಗೌರವ ಸೂಚಿಸುವುದರ ಜೊತೆಗೆ ಅಂಬಾಭವಾನಿಯಂತೆ ರೇಣುಕಾ ದೇವಿ(ಯಲ್ಲಮ್ಮ)ಯನ್ನು ಆರಾಧಿಸಿ ಜೊತೆಗೆ ಈ ಕಥನವನ್ನು ಗೊಂದಲದಲ್ಲಿ ಪ್ರಸ್ತುತ ಪಡಿಸುತ್ತಾ ತಾಯಿ ರೇಣುಕೆಯ ಮಹಾತ್ಮೆಯನ್ನು ಸಂವೇದನಿಯುವಾಗಿ

ಹಾಡುತ್ತಾರೆ. ಇದು ಈ ಸಮುದಾಯದ ಸೃಷ್ಟಿಯ ಅಸ್ಮಿತೆಯನ್ನು ತಿಳಿಸುತ್ತದೆ. ಅಲ್ಲದೆ ಅವರ ಆತ್ಮಕಥನದ ರೂಪದಂತೆ ಮೂಡಿಬಂದಿದೆ.

ವಾದ್ಯವೊಂದು ಸಮುದಾಯದ ಗುರುತಿಸುವಿಕೆಯಲ್ಲಿ ಮುಖ್ಯವಾದದ್ದು ಗೊಂದಲಿಗರಲ್ಲಿನ ಉಪ ಜಾತಿಯಾದ ಬುಡಬುಡಕೆಯವರು ಬಳಸುವ ಬುಡಬುಡಕೆ ವಾದ್ಯದ ಹಿನ್ನೆಲೆಯ ಕಥೆಯೊಂದು ಹೀಗಿದೆ. "ಬುಡಬುಡಕೆ ವಾದ್ಯ ಇದು ಶಿವನ ಕೈಯಲ್ಲಿರುವ ಪವಿತ್ರವಾದ ವಾದ್ಯ. ಈ ವಾದ್ಯ ಸೃಷ್ಟಿಯಾಗಲು ಶ್ರೀ ಕೃಷ್ಣನೇ ಕಾರಣ. ಒಂದು ಕಾಲದಲ್ಲಿ ತಾರಕಾಸುರ ಮಕಾಸುರ ಮತ್ತು ಯುದ್ಧಮಾರಿ ಎಂಬ ರಾಕ್ಷಸರು ದೇವಾನು ದೇವತೆಗಳಿಗೆ, ಋಷಿಗಳಿಗೆ ಮತ್ತು ಮಾನವರಿಗೆ ಅನೇಕ ತೊಂದರೆಗಳನ್ನು ಕೊಡುತ್ತಿದ್ದರು. ಆ ಮೂರು ಜನ ರಾಕ್ಷಸರನ್ನು ಕೊಲ್ಲುವ ಸಲುವಾಗಿ ಆ ಕೃಷ್ಣ ಪರಮಾತ್ಮನೆ ನೀನೇ ಬಂದು ಉಪಾಯ ಹೂಡಬೇಕೆಂದು ದೇವತೆಗಳು ಕೇಳಿಕೊಳ್ಳುತ್ತಾರೆ. ಆಗ ಕೃಷ್ಣನು ಆ ರಾಕ್ಷಸರನ್ನು ಸಂಹರಿಸುವುದಕ್ಕಾಗಿ ಮೊದಲು ಶಿವನ ಕೈಯಲ್ಲಿರುವ ಢಮರುಗವನ್ನು ಸಣ್ಣ ವಾದ್ಯವಾಗಿ ರಮ್ಯವಾದ ನಿನಾದವು ಹೊರಡುವಂತೆ ಮಾಡಬೇಕಾಗಿತ್ತಂತೆ ಆ ರಮ್ಯ ನಿನಾದ ಬುಡುಬುಡು ಎಂಬುದಾಗಿ ಶಬ್ದ ಹೊರಹೊಮ್ಮಿದ ಈ ವಾದ್ಯಕ್ಕೆ ಬುಡಬುಡಕೆ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ. ಈ ನಾದದಿಂದಲೇ ನಾವು ಮನುಷ್ಯ ಜೀವನದಲ್ಲಿಯ ಆಗುಹೋಗುಗಳನ್ನು ಅರಿತುಕೊಂಡು ಭವಿಷ್ಯ ಹೇಳುತ್ತೇವೆಂದು ಕಥೆ ಹೇಳುತ್ತಾರೆ."[೪] ಗೊಂದಲಿಗ ಸಮುದಾಯದ ಉಪಜಾತಿಯಾದ ಬುಡಬುಡಕೆ ಸಮುದಾಯ ಬುಡಬುಡಕೆ ಎಂಬ ವಾದ್ಯ ವಿಶೇಷದೊಂದಿಗೆ ತಮ್ಮ ಜಾತಿಯ ಹೆಸರನ್ನು ಗುರುತಿಸಿಕೊಂಡಿರುವುದರ ಹಿನ್ನೆಲೆಯಲ್ಲಿ ಈ ವಾದ್ಯದ ಉಗಮದ ಹಿನ್ನೆಲೆಯ ಸೃಷ್ಟಿ ಪುರಾಣ ಈ ಸಮುದಾಯದ ಸೃಷ್ಟಿ ಪುರಾಣವಾಗಿ ಇತರ ಸಮುದಾಯಗಳು ವಾದ್ಯಗಳ ಬಳಸುವಿಕೆಯಲ್ಲಿ ಅವರನ್ನು ಗುರುತಿಸುವಿಕೆ ಮತ್ತು ಬುಡಬುಡಕೆ ಅವರ ಜೀವನದ ನಿರ್ವಹಣೆಯಾಗಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಬುಡಬುಡಕೆ ವಾದ್ಯದಿಂದಲೇ ನಾವು ಜೀವನದ ಆಗು-ಹೋಗುಗಳನ್ನು ಅರಿತುಕೊಂಡು ಭವಿಷ್ಯ ಹೇಳುವುದರ ಜೊತೆಗೆ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದನ್ನು ಕಾಣುತ್ತೇವೆ. ಇನ್ನು ಹಲವಾರು ಗೊಂದಲಿಗರ ಸೃಷ್ಟಿಯ ಪುರಾಣಗಳು ಕೆಳಗಿನಂತಿವೆ.

೧. "ಗೊಂದಲಿಗರು ತಾವು ಮಚ್ಛಗಂಧಿನಿ ಸಂಜಾತರೆಂದು ಹೇಳಿಕೊಳ್ಳುತ್ತಾರೆ. ಕಾರ್ತಿವೀರಾರ್ಜುನನು ಕಾಮಧೇನುವನ್ನು ಬಂಧಿಸಿದಾಗ ಕಾಮಧೇನುವಿನ ಗೋಮೂತ್ರದಿಂದ ಉದ್ಭವಿಸಿದ ದ್ರಾವಿಡರೆಂದೂ ಹೇಳಿಕೊಳ್ಳುತ್ತಾರೆ. ಈ ದ್ರಾವಿಡರು ಕಾರ್ತವೀರಾರ್ಜುನನ ಸಂಹಾರ ಕಾಲದಲ್ಲಿ ನೆರವಾದರೆಂದೂ ಬೆಟ್ಟಾಸುರನನ್ನು ಸಂಹರಿಸಿದಾಗ ಆತನ ತಲೆ ಒಡೆದು ಚೌಡಿಕೆಯ ಮಾಡಿ ಶ್ರೀದೇವಿಯ ಸ್ತುತಿ ಮಾಡುತ್ತಾ ರೇಣುಕಾ ಗಿರಿಯಲ್ಲಿ ಉಧೋ.. ಉಧೋ... ಎಂದು ಉಗ್ಗಡಿಸಿ ಗೊಂದಲ ಹಾಕಿದಾಗ ಗೊಂದಲಿಗರೆಂದು 'ಗೊಂದಲಿ' ಎಂದರು ಎಂದು ಹೇಳುತ್ತಾರೆ."[೫] ಗೊಂದಲಿಗರ ಮೂಲವನ್ನು ತಿಳಿಸುವ ಈ ಕಥೆಯು ಗೊಂದಲಿಗರು ಮಾತೃ ಪ್ರಧಾನ ದೇವತೆಯ ಆರಾಧಕರಾದ ಶೂದ್ರ ಪರಂಪರೆಯ ದ್ರಾವಿಡ ಮೂಲದಿಂದ ಬಂದವರೆಂದು ತಿಳಿಸುತ್ತದೆ.

೨. "ಒಮ್ಮೆ ಶಿವ ಪಾರ್ವತಿಯರು ತಮ್ಮ ಭಕ್ತರಿಗೆ ವರಗಳನ್ನು ನೀಡುತ್ತಾ ಇದ್ದರಂತೆ ಬಂದ ಬಡವರಿಗೆ ಅವರು ಬೇಡಿದನ್ನು ದಾನ ಮಾಡಿದರು. ಕೊನೆಗೆ ಇವರ ಕೈಯಲ್ಲಿದ್ದದೆಲ್ಲಾ ಮುಗಿದಾಗ ಬುಡಬುಡಕೆಯ ಜನಾಂಗದವರು ಬಂದು ಬೇಡತೊಡಗಿದರು ಆಗ ಪಾರ್ವತಿ ಇವರನ್ನು ಬರಿಗೈಯಲ್ಲಿ ಕಳುಹಲೊಪ್ಪದೆ ಶಿವನ ಕೈಯಲ್ಲಿದ್ದ ಢಮರುಗವನ್ನೇ ಅವರಿಗೆ ದಾನ ಮಾಡಿಸಿದಳಂತೆ ಇದನ್ನು ತಮ್ಮ ಉಪಜೀವನದ ಆಧಾರವಾಗಿಟ್ಟುಕೊಂಡು ಇವರು ಬದುಕುತ್ತಿದ್ದಾರೆ ಎಂದು ಕಥೆ ಹೇಳುತ್ತಾರೆ."[೬] ಈ ಕಥೆಯಲ್ಲಿ ಬುಡಬುಡಕೆಯ ವಾದ್ಯ ಹೇಗೆ ಇವರಿಗೆ ಒಲಿದು ಬಂದು ಪಾರಂಪರಿಕವಾಗಿ ವೃತ್ತಿಗೆ ಸಹಕಾರಿಯಾಯಿತೆಂಬುದನ್ನು ತಿಳಿಯುತ್ತದೆ, ಅಲ್ಲದೇ ವಾದ್ಯವೊಂದರ ಪರಂಪರೆ ಸಮುದಾಯವೊಂದರ ಪರಂಪರೆಯೊಂದರ ಚರಿತ್ರೆಯನ್ನು ತಿಳಿಸುತ್ತದೆ.

೩. "ಮೂರು ಮಂದಿ ರಾಕ್ಷಸ ಅಣ್ಣ ತಮ್ಮಂದಿರು ವಿಧ್ವಾಂಸಕ ಶಕ್ತಿಯಲ್ಲಿ ಎಲ್ಲರನ್ನೂ ಮೀರಿಸಿದ್ದರು. ಆ ದರ್ಪದಿಂದ ಎಲ್ಲರನ್ನೂ ಹಿಂಸಿಸಿ ಪೀಡಿಸುತ್ತಿದ್ದರು ನರರು, ಸುರರೂ ಇವರ ಹಾವಳಿಯಿಂದ ಕಂಗಾಲಾಗಿದ್ದರು. ಇಷ್ಟು ಸಾಲದುದಕ್ಕೆ ಇವರ ಶಕ್ತಿ ಎಷ್ಟು ಪ್ರಬಲವಾಗಿತ್ತೆಂದರೆ ಇವರು ದೇವ-ದೇವತೆಗಳನ್ನು ಕಾಡಿ ಪೀಡಿಸತೊಡಗಿದರು. ಈ ಉಪದ್ರವದಿಂದ ಪರಿಹಾರ ಹುಡುಕುತ್ತಿದ್ದರು. ಹುಡುಕುತ್ತಿದ್ದಾಗ ನಾರದನು ಒಂದು ಸಲಹೆ ಕೊಟ್ಟನಂತೆ ಇದನ್ನು ತಡೆಯಬೇಕಾದರೆ ಅದು ಕೃಷ್ಣನೊಬ್ಬನಿಂದಲೇ ಸಾಧ್ಯ ಎಂದು ಸೂಚಿಸಿದನಂತೆ. ಆಗ ದೇವ ದೇವತೆಗಳೆಲ್ಲ ಕೃಷ್ಣನ ಮೊರೆ ಹೊಕ್ಕರು. ಇವರ ರಕ್ಷಣೆಗಾಗಿ ಕೃಷ್ಣನು ಬುಡಬುಡಕೆಯವನ ವೇಷ ಹಾಕಿಕೊಂಡು ಬುಡಬುಡಕೆಯನ್ನು ಬಾರಿಸುತ್ತಾ ಬಂದು ಈ ಕಂಟಕಿಗಳಾದ ದೈತ್ಯರ ಪತ್ನಿಯರಿಗೆ ಅವರ ಬಂಜೆತನವನ್ನು ನಿವಾರಿಸುವ ದಾರಿಯನ್ನು ಮತ್ತು ಭವಿಷ್ಯವನ್ನು ಹೇಳಿದಂತೆ ಆತನ ಸಲಹೆಯ ಪ್ರಕಾರ ನಡೆದಾಗ ಅವರ ಪಾತಿವ್ರತ್ಯ ಕೆಟ್ಟು ಹೋಯಿತು. ಅವರ ಗಂಡಂದಿರ ಶಕ್ತಿ ಬಲಗಳೆಲ್ಲಾ ಇವರ ಪಾತಿವ್ರತ್ಯದ ಆಧಾರದ ಮೇಲೆ ಅವಲಂಬಿಸಿಕೊಂಡಿದ್ದುದರಿಂದ ಇವರ ಪಾತಿವ್ರತ್ಯ ನಾಶದಂತೆಯೇ ಅವರ ಬಲವೂ ಉದುಗಿ ಹೋಯಿತು. ಆ ಮೇಲೆ ಕೃಷ್ಣನು ಅವರನ್ನು ಸುಲಭವಾಗಿ ಧ್ವಂಸ ಮಾಡಿ ಜಯಭೇರಿ ಹೊಡೆದು ಹಿಂತಿರುಗುತ್ತಿದ್ದನು. ಆಗ ದಾರಿಯಲ್ಲಿ ಆತನಿಗೆ ಈ ಜನಾಂಗದವರು ಎದುರಾದರು ಮಾತ್ರವಲ್ಲ. ಆತನ ಕೈಯಲ್ಲಿದ್ದ ಆ ಪುಟ್ಟ ಢಮರುಗವನ್ನು ಬೇಡಿ ಪಡೆದರು. ಕೃಷ್ಣನು ಅದನ್ನು ಅವರಿಗೆ ದಾನ ಮಡಿದನು ಮತ್ತು ಇನ್ನು ಮುಂದೆ ತಾನು ಪ್ರಾರಂಭಿಸಿದ ಭವಿಷ್ಯ ಹೇಳುವ ವೃತ್ತಿಯನ್ನು ಅವರು ನಿರಂತರವಾಗಿ ಮುಂದುವರಿಸಿಕೊಂಡು ಹೋಗಬೇಕೆಂದೂ ಕಟ್ಟಪ್ಪಣೆ ಮಾಡಿದನಂತೆ. ಅಂದಿನಿಂದ ಇವರು ತಮ್ಮ ಉಪಜೀವನಕ್ಕಾಗಿ ಹಕ್ಕಿ ಶಕುನ ಹೇಳುವ ವೃತ್ತಿಯನ್ನು ನಡೆಸುತ್ತಾ ಬಂದಿದ್ದಾರೆ."[೭] ಈ ಕತೆಯು ಗೊಂದಲಿಗರ ಉಪಜಾತಿಯೊಂದರ ಉಗಮದ ಬಗೆ ತಿಳಿಸುವುದು.

೪. "ಪೂರ್ವದಲ್ಲಿ ತಾರಕಾಸುರ, ಮಕರಾಸುರ ಮತ್ತು ಯುದ್ದಮಾರಿ ಎಂಬ ರಾಕ್ಷಸ ಅಣ್ಣ ತಂಗಿಯರಿದ್ದರು. ಯುದ್ಧಮಾರಿ ತಂಗಿಯಾಗಿದ್ದು, ಅವಳು ಭೂಮಿಗೂ ಆಕಾಶಕ್ಕೂ ನಡುವೆ ಹೆಬ್ಬಟ್ಟಿನ ಮೇಲೆ ಇವರ ಪಟ್ಟಣವನ್ನು ಹಿಡಿದುಕೊಂಡಿದ್ದಳು. ತಾರಕಾಸುರ ಮತ್ತು ಮಕರಾಸುರರಿಗೆ ಮಾಲಿ ಮತ್ತು ಸುಮಾಲಿ ಎಂಬುವವರು ಹೆಂಡತಿಯರು ಇವರು ದೇವಾನು ದೇವತೆಗಳನ್ನೆಲ್ಲಾ ಬಂಧನದಲ್ಲಿಟ್ಟು

ಮೆಟ್ಟಿಲುಗಳನ್ನಾಗಿ ಮಾಡಿಕೊಂಡಿದ್ದರು. ತ್ರಿಮೂರ್ತಿಗಳು ಮಾತ್ರ ಇವರ ಕೈಗೆ ಸಿಕ್ಕರಲಿಲ್ಲ. ಇವರಿಗೆ ಇಷ್ಟೊಂದು ಬಲ ಸಾಮರ್ಥ್ಯಗಳಿದ್ದುದು ಅವರ ಹೆಂಡತಿಯರ ಒಂದು ರಾಕ್ಷಸನನ್ನು ಹೀಗೆ ಬೆಳೆಯಲ್ಪಟ್ಟರೆ ದೇವತೆಗಳಿಗೆ ಏನಾದರೂ ಮಾಡಿ ನಾಶ ಮಾಡಲೇಬೇಕೆಂದು ಹೇಳಿದಾಗ ತ್ರಿಮೂತಿಗಳು ಅದಕ್ಕೊಂದು ಪರಿಹಾರ ಸೂಚಿಸುವಂತೆ ಆತನಿಗೆ ಹೇಳುತ್ತಾರೆ. ಅದಕ್ಕೆ ನಾರದ ಅವರ ಹೆಂಡತಿಯರ ಪತಿವ್ರತಾ ಧರ್ಮಕ್ಕೆ ಭಂಗ ತರುವಂತೆ ಮಾಡಿದರೆ ರಾಕ್ಷಸರ ಶಕ್ತಿ ಕುಂದುತ್ತದೆ ಎಂದು ಶಕುನ ನುಡಿಯಲು ಹೇಳುತ್ತಾನೆ. ಅದರಂತೆ ಕೃಷ್ಣ ಬುಡಬುಡಕೆಯ ವೇಷಧರಿಸಿ ರಾಕ್ಷಸರ ಪಟ್ಟಣಕ್ಕೆ ಹೋಗಿ ಶಕುನ ನುಡಿಯುತ್ತಾನೆ. ಇದನ್ನು ಕೇಳಿದ ಮಾಲಿ ಸುಮಾಲಿಯರು ಶಕುನವನ್ನು ಪರೀಕ್ಷೆ ಮಾಡಲು ಅವನು ಹೇಳಿದಂತೆ ಬೆಳಗಾಗುವುದರೊಳಗಾಗಿ ಬೆಳೆದು ನಿಂತಿದ್ದ ಅಶ್ವತ್ಥವೃಕ್ಷವನ್ನು ಪ್ರದಕ್ಷಿಣೆ ಮಾಡಿ ತಬ್ಬಿಕೊಂಡಿದ್ದರಿಂದ ಪಾತಿವ್ರತ್ಯಕ್ಕೆ ಭಂಗ ಉಂಟಾಗಿ ರಾಕ್ಷಸರು ನಾಶವಾದರು ಅವರೆನ್ನೆಲ್ಲಾ ಸಂಹರಿಸಿ ಕೃಷ್ಣ ಬುಡಬುಡಕೆಯವನ ವೇಷದಲ್ಲಿ ಬರುತ್ತಿರುವಾಗ ಒಬ್ಬ ವ್ಯಕ್ತಿ ಬಂದು ಸ್ವಾಮಿ ಬುಡಬುಡಕೆಯನ್ನು ನನಗೆ ಕೊಡಿ ನಿಮ್ಮ ಹೆಸರು ಹೇಳಿಕೊಂಡು ಜೀವನ ನಡೆಸುತ್ತೇನೆಂದು ಹೇಳಿದಾಗ ಕೃಷ್ಣ ಅವನ ಇಷ್ಟದಂತೆ ವೇಷಭೂಷಣವನ್ನೆಲ್ಲಾ ಕೊಟ್ಟು ನೀನು ಭೂಮಿಯಲ್ಲಿ ಸೂರ್ಯ ಚಂದ್ರರಿರುವರೆಗೂ ಈ ವೃತ್ತಿಯನ್ನು ಸಾಗಿಸು. ನಿನ್ನ ವಂಶದವರಿಗೆ ಬುಡಬುಡಕೆಯವರೆಂದೇ ಹೆಸರಾಗಲಿ. ಇದಕ್ಕೆ ನೀವು ತಪ್ಪಿದರೆ ನಿಮಗೆ ದರಿದ್ರಾಂಶ ಬರಲಿ ಎಂದು ಹೇಳಿದ."[೮] ಹೀಗೆ ಕೃಷ್ಣನ ಕೊಡುಗೆಯಿಂದ ಬುಡಬುಡಕೆಯ ಸಮುದಾಯ ಪರಂಪರೆ ಬೆಳೆದು ಬಂದಿದೆ ಎಂಬುದನ್ನು ತಿಳಿಯಬಹುದು. ಅಲ್ಲದೆ ಅಲೆಮಾರಿತನ, ಭಿಕ್ಷಾಟನೆ ವೃತ್ತಿ ವರವಾಗಿ ಇಂದಿಗೂ ಅವರಲ್ಲಿ ಉಳಿದುಕೊಂಡು ಬಂದಿದೆ.

ಈ ಮೇಲಿನ ನಾಲ್ಕು ಸೃಷ್ಟಿ ಪುರಾಣಗಳನ್ನು ಗೊಂದಲಿಗರು ಮೌಖಿಕ ಪರಂಪರೆಯಲ್ಲಿ ಇಂದಿಗೂ ನಂಬಿಕೊಂಡು, ಹಾಡಿಕೊಂಡು ಬಂದಿರುವುದನ್ನು ಕಾಣಬಹುದು. ವಾಸ್ತವದಲ್ಲಿ ಈ ದಂತ ಕಥೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಅವರಲ್ಲಿಯೇ ಈ ಕಥೆಗಳು ನಮಗೆ ಮೌಖಿಕವಾಗಿ ದೊರಕಿರುವುದರಿಂದ ಇವುಗಳನ್ನು ಪೌರಾಣಿಕ ಹಿನ್ನೆಲೆಯ ಆಧಾರವಾಗಿ ಸಮುದಾಯವೊಂದರ ಪರಂಪರೆಯನ್ನು ತಿಳಿಯಲು ಸಹಕಾರಿಯಾಗಿವೆ.

೪.೧.೨. ಬುಡ್ಗಜಂಗಮರ ಸೃಷ್ಟಿ ಪುರಾಣ

"ಮಾನವ ಹುಟ್ಟುವುದಕ್ಕೆ ಮುಂಚೆ ಆಕಾಶ, ಭೂಮಿ, ನೀರು, ವಾಯು, ಅಗ್ನಿ ಈ ಪಂಚಭೂತಗಳು ಸೃಷ್ಟಿಯಾದವು. ಈ ಪಂಚಭೂತಗಳ ಮಿಲನದಿಂದ 'ಓಂ' ಎಂಬ ಓಂಕಾರ ಶಬ್ದವು ಉತ್ಪತ್ತಿಯಾಯಿತು. ಈ ಓಂಕಾರ ಶಬ್ದದಿಂದ ಶಕ್ತಿ ಉದಯವಾಯಿತು. ಆ ಶಕ್ತಿ ಬ್ರಹ್ಮಾಂಡವನ್ನು ಮೋಹಿಸಿ ತ್ರಿಮೂರ್ತಿಗಳನ್ನು ಹೆತ್ತಳು ಬ್ರಹ್ಮ, ವಿಷ್ಣು, ಮಹೇಶ ಆ ಶಕ್ತಿಯು ತನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಹೇಳಿದಾಗ ತ್ರಿಮೂರ್ತಿಗಳು ಒಲ್ಲೆ ಎಂದು ಹೇಳಿ ನೀನು ತಾಯಿ ಸಮಾನ ಎಂದು ತಿಳಿಸಿದರು. ಆಗ ಸಿಟ್ಟಿನಲ್ಲಿ ಶಕ್ತಿಯು ಬೆಂಕಿ(ಅಗ್ನಿ)ಗೆ ಆಹುತಿಯಾದ ಆ ಬೂದಿಯನ್ನು ಮೂರು ಭಾಗಗಳನ್ನಾಗಿ ಮಾಡಿಕೊಂಡ ಆ ಭಾಗಗಳಿಗೆ ಪ್ರಾಣ ಪ್ರತಿಷ್ಠೆ ಮಾಡಿದಳು. ಲಕ್ಷ್ಮಿ, ಪಾರ್ವತಿ. ಸರಸ್ವತಿ ಹುಟ್ಟಿದರು. ಒಂದು ದಿನ

ಶಿವ ಪಾರ್ವತಿಯರು ವಿಹಾರಕ್ಕಾಗಿ ಬಂದಾಗ ಶಿವನು ನೀರಡಿಕೆಯಿಂದ ಬಳಲುತ್ತಿದ್ದು ಶಿವನಿಗೆ ನೀರಿಗಾಗಿ ಈಚಲ ಗಿಡ ಸೃಷ್ಟಿ ಮಾಡಿ ಆ ಈಚಲು ಮರಕ್ಕೆ ತೂತನ್ನು ಕೊರೆದು ಅದರಿಂದ ಬಂದ ಹಾಲನ್ನು ಸೇವಿಸಲು ಪಾರ್ವತಿ ಪರಮೇಶ್ವರರು ತೃಪ್ತಿಯಾದರು ಆನಂತರ ಈ ಈಚಲು ಮರವು ಶಿವನಲ್ಲಿ ಬೇಡಿಕೊಂಡಿತು. ನಿನ್ನ ದಾಹ ನಾನು ತೀರಿಸಿದೆ ಸ್ವಾಮಿ ಇದೆ ರೀತಿಯ ಹಾಲನ್ನು ಕುಡಿಯಲು ಒಬ್ಬ ಮಾನವನನ್ನು ಸೃಷ್ಟಿ ಮಾಡು ಎಂದಾಗ ಶಿವನು ಒಬ್ಬ ಈಡಿಗ ಗೌಡನನ್ನು ಸೃಷ್ಟಿ ಮಾಡಿ ಆ ಈಚಲು ಗಿಡದಿಂದ ಬಂದ ಹಾಲನ್ನು ಶಿವನಿಗೆ ನೀಡಲು ಆಜ್ಞಾಪಿಸಿದ ಸ್ವಲ್ಪ ದಿನಗಳ ನಂತರ ಈಡಿಗ ಗೌಡನಿಗೆ ಶಿವನಲ್ಲಿ ಬೇಡಿಕೊಂಡ ನನಗೂ ಜೋಡಿಯನ್ನು ಪ್ರಸಾದಿಸು ಎಂದನ್ನು ಈ ರೀತಿಯಾಗಿ ಮಾನವ ಸಂತತಿ ಬೆಳೆಯಿತು. ಶಿವನು ಕುಡಿದ ತೀರ್ಥ(ಹೆಂಡ) ನಮ್ಮ ಬುಡ್ಗಜಂಗಮ ಸಮುದಾಯದ ಶುಭ–ಅಶುಭ ಕಾರ್ಯಗಳಿಗೆ ಪವಿತ್ರ ಎಂದು ಭಾವಿಸುತ್ತಾರೆ."[೯] ಸಮಷ್ಠಿ ಪ್ರಜ್ಞೆಯ ಹಿನ್ನೆಲೆಯಲ್ಲಿ ಇಡೀ ಮಾನವ ಸಂತತಿ ಸೃಷ್ಟಿಯನ್ನು ತಿಳಿಸುವ ಬುಡ್ಗಜಂಗಮರ ಸೃಷ್ಟಿ ಪುರಾಣ ವಾಸ್ತವ ದೃಷ್ಟಿಕೋನಕ್ಕೆ ದೂರವಾದರು. ಮೌಖಿಕ ಪರಂಪರೆಯ ಹಿನ್ನೆಲೆಯಲ್ಲಿ ಮುಖ್ಯವೆನಿಸುತ್ತದೆ. ಅಲ್ಲದೆ ಇಂದಿಗೂ ಅವರ ಈ ಸೃಷ್ಟಿಪುರಾಣದ ವೈಲಕ್ಷಣಗಳು ಈ ಸಮುದಾಯದಲ್ಲಿ ಆತ್ಮಕಥನದ ರೂಪಕದಂತೆ ಕಾಣುತ್ತದೆ.

೪.೧.೩. ಅರ್ಜುನಜೋಗಿ ಸಮುದಾಯದ ಸೃಷ್ಟಿ ಪುರಾಣ

ಕಿನ್ನರಿಜೋಗಿ ಸಮುದಾಯದ ಹಿರಿಯರು ಹೇಳುವಂತೆ ಮಧ್ಯಮ ಪಾಂಡವನಿಂದ ಮುಂದುವರಿದು ಬಂದ ಉಪಪಾಂಡವ ವಂಶಸ್ಥರು ಇವರು. ಮಧ್ಯಮ ಪಾಂಡವನಾದ ಅರ್ಜುನನು ಅಣ್ಣ ಧರ್ಮರಾಯನು ಹೆಂಡತಿಯೊಂದಿಗೆ ಏಕಾಂತದಲ್ಲಿ ಮಲಗಿದಾಗ ಅನಿರೀಕ್ಷಿತವಾಗಿ ಅವರ ಕೋಣೆಗೆ ಪ್ರವೇಶಿಸುತ್ತಾನೆ. ಆ ತಪ್ಪಿಗೆ ಅಣ್ಣನ ಆಜ್ಞೆಯಂತೆ ಪ್ರಾಯಶ್ಚಿತವಾಗಿ ಹನ್ನೆರಡು ವರ್ಷ ತೀರ್ಥಯಾತ್ರೆ ಪರ್ಯಾಟನೆಗೆ ಹೋಗುತ್ತಾನೆ. ಆಗ ಕಿನ್ನರಿ ಬಾರಿಸುತ್ತಾ ಹಂಡಿ ಎಂಬ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಭಿಕ್ಷಾಟನೆ ಮಾಡುತಿದ್ದ. ಒಂದು ದಿನ ಜೋಗಿಯ ಸಾಂಪ್ರದಾಯಿಕ ವೇಷದಲ್ಲಿ ತನ್ನ ತಾಯಿ ಕುಂತೀ ದೇವಿಯಲ್ಲಿ ಒಂದು ಕಿನ್ನರಿ ಹಾಡು ಹಾಡಿ ಭಿಕ್ಷೆ ಬೇಡುತ್ತಾನೆ. ಕುಂತೀದೇವಿ ಹಾಗೂ ಜೋಗಿ ಅರ್ಥಾತ್ ಅರ್ಜುನನ ಸಂಭಾಷಣೆ ಯಾಗುತ್ತದೆ. ಇಂದಿಗೂ ಜೋಗಿಗಳು ಕಿನ್ನರಿ ನುಡಿಸುತ್ತ ಅರ್ಜುನಜೋಗಿಯ ಹಾಡನ್ನು ಹಾಡುತ್ತಾರೆ. ಇದು ಈ ಸಮುದಾಯದ ಅಲೆಮಾರಿತನ, ಮಹಾಭಾರತದ ಹಿನ್ನೆಲೆಯ ಚೌಕಟ್ಟಿನಿಂದ ರೂಪಿತವಾದ ಬಗೆಯನ್ನು ಪ್ರತಿಪಾದಿಸುತ್ತದೆ. ಇನ್ನೊಂದು ಕಥೆ ಈ ಕೆಳಗಿನಂತಿದೆ,

ಭೂಪ್ರದಕ್ಷಿಣೆ ಮುಗಿಸಿಕೊಂಡುಬಂದ ಅರ್ಜುನ ತನ್ನ ತಾಯಿಗೆ ಆಶ್ಚರ್ಯವುಂಟುಮಾಡಬೇಕೆಂದು ಕಿನ್ನರಿಜೋಗಿಗಳಂತೆ ವೇಷ ಧರಿಸಿಕೊಂಡು ಹಾಡುತ್ತಾ ಮುನೆಯ ಮುಂದೆ ಬಂದನಂತೆ. ಮೊದಲು ಅವನ ಹಾಡುಗಾರಿಕೆಗೆ ಮನಸೋತ ಕುಂತಿಯು ಮಗನನ್ನ ಆ ವೇಷದಲ್ಲಿ ಗುರುತಿಸದೇ ಹೋದಳಂತೆ. ತರುವಾಯ ನಿಧಾನಕ್ಕೆ ತನ್ನ ಮಗ ಅರ್ಜುನನೇ ಇವನೆಂದು ತಿಳಿದು ಅಪ್ಪಿ ಮುದ್ದಾಡಿದಳಂತೆ. ತನ್ನ

ಸಹಾಯಕ್ಕಾಗಿ ಬಂದ ಹಿಂಭಾಲಕನಿಗೆ ತಾನು ಧರಿಸಿದ ಉಡುಪು, ವೇಷಭೂಷಣ, ಕಿನ್ನರಿ ಕೊಟ್ಟ ಅರ್ಜುನನು ನೀನು ದೇಶದ ಮೇಲೆ ಕುಂತಿಮಕ್ಕಳ ಕೊಂಡಾಡು ಎಂದು ಹರಸಿ ಕಳಿಸಿದನಂತೆ. ಅಂದಿನಿಂದ ಇವರು ಕುಂತಿಮಕ್ಕಳ ಕಥೆಯನ್ನು ಹೇಳುತ್ತಾ ಊರೂರು ಸುತ್ತುತ್ತಿರುವುದಾಗಿ ತಿಳಿಸುತ್ತಾರೆ. ಇಲ್ಲಿ ಅರ್ಜುನ ಹೇಳುವ ಮಾತುಗಳು ವ್ಯವಸ್ಥೆ ಸೃಷ್ಟಿಸಿದ ಸಮುದಾಯವೊಂದರ ಧ್ವನಿಯಾಗಿ ಕಂಡುಬರುತ್ತದೆ.

ಪ್ರೊ ಹಿ.ಚಿ. ಬೋರಲಿಂಗಯ್ಯರವರು ಸಂಪಾದಿಸಿದ ಕರ್ನಾಟಕ ಜನಪದ ಕಲೆಗಳ ಕೋಶದಲ್ಲಿ ಕಿನ್ನರಿ ಹಾಗೂ ಕಿನ್ನರಿ ಜೋಗಿಗಳ ಬಗೆಗಿನ ಕತೆಗಳು ದೊರೆಯುತ್ತವೆ. ಹದಿನಾಲ್ಕು ವರ್ಷ ವನವಾಸದಲ್ಲಿದ್ದ ಪಾಂಡವರು ತಮ್ಮ ವಸವಾಸದ ಸಂದರ್ಭದಲ್ಲಿ ಜೋಗಿಗಳನ್ನು ಕಾಡಿನಲ್ಲಿ ಭೇಟಿಮಾಡುತ್ತಾರೆ. ಆಗ ಅವರ ಬಳಿ ಕಿನ್ನರಿ ಇರುವುದಿಲ್ಲ. ಅರ್ಜುನನು ಅದಾಗ ತಾನೇ ಕೊಂದಿದ್ದ ರಾಕ್ಷಸನ ಬುರುಡೆ ಮತ್ತು ನರಗಳನ್ನು ಕಿನ್ನರಿ ಮಾಡಿ ಆ ಜೋಗಿಗಳಿಗೆ ಕಾಣಿಕೆಯಾಗಿ ಕೊಟ್ಟನು. ಅಂದಿನಿಂದ ಜೋಗಿಗಳು ಪಾಂಡವರ ಕಥೆ ಹಾಡುವುದನ್ನು ಆರಂಭಿಸಿದರೆನ್ನುವ ಕಥೆ ಪ್ರಚಲಿತವಿದೆ. ಇದು ವಾಸ್ತವತೆಯನ್ನು ಮೀರಿ ಅರ್ಥೈಸಿದರು ಮೇಲಿನ ಕಥೆಯನ್ನೇ ಅರ್ಥೈಸುತ್ತದೆ.

ಹನ್ನೆರಡು ವರ್ಷ ಭೂಪ್ರದಕ್ಷಿಣೆಗೆ ಹೋಗಿದ್ದ ಅರ್ಜುನನಿಗೆ ಹನ್ನೊಂದನೇ ವರ್ಷದಲ್ಲಿ ತನ್ನ ತಾಯಿಯನ್ನು ನೋಡುವ ಬಯಕೆಯಾಗುತ್ತದೆ. ಆದರೆ ಯಾರಾದರೂ ಗುರುತು ಹಚ್ಚಿದರೆ ಮತ್ತೆ ಹನ್ನೆರಡುವರ್ಷ ಪ್ರದಕ್ಷಿಣೆ ಹೋಗಬೇಕಾಗುತ್ತದೆ. ಅದಕ್ಕಾಗಿ ಋಷಿಗಳಲ್ಲಿ ಹೋಗಿ ಕೇಳಿದ. ಅವರ ಅಣತಿಯಂತೆ ಒಬ್ಬಳು ರಕ್ಕಸಿಯನ್ನು ಕೊಂದು ಜೋಗಿ ವೇಷಧರಿಸಿ ತಾಯಿಯನ್ನು ಭೇಟಿ ಮಾಡಿದ ಕೆಲಸ ಮುಗಿದ ಮೇಲೆ ಅವನ ಶಿಷ್ಯನೊಬ್ಬನಿಗೆ ಜೋಗಿ ಧೀಕ್ಷೆ ಕೊಟ್ಟು ಕಿನ್ನರಿಯನ್ನು ಅವನ ಕೈಗೆ ನೀಡಿ ಪಾಂಡವರ ಕಥೆಯನ್ನು ಹಾಡಿಕೊಂಡು ಇರುವಂತೆ ಸೂಚಿಸಿದ ವಿವರ ದೊರೆಯುತ್ತದೆ.

ಒಮ್ಮೆ ದ್ರೌಪದಿಗೆ ತುಂಬಾ ಸಂತೋಷವಾಗಿ ಅರ್ಜುನನ ಜೊತೆ ಪಗಡೆಯಾಟಕ್ಕೆ ಕುಳಿತಳು. ಪಂಥದ ಮೇಲೆ ಆಟ ಆಡಿದರೆ ಸೊಗಸಿರುತ್ತದೆಂದು ಭಾವಿಸಿ ಇಬ್ಬರೂ ಪಂಥಕಟ್ಟುತ್ತಾರೆ. ದ್ರೌಪದಿ ಸೋತರೆ ಮಣಿಪುರದ ರಾಣಿಯರ ದಾಸಿಯಾಗುವು ದಾಗಿಯೂ, ಅರ್ಜುನ ಸೋತರೆ ೧೨ವರ್ಷ ಜೋಗಿಯಾಗಿ ದೇಶಾಂತರ ಹೋಗಬೇಕಾಗುತ್ತದೆಂದೂ ಪಂಥಕಟ್ಟುತ್ತಾರೆ. ಅರ್ಜುನ ಸೋಲುತ್ತಾನೆ. ಸೋತ ಅರ್ಜುನನು ಏಳುತಲೆ ಗುಡ್ಡದ ಕಲ್ಲಿನ ಮಠಕ್ಕೆ ಬಂದು ಅಲ್ಲಿ ಏಳುಮಂದಿ ಸಿದ್ದರ ಸೇವೆಗೆ ನಿಂತನು. ಅವರಲ್ಲಿ ತಾನು ಜೋಗಿಯಾಗುವುದಾಗಿ ಕೇಳಿಕೊಂಡನು. ಸಿದ್ದರು ಮಾಳಾವತಿ ದೇಶದ ರಕ್ಕಸಿಯನ್ನು ಕೊಂದು ಅವಳ ದೇಹದಿಂದ ಕಿನ್ನರಿ ಮಾಡಿ ಅರ್ಜುನನಿಗೆ ಜೋಗಿ ಧೀಕ್ಷೆಯನ್ನು ನೀಡಿದರು. ಆ ಅರ್ಜುನನ ಸಂತತಿಯೇ ಈಗಿನ ಕಿನ್ನರಿ ಜೋಗಿಗಳು.

ವಾಸ್ತವವಾಗಿ ಜೋಗಿಗಳು ಭೈರವನ ಆರಾಧಕರು. ಕೆಲವು ಜೋಗಿಗಳು ಅವನಿಂದ ಕಿನ್ನರಿ ಕುಲ ಬಿರುದು ಪಡೆದಿರುವಂತೆಯೇ ಅವನಿಂದಲೇ ಕಿನ್ನರಿ ವಾದ್ಯವನ್ನು ಪಡೆದಿದ್ದೇವೆ ಎಂದು ಹೇಳುತ್ತಾರೆ.

ಇನ್ನೊಂದು ಕಥೆ ಹೀಗಿದೆ. ಒಮ್ಮೆ ಶಿವ ಗಂಗೆಯನ್ನು ಮೆಚ್ಚಿಸಲು ಜೋಗಿಯ ವೇಷದಲ್ಲಿ ಹೋದ. ಗಂಗೆಗೆ ಆ ವೇಷ ನೋಡಿ ಸಿಟ್ಟುಬಂತು. ಆಗ ಶಿವ ತನ್ನ ಬೆವರಿನಿಂದ ಒಬ್ಬ ಜೋಗಿಯನ್ನು

ಮಾಡಿದ, ಅವನಿಗೆ ಕಿನ್ನರಿಯನ್ನು ಕೊಟ್ಟು ಭೂಲೋಕದಲ್ಲಿ ಸಂಚರಿಸು ಅಂತ ಹೇಳಿದ. ಹೀಗೆ ಜೋಗಿಗಳು ಶಿವನಿಂದ ಕಿನ್ನರಿ ಪಡೆದು ತಮ್ಮ ಪ್ರದರ್ಶನ ಆರಂಭಿಸಿದರು.

ಇವೆಲ್ಲವನ್ನು ಮೀರಿ ಇನ್ನು ಒಂದು ಅಭಿಪ್ರಾಯವಿದೆ. ಕಿನ್ನರಿ ಕೊಟ್ಟವನು ಅರ್ಜುನನೂ ಅಲ್ಲ ಶಿವನೂ ಅಲ್ಲ. ಅದನ್ನು ಜೋಗಿ ಮಠದ ಸಿದ್ದರು ಕೊಟ್ಟರು ಎಂಬುದು. ಇದು ಸತ್ಯಕ್ಕೆ ಹತ್ತಿರವಾದ ಮಾತು. ಈ ಜೋಗಿ ಸಂಪ್ರದಾಯದ ಹಿಂದೆ ಒಂದು ಪಂಥವೇ ಇದೆ. ಭೈರವನ ಆರಾಧಕರಾದ ಜೋಗಿಗಳು ನಾಥ ಪಂಥದ ಅನುಯಾಯಿಗಳು. ಮಂಗಳೂರಿನ ಕದ್ರಿ ಮಂಡ್ಯದ ಆದಿಚುಂಚನಗಿರಿ, ಉತ್ತರ ಕನ್ನಡದ ಯಾಣ ಇತ್ಯಾದಿಯಾಗಿ ಅನೇಕ ಶೈವ ಆರಾಧನಾ ಕೇಂದ್ರಗಳಿಗೂ ಈ ಜೋಗಿಗಳಿಗೂ ಸಂಬಂಧವಿದೆ. ಇವರ ಹುಟ್ಟು ಸಾವಿನ ಆಚರಣೆಗಳು ಕಾಪಾಲಿಕ ಅಥವಾ ಕಾಳಾಮುಖದಂಥ ಮಧ್ಯಕಾಲೀನ ರಹಸ್ಯ ಪಂಥಗಳ ಜೊತೆಗಿನ ಸಂಬಂಧಗಳನ್ನು ಕುರಿತು ಬೆಳಕು ಚೆಲ್ಲುತ್ತವೆ. ಮೈಲಾರನ ಭಕ್ತರಾದ ಗೊರವರು, ಯಲ್ಲಮ್ಮನ ಭಕ್ತರಾದ ಜೋಗಿಯರು, ಆದಿಚುಂಚನಗಿರಿ ಭಕ್ತರಾದ ಜೋಗಪ್ಪಗಳು ಇಂಥ ರಹಸ್ಯ ತಾಂತ್ರಿಕವೆನ್ನಬಹುದಾದ ಶೈವ ಹಾಗೂ ಶಕ್ತಿ ಪಂಥದ ಪಳಿಯುಳಿಕೆಗಳಾಗಿ ಇಂದಿಗೂ ನಮ್ಮ ಮುಂದೆ ಉಳಿದಿರುವುದನ್ನು ನೋಡಿದರೆ ಈ ಕಿನ್ನರಿ ಜೋಗಿಗಳು ಕೂಡಾ ಈ ಪಂಥದ ಒಂದು ಭಾಗವೇ ಎನ್ನುವುದರಲ್ಲಿ ಅನುಮಾನವಿಲ್ಲ. ಏಕೆಂದರೆ ಇಂದಿಗೂ ಇವರು ಭೈರವನ ಆರಾಧಕರು. ಅಷ್ಟೇ ಅಲ್ಲ ಕಿವಿಗೆ ಕಾಪಾಲಿ ತೊಡಿಸಿ ಕರ್ಣಕುಂಡಲವಿಟ್ಟು ಭೈರವನ ಸನ್ನಿಧಿಯಲ್ಲಿ ಧೀಕ್ಷೆ ನೀಡಲಾಗುತ್ತದೆ. ಮತ್ತು ಕುತ್ತಿಗೆಗೆ ಸಿಂಗನಾಥವನ್ನು ಕಟ್ಟಲಾಗುತ್ತದೆ. ಅಲ್ಲಿಂದ ಅವನು ಜೋಗಿಯಾಗುತ್ತಾನೆ.

ಮತ್ತೊಂದು ಕಥೆಯ ಪ್ರಕಾರ ಹಂಡಿಜೋಗಿ ಸಮುದಾಯದ ಕುಲದೇವರಾದ ಕಾಳ ಭೈರವನು ದೇಶ ಪರ್ಯಾಟನೆಗೆ ತನ್ನ ಶಿಷ್ಯರೊಂದಿಗೆ ಹೋಗುತ್ತಾರೆ. ಹೀಗೆ ಹೋಗುತ್ತಿದ್ದಾಗ ಮಾಧ್ಯಾಹ್ನದ ಹೊತ್ತಿಗೆ ನದಿ ಬದಿಗೆ ಬರುತ್ತಾರೆ. ತನ್ನ ಶಿಷ್ಯರಿಗೆ ಊಟದ ವ್ಯವಸ್ಥೆಗೆ ಅಡುಗೆಯನ್ನು ಮಾಡಲು ಹೇಳುತ್ತಾರೆ. ಹಾಗೇ ಗುರುಗಳು ನದಿ ಸ್ನಾನಕ್ಕೆ ಹೋಗುತ್ತಾರೆ. ಇತ್ತ ಶಿಷ್ಯರು ಬೇಗ ಬೇಗನೆ ಸ್ನಾನ ಮಾಡಿ ಅಡಿಗೆ ತಯಾರಿಸಲು ಶುರುಮಾಡಿ ಅನ್ನ ಸಾರು ತಯಾರು ಮಾಡುತ್ತಾರೆ. ಆದರೆ ಶಿಷ್ಯರಿಗೆ ಗುರುಗಳ ಮೇಲೆ ಬಹಳ ಭಕ್ತಿ ತಾವು ಮಾಡಿದ ಅಡುಗೆಯಲ್ಲಿ ಸಾರಿಗೆ ಸರಿಯಾಗಿ ಉಪ್ಪು ಆಗಿದೆಯೋ ಅಥವಾ ಜಾಸ್ತಿ ಏನಾದರೂ ಹಾಕಿದ್ದರೆ ಗುರುಗಳಿಗೆ ಕೋಪ ಬರಬಹುದು, ಹಾಗೇ ಆಗ ಬಾರದು ಎಂದು ಹೇಳಿ ಸಾರಿಗೆ ಸೌಟು ಹಾಕಿ ಸಾರನ್ನು ಸ್ವಲ್ಪ ಪಾತ್ರೆಗೆ ಮೇಲೆ ಹಾಕಿ ಉಪ್ಪು, ಖಾರ ಸರಿಯಾಗಿ ಇದೆಯೇ ಎಂದು ಪರಿಕ್ಷಿಸುತ್ತಾರೆ. ಸ್ನಾನಕ್ಕೆ ಹೋದಂತಂಹ ಗುರುಗಳು ಸ್ನಾನ ಮಾಡಿ ಜಪ ಮಾಡುವಾಗ ತಮ್ಮ ದಿವ್ಯ ದೃಷ್ಟಿಯಿಂದ ಶಿಷ್ಯರು ಮಾಡಿದ ಅಡುಗೆ ಮಡಿ ಹೋಗಿದೆ ಎಂಬುದನ್ನು ಅರಿಯುತ್ತಾರೆ. ಗುರುಗಳಿಗೆ ಸಿಟ್ಟು ಬಂದು ನೇರವಾಗಿ ಬರುತ್ತಾರೆ. ಮಾಡಿದ ಅಡುಗೆ ಮಡಿ ಹೋಗಿದೆ. ಅದು ಭ್ರಷ್ಟವಾಗಿ ಹೋಯಿತು. ಹಾಗಾಗಿ ನೀವು ಇನ್ನು ಮುಂದೆ ಭಿಕ್ಷೆ ಬೇಡುತ್ತಾ ಹೋಗಿ ಎಂದು ಹೇಳಿ ಸಾರು ತಿಂದ ಪಾತ್ರೆಯನ್ನು ಅವರ ಕೈಗೆ ಕೊಟ್ಟು ಶಾಪ ಕೊಡುತ್ತಾರೆ. ತಿಳಿಯದೆ ಮಾಡಿದ ಅಡುಗೆ ಭ್ರಷ್ಟ ಮಡಿಯಾಗುತ್ತದೆ ಎಂದು ನಮಗೆ ಗೊತ್ತಿರಲಿಲ್ಲ. ನಮ್ಮನ್ನು ಈ ಶಾಪದಿಂದ ವಿಮೋಚನೆಗೊಳಿಸಿ. ಇಂಥ ತಪ್ಪು ಇನ್ನು ಮುಂದೆ ಮಾಡುವುದಿಲ್ಲ ಎಂದು ಗುರುಗಳಾದ ಭೈರವರ ಕಾಲಿಗೆ ಬಿದ್ದು

ಅಂಗಲಾಚಿ ಬೇಡುತ್ತಾ ಕಣ್ಣಿರು ಹಾಕುತ್ತಾರೆ. ಸ್ವಲ್ಪ ಸಾರು ತೆಗೆದು ಉಪ್ಪು ಖಾರ ಸರಿಯಾಗಿ ಇದೆಯೆ ಎಂದು ರುಚಿ ನೋಡಿದ್ದು ಸತ್ಯಸ್ವಾಮಿ. ಅದು ಈ ರೀತಿ ಮೈಲಿಗೆ ಆಗುತ್ತದೆ ಎಂದು ಗೊತ್ತಿದ್ದರೆ ನಾವು ಈ ರೀತಿ ಮಾಡುತ್ತಿರಲ್ಲಿಲ್ಲ. ನಾವು ಮಾಡಿದ್ದು ಅಕ್ಷಮ್ಯ ಅಪರಾಧ ನಾವಿನ್ನುಮುಂದೆ ದಿಕ್ಕಿಲ್ಲದ ತಬ್ಬಲಿಗಳು ಆಗುತ್ತೇವೆ ಎಂದು ಕಣ್ಣೀರು ಹಾಕುತ್ತಾರೆ. ಶಿಷ್ಯಂದಿರು ಅರಿಯದೆ ಮಾಡಿದ ತಪ್ಪಿದು ಎಂದು ಗುರುವಿಗೆ ಗೊತ್ತಾಯಿತು. ಆದರೆ ಏನು ಮಾಡೋಣ ಶಾಪ ಕೊಟ್ಟಾಗಿದೆ. ನೀವು ಅನುಭವಿಸಲೇಬೇಕು. ಆದರೆ ನಾನೊಂದು ಪಾತ್ರೆಯನ್ನು ಕೊಡುತ್ತೇನೆ, ಭಿಕ್ಷಾಪಾತ್ರೆ ಹಂಡಿ, ಇದನ್ನು ತೆಗೆದುಕೊಂಡು ಹೋಗಿ ಭಿಕ್ಷಾಟನೆ ಮಾಡಿ. ಈ ಪಾತ್ರೆ ನಿಮ್ಮ ಕೈಯಿಂದ ಯಾವಾಗ ಜಾರಿ ಬಿದ್ದು ಒಡೆದು ಹೋಗುತ್ತದೋ ಆಗ ನಿಮ್ಮ ಶಾಪ ವಿಮೋಚನೆ ಆಗುತ್ತದೆ. ಆಗ ನೀವು ಜೋಗಿಗಳಾಗಿ ನನ್ನ ಬಳಿ ಬರುತ್ತೀರಿ ಎಂದು ಗುರುಗಳಾದ ಕಾಳ ಭೈರವರು ಹೇಳಿ ಅಲ್ಲಿಂದ ಒಂದು ಕ್ಷಣವೂ ನಿಲ್ಲದೇ ಅದೃಶ್ಯರಾದರು. ಕಾಳ ಭೈರವ ಗುರುಗಳು ಹೇಳಿದ ಹಾಗೆಯೇ ಇವರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಪ್ರತಿನಿತ್ಯ ಭೀಕ್ಷಾಟನೆಗೆ ಹೋಗುತ್ತಾ ಇದ್ದರು. ಹೀಗೆ ಹೋಗುತ್ತಾ ಬೆಳಗಾವಿಯ ರಾಮನಗರದ ಹತ್ತಿರ ಬರುವಾಗ ಶಿಷ್ಯರ ಕೈಯಲ್ಲಿ ಇದ್ದ ಭಿಕ್ಷಾಪಾತ್ರೆ ನೆಲಕ್ಕೆ ಬಿದ್ದು ಒಡೆದು ಹೋಯಿತು. ಆಗ ಶಿಷ್ಯರ ಶಾಪ ವಿಮೋಚನೆ ಆಗುತ್ತದೆ. ಅಲ್ಲಿಯೇ ಒಂದು ಮಠವನ್ನು ಸ್ಥಾಪನೆ ಮಾಡುತ್ತಾರೆ. ಅದೇ ಹಂಡಿ ಬಡಗನಾಥ ಮಠ ಎಂದು ಪ್ರಸಿದ್ಧಿಯಾಯಿತು. ಅದರ ನಂತರ ಜೋಗಿಗಳು ಭಿಕ್ಷಾ ಪಾತ್ರೆಯನ್ನು ಬಿಟ್ಟು ಕಿನ್ನರಿ ಹಿಡಿದು ಭಿಕ್ಷಾಟನೆಗೆ ಹೊಗಲು ಶುರು ಮಾಡಿದರು. ಹಂಡಿ ಬಡಗನಾಥದ ಕಾಳ ಭೈರವನ ಮಠ ಈಗಲೂ ಪ್ರಸಿದ್ದಿಯಾಗಿದೆ. ಇಂದಿಗೂ ಎಲ್ಲಾ ಜೋಗಿಗಳು ಅಲ್ಲಿಗೆ ಹೋಗಿ ಕಿನ್ನರಿ ಹಾಡು ಹೇಳುತ್ತಾ ಊರೂರು ಅಲೆಯುತ್ತಾರೆ.

ಜೋಗಿ ಸಮುದಾಯದ ಸೃಷ್ಟಿ ಪುರಾಣ ಗೊಂದಲಿಗರ ಸೃಷ್ಟಿ ಪುರಾಣದಂತೆ ಹಲವಾರು ನೆಲೆಗಳಲ್ಲಿರುವುದನ್ನು ಕಾಣಬಹುದು. ಇದು ಬುಡ್ಗಜಂಗಮರ ಸೃಷ್ಟಿ ಪುರಾಣಕ್ಕಿಂತ ಭಿನ್ನ ಸಾಂಸ್ಕೃತಿಕ ವಿವೇಚನೆಯನ್ನು ಮೂಡಿಸುವುದು. ಎರಡು ನೆಲೆಗಳಲ್ಲಿ ಇವರ ಸೃಷ್ಟಿ ಪುರಾಣ ನಮಗೆ ದೊರೆಯುತ್ತದೆ. ಒಂದು ಮಹಾಭಾರತದ ಮಧ್ಯಮ ಪಾಂಡವನಿಂದ ಮುಂದುವರಿದು ಬಂದ ಉಪಪಾಂಡವ ವಂಶಸ್ಥರು ನಾವು ಎಂಬ ನೆಲೆಯಿಂದ ಎರಡನೆಯದಾಗಿ ಹಂಡಿಜೋಗಿ ಸಮುದಾಯದ ಕುಲದೇವರಾದ ಕಾಳಭೈರವನು ದೇಶ ಪರ್ಯಾಟನೆಗೆ ಶಿಷ್ಯರೊಂದಿಗೆ ಹೋದಾಗ ಆದ ಘಟನೆಯ ತಿರುವು ಇವರ ಮೂಲದ ಬಗೆ ತಿಳಿಸುತ್ತದೆ. ಈ ಎರಡು ಕಥೆಗಳು ಭಿನ್ನವಾದ ನಿಲುವುಗಳ ಹಿನ್ನೆಲೆಯಲ್ಲಿ ಈ ಸಮುದಾಯದ ಸೃಷ್ಟಿಯನ್ನು ತಿಳಿಸುತ್ತವೆ. ಈ ಸೃಷ್ಟಿ ಪುರಾಣಗಳ ಕುರುಹುಗಳು ಜೋಗಿ ಸಮುದಾಯದಲ್ಲಿ ಇಂದಿಗೂ ಅವರ ಜೀವನವನ್ನು ನಿರೂಪಿಸುವ ಸಂಹಿತೆಗಳಾಗಿವೆ.

೪.೧.೪. ದೊಂಬಿದಾಸರ ಸೃಷ್ಟಿ ಪುರಾಣ

"ಒಂದು ಮೂಲದ ಪ್ರಕಾರ ಧರೆಗೆ ದೊಡ್ಡವರೆಂಬ ಗುರುಗಳು ಕತ್ತಲ ರಾಜ್ಯವನ್ನು ಪ್ರವೇಶ ಮಾಡಿ ತಮ್ಮ ಶಕ್ತಿಯಿಂದ ಆದಿಶಕ್ತಿಯನ್ನು ಸೃಷ್ಟಿಸುತ್ತಾರೆ. ಅಂತೆಯೇ ಜಾಂಬುಲಿಂಗಯ್ಯನೆಂಬ

ಗಂಡು ಜೀವವನ್ನು ಸೃಷ್ಟಿಸುತ್ತಾರೆ. ಆಗ ಆದಿಶಕ್ತಿಯು ಜಾಂಬುಲಿಂಗಯ್ಯನನ್ನು ಮೋಹಿಸಿ ಮದುವೆಯಾಗಲು ಕೇಳುತ್ತಾಳೆ. ಆದರೆ ಜಾಂಬುಲಿಂಗಯ್ಯ ನಾವಿಬ್ಬರೂ ಒಂದೇ ತಂದೆಯ ಮಕ್ಕಳಾದ್ದರಿಂದ ನಾವು ದಂಪತಿಗಳಾಗುವುದು ತಪ್ಪು ಎಂದು ನಿರಾಕರಿಸುತ್ತಾನೆ. ಆದರೆ ಆದಿಶಕ್ತಿ ನವಿಲಾಗಿ ರೂಪಾಂತರಗಂಡು ಜಾಂಬುಲಿಂಗಯ್ಯನ ಕಣ್ಣೀರನ್ನು ಸ್ವಾಹ ಮಾಡಿ ಗರ್ಭಧರಿಸಿ ಮೊಟ್ಟೆಗಳನ್ನಿಡುತ್ತಾಳೆ. ಇದನ್ನು ಸಹಿಸದ ಜಾಂಬುಲಿಂಗಯ್ಯನು ಅವಳಿಗೆ ಶಾಪ ನೀಡಿದಾಗ ಆದಿಶಕ್ತಿ ಬೂದಿಯಾಗುತ್ತಾಳೆ. ಧರೆಗೆ ದೊಡ್ಡವರು ಇದನ್ನು ಅರಿತು ನವಿಲಿನ ಮೊಟ್ಟೆಗಳಿಂದ ಬ್ರಹ್ಮ, ವಿಷ್ಣು, ಈಶ್ವರ ಎಂಬ ತ್ರಿಮೂರ್ತಿಗಳನ್ನು ಸೃಷ್ಟಿಸುತ್ತಾರೆ. ಆದಿಶಕ್ತಿಯ ಬೂದಿ ರಾಶಿಯನ್ನು ಮೂರು ಭಾಗ ಮಾಡಿ ಸರಸ್ವತಿ, ಲಕ್ಷ್ಮಿ, ಪಾರ್ವತಿಯರನ್ನಾಗಿ ಸೃಷ್ಟಿಸುತ್ತಾರೆ. ಇವರ ಸಮ್ಮಿಲನದಿಂದ ಇಡೀ ಜಗತ್ತು ಸೃಷ್ಟಿಯಾಯಿತು ಎಂದು ತಿಳಿದುಬರುತ್ತದೆ."[೧೦] ಎಂಬುದು ಒಂದು ಕಥೆಯಾದರೆ ಇನ್ನೊಂದು ಕಥೆ ಬೇರೊಂದು ಮೂಲವನ್ನು ಪ್ರತಿಪಾದಿಸುತ್ತದೆ. 'ಮಡಬಕೊಪ್ಪಲು ಕಲಾವಿದರಾದ ವೆಂಕಟರಾಮು ಅವರ ಪ್ರಕಾರ ಆದಿಶಕ್ತಿ ಮಯಂಬೀಜಂ, ಬೀಜಶಕ್ತಿ ಮಯಂ ಸೃಷ್ಟಿ, ವಿಷ್ಣುಶಕ್ತಿ ಮಯಂ ಜಗತ್ತು ಅಂದರೆ ತ್ರಿಮೂರ್ತಿಗಳ ಸೃಷ್ಟಿಯಾದ ನಂತರ ಆದಿಶಕ್ತಿಯು ಮದುಕೈಟವ ಎಂಬ ರಾಕ್ಷಸರನ್ನು ಸೃಷ್ಟಿಸುತ್ತಾಳೆ. ಇವರು ದುಷ್ಟರಾಗಿದ್ದು, ಬ್ರಹ್ಮನನ್ನೇ ಪೀಡಿಸುತ್ತಾರೆ. ಆಗ ಬ್ರಹ್ಮನು ಮೂರ್ಚೆಯಾಗುತ್ತಾನೆ. ಆಗ ಈ ರಾಕ್ಷಸರು ಇವನು ಸತ್ತನೆಂದು ತಿಳಿದು ಮುಂದೆ ಹೋಗುತ್ತಾರೆ. ಅಲ್ಲಿಂದ ತಪ್ಪಿಸಿಕೊಂಡು ಬಂದು ಬ್ರಹ್ಮನು ದೇವಿಯನ್ನು ಕುರಿತು ತಪ್ಪಸ್ಸನ್ನು ಮಾಡುತ್ತಾನೆ. ದೇವಿ ಪ್ರತ್ಯೇಕ್ಷಳಾದಾಗ ನೀನು ಸೃಷ್ಟಿಸಿದ ರಾಕ್ಷಸರು ನಮಗೆ ಉಪಟಳ ನೀಡುತ್ತಿದ್ದಾರೆಂದು ಹೇಳಿದಾಗ ಇಬ್ಬರೂ ಕ್ಷೀರಸಾಗರಕ್ಕೆ ಹೋಗಿ ವಿಷ್ಣುವನ್ನು ಪ್ರಾರ್ಥಿಸುತ್ತಾರೆ. ಅವರನ್ನು ಕೊಲ್ಲಲು ದೇವಿ ಕೇಳಿಕೊಳ್ಳುತ್ತಾಳೆ. ಆಗ ವಿಷ್ಣುವು ಅವರು ನಿನ್ನ ವರದ ಬಲದಿಂದ ಜನಿಸಿದ್ದರಿಂದ ನಿನ್ನ ಅರ್ಧ ಶಕ್ತಿಯನ್ನು ನನಗೆ ನೀಡಿದರೆ ಅವರನ್ನು ಕೊಲ್ಲುವುದಾಗಿ ಹೇಳಿದಾಗ ದೇವಿ ತನ್ನ ಅರ್ಧಶಕ್ತಿ ನೀಡುತ್ತಾಳೆ. ವಿಷ್ಣು ಅವರನ್ನು ಕೊಲ್ಲುತ್ತಾನೆ. ಆ ರಾಕ್ಷಸರ ಚರ್ಮವೇ ಭೂಮಂಡಲವಾಗಿ ಅವರ ದೇಹದ ಮೂಳೆಗಳೇ ಗುಡ್ಡ-ಗೋಪುರಗಳಾಗುತ್ತವೆ. ಅವರ ದೇಹದಿಂದ ಹರಿದ ರಕ್ತವೇ ನದಿ-ಸರೋವರಗಳಾಗಿ ಹರಿಯುತ್ತವೆ. ಅವರಲ್ಲಿದ್ದ ಅಹಂಕಾರವೇ ಕ್ರಿಮಿಕೀಟಗಳಾಗುತ್ತವೆ. ಈ ತ್ರಿಮೂರ್ತಿಗಳೂ ಸೇರಿ ಅಂದರೆ, ವಿಷ್ಣುವಿನ ಕಾಲಂಶ ಈಶ್ವರ ಅರ್ಧ ಅಂಶ ಬ್ರಹ್ಮನ ಕಾಲಂಶವನ್ನು ಸೇರಿಸಿ ಈ ಬ್ರಹ್ಮಾಂಡವನ್ನು ಸೃಷ್ಟಿಸುತ್ತಾರೆ. ಈ ಬ್ರಹ್ಮಾಂಡಕ್ಕೆ ದೇವೇಂದ್ರನನ್ನು ಒಡೆಯನ್ನನಾಗಿ ನೇಮಿಸುತ್ತಾರೆ."[೧೧] ಈ ಸೃಷ್ಟಿ ಪುರಾಣದ ಕಥೆ ಮೇಲಿನ ಕಥೆಗಿಂತ ಭಿನ್ನವಾದ ಸಂಘರ್ಷದ ಅತಿಮಾನುಷದ ಹಿನ್ನೆಲೆಯಲ್ಲಿ ಮನುಷ್ಯ ಸೃಷ್ಟಿಯನ್ನು ತಿಳಿಸುತ್ತದೆ. ಇನ್ನೊಂದು ಮೂಲದ ಸೃಷ್ಟಿಪುರಾಣದ ಪ್ರಕಾರ "ಭೂಮಿ, ಆಕಾಶ, ಗಾಳಿ, ಬೆಳಕುಗಳಿಲ್ಲದೆ ಓಂಕಾರದೊಂದಿಗೆ ಒಂದು ಶಂಖು ಹುಟ್ಟಿತು. ಆ ಶಂಖುವಿನಿಂದಲೇ ತಾತ ಆದಿಜಾಂಬುಲಿಂಗಯ್ಯ ಹುಟ್ಟಿ ಬಂದರು. ಇವರು ತಾವರೆ ಎಲೆಯ ಮೇಲೆ ಕುಳಿತು ತಪಸ್ಸನ್ನು ಆಚರಿಸಿದ ಅರುಘಳಿಗೆಯಲ್ಲಿಯೇ ಆದೇ ಶಂಖದಿಂದ ಆದಿಶಕ್ತಿಯು ಹುಟ್ಟಿ ಬಂದಳು. ಆಕೆ ತಾತನ ಬಳಿ ಬಂದು ನನ್ನ ಕಾಮವನ್ನು ತೀರಿಸು ಎಂದು ಕೇಳಿದಳು. ಆಗ ತಾತ ಈ ರೂಪದಲ್ಲಿ ಸಾಧ್ಯವಿಲ್ಲ ಇಬ್ಬರು ನವಿಲುಗಳಾಗಿ ರೂಪ

ಬದಲಾಯಿಸಿಕೊಳ್ಳೋಣ್ಣ ಎಂದು ರೂಪ ಬದಲಾಯಿಸಿಕೊಂಡರು. ಇಬ್ಬರೂ ಕೂಡಿದ ಪರಿಣಾಮದಿಂದ ಹೆಣ್ಣು ನವಿಲು ನಾಲ್ಕು ಮೊಟ್ಟೆಗಳನ್ನು ಇಟ್ಟಿತು. ಎಷ್ಟು ಕಾವು ಕೊಟ್ಟರೂ ಮೊಟ್ಟೆಯೊಡೆದು ಮರಿಯಾಗಲಿಲ್ಲ. ಆಗ ತಾತ ಒಂದು ಮೊಟ್ಟೆಯನ್ನು ಒಡೆದು ಅದರ ಮೇಲಿನ ಭಾಗವನ್ನು ಆಕಾಶ ಮಾಡಿದ, ಕೆಳಗಿನ ಭಾಗವನ್ನು ಭೂಮಿ ಮಾಡಿದ ಇನ್ನೊಂದು ಮೊಟ್ಟೆಯನ್ನು ಒಡೆದು ಒಂದು ಭಾಗವನ್ನು ಸೂರ್ಯ ಮಾಡಿದ, ಇನ್ನೊಂದು ಭಾಗವನ್ನು ಚಂದ್ರ ಮಾಡಿದ. ಮೂರನೆಯ ಮೊಟ್ಟೆಯಿಂದ ನಕ್ಷತ್ರಲೋಕ ಸೃಷ್ಟಿಸಿದ, ನಾಲ್ಕನೆಯ ಮೊಟ್ಟೆಯಿಂದ ಬ್ರಹ್ಮ, ವಿಷ್ಣು, ಈಶ್ವರ ಈ ಮೂರ್ತಿಗಳು ಹುಟ್ಟಿದರು. ಇವರು ಬೆಳೆದು ದೊಡ್ಡವರಾದ ಮೇಲೆ ಇವರನ್ನು ಕಂಡು ಆದಿಶಕ್ತಿಗೆ ಮತ್ತೇ ಕಾಮಾತುರವಾಯಿತು. ಮದುವೆಯಾಗಲು ಒತ್ತಾಯಿಸಿದಳು. ವಿಷ್ಣು, ಬ್ರಹ್ಮ ಒಪ್ಪಲಿಲ್ಲ. ಶಿವ ತಾತ ಹೇಳಿಕೊಟ್ಟ ಉಪಾಯದಂತೆ ಹಣೆಯಲ್ಲಿನ ಉರಿಗಣ್ಣು ಮತ್ತು ಕೈಯಲ್ಲಿನ ಉರಿ ಅಸ್ತ್ರ ಕೊಡುವುದಾದರೆ ಮದುವೆಯಾಗುತ್ತೇನೆಂದ ಆದಿಶಕ್ತಿ ಆನಂದದಿಂದ ಕೊಟ್ಟಳು. ಶಿವ ಉರಿಗಣ್ಣನ್ನು ನೆತ್ತಿಯಲ್ಲಿಟ್ಟುಕೊಂಡು ಅವಳನ್ನು ದಿಟ್ಟಿಸಿದ. ಅವಳು ಉರಿದು ಬೂದಿಯಾದಳು. ಆ ಬೂದಿ ಗುಡ್ಡೆಯಾಕಾರದ ಮೂರು ಭಾಗವಾಗಿ ಮಾಡಿ ಮೂರು ಜನ ಸುಂದರಿಯರಾದ ಲಕ್ಷ್ಮೀ, ಸರಸ್ವತಿ ಮತ್ತು ಪಾರ್ವತಿಯರು ಜನಿಸಿದರು. ಇವರನ್ನು ತ್ರಿಮೂರ್ತಿಗಳು ಮದುವೆಯಾಗಿ ಜಗತ್ತಿನ ಸೃಷ್ಟಿಗೆ ಕಾರಣರಾದರು. ನಂತರ ವಿಷ್ಣು ಶಕ್ತಿಯಿಂದ ಅಂಡದಿಂದ ೨೧ ಲಕ್ಷ ಜೀವರಾಶಿಯನ್ನು ಪಿಂಡದಿಂದ ೨೧ ಲಕ್ಷ ರಾಶಿಯನ್ನು ರೂಜ್ ಬೀಜದಿಂದ ೨೧ ಲಕ್ಷ ಜೀವರಾಶಿಯನ್ನು ಮತ್ತು ಜೆರಾಯುಜ ಬೀಜದಿಂದ ೨೧ ಲಕ್ಷ ಜೀವರಾಶಿ ಹೀಗೆ ೮೪ ಲಕ್ಷ ಜೀವರಾಶಿ ಸೃಷ್ಟಿಯಾಯಿತೆಂದು ಪ್ರತೀತಿ ಇದೆ."[೨] ಆರಂಭದ ಸೃಷ್ಟಿ ಪುರಾಣಕ್ಕೂ ಕೊನೆಯ ಸೃಷ್ಟಿ ಪುರಾಣಕ್ಕೂ ಸಾಮತ್ಯವಿದೆ. ಎರಡನೆ ಸೃಷ್ಟಿ ಪುರಾಣ ಈ ಎರಡೂ ಪುರಾಣಗಳಿಗಿಂತ ಭಿನ್ನವಾದ ನಿಲುವನ್ನು ಪ್ರತಿಪಾದಿಸುವುದನ್ನು ಕಾಣಬಹುದು.

ಮಾನವರ ಉಗಮ ವಿಕಾಸವನ್ನು ಕುರಿತು ಆಧುನಿಕ ಮಾನವಶಾಸ್ತ್ರಜ್ಞರು ಒಡ್ಡುವಂತಹ ಮಾನವ ಮೂಲತಃ ರೂಪುಗೊಂಡದ್ದು ಹೇಗೆ? ಎಲ್ಲಿ? ಯಾವಾಗ? ಅನ್ಯ ಪ್ರಾಣಿಗಳಿಗೂ ಮಾನವನಿಗೂ ಸಂಬಂಧವಿದೆಯೇ? ಮಾನವನು ದೈವ ಸೃಷ್ಟಿಯ ವಿಶಿಷ್ಟ ವರದಾನದ ಫಲವೆ? ಸತ್ತ ಮೇಲೆ ಮನುಷ್ಯ ಏನಾಗುತ್ತಾನೆ? ಮೃತ್ಯುಂಜಯನಾಗಿ ಮಾನವ ಅನಂತ ಕಾಲ ಬದುಕಲು ಸಾವನ್ನು ಗೆಲ್ಲಲು ಉಪಾಯಗಳಿಲ್ಲವೆ? ಇತ್ಯಾದಿ ಸಂಘರ್ಷಾತ್ಮಕ ಸಾಂಸ್ಕೃತಿಕ ವಿಚಾರಗಳು ಮಾನವ ಸೃಷ್ಟಿಯ ಪರಿಕಲ್ಪನೆಯಲ್ಲಿ ಆದಿಯಿಂದಲೂ ವಿಚಾರವಂತ ಮನಷ್ಯ ಜೀವಿ ಈ ಕುರಿತು ಯೋಚಿಸುತ್ತಲೇ ಬಂದಿದ್ದಾನೆ. ಆದರೆ ಇತ್ತೀಚಿನ ದೇಸಿ ಪರಂಪರೆಯ ಪ್ರಜ್ಞೆ ಸಮುದಾಯಗಳ ಮೂಲಗಳ ಮೌಖಿಕ ಪರಂಪರೆಯ ಪ್ರಜ್ಞೆಯನ್ನು ಎಚ್ಚರಿಸುತ್ತಾ ಮೌಖಿಕವಾಗಿರುವ ಸಾಹಿತ್ಯವನ್ನು ದಾಖಲಿಸುವ ಅಧ್ಯಯನಿಸಿರುವುದನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಮಾನವನ ಸೃಷ್ಟಿಯ ಪ್ರಜ್ಞೆ ಸಮುದಾಯಗಳ ಅಂತರ್ಯದಲ್ಲಿ ಸೃಷ್ಟಿಸಿಗೊಂಡು ತಮ್ಮದೇ ಆದ ಸಾಂಸ್ಕೃತಿಕ ಚರಿತ್ರೆಯ ಅನನ್ಯತೆಯನ್ನು ಭಾವಪೂರ್ಣತೆಯಿಂದ ಜೀವನ ಶ್ರದ್ಧೆಗಳ ಮೂಲಕ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಕಟ್ಟಿಕೊಂಡು ಬಂದಿರುವ ಸೃಷ್ಟಿ ಪುರಾಣಗಳಲ್ಲಿ ಕಾಣುತ್ತೇವೆ. ಈ ವಿವೇಚನೆ ಭಾರತೀಯ ಸಂದರ್ಭದಲ್ಲಿ

[illegible]

ಮಾತ್ರವಲ್ಲದೆ ಜಗತ್ತಿನ ಹಲವಾರು ದೇಶಗಳಲ್ಲಿನ ಜನ ಸಮುದಾಯಗಳ ಸಾಂಸ್ಕೃತಿಕ ವಿವೇಚನೆಗಳಾಗಿವೆ. ಆದರೆ ಇವು ಬೇರೆ ಬೇರೆ ಅನಿಸಿದರೂ ಮತ್ತು ಅವುಗಳು ಪ್ರಾದೇಶಿಕ ನೆಲೆಯಲ್ಲಿ ಬೇರೆ ಬೇರೆಯಾದರು ಸಮಷ್ಠಿ ಪ್ರಜ್ಞೆಯಲ್ಲಿ ಒಂದೇ ಎಂಬಂತೆ ಬುಡಕಟ್ಟು ಸೃಷ್ಟಿ ಪುರಾಣಗಳಲ್ಲಿರುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಆಯ್ಕೆಗೊಂಡಿರುವ ಅಲೆಮಾರಿ ಬುಡಕಟ್ಟು ಸಮುದಾಯಗಳಾದ ಗೊಂದಲಿಗ, ಬುಡ್ಗಜಂಗಮ, ದೊಂಬಿದಾಸ, ಅರ್ಜುನಜೋಗಿ ಸಮುದಾಯಗಳ ಸೃಷ್ಟಿಪುರಾಣಗಳನ್ನು ಮೇಲಿನ ಪ್ರಜ್ಞೆಯನ್ನೇ ಪ್ರತಿಪಾದಿಸುತ್ತವೆ. ಈ ಮೇಲಿನ ನಾಲ್ಕು ಸಮುದಾಯಗಳ ಸೃಷ್ಟಿ ಪುರಾಣಗಳು ಮೇಲ್ನೋಟಕ್ಕೆ ಕಥೆಯ ರೂಪದಲ್ಲಿ ಅತಿಮಾನುಷವಾದ ಅಬೇಧ ಕಲ್ಪನೆಯಲ್ಲಿ ಮನುಷ್ಯ ಮತ್ತು ಸಮುದಾಯದ ಸೃಷ್ಟಿಯನ್ನು ಕುರಿತು ಮೌಖಿಕವಾಗಿ ಕಟ್ಟಿಕೊಡುತ್ತವೆ. ಈ ಸೃಷ್ಟಿಪುರಾಣಗಳಲ್ಲಿ ಮಾನವ ವಿಕಾಸದ ಪರಿಕಲ್ಪನೆಯನ್ನು ಬುಡ್ಗಜಂಗಮ ಮತ್ತು ದೊಂಬಿದಾಸರ ಸೃಷ್ಟಿ ಪುರಾಣಗಳಲ್ಲಿ ಸಮುದಾಯಿಕ ವಿಕಾಸದ ಅಥವಾ ಬೆಳವಣಿಗೆಯನ್ನು ತಮ್ಮ ಕಥನದಲ್ಲಿ ಪ್ರತಿಪಾದಿತವಾಗುತ್ತವೆ. ಈ ರೀತಿಯ ಭಿನ್ನತೆಯನ್ನು ಪ್ರತಿಪಾದಿಸುವುದರ ಹಿಂದೆ ಸಮುದಾಯವೊಂದರ ಸಾಮಾಜಿಕ ಬದುಕಿನ ಸಂವೇದನೆಗಳು ಇಂತಹ ಕಥನಗಳು ಸೃಷ್ಟಿಗೊಳ್ಳಲು ಕಾರಣವಾಗಿವೆ ಎಂಬುದನ್ನು ತಿಳಿಯಬಹುದು.

ಅಲೆಮಾರಿ ಸಮುದಾಯಗಳಲ್ಲಿ ಇಂತಹ ಕಥನಗಳು ರೂಪುಗೊಂಡಿರುವುದರ ಹಿನ್ನೆಲೆ ಏನು, ಏತಕ್ಕಾಗಿ ಇವು ಸೃಷ್ಟಿಗೊಂಡವು? ಯಾರು ಸೃಷ್ಟಿಸಿದರು? ಎಂಬ ಪ್ರಶ್ನೆಗಳಿಗೆ ಉತ್ತರಗಳಾಗಿ ಸ್ಥಾಪಿತ ಸಾಮಾಜಿಕ ವ್ಯವಸ್ಥೆ ಸೃಷ್ಟಿಸಿದ ಸಾಮಾಜಿಕ ಸಂರಚನೆ ಸಾಂಸ್ಕೃತಿಕ ಸಂವೇದನೆಗಳ ಬದುಕಿನ ಮೀಮಾಂಸೆ ಇವರಲ್ಲಿ ಇಂತಹ ಹತ್ತಾರು ಕಥನಗಳು ಸೃಷ್ಟಿಗೊಳ್ಳಲು ಕಾರಣವಾಗಿದೆ ಎಂಬುದಾಗಿ ತಿಳಿಯುತ್ತದೆ. ಗೊಂದಲಿಗ, ಬುಡ್ಗಜಂಗಮ, ಅರ್ಜುನಜೋಗಿ, ದೊಂಬಿದಾಸ ಸಮುದಾಯಗಳ ಮಾನವ ಮತ್ತು ಸವಾಲುಗಳ ಉಗಮ ಮತ್ತು ವಿಕಾಸದ ಕಥನಗಳು ಇವು ಬೇರೆ ಬೇರೆ ಮಾರ್ಗಗಳನ್ನು ಅನುಸರಿಸಿದರು. ಆದರೆ ಅವುಗಳ ಸಾಂಸ್ಕೃತಿಕ ಮತ್ತು ಸಾರ್ವತ್ರಿಕ ನೆಲೆಯಲ್ಲಿ ಒಂದೇ ನಿಲುವುಗಳನ್ನು ಪ್ರತಿಪಾದನೆ ಮಾಡುತ್ತವೆ. ಮಾನವ ಸೃಷ್ಟಿಯ ಪ್ರಜ್ಞೆಯಂತೆ ಕಾಣಿಸಿಕೊಳ್ಳುತ್ತವೆ. ಸಮುದಾಯದ ಒಳಗೆ ಮನುಷ್ಯ ಸೃಷ್ಟಿಯ ಬಗ್ಗೆ ವೈಚಾರಿಕ ಆವರಣವನ್ನು ಸೃಷ್ಟಿಸುತ್ತವೆ. ಗೊಂದಲಿಗರ ಮಚ್ಚಗಂಧಿನಿ ಕತೆ, ಶಿವ ಪಾರ್ವತಿಯರು ಭಕ್ತರಿಗೆ ವರಗಳನ್ನು ನೀಡಿದ ಕಥೆ, ತಾರಕಸುರ ಮಕರಾಸುರ ಮತ್ತು ಯುದ್ದಮಾರಿ ಮತ್ತು ಮೂರು ಮಂದಿ ರಾಕ್ಷಸ ಅಣ್ಣ ತಮ್ಮಂದಿರ ಕಥೆಗಳು. ಜೋಗಿ ಸಮುದಾಯದ ಉಪ ಪಾಂಡವ ಅರ್ಜುನ ಕಥೆ, ದೊಂಬಿದಾಸರ ನವಿಲಿನ ಮೊಟ್ಟೆಗಳ ಕಥೆ ಮತ್ತು ಮಡಂಬ ಕೊಪ್ಪಲು ವೆಂಕಟರಾಮು ಅವರ ದೊಂಬಿದಾಸರ ಕುರಿತ ಆದಿಶಕ್ತಿ ಕಥೆಗಳು, ಬುಡ್ಗಜಂಗಮರ ಪಂಚಭೂತಗಳಾದ ಆಕಾಶ, ಭೂಮಿ, ನೀರು, ವಾಯ, ಅಗ್ನಿಗಳಿಂದ ಮನುಷ್ಯ ಸೃಷ್ಟಿ ಎಂಬ ಕಥೆಗಳು ಪೌರಾಣಿಕವಾಗಿ ಮಾನವ ಸಮುದಾಯವೊಂದು ಅವತರಿಸಲು ಅನುಭವಿಸಿದ ಸಾಂಸ್ಕೃತಿಕ ಸಂಘರ್ಷಗಳನ್ನು ತಿಳಿಸುತ್ತವೆ. ಈ ಸೃಷ್ಟಿಪುರಾಣಗಳಲ್ಲಿ ವಿಜೃಂಭಣೆ, ವಾಸ್ತವ ನೆಲೆಗಳನ್ನು ಮೀರಿ ಅವಾಸ್ತವತೆಯನ್ನು ತಿಳಿಸುತ್ತವೆಯಾದರೂ ಭೂಮಿಯ ಮೇಲೆ ಮನುಷ್ಯ ತಾನು ಅಸ್ತಿತ್ವಕ್ಕೆ ಬಂದ ಹಿನ್ನೆಲೆಗೆ ದೈವಿಕ ಮತ್ತು ಪ್ರಕೃತಿಯ ಅದ್ಭುತ ಶಕ್ತಿಗಳನ್ನು ಒಲಿಸಿಕೊಳ್ಳುವಿಕೆ, ಪಳಗಿಸುವಿಕೆಯ ದೃಷ್ಟಿ ದೈವತ್ವ ಮತ್ತು

ಪ್ರಕೃತಿಯ ರಹಸ್ಯವನ್ನು ಭೇದಿಸುವ ಸಮುದಾಯಗಳು ತಮ್ಮದೇ ಮೌಖಿಕ ಕಥನಗಳಲ್ಲಿ ಅಭೂತ ಕಲ್ಪನೆಗಳ ಮೂಲಕ ಮೌಖಿಕವಾಗಿ ಕಟ್ಟಿಕೊಂಡು ಬಂದಿವೆ.

ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳು ಮೇಲ್ಜಾತಿಗಳ ವ್ಯವಸ್ಥಿತ ತನದಿಂದ ಸಹಜವಾಗಿಯೇ ಕೆಳಜಾತಿ ಸ್ಥಾನ ಪಡೆದಿವೆ. ಇವರ ಸಾಮಾಜಿಕ ಸ್ಥಾನಮಾನದ ಹಿನ್ನೆಲೆಯಲ್ಲಿ ಇವರ ಸೃಷ್ಟಿಪುರಾಣಗಳು ಸೃಷ್ಟಿಯಾಗಿವೆ. ಅಲ್ಲದೆ ನಂತರದ ಇವರ ಆರ್ಥಿಕ ವ್ಯಾಪ್ತಿಯ ಬದುಕನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ. ಅರ್ಜುನಜೋಗಿಗಳ ಸೃಷ್ಟಿಪುರಾಣದಲ್ಲಿ ಶಾಪಗ್ರಸ್ಥನಾದ ಅರ್ಜುನ ಅಣ್ಣನ ಆಜ್ಞೆಯಂತೆ ಪ್ರಾಯಶ್ಚಿತವಾಗಿ ಹನ್ನೆರಡು ವರ್ಷಗಳ ತೀರ್ಥಯಾತ್ರೆಗೆ ಪರ್ಯಾಟನೆ ಹೋಗುತ್ತಾನೆ. ಆಗ ಕಿನ್ನರಿ ಬಾರಿಸುತ್ತಾ 'ಹಂಡಿ' ಎಂಬ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಭಿಕ್ಷಾಟನೆ ಮಾಡುತ್ತಿದ್ದ ಎಂಬುದಲ್ಲದೆ ಇತರೆ ಸೃಷ್ಟಿ ಪುರಾಣಗಳಲ್ಲಿ ಬರುವ ಕಥೆಯ ತಿರುವುಗಳು ಗೊಂದಲಿಗರಲ್ಲಿ ಒಮ್ಮೆ ಶಿವ-ಪಾರ್ವತಿಯರು ತಮ್ಮ ಭಕ್ತರಿಗೆ ವರಗಳನ್ನು ನೀಡುತ್ತಾ ಇದ್ದಾಗ ಬಂದ ಬಡವರಿಗೆ ಅವರು ಬೇಡಿದ್ದನ್ನು ದಾನ ಮಾಡಿದರು. ಕೈಯಲ್ಲಿದ್ದದ್ದೆಲ್ಲಾ ಮುಗಿದಾಗ ಬುಡಬುಡಕೆಯ ಜನಾಂಗದವರು ಬಂದು ಬೇಡಿದಾಗ ಆಗ ಪಾರ್ವತಿ ಇವರನ್ನು ಬರಿಗೈಯಲ್ಲಿ ಕಳುಹಿಸಲೊಪ್ಪದೆ ಶಿವನ ಕೈಯಲ್ಲಿರುವ ಢಮರುಗವನ್ನೇ ಅವರಿಗೆ ದಾನ ಮಾಡಿಸಿದಳಂತೆ ಇದನ್ನೇ ಉಪಜೀವನದ ಆಧಾರವಾಗಿಟ್ಟುಕೊಂಡು ಇವರು ಇಂದಿಗೂ ಬದುಕತ್ತಿದ್ದಾರೆಂದರೆ ಸೃಷ್ಟಿ ಪುರಾಣಗಳು ಅವರನ್ನು ನಿರೂಪಿಸಿರುವ ಬಗೆಯನ್ನು ತಿಳಿಸುತ್ತದೆ ಮತ್ತು ಗೊಂದಲಿಗರಲ್ಲಿರುವ ತಾರಕಾಸುರ ಮಕರಾಸುರ ಮತ್ತು ಯುದ್ಧಮಾರಿ ಎಂಬ ರಾಕ್ಷಸರನ್ನು ನಾಶಮಾಡಿ. ಕೃಷ್ಣ ಬುಡಬುಡಕೆ ವೇಷದಲ್ಲಿ ಹಿಂದಿರುಗುತ್ತಿದ್ದಾಗ ಒಬ್ಬ ವ್ಯಕ್ತಿ ಸ್ವಾಮಿ ಬುಡಬುಡಕೆಯನ್ನು ನನಗೆ ಕೊಡಿ, ನಿಮ್ಮ ಹೆಸರು ಹೇಳಿಕೊಂಡು ಜೀವನ ನಡೆಸುತ್ತೇನೆ. ಎಂದಾಗ ಕೃಷ್ಣ ಬುಡಬುಡಕೆ ಕೊಟ್ಟು ಅವರನ್ನು ಹರಸಿ ನೀನು ಸೂರ್ಯ-ಚಂದ್ರ ಇರುವವರೆಗೂ ಈ ವೃತ್ತಿ ಸಾಗಿಸು ನಿಮ್ಮ ವಂಶದವರಿಗೆ ಬುಡಬುಡಕೆಯವರೆಂದೇ ಹೆಸರಾಗಲಿ ಇದಕ್ಕೆ ನೀವು ತಪ್ಪಿದರೆ ನಿಮಗೆ ದರಿದ್ರಾಂಶ ಬರಲಿ ಎಂದೇಳುವ ಕಥೆ ಮತ್ತು ಗೊಂದಲಿಗರ ಕುರಿತು ಇರುವ ಹಕ್ಕಿ ಶಕುನದ ಸೃಷ್ಟಿ ಪುರಾಣ ಅರ್ಜುನಜೋಗಿ ಗೊಂದಲಿಗರ ಸೃಷ್ಟಿ ಪುರಾಣಗಳು, ಬುಡ್ಗಜಂಗಮರ ಮತ್ತು ದೊಂಬಿದಾಸರ ಸೃಷ್ಟಿಪುರಾಣಗಳಿಗಿಂತ ಭಿನ್ನತೆಯ ನಿಲುವನ್ನು ತಾಳುತ್ತವೆ. ಈ ಹಿನ್ನೆಲ್ಲೆಯಲ್ಲಿ ಸಮುದಾಯವೊಂದು ಹಸಿವು ನಿಗಿಸಿಕೊಂಡು ನಂತರ ಆರ್ಥಿಕ ವೃದ್ಧಿಗೆ ಜಾತಿ ಆಧಾರಿತ ಕಸುಬುಗಳು ಯಾವ ರೀತಿ ಕಾರಣವಾದವು ಎಂಬುದನ್ನು ತಿಳಿಸುತ್ತಾ ಬದುಕನ್ನು ಹರಸಿ ಶಾಪಗ್ರಸ್ಥನಾದ ಅರ್ಜುನ ವನವಾಸದ ಸಂದರ್ಭ ಬೇಡಿ ಪಡೆದ ಬುಡಬುಡಕೆ ಇವೆಲ್ಲಾ ಅಲೆಮಾರಿತನದ ದೃಷ್ಟಿಯನ್ನು ಅವರ ಸೃಷ್ಟಿ ಪುರಾಣಗಳಲ್ಲಿಯೇ ರೂಪಿತಗೊಂಡಿರುವುದನ್ನು ಸೂಕ್ಷ್ಮವಾಗಿ ಕಾಣಬಹುದಾಗಿದೆ. ಇಂದಿಗೂ ಅವರ ಸೃಷ್ಟಿ ಪುರಾಣಗಳಿಗೆ ಜಾತಿ ಆಧಾರಿತ ವೃತ್ತಿಗೂ ಬೇರೆಯವರಿಗೆ ಮೇಲ್ನೋಟಕ್ಕೆ ಮನರಂಜನೀಯವಾಗಿ ಕಂಡರು ಅವುಗಳ ಅಂತರ್ಯದಲ್ಲಿ ಅವರಿಗೆ ಭಾವುಕವಾದ ಸಂಬಂಧವಿದೆ. ಮೇಲಿನ ಅವಲಂಬನೆ ಅವರ ಅಲೆಮಾರಿತನ್ನು ತಿಳಿಸುತ್ತದೆ ಎಂಬುದಕ್ಕೆ ಅವರ ಸೃಷ್ಟಿ ಪುರಾಣಗಳು ನಮಗೆ ಸಾಕ್ಷಿ ಪ್ರಜ್ಞೆಯಾಗಿ ಕಂಡುಬರುತ್ತದೆ.

ಗೊಂದಲಿಗರ ಕಾರ್ತವೀರಾರ್ಜುನನ ಸಂಹಾರ ಕಥೆ, ತಾರಕಾಸುರ, ಮಕರಾಸುರ ಮತ್ತು ಯುದ್ಧಮಾರಿ ಕಥೆಯ ಎಳೆಯನ್ನು ಬೇರೊಂದು ತಿರುವುಗಳಲ್ಲಿರುವ ಕಥೆಯಾಗಿದೆ. ಹಾಗೂ ದೊಂಬಿದಾಸರ ಮಡಬಕೊಪ್ಪಲು ಕಲಾವಿದರಾದ ವೆಂಕಟರಾಮು ಅವರು ಹೇಳುವ ಆದಿಶಕ್ತಿ ಮಯಂಬೀಜಂ ಬೀಜಶಕ್ತಿಮಯಂ ಸೃಷ್ಟಿ, ವಿಷ್ಣುಶಕ್ತಿ ಮಯಂ ಜಗತ್ತು ಕಥೆಗಳಲ್ಲಿ ರಾಕ್ಷಸರು ಕೊಡುವ ಕಾಟಕ್ಕೆ ಮಾನವರು ತತ್ತರಿಸಿ ಹೋಗಿ ಮತ್ತೆ ಮಾನವ ಸೃಷ್ಟಿ ಸಂಕುಲಕ್ಕೆ ಸಮೃದ್ಧಿ ಬದುಕು ಕರುಣಿಸುವುದು ಮಾನವ ಜಗತ್ತಿನ ವಿಕಾಸದ ಪರಿಕಲ್ಪನೆಯ ಪೌರಾಣಿಕವಾದದೊಂದಿಗೆ ವಾಸ್ತವ ವಾದವನ್ನು ಪ್ರತಿಪಾದಿಸುತ್ತವೆ. ಮಾನವ ದುಷ್ಟಶಕ್ತಿಗಳೊಂದಿಗೆ ಸಂಘರ್ಷಿಸಿ ತಾಮಸ ವ್ಯಕ್ತಿಗಳೊಂದಿಗೆ ಹೋರಾಡಿ ಜಗತ್ತು ಸೃಷ್ಟಿಸಿದ ನಿಲುವುಗಳು ಬುಡ್ಗಜಂಗಮರ ಸೃಷ್ಟಿ ಪುರಾಣದಲ್ಲೂ ಕಾಣುತ್ತೇವೆ. ಮಾತ್ರವಲ್ಲದೆ ಇತರೆ ಎಲ್ಲ ಸಮುದಾಯಗಳಲ್ಲಿರುವ ಸೃಷ್ಟಿ ಪುರಾಣಗಳು ಸಂಘರ್ಷಯುಕ್ತತೆಯನ್ನು ಪ್ರತಿಪಾದಿಸುತ್ತವೆ. ಗೊಂದಲಿಗ, ಬುಡ್ಗಜಂಗಮ, ಜೋಗಿ ಮತ್ತು ದೊಂಬಿದಾಸ ಅಲೆಮಾರಿ ಸಮುದಾಯಗಳ ಸೃಷ್ಟಿ ಪುರಾಣಗಳಲ್ಲಿ ಅಲೌಕಿಕವಾದ ನೆಲೆಯಿಂದ ಲೌಕಿಕವಾದ ನೆಲೆಗೆ ಬಂದು ನಿಲ್ಲುತ್ತವೆ. ದೇವಾನು ದೇವತೆಗಳು ನೀಡಿದ ವರವೋ, ಶಾಪವೋ ಎಂಬಂತೆ ಸಮುದಾಯವೊಂದು ಸೃಷ್ಟಿಯಾಗಿರುವುದನ್ನು ಕಾಣುತ್ತವೆ. ಬ್ರಹ್ಮ, ವಿಷ್ಣು, ಶಿವ, ಪಾರ್ವತಿ, ಶ್ರೀಕೃಷ್ಣ, ನಾರದ ದೇವಾನು ದೇವತೆಗಳು ಮತ್ತು ರಾಕ್ಷಸರು ಇವರ ಸಂಘರ್ಷದಲ್ಲಿ ಗೆದ್ದ ದೇವಾನು ದೇವತೆಗಳನ್ನೇ ಇವರು ಇಂದಿಗೂ ಆರಾಧಿಸಿಕೊಂಡು ಮನೆದೇವರಾಗಿ ತಮ್ಮ ಧಾರ್ಮಿಕ ಪರಂಪರೆಯನ್ನು ಸೃಷ್ಟಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅಲೆಮಾರಿ ಸಮುದಾಯಗಳು ಪ್ರಸ್ತುತ ಜೀವನ ವಿಧಾನದಲ್ಲೂ, ಇತರೆ ಸಮುದಾಯಗಳ ಹೋಲಿಕೆಯಲ್ಲಿ ಸಾಂಸ್ಕೃತಿಕ ಭಿನ್ನತೆಯ ಜೀವನವನ್ನು ಅನಾವರಣಗೊಳಿಸುವ ಇವರ ಸೃಷ್ಟಿಪುರಾಣಗಳು ಸಾಂಕೇತಿಕವಾಗಿ ಈ ಸಮುದಾಯಗಳನ್ನು ಪ್ರತಿಬಿಂಬಿಸುತ್ತವೆ.

ಒಟ್ಟಾರೆ ಇಲ್ಲಿನ ಸೃಷ್ಟಿಪುರಾಣಗಳು ಒಂದು ನೆಲೆಯಲ್ಲಿ ದೊಂಬಿದಾಸರ ಮತ್ತು ಬುಡ್ಗಜಂಗಮರ ವಿಶ್ವ ಸೃಷ್ಟಿಯನ್ನು ಹೇಳಿದರೆ ಗೊಂದಲಿಗ ಮತ್ತು ಅರ್ಜುನಜೋಗಿಯರ ಸೃಷ್ಟಿ ಪುರಾಣಗಳು ತಮ್ಮ ಸಮುದಾಯಗಳ ಸೃಷ್ಟಿಯ ಬಗ್ಗೆ ತಿಳಿಸುತ್ತವೆ. ಹಾಗೆಯೇ ಈ ಸಮುದಾಯಗಳ ಪವಿತ್ರ ಆವರಣ ಇವರ ಸೃಷ್ಟಿ ಪುರಾಣಗಳಾಗಿವೆ. ಜನಾಂಗದ ಸಾಂಕೇತಿಕ ಹಿನ್ನೆಲೆಯನ್ನು ಸಾರುತ್ತವೆ. ಪ್ರತಿಯೊಂದು ಜನಾಂಗ ಮತ್ತು ಧರ್ಮದಲ್ಲಿ ತನಗೆ ಸಂಬಂಧಿಸಿದ ಸೃಷ್ಟಿಪುರಾಣಗಳನ್ನು ಅಪಾರ ಸಂಖ್ಯೆಯಲ್ಲಿ ಸೃಷ್ಟಿಸಿಕೊಂಡಿರುತ್ತವೆ. ಆದರೆ ಅವೆಲ್ಲಾವುಗಳಿಗಿಂತಲೂ ಆದಿವಾಸಿ ಅಲೆಮಾರಿ ಅನಕ್ಷರಸ್ಥ ಜನಾಂಗಗಳಲ್ಲಿನ ಈ ಕಥನಗಳಿಗೂ ವ್ಯತ್ಯಾಸವನ್ನು ಕಾಣಬಹುದಾಗಿದೆ. ಅತಿಮಾನುಷ ವಿರೋಧಗಳು ಮಾಂತ್ರಿಕತೆಯ ಅದ್ಭುತಗಳು, ವಿಧೇಯತೆ, ಒಳ್ಳೆಯ ಹಾಗೂ ಕೆಟ್ಟ ಗುಣಗಳ ಸಂಘರ್ಷ ಕೊನೆಗೆ ಉನ್ನತ ಶಕ್ತಿಗಳ ಪಾರಮ್ಯ ಮೆರೆಯುವ ಪರಿಕಲ್ಪನೆ ಇತ್ಯಾದಿ ಅಂಶಗಳನ್ನು ಇಲ್ಲಿ ಸಮುದಾಯಗಳ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಅಲ್ಲದೆ ಅವರ ಆತ್ಮಕಥನಗಳ ರೂಪಕಗಳಂತೆ ಅವರ ಜೀವನದಲ್ಲಿ ಅಳವಡಿಸಿಕೊಂಡ ಸಂಹಿತೆಗಳಂತೆ ಅವರ ವಾಸ್ತವ ಬದುಕನ್ನು ಅವರಿಸಿಕೊಂಡಿವೆ.

೪.೨. ಗೊಂದಲಿಗರ ಹಾಡುಗಳಲ್ಲಿ ಪುರಾಣ ಪ್ರಜ್ಞೆ

ದೈವೀ ಶಕ್ತಿಯನ್ನು ಕೊಂಡಾಡುವ ಹಾಡುಗಳೇ ಗೊಂದಲಿಗರಿಗೆ ಪ್ರಧಾನವಾಗಿದ್ದರೂ, ಅವುಗಳ ಹೊರತಾಗಿಯೂ ಬೇರೆ ಬೇರೆ ಪದಗಳನ್ನು ಸಂದರ್ಭನುಸಾರವಾಗಿ ಅವರು ಹಾಡುವುದನ್ನು ಕಾಣಬಹುದು. ಅವರು ಹಾಡುವ ಹಾಡು, ಕಥಾ ಸ್ವರೂಪವನ್ನು ಈ ಕೆಳಗಿನಂತೆ ವಿಂಗಡಿಸಬಹುದು. ಸ್ತುತಿಪದಗಳು, ಗೊಂದಲದ ಪದಗಳು, ತತ್ತ್ವ ಪದಗಳು ಮತ್ತು ಮನರಂಜನೆಯ ಪದಗಳು.

ಗೊಂದಲಿಗರ ಕಥೆಗಳನ್ನು ಬಾಗ್ಸ್‌ರವರ ಜನಪದ ಕಥೆಗಳ ವಿಂಗಡಣೆಯ ಮಾದರಿಯಲ್ಲಿ ನಿಂಗಣ್ಣ ಸಣ್ಣಕ್ಕಿ, ಮುದೇನೂರು ಸಂಗಣ್ಣ, ಕ್ಯಾತನಹಳ್ಳಿ ರಾಮಣ್ಣ ವಿಂಗಡಿಸಿದ್ದುಂಟು. ಆದರೆ ಇದು ಸಮರ್ಪಕವಾದ ವಿಂಗಡಣೆ ಎನಿಸುವುದಿಲ್ಲ. ಏಕೆಂದರೆ ಗೊಂದಲಿಗರ ಕಥೆಗಳು ಯಾವೊಂದು ಪ್ರಕಾರವನ್ನು ಸಮರ್ಥವಾಗಿ ಪ್ರತಿನಿಧಿಸುವುದಿಲ್ಲ. ಹೀಗಾಗಿ ಅವುಗಳನ್ನು ಕಿನ್ನರಕಥೆ, ರಮ್ಯಕಥೆ ಅಥವಾ ಪ್ರಾಣಿಕಥೆ ಎಂದು ಕರೆದರೆ ಕಥೆಯಲ್ಲಿ ಅಷ್ಟೇ ಸಮರ್ಥವಾಗಿ ಕ್ರಿಯಾತ್ಮಕಗೊಳ್ಳುವ ಮಾನವ ಸಂಬಂಧಗಳಂತಹ ಇನ್ನುಳಿದ ಅಂಶಗಳಿಗೆ ಧಕ್ಕೆ ಬರುತ್ತದೆ. ಆದುದರಿಂದ ಕಥೆಗಳ ಸ್ಥೂಲ ಸ್ವರೂಪವನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಇವು ಪುರಾಣಗಳ ವಸ್ತುಗಳನ್ನು ಹೆಚ್ಚಾಗಿ ಅವಲಂಬಿಸಿಕೊಂಡಿವೆ.

'ಗೊಂದಲ' ಎನ್ನುವುದು ತಮ್ಮ ಧಾರ್ಮಿಕ ಕ್ರಿಯೆಯಾಗಿರುವುದರಿಂದ ಪ್ರಾರಂಭದಲ್ಲಿ ತಮ್ಮ ಮನೆಯ ದೇವಿಯನ್ನು ಪೂಜಿಸುವ ಕ್ರಮವುಂಟು. ಗೊಂದಲಿಗ ಭಿಕ್ಷಾಟನೆಗೆ ಹೋದರೂ ಮೊದಲು ಮನೆಯಲ್ಲಿ ದೇವಿಯನ್ನು ಪೂಜಿಸಿ ಅವಳಿಗೆ ತನ್ನ ವಾದ್ಯಗಳನ್ನು ಬಳಸಿ ಹಾಡುವ ಮೂಲಕ ಆರ್ಚನೆ ಮಾಡಿದ ತುರವಾಯವೇ ಭಿಕ್ಷೆಗೆ ತನ್ನ ವಾದ್ಯಗಳನ್ನು ಒಯ್ಯುವುದು. ಹಾಡನ್ನು ಪ್ರರಂಭಿಸುವುದಕ್ಕಿಂತ ಪೂರ್ವದಲ್ಲಿ ತನ್ನ ವಾದ್ಯಗಳಾದ ತುಂತುಣಿ(ಚೌಡಿಕೆ) ಮತ್ತು ಸಂಬಾಳ(ಸಮಾಳ) ತಾಳಗಳನ್ನು ಒಂದು ಸುತ್ತು ನುಡಿಸಿದ ನಂತರವೇ ಹಾಡನ್ನು ಹಿಮ್ಮೇಳದ ಜೋತೆಗೆ ಸ್ತುತಿಯನ್ನು ಪ್ರಾರಂಭಿಸುವುದು. ಪ್ರಾರಂಭಕ್ಕೆ ವಾದ್ಯಗಳನ್ನು ನುಡಿಸಲು ಕಾರಣ ಪ್ರೇಕ್ಷಕರ ಗಮನ ಸೆಳೆಯುವ ಉದ್ದೇಶವಾಗಿರುತ್ತದೆ. ಹಾಡಿಗೆ ಶೃತಿ ಸೇರಿಸುವ ಸಲ್ಲುವಾಗಿ ತಯಾರಿಮಾಡಿಕೊಳ್ಳಬಹುದು. ಜೊತೆಗೆ ಎಷ್ಟೋ ಗೊಂದಲಿಗರು ಅಶುಕವಿಗಳು ಒಬ್ಬ ಗೊಂದಲಿಗ ಕಲಾವಿದನ ಒಂದೇ ಕಥೆಯನ್ನು ಹಲವಾರು ಬಾರಿ ಗಮನಿಸಿದರೆ ಒಮ್ಮೆ ಹಾಡಿದ ಕಥೆಯೊಳಗಿನ ಹಾಡು, ಸಂಭಾಷಣೆ ಇನ್ನೊಂದು ಪ್ರದರ್ಶನದಲ್ಲಿ ಬದಲಾಗಿರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಾಗರಾಜಪ್ಪ, ಚಿತ್ರಹಳ್ಳಿ ಎನ್ನುವ ಗೊಂದಲಿಗನ ಒಂದೇ ಕಥೆಯನ್ನು (ಅಂಬಾಭವಾನಿ) ಹಲವಾರು ಬಾರಿ ನೋಡುವ ಅವಕಾಶ ದೊರೆಯಿತು. ಆತನ ಕಥಾವಸ್ತು ಒಂದೇ ಆಗಿದ್ದರೂ ಹಾಡುವಾಗ ಒಮ್ಮೊಮ್ಮೆ ಮೊದಲ ಪ್ರದರ್ಶನದಲ್ಲಿ ಹಾಡಿದ ಹಾಡಿನ ಬದಲಾಗಿ (ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ) ಬೇರೆ ಹಾಡನ್ನು ಹಾಡುತ್ತಿದ್ದ. ವಾದ್ಯಗಳು, ಪರಿಕರಗಳು, ಹಿಮ್ಮೇಳ ಹಾಡುಗಾರ ಮತ್ತು ಪ್ರೇಕ್ಷಕ ಇಬ್ಬರನ್ನು ಪ್ರದರ್ಶನಕ್ಕೆ ಅವನಿಗರಿವಿಲ್ಲದೆ ಅಣಿಗೊಳಿಸುತ್ತವೆ. ವಾದ್ಯಗಳನ್ನು ಪ್ರಾರಂಭಕ್ಕೆ ನುಡಿಸಿ ಮುಗಿಸಿದ ನಂತರ ಕಲಾವಿದ 'ಹರ ಹರಾ ದೇವಿ ಅಂಬಾ' ಎನ್ನುವ ಸೊಲ್ಲನ್ನು ನುಡಿಯುತ್ತಾನೆ, ಹರ ಹರಾದೇವಿ ಎಂದ ತಕ್ಷಣವೇ ಕಥೆ ಪ್ರಾರಂಭವಾಯಿತೆಂದೇ ಅರ್ಥ.

ತರುವಾಯ ಹಲವಾರು ದೇವಿಯ ಕುರಿತು ಕೀರ್ತನೆ, ನಾಮಾವಳಿ, ಹಾಡುಗಳನ್ನು ಹಾಡುತ್ತಾನೆ. ಇವೆಲ್ಲಾ ದೇವಿರಲ್ಲಿ ಮಹಿಮೆನ್ನು ಹುಟ್ಟಿಸುವಂತಹ ಪದಗಳೇ ಆಗಿರುತ್ತದೆ.

"ತಾಯಿ ಅಂಬಾ ಬಾರಮ್ಮಾ ಶಾಂಭಾವಿ॥

ತಾಯೇ ಬಾರಮ್ಮಾ ಜಗದಾಂಬೇ

ಕೃಪೆ ತೋರೇ ಕರಿಯಲ್ಲಾ ತಾಯಿ॥"[೧೩]

ಹೀಗೆ ಪ್ರಾರಂಭಗೊಳ್ಳುವ ಹಾಡು ದೇವಿಯನ್ನು ಪ್ರಾರಂಭದಲ್ಲಿ ಬಾರುಮಾಡಿಕೊಳ್ಳುತ್ತಾರೆ. ಸಮುದಾಯದ ಒಳತಿಗಾಗಿ ದೇವಿಯ ಹತ್ತಿರ ಕೇಳುತ್ತಾನೆ ನಿನ್ನ ಜಗಕ್ಕೆಲ್ಲಾ ಮಹಿಮೆಗಳನ್ನು ತಿಳಿಸು ಬಾರಮ್ಮ ಎಂದು ತಮ್ಮ ಹಾಡುನ್ನು ಮುಂದುವರೆಸುತ್ತಾರೆ ಹಾಗೆ ಗಣಸ್ತುತಿಯೂ ನಡೆಯುತ್ತದೆ.

"ಅಂಬಾ ಪಾಲಿಸು ಜಗದಂಬಾ ಪಾಲಿಸು

ಗೌರಿಸುತನೆ ಗಜಮುಖನೇ

ವಿದ್ಯೆ ಬುದ್ಧಿ ಪ್ರಧಾಯಕ

ಏಕದಂತ ಮೂಸಿಕ ವಾಹನ

ಪಾಲಿಸು ತಂದೇ ಅಂಬಾ....

ಎಂದು ಹಾಡುತ್ತಾರೆ. ಹಾಡುಗಳೆಲ್ಲಾ ಪ್ರತಿ ಪ್ರದರ್ಶನ ಸಂದರ್ಭದಲ್ಲೂ ಭಿನ್ನವಾಗಿಯೆ ಇರುತ್ತದೆ.

ಗೊಂದಲ ಹಾಕಿದ ದೇವಿಗೆ ಗೊಂದಲ ॥ಪ॥

ಗೌರಿಸುತನೆ, ಗಜಮುಖನೇ

ವಿಘ್ನವಿನಾಶಕ ಬುದ್ಧಿ ಪ್ರಧಾಯಕ

ಏಕದಂತ ಮೂಸಿಕ ವಾಹನ

ಪಾಲಿಸು ತಂದೇ

ಅಂಬಾ...

ಎಂದು ಹಾಡುತ್ತಾರೆ.

ಗೊಂದಲ ಹಾಕಿದೆ ದೇವಿಗೆ ಗೊಂದಲ ॥ಪ॥

ತಾಯಿಯ ಗೊಂದಲ ಉಧೋ ಉಧೋ

ಅಂಬಾನ ಹೆಸರಿನ ಗೊಂದಲ

ಜಗದಾಂಬೆ ಹೆಸರಿನ ಗೊಂದಲ

ರೇಣುಕೆಯ ಹೆಸರಿನ ಗೊಂದಲ

ಮಹಾಲಕ್ಷ್ಮಿ ಹೆಸರಿನ ಗೊಂದಲ

ಗೊಂದಲ ಹಾಕಿದೆ ಶಕ್ತಿಗೆ ಗೊಂದಲ
ತಾಯಿಯ ಗೊಂದಲ ನೆಡದದ
ಉಧೋ ಉಧೋ ಉಧೋ
ಉಧೋ ಉಧೋ ಉಧೋ

ಹೀಗೆ ಹಾಡುತ್ತಾ ದೇವಿಯ ಸ್ತುತಿಯ ಕೊನೆಯಲ್ಲಿ ಪ್ರೇಕ್ಷಕರನ್ನು ನಿಮಗೆ ಯಾವ ಕಥೆ ಬೇಕು ಎಂದು ಪ್ರಶ್ನಿಸುತ್ತಾನೆ. ಇದು ಇವರಲ್ಲಿರುವ ಕಲಾ ಸಮೃದ್ಧಿಯನ್ನು ಈ ಕೆಳಗಿನಂತೆ ತಿಳಿಸುತ್ತದೆ.

ಶರಣ ಶಾಸ್ತ್ರ ಹೇಳತೀವಿ
ರಾಜರಾಣಿ ಕತಿ ಹೇಳತೀವಿ
ಜಗದಾಂಬೆ ಮಹಿಮೆ ಹೇಳುತೀವಿ
ಇದರಾಗ ನಿಮಗ್ಯಾವ್ದು ಬೇಕರೀ॥”[೧೪]

ಎಂದು ಕೇಳುತ್ತಾನೆ. ಈ ಹಾಡನ್ನು ಅರ್ಥಪೂರ್ಣವಾಗಿ ಸಹಜವಾಗಿ ಮತ್ತು ಸರಳವಾಗಿ ತಮ್ಮ ಹಾಡಿನ ಮೂಲಕ ಅಭಿವ್ಯಕ್ತ ಪಡಿಸುತ್ತಾರೆ. ಗೊಂದಲಿಗಾರು ಹಾಡುವ ಪ್ರತಿಯೊಂದು ಕಥೆ, ಕಾವ್ಯವು ತಮ್ಮ ಸಮುದಾಯಕ್ಕಾಗಲ್ಲಿ ಅಥವಾ ತಮ್ಮ ಲಾಭಕ್ಕಾಗಿ ತಮ್ಮ ಕಾವ್ಯವನ್ನು ಹಾಡುವುದಿಲ್ಲ ಇಡೀ ಸಮಾಜಕ್ಕೆ ಪ್ರಸಾರಿಸುತ್ತಾರೆ. ಈ ಹಾಡಿನ ಪ್ರಾರಂಭದಲ್ಲೇ ಹಾಡನ್ನು ನೋಡಿದ್ದರೆ ತಿಳಿಯುತ್ತದೆ ಅಂಬಾ ಪಾಲಿಸು ಜಗದಂಬಾ ಪಾಲಿಸು, ಗೌರಿಸುತನೆ ಗಜಮುಖನೇ, ವಿದ್ಯೆ ಬುದ್ಧಿ ಪ್ರಧಾಯಕ. ಏಕದಂತ ಮೂಸಿಕ ವಾಹನ, ಪಾಲಿಸು ತಂದೇ ಅಂಬಾ ಈಗೇ ಹಾಡನ್ನು ಮುಗಿಸಿದ ನಂತರ ಸ್ವಲ್ಪ ಹೊತ್ತು ಪ್ರೇಕ್ಷಕರ ಚರ್ಚೆಗೆ ಸಮಯ ಕೊಟ್ಟು ಅವರು ಯಾವ ಕಥೆ ಕೇಳಲು ಆಪೇಕ್ಷಿಸುತ್ತಾರೋ ಆ ಕಥೆಯನ್ನು ಗೊಂದಲಿಗ ಹೇಳುತ್ತಾನೆ. ಮುಖ್ಯ ಗಾಯಕ ಹಾಡನ್ನು ಮೊದಲು ಪ್ರಾರಂಭಿಸುತ್ತಾನೆ. ಮತ್ತು ಸಂಬಾಳವನ್ನು ಮತ್ತು ತಾಳವನ್ನು ನುಡಿಸುವಾತನೂ ಈತನೇ ಆಗಿರುತ್ತಾನೆ. ಹಿಮ್ಮೇಳಕ್ಕೆ ಒಬ್ಬ ಗಾಯಕನಿದ್ದು, ಅವನು ಸಾಮಾನ್ಯವಾಗಿ ಚೌಡಿಕೆ ಅಥವಾ ತುಂತುಣಿ ನುಡಿಸುವವನಾಗಿರುತ್ತಾನೆ. ಕಥೆಗಾರ ತನ್ನ ವಾದ್ಯಗಳನ್ನೇ ಕುದುರೆಗಳಾಗಿ, ಹೊದಿಕೆಯಾಗಿ ಹೀಗೆ ಕಥಾ ಸಂದರ್ಭಕ್ಕೆ ತಕ್ಕಂತೆ ಅವುಗಳನ್ನು ಬಳಸಿಕೊಳ್ಳುವಲ್ಲಿ ಸಮರ್ಥನಾಗಿರುತ್ತಾನೆ. ವಾದ್ಯಗಳು ಇಲ್ಲಿ ವಾದ್ಯ ಪರಿಕರಗಳಾದಂತೆ ಪ್ರದರ್ಶನದ ಹಲವು ಪಾತ್ರಗಳಾಗಿಯೂ ಕಾರ್ಯ ನಿರ್ವಹಿಸುತ್ತವೆ. ಗೊಂದಲ ಕೇವಲ ಹಾಡುಗಾರಿಕೆಯಾಗಿರದೆ ಒಂದು ಸಮರ್ಥ ದೃಶ್ಯ ಮಾಧ್ಯಮವೂ ಆಗಿದೆ. ಸಮಯಕ್ಕೆ ತಕ್ಕಂತೆ ಕಥೆಯನ್ನು ಹಿಗ್ಗಿಸುವ ಮತ್ತು ಕುಗ್ಗಿಸುವ ಕಲೆಗಾರಿಕೆಯೂ ಹಾಡುಗಾರನಿಗೆ ಇರುತ್ತದೆ. ಇದು ಅವರ ಸಮಯ ಪ್ರಜ್ಞೆಯನ್ನು ತೋರಿಸುತ್ತದೆ. ಪುರಾಣದ ವಸ್ತುವನ್ನು ಬಳಸಿಕೊಂಡು ತಮ್ಮ ಕಲೆಯನ್ನು ವಾಸ್ತವದೊಂದಿಗೆ ಅನುಸಂಧಾನಿಸುತ್ತಾರೆ.

ಸ್ತುತಿ ಪದಗಳು: ಸಾಮಾನ್ಯವಾಗಿ ಸ್ತುತಿಯಲ್ಲಿ ದೇವಿಯ ಪವಾಡ, ಮಹಿಮೆಗಳನ್ನು ಹೇಳುತ್ತಾರೆ. ಮುಮ್ಮೇಳದ ಹಾಡುಗಾರ ಹಾಡಿ ನಂತರ ಪ್ರತಿ ಸಾಲನ್ನು ಪುನಃ ಹಿಮ್ಮೇಳದ ಹಾಡುಗಾರ ಹಾಡುತ್ತಾನೆ.

"ಆದಿಶಕ್ತಿ ಅವತಾರ ಜಗದಾಂಬಾ ನೀನು
ದುರುಳ ದೈತ್ಯರ ನೆಲಸಮಗೊಳಿಸಿದೆ
ತಾಯಿ ಕರಿಯಲ್ಲಾ
ಸವದತ್ತಿಯೊಳಗೇ ನೀ ನೆಲಸಿದೆ
ಪರಶುರಾಮನ ನೀ ಹಡದೆ ತಾಯೆ
ಎಲ್ಲರಿಗೆ ಎಲ್ಲಮ್ಮನಾದೇ
ತಾಯಿ ಜಗದಾಂಬಾ॥"[೧೫]

ಹೀಗೆ ಹಾಡು ಮುಂದುವರೆಯುತ್ತದೆ. ಒಮ್ಮೊಮ್ಮೆ ತುಳಜಾಭವಾನಿ, ಮಹಾಕಾಳಿ, ರೇಣುಕೆಯ ಕಥೆ, ಹುಲಿಗೆಮ್ಮರ ಕುರಿತು ಹಾಡುತ್ತಾರೆ. ಜಗದಾಂಬೆ ಇರುವುದರಿಂದಲೇ ಈ ಜಗತ್ತಿದೆ ಎನ್ನುವ ಅರ್ಥಗಳನ್ನೇ ಈ ಸ್ತುತಿ ಪದಗಳು ಪರೋಕ್ಷವಾಗಿ ಪ್ರತಿಬಿಂಬಿಸುತ್ತವೆ. ಈ ಹಾಡುಗಳು ಬಹುತೇಕ ಲಾವಣಿಯ ರೀತಿಯಲ್ಲಿ ನಡೆಯುವ ಸವಾಲು-ಜವಾಬು ರೀತಿಯ ಪರಿಣಾಮಗಳನ್ನು ಇವು ಹೊರ ಹೊಮ್ಮಿಸುತ್ತವೆ. ಕಲಾವಿದನು ಪೂರ್ವರಂಗದಲ್ಲಿ ಈ ರೀತಿಯ ಹಾಡುಗಾರಿಕೆಯನ್ನು ಹಾಡಿ ನಂತರ ಮುಖ್ಯ ಕಥೆ ಹಾಡುತ್ತಾನೆ.

ಕಥನಗಳು: ಸಾಮಾನ್ಯವಾಗಿ ಗೊಂದಲಿಗರ ಕಥೆಗಳು ಜಾನಪದ ಹಿನ್ನೆಲೆಯುನ್ನು ಹೊಂದಿರುವಂತವುಗಳಾಗಿರುತ್ತವೆ. ಈ ಕಥೆಗಳ ಸ್ವರೂಪದ ಆಧಾರದ ಮೇಲೆ ಪೌರಾಣಿಕ, ಚಾರಿತ್ರಿಕ, ಸಾಮಾಜಿಕವೆಂದು ವರ್ಗೀಕರಿಸದಬಹುದು. ಗೊಂದಲಿಗರಲ್ಲಿ ಬಹುತೇಕ ಈ ಕಥೆಗಳೆಲ್ಲಾ ರಂಜಿತವಾಗಿರುತ್ತವೆ. ಸಾಮಾಜಿಕ ಚರಿತ್ರೆಯ, ಪೌರಾಣಿಕ ಅಂಶಗಳನ್ನು ಹೆಚ್ಚು ಒಳಗೊಂಡಿರುತ್ತವೆ. ಗೊಂದಲಿಗರ ಕಥೆಗಳಲ್ಲಿ ಅತಿ ರಂಜಕತೆ, ಅದ್ಭುತ ರಮ್ಯತೆ, ಪವಾಡ, ಪಶು, ಪಕ್ಷಿಗಳ ಸಂವಾದಗಳನ್ನೆಲ್ಲಾ ಒಳಗೊಂಡಿರುತ್ತದೆ. ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಗೊಂದಲಿಗರಲ್ಲಿ ಪ್ರಚಲಿತವಿರುವ ಕಥೆಗಳೆಂದರೆ, ಅಡವಿ ಕುಮಾರನ ಕಥೆ, ಬಾಳಾಭಿಕ್ಷುಕನ ಕಥೆ, ಶೀಲಾವತಿ ಕಥೆ, ಅಕ್ಕಮಹಾದೇವಿ ಕಥೆ, ಸತಿ ಸುಲೋಚನಾ ಕಥೆ, ಎಲ್ಲಮ್ಮ, ಅಂಬಾದೇವಿಯರ ಕಥೆ, ಹೇಮರೆಡ್ಡಿ ಮಲ್ಲಮ್ಮ, ಶಿರಿಯಾಳ ಶೆಟ್ಟಿಯ ಕಥೆ, ನಳರಾಜ, ಸತ್ಯವಂಥ ಹರಿಶ್ಚಂದ್ರನ ಕಥೆ, ಕುಮಾರರಾಮನ ಕಥೆ, ರಸ್ತಾಳರಾಜನ ಕಥೆ ಇನ್ನೂ ಮುಂತಾದವುಗಳು. ವಸ್ತು ವಿಷಯ ಎಂಥದೇ ಆದರೂ ತಮ್ಮ ಗತ್ತಿಗೆ ಹೊಂದಿಸಿಕೊಂಡು ತಮ್ಮದೇ ಎನ್ನುವಂತೆ ವಿವರಿಸುವ ಗೊಂದಲಿಗರ ಸೃಜನ ಶಕ್ತಿ ಅಗಾಧವಾದುದು. ಇವರ ಕಥೆ ಆರಂಭವಾಗುವುದೇ ಜನಪದ ಕಥೆಗಳ ಶೈಲಿಯಲ್ಲಿ ಒಂದಾನೊಂದು ಊರು, ಆ ಊರಿನಲ್ಲಿ ಊರಿಗೊಬ್ಬ ರಾಜ, ಅವನಿಗೆ ಏಳು ಜನ ರಾಣಿಯರು ಹೀಗೆ ಕಥೆ ಪ್ರಾರಂಭಿಸುತ್ತಾರೆ. ಒಬ್ಬ ಮುಖ್ಯ ಹಾಡುಗಾರನ ಜೋತೆಗೆ ಸಹ ಗಾಯಕರು, ಅಲ್ಲದೆ ಸಹ ವಾದ್ಯಗಾರನೂ ಆಗಿರುತ್ತಾನೆ. ಕಥೆಯು ಮುಂದುವರೆಯಲು ಆತನಿಗೆ ಸಹಾಯ ಬೇಕೇ ಬೇಕು ಇಲ್ಲವೆಂದರೆ ಕಥೆಯು ಮುಂದಕ್ಕೆ ಸಾಗುವುದಿಲ್ಲ ಎಂಬುವುದು ಮುಖ್ಯ ಗಾಯಕ ಹೇಳುತ್ತಾನೆ. ಅವನು ವೈವಿಧ್ಯಮಯ ಕಥೆ, ಶಿಲ್ಪಗಳು, ರಾಜ ರಾಣಿಯರು ಮಕ್ಕಳ

ಭಾಗ್ಯಕ್ಕಾಗಿ ಪರಿತಪಿಸುವ ಯಾತನೆಯ ಅಂಶಗಳು ಕೆಲವು ಕಥೆಗಳಲ್ಲಿ ಇದ್ದರೆ, ಪತಿವ್ರತೆ ಧರ್ಮವನ್ನು ಪ್ರೇಕ್ಷಕನಿಗೆ ತಿಳಿಸಿಕೊಡುವ ಆಟಗಳು ಸಹ ಇರುತ್ತವೆ. ಒಟ್ಟಿನಲ್ಲಿ ಕಥೆ ಯಾವುದೇ ಆಗಿದ್ದರೂ ಅದು ನವರಸ ಭರಿತವಾಗಿರುತ್ತದೆ. ವಿಭಿನ್ನ ಅಭಿರುಚಿಯ, ಪ್ರೇಕ್ಷಕರಿಗೆ ಒಂದಲ್ಲಾ ಒಂದು ರೀತಿಯಲ್ಲಿ ಸಂತೃಪ್ತಿಗೊಳಿಸುವುದೇ ಹಾಡುಗಾರನ ಉದ್ದೇಶವಾಗಿರುತ್ತದೆ. ಕಥೆ ಸಣ್ಣದಾಗಿದ್ದರೂ ಆ ಕಥೆಗೆ ಉಪ ಕಥೆಗಳನ್ನು ಬೆಸೆದು ದೀರ್ಘವಾಗಿ ಕಥೆ ಬೆಳೆಯಲು ನೋಡಿಕೊಳ್ಳುವ ಜಾಣ್ಮೆ ಗೊಂದಲಿಗರ ಹಾಡುಗಳಲ್ಲಿ ಕಂಡುಬರುತ್ತದೆ.

ಇವರು ಹಾಡುವ ಕಥೆಯಲ್ಲಿ ಮುಖ್ಯವಾಗಿ "ಸತಿ ಸುಲೋಚನ ಕಥೆಯ ಸಂಗ್ರಹಿತ ರೂಪವನ್ನೇ ನೋಡಬಹುದು. ತಂದೆಗೆ ಮುಪ್ಪು ಆವರಿಸುತ್ತದೆ. ಆಗ ತಂದೆ ಮಗನನ್ನು ಕರೆದು ರಾಜ್ಯಭಾರದ ಹೊಣೆಯನ್ನು ಒಪ್ಪಿಸುತ್ತಾನೆ. ಕಿರಿಯ ವಯಸ್ಸಿನ ಮಗ ನನಗೆ ಅನುಭವ ಸಾಲದೆಂದು ಹಿಂಜರಿಯುತ್ತಾನೆ. ಆಗ ರಾಜನು ಹೆದರಬೇಕಾದ ಅವಶ್ಯಕತೆ ಇಲ್ಲವೆಂದು ಪ್ರತಿಯೊಂದು ಕ್ಷಣವೂ ತನ್ನ ಮಗನ ಹಿಂದೆ ಇರುವುದಾಗಿಯೂ ತಪ್ಪಾದ ಕ್ಷಣದಲ್ಲಿಯೆ ತಿದ್ದುವ ಭರವಸೆಯನ್ನು ಮಗನಿಗೆ ಕೊಟ್ಟು ಹುರಿದುಂಬಿಸುತ್ತಾನೆ. ಅನನುಭವಿ ರಾಜಕುಮಾರ ಉತ್ಸಾಹಶಾಲಿಯಾಗಿ ರಾಜ್ಯಭಾರವನ್ನು ನಡೆಸಲು ಮುಂದಾಗುತ್ತಾನೆ. ಏನನ್ನಾದರೂ ಗೆಲ್ಲಬಲ್ಲೆನು ಎನ್ನುವ ಅತಿ ಗರ್ವ, ಕಂಡದ್ದನ್ನೆಲ್ಲಾ ಪಡೆಯಬೇಕೆನ್ನುವ ಅತೀ ಆತುರ ಬುದ್ಧಿಯಿಂದಾಗಿ ರಾಜ್ಯದ ಬೊಕ್ಕಸವನ್ನೇ ಖಾಲಿ ಮಾಡುತ್ತಾನೆ. ಜನರು ತಿನ್ನಲು ಅನ್ನವಿಲ್ಲದೆ, ದುಡಿಯಲು ಕೆಲಸವಿಲ್ಲದೆ ವಲಸೆ ಹೊರಡುತ್ತಾರೆ. ತನ್ನ ರಾಜ್ಯದ ಅವಸ್ಥೆಗೆ ಕಾರಣವೇನೆಂದು ಮಗನು ತಂದೆಗೆ ಕೇಳಿದಾಗ ತಂದೆ ಅತಿ ಉದ್ಧಟತನದ ಉತ್ತರವನ್ನೇ ಕೊಡುತ್ತಾನೆ. ಅವನ ಉತ್ತರದಿಂದ ಕುಪಿತಗೊಂಡ ಮಗ ತಂದೆಯೊಂದಿಗೆ ಜಗಳ ಕಾಯುತ್ತಾನೆ. ಜೊತೆಗೆ ಕಳೆದುಕೊಂಡ ಸಂಪತ್ತನ್ನೆಲ್ಲಾ ಮರಳಿ ಪಡೆಯುವ ಪಣ ತೊಟ್ಟು ದೇಶಾಂತರ ಹೊರಡುತ್ತಾನೆ. ಇತ್ತ ಮಗನ ಹೆಂಡತಿ ಏಕಾಂಗಿಯಾಗಿ ದುಃಖಿಸುತ್ತಾಳೆ. ಈ ಗಂಡನ ಸಂಪತ್ತನ್ನೆಲ್ಲಾ ನುಂಗಿದ ಹಕ್ಕಿಗಳನ್ನು ಶಪಿಸುತ್ತಾಳೆ. ಇವಳ ದುಃಖವನ್ನು ಕಂಡ ಜೋಡಿ ಹಕ್ಕಿಗಳು ಗಂಡ ಹೆಂಡಿರನ್ನು ಮರಳಿ ಕೂಡಿಸುತ್ತವೆ. ಈ ಕೂಡುವಿಕೆಯು ಮಾತ್ರ ಯಾರಿಗೂ ತಿಳಿಯುವುದಿಲ್ಲ. ಯಾಕೆಂದರೆ ರಾಜಕುಮಾರನು ರಾತ್ರಿಯೇ ಬಂದು ರಾತ್ರಿಯೇ ಹೊರಟು ಹೋಗುತ್ತಾನೆ. ಯುವರಾಣಿ ಬಸಿರಾಗುತ್ತಾಳೆ. ವಿಷಯ ತಿಳಿದ ಅತ್ತೆಮಾವ ಅವಳ ಕುರಿತು ಶಂಕೆ ಪಡುತ್ತಾರೆ. ಹಾಗೂ ಅವಳನ್ನು ಕೊಲ್ಲಿಸಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಕೊನೆಗೆ ಅವಳನ್ನು ತವರಿಗೂ ಅಟ್ಟುತ್ತಾರೆ. ತವರಿನಲ್ಲಿ ಅವಳ ತಂದೆ ಅವಳನ್ನು ನಿರಾಕರಿಸುತ್ತಾನೆ. ತನ್ನ ಗಂಡು ಮಕ್ಕಳನ್ನೆಲ್ಲ ಕರೆದು ನಿಮ್ಮ ತಂಗಿಯನ್ನು ಕೊಂದು ಹಾಕಿರೆಂದು ಆಜ್ಞಾಪಿಸುತ್ತಾನೆ. ಇಲ್ಲಿ ಎಲ್ಲಾ ಮಕ್ಕಳು ಒಂದೊಂದು ಕಥೆಯನ್ನು ಹೇಳುತ್ತಾರೆ. ಈ ಕಥೆಗಳ ಅರ್ಥ, ಹೋದ ಜೀವ ಮರಳಿ ಬಾರದು, ಸರಿಯಾಗಿ ವಿಚಾರಿಸು ಎನ್ನುವುದೇ ಆಗಿರುತ್ತದೆ. ಕೊನೆಯ ಮಗ ಮಾತ್ರ ಕೊಲ್ಲಲು ಒಪ್ಪಿ ಅವಳನ್ನು ಕಾಡಿಗೆ ಕರೆದುಕೊಂಡು ಹೋಗುತ್ತಾನೆ. ಅವಳು ಕಾಡಿನಲ್ಲಿ ಮಲಗಿದಾಗ ಇಡೀ ಕಾಡಿಗೆ ಬೆಂಕಿ ಹಚ್ಚುತ್ತಾನೆ. ಆ ಕಾಡಿನ ಬೆಂಕಿಯಿಂದ ಪಾರಾದ ಅವಳು ಮಗುವನ್ನು ಹಡೆದು ಗಂಡನನ್ನು ಸೇರಿ ಸುಖವಾಗಿ ಜೀವನವನ್ನು ಸಾಗಿಸುತ್ತಾಳೆ."[೧೩]

ಹೀಗೆ ಕಥೆಗಳು ಅನೇಕ ಉಪಕಥೆಗಳಾಗಿ, ಗದ್ಯ, ಪದ್ಯಗಳೊಂದಿಗೆ ರೂಪ ಹೊಂದುತ್ತಾ ಸಾಗುತ್ತದೆ. ಗೊಂದಲಿಗರ ಹಾಡು ಮತ್ತು ಕಥೆಗಳು ಯಾವುದೋ ಆಶಯವನ್ನು ಮುಖ್ಯವಾಗಿಸಿ ಕೊಂಡಿದ್ದರೂ ಸಹ ಅವುಗಳನ್ನು ಪ್ರತಿನಿಧಿಸುವ ಜೀವಪರ ಮೌಲ್ಯಗಳು ಹೆಚ್ಚಾಗಿ ಕಂಡು ಬರುತ್ತವೆ. ಅವು ಸಮುದಾಯಿಕ ಬದುಕಿನ ಪ್ರತಿರೂಪಗಳಾಗಿ ಕಂಡುಬರುತ್ತದೆ. ಹಾಗಾಗಿಯೇ ಪ್ರೇಕ್ಷಕ ಮತ್ತು ಹಾಡುಗಾರನ ಮಧ್ಯೆ ಸಾಮರಸ್ಯ ಮೇಳೈಸುವುದು ಸಹಜವೇನೋ ಎನಿಸುತ್ತದೆಯಲ್ಲದೆ ಪುರಾಣದ ಪ್ರಜ್ಞೆಯನ್ನು ಬೆಳೆಸುತ್ತದೆ.

ತುಂತುಣಿ ಹಾಗೂ ಚೌಡಿಕೆ ವಾದ್ಯಗಳ ಪೌರಾಣಿಕ ಹಿನ್ನೆಲೆ: "ತುಂತುಣಿ ಅಥವಾ ಚೌಡಿಕೆ ಹುಟ್ಟಿನ ಬಗ್ಗೆ ಎರಡು ರೀತಿಯ ಮಾಹಿತಿ ಲಭ್ಯವಿದೆ. ಬಕಾಸುರ ಎಂಬ ರಾಕ್ಷಸನನ್ನು ಪರಶುರಾಮನು ಸಂಹಾರ ಮಾಡುತ್ತಾನೆ. ಸಂಹಾರ ಮಾಡಿದಾಗ ದೈತ್ಯನ ಬ್ರಹ್ಮ ರಂಧ್ರದಿಂದ ತಂತುವೊಂದು ಹೊರಬೀಳುತ್ತದೆ. ಹೊರಬಿದ್ದ ಆ ತಂತುವನ್ನು ತಂತಿ ಮಾಡಿ ದೇಹವನ್ನು ಪಡಗ ಮಾಡಿ, ಟಿಂವ್... ಟಿಂವ್... ಎಂದು ಬಾರಿಸುತ್ತಾ ತಾಯಿಯ ಹತ್ತಿರ ಬಂದು ವರ ಪಡೆಯುತ್ತಾನೆ. ಅಂದಿನಿಂದ ಈ ತುಂತುಣಿ ಬಳಕೆಗೆ ಬಂತು. ಎರಡನೆಯ ಕಥೆ ಎಲ್ಲಮ್ಮನ ಚೌಡಿಕೆಯ ಹುಟ್ಟಿನ ಬಗ್ಗೆ ಇರುವ ಕಥೆಯಾಗಿದೆ. ಕಾರ್ತ್ಯವೀರ್ಯನನ್ನು ಪರಶುರಾಮನು ಸಂಹಾರ ಮಾಡಿ, ದೇಹವನ್ನು ದಂಡಿಗೆ ಮಾಡಿ, ಕರುಳನ್ನು ತಂತಿಯಾಗಿಸಿ, ನಾಲಿಗೆಯನ್ನು ಕಡ್ಡಿಯಾಗಿಸಿಕೊಂಡು, ವಾದ್ಯವನ್ನು ಬಾರಿಸುತ್ತಾ ಕುಣಿದನಂತೆ ಈ ಎರಡು ಮಾಹಿತಿಗಳು ರಾಕ್ಷಸ ಶಕ್ತಿಯ ಪ್ರಾಯೋಗಿಕ ಬಳಕೆಯನ್ನು ಹೇಳುತ್ತವೆ. ಲೋಕಕಂಟಕರಾದವರನ್ನು ಪಳಗಿಸಿ ತಿರುಗಿ ಲೋಕಕ್ಕೆ ಕೊಡುವ ದೇವತೆಯ ಶಿಕ್ಷಕ ಮತ್ತು ರಕ್ಷಕ ಶಕ್ತಿಯ ಸಂಕೇತವನ್ನು ಇದು ಸೂಚಿಸುತ್ತವೆ."೧೭

ಇದು ತಂತಿಯನ್ನು ಬಿಗಿಯಾಗಿ ಜಗ್ಗಿ ಹಿಡಿಯುವುದರಿಂದ ಹಾಡುಗಾರನ ಸ್ವರಗತಿಗೆ ಅನುಕೂಲವಾಗುವಂತೆ ಸಹಕರಿಸುತ್ತದೆ. ಚಿತ್ರದುರ್ಗ ಪ್ರದೇಶದಲ್ಲಿ ಈ ತುಂತುಣಿಯ ರೂಪದಲ್ಲಿರುವ ಚೌಡಿಕೆಯನ್ನು ಜೋಗತಿಯರು ಬಳಸುವ ಶ್ರುತಿಯಾಗಿ ಬಳಸುವುದನ್ನು ಕಾಣಬಹುದು. ತುಂತುಣಿಯನ್ನೇ ಹೋಲುವ ಒಂದು ತಂತಿ ವಾದ್ಯವು ಸ್ಥಳೀಯ ಯಲ್ಲಮ್ಮನ ಜೋಗತಿಯರಲ್ಲಿ ಶೃತಿ ಚೌಡಿಕೆಯಾಗಿ ಬಳಕೆಯಲ್ಲಿದೆ.

೪.೩. ಬುಡ್ಗಜಂಗಮರ ಬುರ್ರ ಕಥೆಗಳಲ್ಲಿ ಪುರಾಣ ಪ್ರಜ್ಞೆ

ಕೃಷ್ಣಗೊಲ್ಲರ ಕಾವ್ಯ: ಕೃಷ್ಣಗೊಲ್ಲರ ಕಾವ್ಯವು ಬುರ್ರಕಥೆಗಳಲ್ಲಿಯೇ ಅತೀ ಸುದೀರ್ಘವಾದ ಕಾವ್ಯವಾಗಿದೆ. ಈ ಕಾವ್ಯವನ್ನು ಸುಮಾರು ಮೂರು ರಾತ್ರಿಗಳನ್ನು ಮೀರಿ ಹಾಡುತ್ತಾರೆ. ಕಾಂಬೋಜರಾಜ, ಶರಬಂಧರಾಜರೆಂಬ ಮೂರು ತಲೆಮಾರಿನ ಅರಸರ ಕಥೆ ಇದಾದರೂ ಈ ಅರಸರು ಜನಸಾಮಾನ್ಯರ ಪ್ರತಿನಿಧಿಗಳಂತೆ ಗುರುತ್ತಿಸಿಕೊಂಡಿದ್ದಾರೆ. ಪ್ರತಿಯೊಂದು ಜನಪದರು ಹಾಡುವ ಕಥನ, ಕಾವ್ಯಗಳಲ್ಲಿ ಕಂಡುಬರುವಂತೆ ಮಾಟ, ಮಂತ್ರ, ಮಾಯಾ, ಶೌರ್ಯ, ಸಾಹಸಗಳ ಸರಮಾಲೆಯನ್ನೇ ಚಿತ್ರಿಸುವ ಈ ಕಾವ್ಯದಲ್ಲಿ ಸುದೀರ್ಘವಾಗಿ ಸಾಗಿಬರುತ್ತಾದೆ.

ಮೊದಲಿಗೆ ಕಾವ್ಯದಲ್ಲಿ ಶರಬಂಧರಾಜನೆಂಬ ಅರಸ ಕಾಡಿಗೆ ಬೇಟೆಗಾಗಿ ಹೊರಟವನು ಬೇಟೆ ಫಲಕಾರಿಯಾಗದೆ ನಿರಾಶನಾಗಿ ಹಿಂತಿರುಗುತ್ತಾನೆ. ಹೀಗೆ ಹಿಂತಿರುಗುವಾಗ ಭೂಲೋಕದ ಪ್ರಶಾಂತವಾದ

ವನದಲ್ಲಿ ಕಾಮ ದೇವತೆ (ಕಾಮಧೇನು) ಹಸು ವಿಶ್ರಾಂತಿ ಪಡೆಯುತ್ತಿರುತ್ತದೆ. ಅದನ್ನು ನೋಡಿದ ಅರಸ ಶರಬಂಧರಾಜನು ಯಾವುದೋ ಪ್ರಾಣಿ ಎಂದು ಭಾವಿಸಿ ಬಾಣವನ್ನು ಕಾಮದೇವತೆಗೆ ಬಿಡುತ್ತಾನೆ. ರೆಕ್ಕೆಗಳುಳ್ಳ ಕಾಮದೇವತೆ ದೇವಲೋಕಕ್ಕೆ ಹಾರಲು ಪ್ರಯತ್ನಿಸುತ್ತದೆ. ಆದರೆ ಆದಕ್ಕೆ ಬಾಣದ ಎಟ್ಟು ಬಿದ್ದಿರುವುದರಿಂದ ಭೂಮಿಯಲ್ಲಿ ಉಳಿಯುತ್ತದೆ. ಆ ಕಾಮದೇವತೆ ತುಂಬು ಗರ್ಭವತಿಯಾಗಿರುತ್ತಾಳೆ, ಆಗ-ಈಗ ಹೆರಿಗೆಯಾಗುವಂತ ಸ್ಥಿತಗೆ ಬಂದಿರುತ್ತೆ. ಆದರೆ ಸಾವಿನಂಚಿನಲ್ಲಿರುವ ಕಾಮದೇವತೆ ತನ್ನೊಟ್ಟೆಯೊಳಗೆ ಹೆಣ್ಣುಂಟೋ, ಗಂಡು ಮಗು ಉಂಟೋ ಎಂದು ಚಿಂತಿ ಮಾಡುತ್ತಾಳೆ. ಸಾಮಾನ್ಯ ಮನುಷ್ಯನ ಬಾಣದಿಂದ ಘಾಸಿಗೊಂಡು ಬಿದ್ದ ಕಾಮದೇವತೆಗೆ ದೇವಲೋಕಕ್ಕೆ ಬರಬೇಡವೆಂದು ದೇವಾನುದೇವತೆಗಳು ಅಡ್ಡಿ ಉಂಟು ಮಾಡುತ್ತಾರೆ. ಇನ್ನೂ ಆದುದ್ದಾಗಲಿ, ಕಾಮದೇವತೆ ನಾನು ಭೂಮಿ ಮೇಲೆಯೇ ಪ್ರಾಣ ಬಿಡುತ್ತೇನೆ ಎಂದು ಹೇಳುತ್ತಾಳೆ. ದುರ್ದೈವವೆಂದರೆ ಈ ಕಾಮದೇವತೆಯೇ ಶರಬಂಧರಾಜನ ಮನೆ ಆರಾಧ್ಯದೈವ ಆಗಿರುವುದರಿಂದ, ಅವಳನ್ನು ನೋಡಿದಾಕ್ಷಣ ಅವಳ ಕಾಲಿಕ್ಕೆ ಬಿದ್ದು ಬೇಡಿಕೊಳ್ಳುತ್ತಾನೆ.

"ಯಮ್ಮಾ ನಮ್ಮ ಮನೆ ದೇವತೆ
ನಾವು ಇನ್ನ ಕೆಂಪುಗೊಲ್ಲರಮ್ಮ ನಾವು ॥ತಂದಾನ॥
ತಾಯಿ ನಿನ್ನ ಹಾಲು ಕುಡಿದವರು
ತಾಯೇ ನಿನ್ನ ಲೋಕ ಸಲುವೋರು ॥ತಂದಾನ॥"[೧೮]

ಎಂದು ಬೇಡಿಕೊಳ್ಳುತ್ತಾನೆ. ಆದರೆ ಆಕ್ರೋಶಗೊಂಡಂತ ಕಾಮದೇವತೆ ನಾನು ಗರ್ಭದರಿಸಿರುವಂತವಳು. ಆದರೆ ನೀನು ನನ್ನನ್ನು ವಿನಾಃ ಕಾರಣ ಅನ್ಯಾಯವಾಗಿ ಕೊಂದೆ ಎಂದು ಇನ್ನು ನಿಮ್ಮ ವಂಶದಲ್ಲಿ ಯಾರೂ ಗರ್ಭವತಿಯರಾಗುವಂತಿಲ್ಲ ಎಂದು ಮಕ್ಕಳ ಫಲವಿಲ್ಲದ ಶಾಪವನ್ನು ಕೊಟ್ಟು ಅಲ್ಲೇ ತನ್ನ ಪ್ರಾಣವನ್ನು ಬಿಡುತ್ತಾಳೆ.

ಶಾಪಿತನಾದ ರಾಜನು ಕುಪಿತನಾಗುತ್ತಾನೆ. ಇದಕ್ಕೆ ಪರಿಹಾರವೇನು ಎಂದು ಯೋಚಿಸುತ್ತಾ ಕೊನೆಗೆ ತನ್ನ ಬಾಣಕ್ಕೆ ಬಲಿಯಾದಂತಹ ಕಾಮದೇವತೆಯ ಮೃತ ದೇಹವನ್ನು ತಂದು ತನ್ನ ತೋಟದಲ್ಲಿಯೆ ಸಮಾದಿ ಮಾಡಿ ಹಿಂದಿರುಗಿ ಮನೆಗೆ ಬಂದಾಗ ಮನೆಯಲ್ಲಿ ಗರ್ಭವತಿಯಾಗಿರುವ ಹೆಂಡತಿಯು ಹೆರಿಗೆಯಾಗಿ ಮಗುವಿಗೆ ಜನ್ಮ ನೀಡಿರುತ್ತಾಳೆ. ಈ ಮಗು ಹುಟ್ಟಿದ ಮೂರು ತಿಂಗಳ ನಂತರ ಗೋಮಾತೆ ನೀಡಿದ ಶಾಪವು ನಿಜವೆಂಬಂತೆ ಚಾಮರಾಜನು ಮರಣ ಹೊಂದುತ್ತಾನೆ. ಆದರೆ ಇದರಿಂದ ತುಂಬಾ ದುಃಖಿತಳಾದ ಹೆಂಡತಿಯು ದಿಕ್ಕು ತೋಚದೆ ಪ್ರವಾಸವನ್ನು ಮಾಡುತ್ತಾಳೆ.

"ಅಯ್ಯಾ ನನ್ನ ರಂಡಿ ಮಾಡಿ ಹೋದೆಯಯ್ಯೋ
ಅಯ್ಯಾ ನನ ರಂಡಿ ಮಾಡಿ ಬಿಟ್ಟ ಭೂಮಿ ಮ್ಯಾಗೆ ॥ತಂದಾನೆ॥
ಅಯ್ಯಾ ಒಬ್ಬೆ ಹುಟ್ಯಾನಯ್ಯಾ

ಅಯ್ಯಾ ಮಗಾ ಹುಟ್ಟಿ ಮೂರುತಿಂಗಳಾಗಲಿಲ್ಲಾ ॥ತಂದಾನೆ॥

ಅಯ್ಯಾ ಶಿವನೇ ಪರಮಾತ್ಮನೇ ॥ತಂದಾನೆ॥"[೧೯]

ಶರಬಂಧರಾಜನ ಹೆಂಡತಿಯಾದ ನೀಲವೇಣಿಗೆ ಗಂಡ ಸತ್ತ ನಂತರದಲ್ಲಿ ಮುತ್ತೈದೆತನ ಕಳೆದುಕೊಳ್ಳುವ ಸನ್ನಿವೇಶವು ಕಂಡುಬರುತ್ತಾದೆ. ನಿನ್ನ ಮಗ ರಾಜನಾಗಿ ಆಳುತ್ತಾನೆ ಬಿಡು ಎಂದು ಸಮಾಧಾನಿಸಲಾಗುತ್ತದೆ. ಗಂಡ ಸತ್ತ ಸನ್ನಿವೇಶ ಮತ್ತು ಅವಳು ರೋಧಿಸುವ ವೇದನೆ ತುಂಬಾ ಮನೋಜ್ಞವಾಗಿ ಈ ಕಾವ್ಯದಲ್ಲಿ ಮೂಡಿಬಂದಿದೆ.

"ಆಗ ಎಡಗೈ ಬಳೆ ಒಡೆದಳಣ್ಣಾ ॥ತಂದಾನ ತಾನ॥

ಆಗ ಮೂಗು ಮುತ್ತು ತಗದಾಳಣ್ಣಾ ॥ತಂದಾನ॥

ಕೊಳ್ಳಾಗಿನ ತಾಳಿ ತಗುದಾಳಣ್ಣಾ ॥ತಂದಾನ॥

ಆಗ ಎರಡು ಬೊಗಸ್ಯಣ್ಣೊ ಮಣ್ಣು ಬಂದು ಹಾಕ್ಯಾಳಾ

ಗಂಡಾನ ಜೀವಕ್ಕ ॥ತಂದಾನ ತಾನ॥"[೨೦]

ಈ ರೀತಿಯ ವೈಧ್ಯವದ ಆಚರಣೆಯು ಇಂದಿಗೂ ಚಿತ್ರದುರ್ಗ ಪ್ರಾಂತ್ಯದ ಬಹುತೇಕ ಸಮುದಾಯಗಳಲ್ಲಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಗಂಡನ ಚಿಂತೆಯಲ್ಲಿಯೇ ನೀಲವೇಣಿ ನಿದ್ದೆ ಮಾಡದೇ, ಊಟ ಮಾಡದೇ ಚಿಂತಿಸುವುದು ಈ ಕೆಳಗಿನ ಸಾಲುಗಳಲ್ಲಿ ವ್ಯಕ್ತವಾಗಿದೆ.

"ಊಟ ನೀನು ಇನ್ನು ಮಾಡು ಮಗಳೇ ॥ತಂದಾನ॥

ನಿದ್ದಿ ಮಾಡೆ ನನ್ನ ಏ ಮಗಳೇ ॥ತಂದಾನ॥

ಎದಿ ಒಡೆದು ನಿನ್ನ ಜಲ್ಮ ಕಳೆಯಬ್ಯಾಡ ॥ತಂದಾನ॥

ತಂದಿ ಜೀವಕ್ಕ ಒಬ್ಬೋನೋ ಮಗನ ಲೋಕ ಬೆಳಸಮ್ಮ

ಏ ಜೀವ ಮಗ ಏಳ್ಯೊದೆ ನೀನು ಸತ್ರೆ ಮಗಾ

ಉಳ್ಯೋದಿಲ್ಲೆ ॥ತಂದಾನ ತಾನ॥"[೨೧]

ನೆರೆವರೆಯ ಹೆಣ್ಣು ಮಕ್ಕಳೆಲ್ಲಾ ಬಂದು ನೀಲವೇಣಿಯನ್ನು ಸಂತೈಸಿದಾಗ ಹದಿನೈದು ದಿನಗಳ ನಂತರ ಮಗನ ಮೂಖ ನೋಡಿಕೊಂಡು ಗಂಡನನ್ನು ಮರೆತು ಹೊಸ ಜೀವನ ಆರಂಭಿಸಲು ನಿರ್ಧರಿಸುತ್ತಾಳೆ. ಇದೇಲ್ಲಾ ಮನುಷ್ಯನ ಸಹಜ ಗುಣಾವಗುಣಗಳು ಆಗಿರುವುದರಿಂದ ಇವುಗಳನ್ನು ಸೂಕ್ಷ್ಮವಾಗಿ ಜನಪದ ಕವಿಯತ್ರಿಯರು ತುಂಬಾ ಅರ್ಥಪೂರ್ಣವಾಗಿ ವರ್ಣಿಸುತ್ತಾರೆ. ತನ್ನ ಮಗನನ್ನು ಅತಿ ಪ್ರೀತಿಯಿಂದ ಜೋಪಾನ ಮಾಡುತ್ತಾಳೆ ಮತ್ತು ಅವನಿಗೆ ಕಾಂಬೋಜರಾಜ ಎಂದು ನಾಮಕಾರಣಡುತ್ತಾಳೆ.

"ಮಗನ ಹ್ಯಾಂಗ ಜೋಪಾನ ಮಾಡಾಕೀ

ಮೂರು ಸರ್ತಿ ಮೈಯಿ ತೊಳಿತಾಳಣ್ಣಾ ॥ತಂದಾನ॥

ಮುಂಜಾಲಿ ಮಧ್ಯಾಹ್ನ ಮೂರು ಗಂಟೆ ಒಳಗಣ್ಣಾ ॥ತಂದಾನ॥

ಏ ತೊಟ್ಲದಾಗ ಕೈಯಾಗ, ಕೆಳಗೆ ಮಲಗಿಸಂಗಿಲ್ಲಮ್ಮಾ ಮಗನ

ಅಣ್ಣಾ ಒಂದು ವರ್ಷವಾಗಿತ್ತು, ಮಗ ಎಲ್ಡು ವರ್ಷವಾಯಿತು।

ಥೋತಡಿ ಮೂರು ವರ್ಷವಾಗೈತೋ

ಐದೊರ್ಷ ಬೆಳಿಸ್ಯಾರೋ ಮಗ್ನ ॥ತಂದಾನ॥"[೨೨]

ಗಂಡ ಸತ್ತ ನಂತರ ನೀಲವೇಣಿ ತನ್ನ ಮಗನಿಗೆ ಕಾಂಬೋಜಿರಾಜನೆಂದು ನಾಮಕರಣ ಮಾಡಿ ಮೂರು ವರ್ಷಲ್ಲ, ಐದೊರ್ಷ ಅಪಾರವಾದ ಪ್ರೀತಿಯಿಂದ ಬೇಳೆಸಿದ ಬಗೆಯನ್ನು ಮೇಲಿನ ಕಾವ್ಯ ಭಾಗದಲ್ಲಿ ಕಟ್ಟಿ ಕೊಡಲಾಗಿದೆ.

ಮಗನೊಂದಿಗೆ ಸುಖಮಯವಾದ ಜೀವನ ನಿರ್ವಹಿಸುತ್ತಿರುವಾಗ, ನೀಲವಣಿಯು ಮಗನಿಗೆ ತಮ್ಮ ಗೊಲ್ಲರ ಮೂಲ ಕಸುಬಾದ ದನ ಕಾಯುವ ಗೊಲ್ಲನನ್ನಾಗಿ ಮಾಡಬಾರದು ಎನ್ನುವ ತಾಯಿಯ ಆಸೆಗೆ ಸರಿಯಾಗಿರುತ್ತದೆ. ಮಗನಿಗೆ ಓದು ಬರಹ ಕಲಿಸಬೇಕು ಎಂಬುದನು ಊರಿನ ಗಣ್ಯರೂ ತಳವಾರ, ಶಾನುಭೋಗರು ತಮ್ಮ ಆಸೆಗಳನ್ನು ಸೇರಿಸುತ್ತಾರೆ. ಆದರೆ ಹೆಣ್ಣಿಂಗಸಾದ ತಾನು ಹೊರಗಡೆ ಹೋಗುವಂತಿಲ್ಲ ಎಂದಾಗ ಅವಳ ಮಾತಿನಂತೆ ತಾವೇ ಅವನನ್ನು ಓದಿಸುವ ಜವಾಬ್ದಾರಿಯನ್ನು ಹೊರುತ್ತಾರೆ ಮತ್ತು ಕಾಂಬೋಜನನ್ನು ಗುರುಗಳ ಹತ್ತಿರ ತಂದು ಓದಲು ಬಿಡುತ್ತಾರೆ. ಈ ಕಾವ್ಯದಲ್ಲಿ ವ್ಯಕ್ತವಾದ ಮೂಲಾಂಶಗಳು ಪರಿಶೀಲಿಸಿದಾಗ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಲೂರಿನ ಬಹುತೇಕ ಕಾಡು ಗೊಲ್ಲರ ಹಟ್ಟಿಗಳಲ್ಲಿ ಋತುಮತಿ ಮತ್ತು ತಿಂಗಳಿಗೆ ಒಂದು ಬಾರಿಯಾಗುವ ಋತುಸ್ರಾವದಂತ ಸಂದರ್ಭದಲ್ಲಿ ಹಟ್ಟಿಯಿಂದ ಹೊರಗಡೆ ಇರುಸುತ್ತಾರೆ. ಪ್ರಸ್ತತ ದಿನಮಾನದಲ್ಲೂ ಇಂತಹ ಪದ್ಧತಿಗಳು ಈ ಸಮುದಾಯ ಹೆಣ್ಣು ಮಕ್ಕಳ ಅನುಭವಿಸುವುದನ್ನು ಮನಗಾಣಬಹುದು.

"ಬೊಳ್ಳು ತೋರಿಸಿದ್ರೆ ಬೊಳ್ಳು ನುಂಗುತಾನ ॥ತಂದಾನ॥

ಕಣ್ಣು ಬಿಟ್ರೆ ಕಂಠಪಾಠ ತಗೀತಾನಮ್ಮ

ಏಯ್ ಘಳ, ಘಳ, ಘಳ, ಘಳ ಮಗ ಓದ್ತಾನಮ್ಮಾ ॥ತಂದಾನ॥"[೨೩]

ಮಗ ಇನ್ನೂ ಓದಿದ್ರೆ ತಲೆ ಕೆಡುತ್ತದೆಂದು ಗುರುಗಳು ತಿಳಿಸಲು, ಊರ ರೈತರಿಗೆ ತಿಳಿಸಲು ಅವನನ್ನು ಅವರು ಊರಿಗೆ ಕರೆತಂದು ಗೌಡನಾಗಿ ಮಾಡುತ್ತಾರೆ. ಆ ಊರಿನ ಶಾನುಭೋಗ ಒಳ್ಳೆ ಜ್ಯೋತಿಷಿ ಅವನು ತಾಳೆ ಗರಿ ತೆಗೆದು ಕಾಂಬೋಜನ ಭವಿಷ್ಯವನ್ನು ನೋಡಿ ದುಃಖಿಸುತ್ತಾನೆ.

ನಿನಗೆ ಬಾಳ ಕಷ್ಟ ಮುಂದಕ್ಕೆ ಐತಿ ಶಿವನೆ

ಏನ್ ಬುದ್ಧಿವಂತನಾದ್ರೇನ್ ಮಾಡ್ಬೇಕಪ್ಪಾ ॥ತಂದಾನ॥

ಏನ್ ಓದಿದ್ರೂ ಏನ್ ಲಾಭಿಲ್ಲಪ್ಪಾ ಮಗನೇ

ಏನ್ ಓದ್ಕಂಡ್ರೂ ಏನು ಮಾಡಬೇಕಪ್ಪಾ!"[೨೪]

ಕಾಂಭೋಜರಾಜ ಭವಿಷ್ಯವು ವಿಚಿತ್ರವಾದುದ್ದಾಗಿದ್ದು ತನ್ನ ತಂದೆ ಚಾಮರಾಜ ಮಾಡಿದ ಪಾಪದ ಪ್ರತಿಫಲದಂತಿರುತ್ತದೆ. ಏಳು ಜನ ಹೆಂಡಂದಿರನ್ನು ಮದುವೆ ಮಾಡಿಕೋ ಎಂದು ಭವಿಷ್ಯದ ನಿಯಮವನ್ನು ಶಾನುಭೋಗ ತಿಳಿಸಿದಾಗ ಅದರಂತೆಯೇ ಹೆಣ್ಣುಗಳನ್ನು ಹುಡುಕಲು ಕುದುರೆಯನು ಏರಿ ಹೋರಡುತ್ತಾನೆ. ಏಳ ಜನ ಹೆಣ್ಣುಗಳು ಎಲ್ಲಿ ಸಿಕ್ಕಾವು ಎಂದು ಕೂಡ್ಲಿಗಿಗೆ ಬರುತ್ತಾನೆ. ಅಲ್ಲಿ ಸಿಗಲಿಲ್ಲವೆಂದು ದಾವಣಗೆರೆಗೆ ಹೋಗುತ್ತಾನೆ. ಹೀಗೆ ಎಲ್ಲಾ ಊರುಗಳು ಅಲೆದಾಡಿ ಚಿತ್ರಗಿರಿಯಲ್ಲಿ ಚಿತ್ತಪ್ಪನ ಏಳು ಮಕ್ಕಳನ್ನು ನೋಡುತ್ತಾನೆ. ಅವರನ್ನು ಒಪ್ಪಿಕೊಂಡು ನಂತರ ಮದುವೆಯಾಗುತ್ತದೆ. ಇಲ್ಲಿನ ಕಥನದ ಪ್ರಾದೇಶಿಕತೆಯೂ 'ಚಿತ್ರಗಿರಿ' ಎಂದರೆ ಚಿತ್ರದುರ್ಗದವರೆಗೂ ವ್ಯಾಪಿಸಿದಂತೆ ತೋರುತ್ತದೆ. ಅಲ್ಲದೆ ಚಿತ್ರದುರ್ಗದ ಭಾಗದಲ್ಲಿ ಈಗಲ್ಲೂ ಈ ಕಾವ್ಯವನ್ನು ಬುಡ್ಗಜಂಗಮ ಸಮುದಾಯ ಮಾತ್ರವಲ್ಲದೆ ಇತರ ಸಮುದಾಯದವರು ಹಾಡುತ್ತಾರೆ.

"ಏಳು ತಾಳಿ ಕೈಲಿ ಹಿಡಿದಾನ ಮಗಾ
ವಿಷ್ಣು ಪರಮಾತ್ಮನಾಗಿ ಶರಣಯಪ್ಪಾ
ಮೂರು ಮೇಘದಾಗ ಮಾರು ನೋಡ್ತಾರಣ್ಣಾ
ಬೋಗ್ಯಾದಿ ಲೋಕರೆ."[೨೫]

ಕಾಂಭೋಜರಾಜನು ಏಳು ಜನ ಹೆಣ್ಣು ಮಕ್ಕಳನ್ನು ಮದುವೆಯಾಗಿ, ಎಂಟು ವರ್ಷಗಳು ಕಳೆದರೂ ಏಳು ಜನ ಹೆಣ್ಣು ಮಕ್ಕಳಲ್ಲಿ ಯಾರಿಗೂ ಮಕ್ಕಳ ಫಲ ಇಲ್ಲದಿರುವುದು ಶೋಚನಿಯವಾದ ಸಂಗಾತಿಯಾಗಿದೆ. ಇದರಿಂದ ಕಾಂಭೋಜರಾಜನಿಗೆ ಚಿಂತೆ ಆವರಿಸಿದಾಗ ಆಗ ಬಂಡೆಯ ಅಡಿಯಿಂದ ಹೊರ ಬಂದ ಋಷಿ ಮುನೀಶ್ವರನೊಬ್ಬ ನೀನು ವನ ಮಠಗಳನ್ನು ನಿರ್ಮಾಸಿದರೆ ಮಾಡಿದರೆ ನಿನಗೆ ಮಕ್ಕಳಾಗುತ್ತವೆಂದು ಊಪಾಯ ಸೂಚಿಸುತ್ತಾನೆ. ಇದನ್ನೊ ನೆರೆವರೆಸಲು ಕಾಂಭೋಜರಾಜ ರಾಜನಾದರೂ ಸ್ವತಃ ಗುದ್ದಲಿ ಹಿಡಿದು ತನ್ನ ರಾಣಿಯರ ತಲೆಯ ಮೇಲೆ ಮಣ್ಣು ಹೊರೆಸಿ ಸಾಮಾನ್ಯರಂತೆ ಕಾಂಬೋಜರಾಜ ಸುಂದರ ವನವೊಂದನ್ನು ನಿರ್ಮಾಸಿ, ಅಲ್ಲಿ ವಿವಿಧ ಗಿಡ–ಮರಗಳಾಗಿ ಹೂವು, ಕಾಯಿಗಳು ಬಿಡಲು ಪ್ರಾರಂಭಿಸಿದಾಗ ವಿವಿಧ ರೀತಿಯ ಪ್ರಾಣಿ, ಪಕ್ಕಿಗಳು ಸಂತಸದಿಂದ ಬಂದು ಹಣ್ಣುಗಳನ್ನು ತಿಂದು ರಾಜನಿಗೆ ಆಶೀರ್ವದಿಸಿದರ ಫಲವಾಗಿ ಕಾಂಬೋಜರಾಜನಿಗೆ ಮಕ್ಕಳ ಫಲ ದೊರೆಯುತ್ತದೆ. ಈ ಕಾವ್ಯದಲ್ಲಿ ಬಹುಮುಖ್ಯವಾಗಿ ಕಡುಬರುವ ಅಂಶವೆಂದರೆ ಪ್ರಕೃತಿಯನ್ನು ಆಧಾರವಾಗಿಟ್ಟಿಕೊಂಡು ಒಂದು ಕಾವ್ಯದಲ್ಲಿ ವಿಸ್ತಾರಿಸುವ ಬಗೆ ತುಂಬಾ ದೊಡ್ಡ ಸಂಗಾತಿ. ಇವತ್ತಿನ ದಿನಮಾನಕ್ಕೂ ಇಂತಹ ಕಾವ್ಯಗಳು ನಮ್ಮಗೆ ಮುಖ್ಯವಾಗಿ ಕಾಣುಸಿಗುತ್ತದೆ. ಕಾಡು ಬೆಳೆಸುವುದರಿಂದ ನಾಡು ಬೆಳೆಯುವುದು ವನಗಳ ನಾಶ, ಭೂಮಿಯಲ್ಲಿ ಜೀವಿಸುವ ಸಕಲ ಜೀವರಾಶಿಗಳ ನಾಶಕ್ಕೆ ಕಾರಣ. ಮಳೆ ಬೆಳೆ ಸಮೃದ್ಧಿಯಾಗಿರಬೇಕೆಂದರೆ ವನಗಳಿರಬೇಕು. ಹಕ್ಕಿಗಳ ಸಂತಸದ ಕೂಗು ಸಮೃದ್ಧಿಯಿಂದ ತುಂಬಿ ತುಳುಕುತ್ತಿರಬೇಕು. ಎಲ್ಲೆಲ್ಲಿಯೂ ಹಸಿರೇ ಹಸಿರು, ಸಂತಸವೇ ಸಂತಸ. ಈ ಇಡೀ ಭಾಗ ಪ್ರಕೃತಿ ಪ್ರೇಮವನ್ನು ಬಹಳ ಗಾಢವಾಗಿಯೇ ಪ್ರತಿಬಿಂಬಿಸುತ್ತದೆ.

ಪ್ರಕೃತಿಯ ಪರಿಕಲ್ಪನೆಯನ್ನೇ ಮರೆತಿರುವ ಆಧುನಿಕ ಮನುಷ್ಯನಿಗೆ ಎಚ್ಚರಿಸುವ ಕರೆ ಗಂಟೆಯಾಗಿದೆ. ಕಾಂಬೋಜ ರಾಜನು ಕಾಡು ಬೆಳೆಸಿದರ ಪರಿಣಾಮವಾಗಿ ಅವನಲ್ಲಿರುವ ಜೀವಪರವಾದ ಕಾಳಜಿಯಿಂದ ಮಕ್ಕಳಾದವು ಎಂಬುದನ್ನು ಸೂಚಿಸುತ್ತದೆ.


ಕಾಂಭೋಜರಾಜನಿಗೆ ಮಕ್ಕಳಾದ ಪತಿಫಲವಾಗಿ ಅವನ ಮಗನಾದ ಶರಬಂಧ ರಾಜನು ಜನಿಸುತ್ತಾನೆ. ಇದರಿಂದ ಸಂತಸದಿಂದ ಆಳ್ವಿಕೆ ಮಾಡಿಕೊಂಡು ಜೀವಿಸುತ್ತಿರುವಾಗ ಇದಕ್ಕದ ಹಾಗೆ ಬೆನ್ನು ಹುಣ್ಣು ಅವನಿಗೆ ನೋವುಣ್ಣುವಂತ ಕಷ್ಟದ ಪರಿಸ್ಥಿತಿ ಬರುತ್ತದೆ. ಈ ಬೆನ್ನು ಹುಣ್ಣನು ವಾಸಿ ಮಾಡಬೇಕಾದರೆ ಏಳು ಸಮುದ್ರಗಳನ್ನು ದಾಟಿ ಔಷಧಿ ತರಬೇಕಾಗಿರುತ್ತದೆ. ಈ ಸಾಹಸದ ಕೆಲಸವನ್ನು ಮಗನಾದ ಶರಬಂಧನ್ನು ಕೈಗೊಂಡು ಏಳು ಸಮುದ್ರವನ್ನು ದಾಟಿ ಔಷಧಿಯ ಜೊತೆಗೆ ಏಳು ಜನ ಹೆಣ್ಣು ಮಕ್ಕಳನ್ನು ತರುತ್ತಾನೆ. ಇವನೆ ಇಡೀ ಕಾವ್ಯದ ನಾಯಕನಾಗಿ ಕಾವ್ಯದ ವಿವಿಧ ತಿರುವುಗಳಿಗೆ ಕಾರಣನಾಗುತ್ತಾನೆ.

ತಂದೆಯಂತೆ ಇವನ್ನು ಕೂಡ ರಾಜನಾಗಿ ಚಾಂಪುರ ಪಟ್ಟಣಕ್ಕೆ ಹೊರಟ ಶರಬಂಧನಿಗೆ ಸಿರಿದೇವಿಯೂ ಈ ರೀತಿಯ ಮಾತುಗಳನ್ನು ತಿಳಿಸುತ್ತಾಳೆ.

"ಅವ್ರು ಇನ್ನೂ ಬಿಡಾವಲ್ಲಪ್ಪ
ಕೆಟ್ಟು ಗುಣ ನಿನಗಾಗಿ ಬ್ಯಾಡ ಮಗನೆ
ದುಷ್ಟರ ಕಡಿಗೆ ಹೋಗುಬ್ಯಾಡ ಮಗನೆ ॥ತಂದಾನ॥"[೨೬]

ತನ್ನ ತಾಯಿಯಿಂದ ಮೇಲಿನ ಮಾತನ್ನು ಕೇಳದ ಶರಬಂಧನು ತಾನು ದುಷ್ಟನಲ್ಲ, ದುಷ್ಟರ ಸಂಚಿಗೆ ಸಿಗುವುದಿಲ್ಲ ಎಂದು ತನ್ನ ತಾಯಿಯ ಪಾದ ಮುಟ್ಟಿ ಆರ್ಶಿವಾದ ಮಡೆದು ಚಾಂಪುರ ಪಟ್ಟಣಕ್ಕೆ ಹೋಗುತ್ತಾನೆ. ಇಲ್ಲಿನ ಮೆಣಸು ಓಣಿಯಲ್ಲಿ ಹಸ್ತಿನಿ, ಶಂಕನಿ, ಚಿತ್ತಿನಿ ಜಾತಿಯ ಹೆಣ್ಣುಗಳು ಅವನನ್ನು ಕಾಡಿಸಿಲು ತೊಡಗುತ್ತಾರೆ. ಇವರಿಂದ ಪಾರಾಗಲು ಪ್ರಯ್ನತಿಸಿದರು ಅವರು ತಮ್ಮ ಗಂಡಂದಿರ ರೋಗಗಳಿಗೆ ಔಷಧಿ ಕೇಳಿದರೆ ಒಂದೊಂದು ಸಬೂಬು ತಿಳಿಸಿಸುತ್ತಾನೆ. ಆದರೂ ಆ ಹೆಣ್ಣು ಮಕ್ಕಳು ಶರಬಂಧನ ಬೆನ್ನಿಗೆ ಬಿದ್ದು ಕಾಡುತ್ತಾರೆ.

"ಯಮ್ಮ ತಮ್ಮನ್ನಿಂದೇ ಬಂದರೇನಾ
ನಿಮ್ಮ ಗಂಡ್ರು ನೋಡಿದರೇನ
ನನ್ನ ಕಂಬಕ್ಕೆ ಕಟ್ಟೀ ಬುಡುತಾರ
ನನ್ನ ಕಡಿದು ಹಾಕಿ ಜಲ್ಮಕ್ಕೆ
ನನ್ನ ಕೆರೆಗಾಕಿ ಗುಗ್ಗುತಾರ ॥ತಂದಾನ॥
ಯಮ್ಮೋಒಲ್ಲೆ ಒಟ್ಲೆ ದೊಡ್ಡವರು
ಯಮ್ಮೋ ನಿಮ್ಮ ಗೊಡವೆ ನಮಗ್ಯಾಕೆ."[೨೭]



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಬುಡಕಟ್ಟು ಅಧ್ಯಯನ ವಿಭಾಗ